ಕುಮ್ಮಟ ನಾಯಕರು : ಒಂದು ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರ ಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಟಿ. ಎಂ. ಮಂಜುನಾಥಯ್ಯ

ಮಾರ್ಗದರ್ಶಕರು

ಡಾ. ಕೆ. ಜಿ. ಭಟ್‌ಸೂರಿ

ಶಾಸನ ಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276

ಜೂನ್ 2003

124

ಕುಮ್ಮಟ ನಾಯಕರು : ಒಂದು ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರ ಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಟಿ.ಎಂ. ಮಂಜುನಾಥಯ್ಯ

ಮಾರ್ಗದರ್ಶಕರು

ಡಾ. ಕೆ.ಜಿ. ಭಟ್‌ಸೂರಿ

ಶಾಸನ ಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

ಜೂನ್ ೨೦೦೩

ಪ್ರಮಾಣ ಪತ್ರ

"ಕುಮ್ಮಟ ನಾಯಕರು - ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಈ ಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ.ಕೆ.ಜಿ. ಭಟ್‌ಸೂರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಸಮಾಜ ವಿಜ್ಞಾನಗಳ ನಿಕಾಯದ ಶಾಸನ ಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧ ಮೂಲರೂಪದ ಸಂಶೋಧನಾ ಕೃತಿಯಾಗಿದ್ದು, ಇದನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಟಿ.ಎಂ. ಮಂಜುನಾಥಯ್ಯ)
ಸಂಶೋಧಕರು

ದಿನಾಂಕ : ೧೧-೬-೨೦೦೩
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

"ಕುಮ್ಮಟ ನಾಯಕರು-ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಶ್ರೀ ಟಿ.ಎಂ. ಮಂಜುನಾಥಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲರೂಪದ ಸಂಶೋಧನಾ ಕೃತಿಯಾಗಿದ್ದು, ಇದನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೧-೬-೨೦೦೩
ಸ್ಥಳ : ವಿದ್ಯಾರಣ್ಯ

(ಡಾ. ಕೆ.ಜಿ. ಭಟ್‌ಸೂರಿ)
ಮಾರ್ಗದರ್ಶಕರು ಮತ್ತು ಅಧ್ಯಾಪಕರು
ಶಾಸನ ಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ-ವ್ಯಾಪ್ತಿ-ಸ್ವರೂಪ-ವಿಧಾನ ಆಕರ ಸಾಮಗ್ರಿಗಳು-ಸಾಹಿತ್ಯಿಕ ಮೂಲಾಧಾರಗಳು-ಕೈಫಿಯತ್ತುಗಳು-ಪ್ರವಾಸೀ ಕಥನಗಳು-ಪ್ರಾಕ್ತನ ಸಾಮಗ್ರಿಗಳು-ಭೂ ಭೌಗೋಳಿಕ ಹಿನ್ನೆಲೆ - ಕುಮ್ಮಟದುರ್ಗ-ಆನೆಗೊಂದಿ-ಹಾನೇಯ-ಹೊಸಮಲೆದುರ್ಗ-ದೊರವದಿ-ರಾಜಕೀಯ ಹಿನ್ನೆಲೆ-ಮುಮ್ಮಡಿ ಸಿಂಗೇಯ ನಾಯಕ-ಕಂಪಿಲರಾಯ-ಕುಮಾರ ರಾಮ-ಬೈಚಯ ದಂಡನಾಯಕ-ಆಡಳಿತ ಪದ್ಧತಿ

ಅಧ್ಯಾಯ - ೨

ಐತಿಹಾಸಿಕ ಹೆಜ್ಜೆಗಳು-ಕುಮ್ಮಟನಾಯಕರ ಸಂಸ್ಕೃತಿ ಅಧ್ಯಯನ-ವರ್ಗ-ವರ್ಣ-ಜಾತಿ ಸಮಾಜದಲ್ಲಿ ಸ್ತ್ರೀಯರಿಗಿದ್ದ ಸ್ಥಾನಮಾನ-ಸಾಮಾಜಿಕ ಕಾರ್ಯಗಳು-ಸಹಗಮನ ಪದ್ಧತಿ-ದೇವದಾಸಿ ಪದ್ಧತಿ-ಕುಟುಂಬ ವ್ಯವಸ್ಥೆ-ಬಹುಪತ್ನಿತ್ವ-ಆಚರಣೆಗಳು-ಜಾತ್ರೆ-ರಥೋತ್ಸವಗಳು.

ಆರ್ಥಿಕ ಸ್ಥಿತಿ -ವ್ಯಾಪಾರ ತೆರಿಗೆ ಪದ್ಧತಿ-ನಾಣ್ಯಗಳು-ಭಂಡಾರದ ಅಧಿಕಾರಿಗಳು-ಕೋಣಕಾರರು-ಕೆರೆ ತಟಾಕಗಳು.

ಧರ್ಮಗಳು-ಶೈವ ಧರ್ಮ-ಶಕ್ತಿ ಆರಾಧನೆ-ವೈಷ್ಣವ ಧರ್ಮ-ಜೈನಧರ್ಮ-ಧಾರ್ಮಿಕ-ಕುಮ್ಮಟ ಜಾತ್ರೆ-ಸೋಮೇಶ್ವರ ಜಾತ್ರೆ-ಭೂತನ ಸೋನಿ-ಹಬ್ಬಗಳು

ಅಧ್ಯಾಯ - ೩

ವಾಸ್ತು ಕಲೆ-ವ್ಯಾಖ್ಯೆ-ಲೌಕಿಕ ವಾಸ್ತುಶೈಲಿ-ಸೈನಿಕ ವಾಸ್ತುಶೈಲಿ-ಕುದುರೆ ಕಲ್ಲುಗಳು-ಅರಮನೆ ವಾಸ್ತು ಶೈಲಿ-ದೇವಾಲಯ ವಾಸ್ತುಶಿಲ್ಪ-ಆಯ್ದ ದೇವಾಲಯಗಳ ವಾಸ್ತು ಶೈಲಿ-ಶೈವ ಪಂಥ ದೇವಾಲಯಗಳು-ಗಾಣಪತ್ಯ-ಶಕ್ತಿ ಆರಾಧನೆ-ವೈಷ್ಣವ ದೇವಾಲಯಗಳು-ಜೈನ ಬಸದಿಗಳು-ಕುಮಾರ ಪಂಥ ದೇವಾಲಯ-ವಾಸ್ತು ವೈಶಿಷ್ಟ್ಯತೆಗಳು

ಅಧ್ಯಾಯ - ೪

ಮೂರ್ತಿಶಿಲ್ಪ-ವ್ಯಾಖ್ಯೆ-ಹಿನ್ನೆಲೆ-ಮೂರ್ತಿಕಲೆ-ಶೈವ-ಗಾಣಪತ್ಯ-ಶಕ್ತಿ ಆರಾಧನೆ-ವೈಷ್ಣವ-ಜೈನ ಮೂರ್ತಿ ಶಿಲ್ಪಗಳು-ಗುಂಡು ಬ್ರಮ್ಮಯ್ಯರು-ಕುಮಾರರಾಮ ಮೂರ್ತಿಶಿಲ್ಪಗಳು- ಮೂರ್ತಿಶಿಲ್ಪಗಳ ವೈಶಿಷ್ಟ್ಯತೆ

ಅಧ್ಯಾಯ - ೫ **ಇತರೆ ಕಲೆಗಳು** - ಶಾಸನ ಶಿಲ್ಪ-ವೀರಗಲ್ಲುಗಳಲ್ಲಿ ಶಿಲ್ಪಕಲೆ-ಕಾಷ್ಠಶಿಲ್ಪಕಲೆ-ಚಿತ್ರಕಲೆ

ಅಧ್ಯಾಯ - ೬ ಸಮಾರೋಪ

ಅನುಬಂಧ - ೧. ಗ್ರಂಥಸೂಚಿ

೨. ರೇಖಾಚಿತ್ರಗಳ ಪಟ್ಟಿ

೧. ಕುಮ್ಮಟದುರ್ಗದ ರಾಜ್ಯ ವಿಸ್ತರಣೆ - ನಕಾಶೆ

೨. ಕುಮ್ಮಟ ನಾಯಕರ ರಾಜಧಾನಿಗಳು - ನಕಾಶೆ

೩. ತ್ರಿಕೂಟ ದೇವಾಲಯ ೧ (ಕಂಪಿಲರಾಯ ದೇವಾಲಯ) ಭೂ - ನಕಾಶೆ

೪. ಈಶ್ವರ ದೇವಾಲಯ, ಕುಮ್ಮಟದುರ್ಗ ಭೂ - ನಕಾಶೆ

೩. ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳ ಛಾಯಚಿತ್ರ - ಪಟ್ಟಿ

INDEX – ಸಂಕೇತ ಸೂಚಿ

APGAS	Andhra Pradesh Govt. Archaeological Series
AR	Annual Reports
ARIE	Annual Report of Indian Epigraphy
ARSIE	Annual Report of South Indian Epigraphy
BKI	Bombay Karnataka Inscriptions
EC	Epigraphia Carnatica
EI	Epigraphia Indica
IA	Indian Antiquery
IK	Inscriptions of Karnataka
KI	Karnataka Inscriptions
QJMS	Quarterly Journal of Mythic Society
MAR	Mysore Archaeological Report
SII	South Indian Inscriptions
VPR	Vijayanagara Progress of Research
ಇ.ದ	ಇತಿಹಾಸ ದರ್ಶನ
ಕ.ಶ.	ಕರ್ನಾಟಕ ಶಾಸನಗಳು
ಕ.ವಿ.ಶಾ.ಸಂ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ವಿ.ಅ.	ವಿಜಯ ನಗರ ಅಧ್ಯಯನ
ವಿ.ಶ.	ವಿಜಯನಗರ ಶಾಸನಗಳು

ಅಧ್ಯಾಯ - ೧

ಉದ್ದೇಶ - ವ್ಯಾಪ್ತಿ - ಸ್ವರೂಪ - ವಿಧಾನ

ಉದ್ದೇಶ-ವ್ಯಾಪ್ತಿ-ಸ್ವರೂಪ-ವಿಧಾನ



ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಆಳಿದ ರಾಜರ, ಅರಸರ ಇತಿಹಾಸ. ಇಲ್ಲಿ ರಾಜಕೀಯ ಇತಿಹಾಸ ಹೆಚ್ಚಿನ ಮಟ್ಟಿಗೆ ಪ್ರಮುಖವೆಂದೆನಿಸಿದರೂ ಇದು ನಾಡಿನ ಜನ ಸಮಷ್ಟಿಯ ಚರಿತ್ರೆ. ಜನತೆಯ ಇತಿಹಾಸ, ಜನ ಬದುಕಿದ ರೀತಿ, ನೀತಿ ಅವರು ಕಟ್ಟಿದ ಧರ್ಮ ಕಲೆ ಮೌಲ್ಯಾಧಾರಿತ ಜೀವನದ ಸಿದ್ಧಾಂತಗಳು ಮೊದಲಾದವುಗಳನ್ನು ಪರಿಚಯಿಸುತ್ತವೆ. 'ಇತಿಹಾಸ' ಎಂಬ ಕನ್ನಡ ಪದ ಆಂಗ್ಲಭಾಷೆಯ 'ಹಿಸ್ಟರಿ' ಎಂಬ ಪದಕ್ಕೆ ತತ್ಸಮ ಹಿಸ್ಟರಿ ಎಂಬ ಪದ ''ಹಿಸ್ಟೋರಿಯಾ'' ಎಂಬ ಗ್ರೀಕ್ ಪದದಿಂದ ಬಂದಿದ್ದು. ಇದರ ಅರ್ಥ ಅರಳಿಸುವುದು ಎಂದರ್ಥ (ಕನ್ನಡ ವಿಶ್ವಕೋಶ, ಸಂ.೨. ೧೯೭೦, ಪು. ೩೬೯). ಇತಿಹಾಸದ ಮುಖ್ಯವಾದ ಅಂಶ ಮಾನವ ಜೀವನದ ಆರಂಭದಿಂದ ಇಂದಿನವರೆಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಂಗಗಳ ಮಾನವನನ್ನು ಯಥಾವತ್ತಾಗಿ ನಿರೂಪಿಸುವುದೇ ಆಗಿದೆ (ದೀಕ್ಷಿತ ಜಿ.ಎಸ್. ಮತ್ತು ಜೋಶಿ ಟಿ.ಡಿ. ೧೯೭೨, ಪು.೧).

ಕರ್ನಾಟಕವನ್ನು ಆಳಿ ಅಳಿದು ಹಲವಾರು ಅರಸು ಮನೆತನಗಳ ಏರಿಳಿತಗಳನ್ನು ಅನುಭವಿಸಿದ ಸ್ಥಿತಿ. ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದ ರೀತಿ, ಸಾಮಾಜಿಕ ಜೀವನವನ್ನು ಹಲವಾರು ರೀತಿಯಿಂದ ವಿಕಸನಗೊಳಿಸಿದ ರೀತಿ. ಧಾರ್ಮಿಕ ಸ್ಥಿತಿಗತಿಯ ಪರಿಗಳು ಮೊದಲಾದವುಗಳ ಅಧ್ಯಯನ ಮಾಡುವುದು ಅರ್ಥಪೂರ್ಣ. ಇಂತಹ ಹಲವಾರು ಅರಸು ಮನೆತಗಳಲ್ಲಿ ಆಳಿ ಅಳಿದವುಗಳಲ್ಲಿ ಕುಮ್ಮಟ ನಾಯಕರ ಪಾತ್ರವೂ ಮಹತ್ವಪೂರ್ಣ.

''ಕುಮ್ಮಟ'' ಹಿಂದೊಮ್ಮೆ ರಾಜಧಾನಿಯಾಗಿ ಮೆರೆದ ಸ್ಥಳ. ಇದು ಇಂದು ಕೊಪ್ಪಳ ಜಿಲ್ಲೆಯ. ಗಂಗಾವತಿ-ಕೊಪ್ಪಳ ತಾಲ್ಲೂಕುಗಳ ತುಂಗಭದ್ರಾ ನದಿಯ ಉತ್ತರ ದಿಕ್ಕಿನ ಬೆಟ್ಟಗುಡ್ಡಗಳ ಮಧ್ಯದಲ್ಲಿನ ಒಂದು ಪುಟ್ಟಗ್ರಾಮ. ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ ಮಲ್ಲಿಕಾಫರ ಹಾಗೂ ನೇಮಿಖಾನ್‌ನೊಂದಿಗೆ ನಡೆದ ಕದನ. ದೆಹಲಿ ಸುಲ್ತಾನರಿಂದ ಪರಾಜಯ. ವಿಜಯನಗರ ಸ್ಥಾಪನೆಯಾದದ್ದು, ಇದು ಕುಮ್ಮಟದ ನಾಯಕರಿಗೆ ಸಂಬಂಧಿಸಿದ ಏರಿಳಿತಗಳ ಮಹತ್ವದ ಐತಿಹಾಸಿಕ ಘಟನೆಗಳು.

ಇದುವರೆಗಿನ ಹೆಚ್ಚಿನ ಅಧ್ಯಯನಗಳು ಮುಖ್ಯ ರಾಜವಂಶಗಳಿಗೆ ಸಂಬಂಧಿಸಿವೆಯಾದರೂ ರಾಜವಂಶ ಮಾಂಡಲೀಕರುಗಳ ಅದರಲ್ಲೂ ಹೆಚ್ಚಾಗಿ ಕುಮ್ಮಟ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ವ್ಯವಸ್ಥಿತ ಅಧ್ಯಯನ ಆಗದೇ ಇರುವುದು ಪ್ರಸ್ತುತ ಅಧ್ಯಯನಕ್ಕೆ ಮೂಲ ಕಾರಣ.

ವ್ಯಾಪ್ತಿ

ಕುಮ್ಮಟ ನಾಯಕರು ಕುಮ್ಮಟ, ಹೊಸಮಲೆದುರ್ಗ, ದೊರವಡಿ, ಆನೆಗೊಂದಿ, ಹಾನೆಯಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಕೀಯವಾಗಿ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಕೊಡುಗೆಯನ್ನು ನೀಡಿದ್ದಾರೆ. ಇವು ಇಂದು ಪುಟ್ಟ ಗ್ರಾಮಗಳಾಗಿ ತೋರಿದರೂ, ಅಂದು ರಾಜಧಾನಿಗಳಾಗಿ ಮೆರೆದಿವೆ. ಕುಮ್ಮಟ ನಾಯಕರ ಕಾಲದ ಪುರಾತನ ಕೋಟೆ ಸ್ಮಾರಕಗಳು, ಮೂರ್ತಿ ಶಿಲ್ಪಗಳು, ಶಾಸನಗಳು ಇಂದಿಗೂ ಮೂಕ ಸಾಕ್ಷಿಗಳಾಗಿವೆ. ಈ ಒಂದು ಹಿನ್ನೆಲೆಯನ್ನು ಆಧರಿಸಿ ಕುಮ್ಮಟ ನಾಯಕರ ಸಾಂಸ್ಕೃತಿಕ ಅಧ್ಯಯನವನ್ನು ಮಾಡುವುದೇ ಈ ಅಧ್ಯಯನದ ಮೂಲ ಉದ್ದೇಶ.

'ಸಾಂಸ್ಕೃತಿಕ' ಎಂಬ ಶಬ್ದ ಬಹಳೇ ವಿಶಾಲವಾದದ್ದು. ಇದು ನಾಡಿನ ಜನತೆಯ ಕುರಿತಾದ ಸಾಂಸ್ಕೃತಿಕ ಅಧ್ಯಯನ. ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನಗಳೆರಡೂ ಪರಸ್ಪರ ಪೂರಕ ಮತ್ತು ಪೋಷಕ (ಚಿದಾನಂದ ಮೂರ್ತಿ ಎಂ. ೧೯೭೯, ಪು. ೧). ಕುಮ್ಮಟದುರ್ಗ, ಹೊಸಮಲೆದುರ್ಗ, ದೊರವದಿ, ಹಂಪಿ, ಆನೆಗೊಂದಿ, ಹಾನೆಯ ಸ್ಥಳಗಳನ್ನು ಮುಖ್ಯ ಆಧಾರಗಳನ್ನಾಗಿ ಮಾಡಿಕೊಂಡು, ಈ ಪರಿಸರದ ಸಾಂಸ್ಕೃತಿಕ ಹಿರಿಮೆಯ ವೈಶಿಷ್ಟ್ಯಗಳನ್ನಾಧರಿಸಿ, ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿದೆ. ಕುಮ್ಮಟ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ವ್ಯವಸ್ಥಿತವಾದ ಅಧ್ಯಯನ ನಡೆದಿಲ್ಲ. ಆದರೆ ಇದಕ್ಕೆ ಪೂರಕವಾಗುವ ಕೆಲವೊಂದು ಸಾಹಿತ್ಯಿಕ ಮತ್ತು ಪುರಾತತ್ವ ಲೇಖನಗಳು ಬಿಡಿಯಾಗಿ ಅಲ್ಲಲ್ಲಿ ದೊರಕುತ್ತವೆ. ಹಲವಾರು ವಿದ್ವಾಂಸರುಗಳು ಈ ದಿಸೆಯಲ್ಲಿ ಕೊಡುಗೆಯನ್ನಿತ್ತಿದ್ದಾರೆ.

ವಿಲಿಯಂ ಟೇಲರ್ (೧೮೫೬), ವಿಲ್ಸನ್ ಎಚ್.ಎಚ್.(೧೮೮೨), ರಾಬರ್ಟ್ ಸಿವೆಲ್(೧೯೦೦), ರಾಮಶರ್ಮ ಎಂ.ಎಚ್.(೧೯೨೮),ವೆಂಕಟರಮಣಯ್ಯ ಎನ್.(೧೯೩೯), ರಾಮಶರ್ಮ ಎಂ.ಎಚ್. (೧೯೩೯), ನೀಲಕಂಠ ಶಾಸ್ತ್ರಿ(೧೯೩೯), ಕೃಷ್ಣಶರ್ಮ ಬೆಟಗೇರಿ(೧೯೩೯), ರಾಘವನ್ ವಿ(೧೯೪೦), ಕೃಷ್ಣರಾಯರು ಕಪಟರಾಳ್(೧೯೪೧), ಶ್ರೀನಿವಾಸ್ ಜೋಯಿಸ್ ಹುಲ್ಲೂರು(೧೯೪೩), ಪಾಂಡುರಂಗರಾಯರು ದೇಸಾಯಿ(೧೯೫೧), ಕುಮಾರ ರಾಮನ ಕಥ (೧೯೫೨), ಪಂಚಮುಖಿ ಆರ್.ಎಸ್.(೧೯೫೩), ಶರ್ಮ ಬಿ.ಎಸ್.(೧೯೫೭), ದೇವೀರಪ್ಪ ಎಚ್.(೧೯೫೯), ಗೋವಿಂದ ಪೈ(೧೯೬೦), ಕೊಪ್ಪಿಗಿ ಎಸ್.ಆರ್.(೧೯೬೦), ಅನಂತ ರಂಗಾಚಾರ್ ಎನ್.(೧೯೬೦), ರಾಮಶರ್ಮ ಮೈ. ಹ.(೧೯೬೦), ದೇಜಗೌ(೧೯೬೨), ವರದರಾಜರಾವ್ ಜಿ.(೧೯೬೩), ದೇವೀರಪ್ಪ ಎಚ್.(೧೯೬೪), ವರದರಾಜರಾವ್ ಜಿ.(೧೯೭೬), ದೇವೀರಪ್ಪ ಎಚ್.(೧೯೭೦), ಶ್ರೀಧರ ಕೋಟೇಕಾರ(೧೯೭೦), ಶ್ರೀನಿವಾಸ ರಿತ್ತಿ(೧೯೭೩), ವಸುಂಧರಾ ಫಿಲಿಯೋಜಾ(೧೯೭೭, ೧೯೮೦), ಗೋಪಾಲ್ ಬಿ.ಆರ್.(೧೯೮೧), ದೇಸಾಯಿ ಬಿ.ಪಿ, ಗೋಪಾಲ್ ಬಿ.ಆರ್. ಶ್ರೀನಿವಾಸ ರಿತ್ತಿ(೧೯೮೧), ರಾಜಶೇಖರ್ ಎಸ್.(೧೯೮೨), ಶೇಷ ಶಾಸ್ತ್ರಿ ಆರ್.(೧೯೮೨), ಲಾಂಗ್ ಹರ್ಸ್ಟ್ ಎ.ಎಚ್.(೧೯೮೨), ರಾಧಾ ಎಂ.(೧೯೮೨), ಶ್ರೀಕಂಠಯ್ಯ ಕೆ.(೧೯೮೩), ಬಸವರಾಜ ಮಲಶೆಟ್ಟಿ(೧೯೮೪), ವರದರಾಜರಾವ್ ಜಿ.(೧೯೮೫), ಅನ್ನಲ್‌ದಲ್ಲಾ ಪಿಕೋಲಾ ಮತ್ತು ಕುರ್ಟ್ ಹರ್ಮನ್(೧೯೮೫), ವರದರಾಜರಾವ್ ಜಿ. ಮತ್ತು ಇತರರು(೧೯೮೬), ಅಭಿಶಂಕರ್ ಕೆ.(೧೯೯೦), ಚನ್ನಬಸಪ್ಪ ಪಾಟೀಲ

ಎಸ್. (೧೯೯೧) ಕೇಠೇ ಬಿ.ಎಸ್.(೧೯೯೧), ಜಾರ್ಜ್ ಮಿಶೆಲ್(೧೯೯೧), ಸುಗಂಧ ಪರಂದರೆ (೧೯೯೧), ರಾಮಾನುಜಂ ಪಿ.ಎಸ್.(೧೯೯೨), ವಸುಂಧರಾ ಫಿಲಿಯೋಜಾ(೧೯೯೨), ರಾಬರ್ಟ್ ಸಿವೆಲ್(೧೯೯೩), ಚನ್ನಬಸಪ್ಪ ಪಾಟೀಲ್ ಎಸ್. (೧೯೯೨), ಜಾರ್ಜ್ ಮಿಶೆಲ್(೧೯೯೨), ತುಬಾಕಿ ನಿಲೋಗಲ್ ಬಿ.ಆರ್.(೧೯೯೩), ಕಲಬುರ್ಗಿ ಎಂ.ಎಂ.(೧೯೯೪), ಲಕ್ಷ್ಮಣ ತೆಲಗಾವಿ ಮತ್ತು ಶ್ರೀನಿವಾಸ ಎಂ.ವಿ.(೧೯೯೫), ಕೊಟ್ರಯ್ಯ ಸಿ.ಟಿ.ಎಂ.(೧೯೯೫), ಅನಿಲಾ ವರ್ಗೀಸ್(೧೯೯೫), ಸೂರ್ಯನಾಥ ಕಾಮತ್ ಯು.(೧೯೯೬), ಕೃಷ್ಣಮೂರ್ತಿ(೧೯೯೬), ಚನ್ನಬಸಪ್ಪ ಪಾಟೀಲ ಎಸ್.(೧೯೯೬), ಫಿಲಿಪ್ ಬಿ. ವ್ಯಾಗೂನರ್ (೧೯೯೬). ಮೈತ್ರಿ ಕೆ.ಎಂ.(೧೯೯೭), ಸುಂದರ ಅ.(೧೯೯೭), ತಳವಾರ ಹೆಚ್. ಟಿ.(೧೯೯೭), ದೇವಕುಂಜರಿ ಡಿ.(೧೯೯೮), ಚನ್ನಬಸಪ್ಪ ಪಾಟೀಲ ಎಸ್.(೧೯೯೯), ಕಲಬುರ್ಗಿ ಎಂ.ಎಂ.(೧೯೯೯), ಸುರೇಶ್ ಬಿ. ಹರ್ಲಾಪುರ(೧೯೯೯), ಪುರುಷೋತ್ತಮ ಬಿಳಿಮಲೆ(೧೯೯೯), ಕಲಬುರ್ಗಿ ಎಂ.ಎಂ. ಮತ್ತು ವೀರಣ್ಣ ರಾಜೂರು(೨೦೦೦), ಸುಜಾತ ಮಲ್ಲನಗೌಡ(೨೦೦೦), ನಾಗಭೂಷಣ ಎಸ್.ಎಂ.(೨೦೦೦), ಪ್ರಭಾಕರ್ ಎಂ.ಎನ್.(೨೦೦೦), ಶ್ರೀನಿವಾಸ ರಿತ್ತಿ, ಹುಚ್ಚರಾವ್ ಬೆಂಗೇರಿ, ಸದಾನಂದ ನಾಯಕ್. ಶಾಂತಕುಮಾರಿ ಎಸ್.ಎಲ್.(೨೦೦೦), ರವೀಂದ್ರ ನಾಥ ಕೆ.(೨೦೦೦), ಮಂಜುನಾಥ ಎಂ.ಜಿ.(೨೦೦೦), ಸೂರ್ಯನಾರಾಯಣ ರಾವ್ ಬಿ.(೨೦೦೦), ಸಾವಿತ್ರಿ ಎಸ್.ಎಂ. (೨೦೦೨), ಮಹದೇವ ಸಿ. (ಪ್ರಕಟಣೆಯಲ್ಲಿ) ಮುಂತಾದ ವಿದ್ವಾಂಸರುಗಳು ಕೊಡುಗೆಯನ್ನಿತ್ತಿದ್ದಾರೆ. ಇಂದು ಇವುಗಳು ದಾರಿ ದೀಪ.

ಈ ಪ್ರದೇಶದ ಇತಿಹಾಸ, ಕಲೆಗಳು, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಜೀವನದ ಕುರಿತು ವಿದ್ವಾಂಸರುಗಳಿಂದ ಅಲ್ಲಲ್ಲಿ ಚರ್ಚೆಯಾಗಲ್ಪಟ್ಟಿದ್ದರೂ, ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದ ಒಟ್ಟಾರೆ ಸಾಂಸ್ಕೃತಿಕ ಅಧ್ಯಯನ ಕುರಿತಾಗಿ ಹಲವಾರು ವಿಚಾರ ಧಾರೆಗಳನ್ನು ಪರಿಶೀಲಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನ ವಿಧಾನ


ಕುಮ್ಮಟ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನಕ್ಕೆ ಸಾಹಿತ್ಯಿಕ ಮತ್ತು ಪ್ರಾಕ್ತನ ಶಾಸ್ತ್ರದ ಅಂಶಗಳನ್ನು ಮೂಲ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಸಾಂಸ್ಕೃತಿಕ ಅಧ್ಯಯನ ಮಾಡುವ ಪೂರ್ವದಲ್ಲಿ ಕುಮ್ಮಟದುರ್ಗ ಹೊಸಮಲೆದುರ್ಗ. ದೊರವಡಿ. ಹಾನೇಯ, ಹಂಪೆ-ಆನೆಗೊಂದಿ ಗ್ರಾಮಗಳಲ್ಲಿ ಅನ್ವೇಷಣೆಯನ್ನು ಮಾಡಿ ಪ್ರಾಕ್ತನ ಮೂಲಾಧಾರಗಳನ್ನು ಟಿಪ್ಪಣಿ ಮಾಡಿಕೊಂಡು ಸಮೀಕ್ಷಾ ವಿಧಾನವನ್ನು ಅನುಸರಿಸಿ ನಕಾಶೆ, ರೇಖಾಚಿತ್ರ, ಛಾಯಾಚಿತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ಆಕರ ಸಾಮಗ್ರಿಗಳು

ಆಕರ ಸಾಮಗ್ರಿಗಳು ಇತಿಹಾಸ ಪುನರ್ರಚನೆಯಲ್ಲಿ ಪರಸ್ಪರ ಪೂರಕವಾಗಿ ಸಾಕ್ಷ್ಯಾಧಾರಗಳನ್ನು ನೀಡುತ್ತವೆ. ಸಂಸ್ಕೃತಿಯ ಅಧ್ಯಯನಕ್ಕೆ ಅನ್ವೇಷಣೆಯನ್ನು ಮುಖ್ಯ ಆಧಾರವಾಗಿಟ್ಟುಕೊಂಡಲ್ಲಿ ಅದರ ಇತಿಹಾಸವನ್ನು ತಿಳಿದುಕೊಳ್ಳಲು ಸಾಹಿತ್ಯಿಕ ಮೂಲಾಧಾರಗಳು ನೆರವನ್ನು ನೀಡುತ್ತವೆ. ಕುಮ್ಮಟ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನಕ್ಕೆ ಸಾಹಿತ್ಯಿಕ ಮೂಲಾಧಾರಗಳು

ಪುಷ್ಟಿ ಕೊಡುವವಾದರೂ, ಪುರಾತತ್ವ ಆಕರಗಳಾದ ಉತ್ಖನನ, ಅನ್ವೇಷಣೆ, ಶಾಸನಗಳು ಮತ್ತು ಸ್ಮಾರಕಗಳು ಮೂಲ ಸಾಮಗ್ರಿಗಳಾಗಿ ಕುಮ್ಮಟನಾಯಕರ ಕಾಲದ ಇತಿಹಾಸ ಪುನಃ ರಚಿಸುವಲ್ಲಿ ಬಹಳೇ ಮಹತ್ತರ ಪಾತ್ರವನ್ನು ವಹಿಸಿವೆ.

ಮಾನವನ ಜೀವನ ಪ್ರಗತಿಯನ್ನು ಯಥಾವತ್ತಾಗಿ ನಿರೂಪಿಸುವುದೇ ಇತಿಹಾಸದ ಮುಖ್ಯ ಕಾರ್ಯ. ಗತಕಾಲದ ಘಟನೆಯನ್ನು ಕಾಲಕ್ರಮದಲ್ಲಿ ಸತ್ಯಕ್ಕೆ ಚ್ಯುತಿಬಾರದ ರೀತಿಯಲ್ಲಿ ವಿವರಿಸಲು ನಾವು ಮೂಲಾಧಾರಗಳನ್ನೇ ಅವಲಂಬಿಸಬೇಕು. ಇತಿಹಾಸ ಮತ್ತು ಸಂಸ್ಕೃತಿಯ ಪುನರ್‌ರಚನೆಯಲ್ಲಿ ಲಭ್ಯವಾದ ಮೂಲಾಧಾರಗಳನ್ನು ಅವಲಂಬಿಸಿ ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಈ ಕೆಳಗಿನಂತೆ ವಿಂಗಡಿಸಿದೆ.



ಸಾಹಿತ್ಯಿಕ ಮೂಲಾಧಾರಗಳು

ಒಂದು ಜನಾಂಗದ ಅಭ್ಯುದಯವನ್ನು ತಿಳಿಯಲು ಉತ್ತಮವಾದ ಮಾಧ್ಯಮವೆಂದರೆ ಅಂದಿನ ಸಾಹಿತ್ಯ (ಪಾಲಾಕ್ಷ-೧೯೮೩, ಪು.೧೧೯). ಸಾಹಿತ್ಯ ಕೃತಿಯ ರಚನೆ, ಉದ್ದೇಶ ಬೇರೆ ಬೇರೆ ಆದರೂ ಕಾವ್ಯ, ಗದ್ಯ, ಚರಿತ್ರೆ, ಶಾಸ್ತ್ರ ಕಥೆಗಳ ಮೂಲಕವೂ ಇವುಗಳ ಸ್ವರೂಪ, ಕಾಣಿಸಿಕೊಂಡಿವೆ. ಇದರ ಉದ್ದೇಶ ಏನೇ ಆದರೂ ಸಮಕಾಲೀನ ಜನರ ಅಭಿರುಚಿಗಳನ್ನು ಯಾವುದಾದರೂ ಮಾಧ್ಯಮದಿಂದ ವ್ಯಕ್ತಪಡಿಸದೆ ಇರಲಾರದು. ಇವು ಧರ್ಮ ಮತ್ತು ಸಂಬಂಧ ಗ್ರಂಥಗಳಾದರೂ ಸಂಸ್ಕೃತಿಯ ಪರಂಪರೆಯ ಮೂಲವನ್ನು ತಿಳಿಯುವುದು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ನೆರವಾಗುತ್ತವೆ. ಉದಾಹರಣೆಗಾಗಿ ಕನ್ನಡ ನಾಡಿನ ಇತಿಹಾಸ ರಚನೆಗೆ ಕನ್ನಡ ಸಾಹಿತ್ಯದಲ್ಲಿ ಪ್ರಾಪ್ತವಾಗಿರುವ ಮೊದಲ ಕೃತಿ 'ಕವಿರಾಜ ಮಾರ್ಗ' ಪ್ರಸ್ತುತ ನಮ್ಮ ಅಧ್ಯಯನ ಕುಮ್ಮಟದ ನಾಯಕರ ಕಾಲಕ್ಕೆ ಸೀಮಿತವಾಗಿರುವುದರಿಂದ ಇಲ್ಲಿನ ಸಾಹಿತ್ಯಿಕ ಆಧಾರಗಳು ಯಾವ ರೀತಿಯಲ್ಲಿ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ತಿಳಿಯುವುದು ಮುಖ್ಯ ಅಂಶ. ಕುಮ್ಮಟ ನಾಯಕರ ಮೂಲಕ್ಕೆ ಸಂಬಂಧಿಸಿದಂತೆ ಹಲವಾರು ಚರ್ಚೆಗಳು ನಡೆದಿವೆ.

ಹುಲ್ಲೂರು ಶ್ರೀನಿವಾಸ ಜೋಯಿಸ್, ನಂಜುಂಡ ಕವಿ ವಿರಚಿತ ರಾಮನಾಥ ಚರಿತೆ. ಕುಮ್ಮಟದ ನಾಯಕರ ಕಾಲದ ಇತಿಹಾಸವನ್ನು ತಿಳಿಸುವ ಪ್ರಥಮ ಕಾವ್ಯವೆಂದರೆ ತಪ್ಪಾಗಲಾರದು (ದೇವೀರಪ್ಪ ಎಚ್. ೧೯೫೯). ಈ ಕಾವ್ಯದಲ್ಲಿ ಮುಮ್ಮಡಿ ಸಿಂಗೆಯನಾಯಕನ ಕಾಲದಿಂದ ಕುಮಾರ ರಾಮನ ಕಾಲದವರೆಗಿನ ಅವಧಿಯಲ್ಲಿ ನಡೆದ ಯುದ್ಧದ ಪ್ರಸಂಗಗಳು ಹಾಗೂ

ವಿವಿಧ ಘಟನಾವಳಿಗಳು ಚಿತ್ರಿತವಾಗಿವೆ, ಇದನ್ನು ಶಾಸನಗಳು ಸಹ ಪುಷ್ಟೀಕರಿಸಿವೆ. ಕಂಪಿಲನ ವೈಭವ, ಹೊಸಮಲೆದುರ್ಗದ ವೈಭವ, ಯುದ್ಧ ಸಿದ್ಧತೆ, ಐತಿಹ್ಯಗಳನ್ನು ಒಳಗೊಂಡಿದೆ. ಶೂಲದ ಹಬ್ಬವನ್ನು ಆಚರಿಸುವ ಕುಮ್ಮಟದ ನಾಯಕರು ಅಲ್ಲಿನ ಮಾಂಡಲೀಕರ ಹೆಸರುಗಳು ಮತ್ತು ಮಂಡಲ ಸ್ಥಳಗಳು, ಕಂಪಿಲರಾಯನೇ ಪ್ರಥಮವಾಗಿ ಶೂಲದ ಹಬ್ಬವನ್ನು ಆಚರಣೆಗೆ ತಂದ ವಿಷಯ ಸಂದಿ-೨೧ ಪದ್ಯ-೮ರಲ್ಲಿ ಉಲ್ಲೇಖಿತವಾಗಿದೆ (ಎಚ್. ದೇವೀರಪ್ಪ, ೧೯೬೪, ಸಂ-೩, ಪು. ೨). ಬಾಲರಾಮನ ಸಾಂಗತ್ಯ ೧೬ನೇ ಶತಮಾನದಲ್ಲಿ ರಚಿತವಾದುದು. ರಾಮನಾಥನ ಚರಿತದ ಕಥಾ ಪ್ರಸಂಗವೇ ಈ ಕಥೆಯಲ್ಲಿ ಮೂಡಿಬಂದಿದೆ. ಕುಮಾರ ರಾಮನು ಪರಶುರಾಮನ ಅವತಾರವೆಂದೇ ಈ ಕಾವ್ಯದಲ್ಲಿದೆ (ವರದರಾಜರಾವ್ ಜಿ. ೧೯೬೬, ಪು. ೧೧೯-೧೨೨). ಕುಮಾರ ರಾಮನ ಸಾಂಗತ್ಯಗಳು (ವರದರಾಜರಾವ್ ಜಿ. ೧೯೬೬) ಕುಮಾರರಾಮನ ಕೃತಿಗಳ ಹೆಸರು, ಕವಿ, ಕಾಲ, ವಿಚಾರ ಕುರಿತಾಗಿದೆ. ಇವನು ಕೆಲವು ಚರಿತ್ರಾಂಶಗಳನ್ನು ಶಿಲಾಶಾಸನಗಳು ಪುಷ್ಟೀಕರಿಸಿವೆ. ಜಿ. ವರದರಾಜರಾವ್‌ರವರು ನಂಜುಂಡ ಕವಿ, ಪಾಂಚಾಳ ಗಂಗ, ಮಹಾಲಿಂಗ ಸ್ವಾಮಿಯವರು ಕುಮಾರ ರಾಮನ ಸಾಂಗತ್ಯಗಳನ್ನು ಆಧರಿಸಿ, ಕುಮ್ಮಟ ನಾಯಕರ ಚರಿತ್ರೆಯ ಕುರಿತಾಗಿ ಅಧ್ಯಯನ ಮಾಡಿದ್ದಾರೆ. ಜಿ. ವರದರಾಜರಾವ್‌ರವರ ಕುಮ್ಮಟ ಕೇಸರಿಯಲ್ಲಿ (೧೯೬೩) ಮಾತಂಗಿಯು ಸುಲ್ತಾನನ ಪರವಾಗಿ ಕುಮ್ಮಟ ದುರ್ಗಕ್ಕೆ ಮುತ್ತಿಗೆ ಹಾಕಿದಾಗ ಮಂತ್ರಿ ಬೈಚಪ್ಪನು ಕಂಪಿಲನಿಗೆ ಹೇಳುವ ಸಲಹೆಯ ಪ್ರಸಂಗಗಳು ಹಾಗೂ ಕಂಪಿಲ ರಾಮನಾಥರು ಮಂತ್ರಿಯ ಸಮಯೋಚಿತ ಸಲಹೆಯನ್ನು ಪಡೆದಿದ್ದಲ್ಲಿ ಯುದ್ಧದ ಸಂಭವ ಇರುತ್ತಿರಲಿಲ್ಲವೆಂಬ ಅಂಶ ಕುಮ್ಮಟ ಕೇಸರಿ ಗ್ರಂಥದಲ್ಲಿ ವ್ಯಕ್ತವಾಗಿದೆ.

ಕಡುಗಲಿ ಕುಮಾರ ರಾಮನ ಐತಿಹಾಸಿಕ ಕಾದಂಬರಿ ಸುಲ್ತಾನನ ಮಗಳು ಬಾಬಮಿಯ ವಿಷಯ, ಬಾದುರನ ಪಲಾಯನ, ಕಂಪಿಲರಾಯನಲ್ಲಿ ಆಶ್ರಯ ಮತ್ತು ಶೂಲದ ಹಬ್ಬದ ಕುರಿತಾಗಿದೆ. ಈ ಐತಿಹಾಸಿಕ ಕಾದಂಬರಿ ಕುಮಾರ ರಾಮನಾಥನ ಹಲವು ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸಿದೆ. ಕಂಪಿಲರಾಯನು ಕುಂತಳ ರಾಜ್ಯದ ಅಧಿಪತಿಯೆಂದು. ಕುಂತಳ ನಗರವೇ ಇವರ ರಾಜಧಾನಿ ಎಂದು ಉಲ್ಲೇಖಿಸಲಾಗಿದೆ (ದೇ. ಜವರೇಗೌಡ, ೧೯೬೪, ಪು. ೨೫).

ಚೆನ್ನರಾಮನ ಸಾಂಗತ್ಯ ಕೃತಿಯು ವಿಶಿಷ್ಟವಾದುದು. ಕುಮಾರರಾಮನ ತಾತನಾದ ಮುಮ್ಮಡಿ ಸಿಂಗನು ಒಬ್ಬ ಶಬರ ನಾಯಕನೆಂದು ಆತನಿಗೆ ಮಂಚಕ್ಕನ ಹೊಟ್ಟೆಯಲ್ಲಿ ಕಂಪಿಲನೆಂಬಾತನು ಜನಿಸಿದನೆಂದು, ಇತರರು ಪೂವಾಲಿ ಕುಲದವರೆಂದು. ಕಂಪಿಲನು ಕಾರಣಾಂತರದಿಂದ ದೇಶಭ್ರಷ್ಟನಾಗಿ ಬಂದ ಆರ್ಗೋಡಿಯ ಚಾರಾಮರಾಯನ ಮಗಳಾದ ಹರಿಯಾಲದೇವಿಯನ್ನು ಮದುವೆಯಾಗುವನು. ಹೊಸಮಲೆದುರ್ಗವನ್ನು ಕಂಪಿಲ ರಾಯನು. ಕುಮ್ಮಟದುರ್ಗವನ್ನು ಕುಮಾರರಾಮನು ಕಟ್ಟಿದರು. ಕಂಪಿಲನು ಬಾದೂರನಿಗೆ ಆಶ್ರಯವಿತ್ತುದೇ ಸುಲ್ತಾನನಿಗೂ ಕುಮಾರರಾಮನಿಗೂ ಮೇಲಿಂದ ಮೇಲೆ ಯುದ್ಧಗಳಾಗಲು ಮುಖ್ಯ ಕಾರಣ. ಹೀಗೆ ಹಲವಾರು ಪ್ರಸಂಗಗಳ ಐತಿಹಾಸಿಕ ಘಟನೆಗಳು ಇಲ್ಲಿವೆ (ವರದರಾಜರಾವ್ ಜಿ. ೧೯೬೬, ಪು. ೮೭-೧೦೫)

ಕೊಮಾರ ರಾಮಯ್ಯನ ಚರಿತ್ರೆ (ಕಲಬುರ್ಗಿ ಎಂ.ಎಂ. ೨೦೦೧) ಪಾಂಚಾಳ ಗಂಗನ ಕೃತಿಯನ್ನೇ ಹೋಲುತ್ತದೆ. ಈ ಕೃತಿಯಲ್ಲಿ ಮುಮ್ಮಡಿ ಸಿಂಗ ಕಂಪಿಲನ ವೃತ್ತಾಂತ, ಕೊಮಾರ ರಾಮಯ್ಯನ ಕೈಲಾಸಾಗಮದ ಕುರಿತು ಉಲ್ಲೇಖಿತವಾಗಿದೆ.

ಮುಮ್ಮಡಿ ಸಿಂಗ ಕಂಪಿಲರ ವೃತ್ತಾಂತ, ಮುಮ್ಮಡಿ ಸಿಂಗ ಹಾಗೂ ಹೊಯ್ಸಳರೊಡನೆ ನಡೆದ ಯುದ್ಧ ಈ ಕುರಿತಂತೆ, ಕೊಮಾರ ರಾಮನ ಮನ್ನೆಯರ ಹೆಸರುಗಳು, ಕೊಮಾರ ರಾಮನ ಆಳ್ವಿಕೆಯ ಘಟನೆಗಳು ಅವರ ವಂಶಾವಳಿ ಅಲ್ಲಲ್ಲಿ ಉಲ್ಲೇಖಿತವಾಗಿದೆ.

ಕೈಫಿಯತ್ತುಗಳು

ಕುಮ್ಮಟ ಇತಿಹಾಸ ರಚನೆಗೆ ಸಂಬಂಧಿಸಿದಂತೆ ಸಾಹಿತ್ಯಿಕ ಗ್ರಂಥಗಳು ಎಷ್ಟು ಮುಖ್ಯವೋ ಕೈಫಿಯತ್ತುಗಳು ಅಷ್ಟೇ ಮಹತ್ವದ ಪಾತ್ರವನ್ನು ವಹಿಸಿವೆ. ಈ ಕೈಫಿಯತ್ತುಗಳು (ಕಲಬುರ್ಗಿ ಎಂ.ಎಂ., ೧೯೯೪) ಕೊಲೋನಲ್ ಕಾಲಿನ್ ಮೆಕೆಂಜಿಯವರು ಸಂಗ್ರಹಿಸಿದವು. ೧. ಭಟ್ಟರಹಳ್ಳಿಯ ಕುಮಾರರಾಮನ ಕೈಫಿಯತ್ತು (ಕಲಬುರ್ಗಿ ಎಂ.ಎಂ. ೧೯೯೪, ಪು. ೪೬೫), ೨. ತಾಲ್ಲೂಕು ಕಂಪಲಿ ಕೈಫಿಯತ್ತು ಪು.೪೯೦-೫೦೪, ೩. ದರೋಜಿ ಗ್ರಾಮದ ಕೈಫಿಯತ್ತು ಪು. ೫೦೫-೫೨೦, ೪. ಕೊಮಾರ ದೇವರ ಕ್ಷೇತ್ರದ ಕೈಫಿಯತ್ತು ಪು. ೫೪೦-೫೫೦, ೫. ಕೈಫಿಯತ್ತು ಕುರುಗೋಡು ತಾಲ್ಲೂಕು ಬಳ್ಳಾರಿ ಪು.೪೪೧-೪೬೪. ಈ ಕೈಫಿಯತ್ತುಗಳು ಕುಮ್ಮಟ ನಾಯಕರ ವಂಶದ ಕುರಿತು ಅಧ್ಯಯನ ಮಾಡಲು ಆಕರಗಳಾಗಿವೆ. ಮೆಕೆಂಝಿಯವರು ಸಂಪಾದಿಸಿದ ಕೈಫಿಯತ್ತುಗಳಲ್ಲಿ ಬರುವ ಜಾನಪದ ಸಾಹಿತ್ಯ, ಕಾದಂಬರಿ ಹಾಗೂ ಶಾಸನಗಳು, ಕೆಲವೊಂದು ಶಾಸನಗಳು, ಕಾವ್ಯಗಳು ಮೂಲ ಆಕರಗಳಾಗಿವೆ. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ (ಮೈತ್ರಿ ಕೆ.ಎಂ. ೧೯೯೭) ಇವರ ಪ್ರಥಮ ಭಾಗ ಕುಮಾರ ರಾಮನಿಗೆ ಸಂಬಂಧಿಸಿದೆ. ಆನೆಗೊಂದಿ ಸ್ಥಳ ಇದರ ರಾಜಧಾನಿಯಾಗಿತ್ತೆಂಬ ವಿಷಯ ಈ ಜಾನಪದ ಕಾವ್ಯದಲ್ಲಿ ಉಲ್ಲೇಖಿತವಾಗಿದೆ. ನಾನು ಆನೆಗೊಂದಿಯ ರಾಮ ಎಂದು ಕುಮಾರ ರಾಮನಾಥನೇ ವ್ಯಕ್ತಪಡಿಸಿದ್ದಾನೆ (ಮೈತ್ರಿ ಕೆ.ಎಂ. ೧೯೯೭. ಪು.೯೦). ಇದರಲ್ಲಿನ ಅನೇಕ ಘಟನಾವಳಿಗಳು ಜಾನಪದ ಕಾವ್ಯಗಳ ಮೂಲಕ ಹೊರಹೊಮ್ಮಿವೆ. ಹರಿಹರನ ರಗಳೆಗಳು (ಕಲಬುರ್ಗಿ ಎಂ.ಎಂ. ೧೯೯೯) ಕೇಶಿರಾಜ ದಣ್ಣಾಯಕನು ಕಳಚೂರ್ಯರಲ್ಲಿ ದಂಡನಾಯಕನಾಗಿದ್ದು, ಕಂಪಿಲ-ಸಿಂಗೆಯನಾಯಕರ ಪೂರ್ವಜನಾಗಿದ್ದನೆಂಬ ವಿಷಯವನ್ನು ತಿಳಿಸುತ್ತದೆ.

ವಿರೂಪಾಕ್ಷ ಪಂಡಿತರ ಚೆನ್ನಬಸವ ಪುರಾಣದಲ್ಲಿ ಕಂಪಿಲನ ಹೊಸಮಲೆದುರ್ಗದಲ್ಲಿನ ರಾಜ್ಯಾಡಳಿತ, ಕುಮ್ಮಟದ ಕೋಟೆಯ ನಿರ್ಮಾಣ, ದೆಹಲಿ ಸುಲ್ತಾನನು ೧,೯೬,೦೦೦ ಸೈನಿಕರೊಡನೆ ಕುಮ್ಮಟಕ್ಕೆ ಮುತ್ತಿಗೆ ಹಾಕಿದ್ದು ಕಂಪಿಲ ಕುಮಾರ ರಾಮನಾಥರು ಈ ಕದನದಲ್ಲಿ ಹತರಾದ ವಿಷಯವಿದೆ. (ವಿಪಿಆರ್, ೧೯೮೭-೮೮, ಪು. ೧೭೯-೮೦)

ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯದಲ್ಲಿ ಕುಮಾರ ರಾಮ ಮತ್ತು ಕಂಪಿಲರು ರಾಜ್ಯಂಗೈಯುತ್ತಿರುವ ದೆಹಲಿ ಸುಲ್ತಾನನ ದಾಳಿಯಿಂದ ಅವನತಿಯಾದ ವಿವರಣೆ ಇದೆ. ರಾಜ ಕಾಲನಿರ್ಣಯದಲ್ಲಿ ದೆಹಲಿ ಸುಲ್ತಾನನ ಸೈನ್ಯವು ವಾರಂಗಲ್ಲಿನ ಕಾಕತೀಯ ವೀರ ರುದ್ರನನ್ನು ಸೆರೆಹಿಡಿದ ನಂತರ ವೀರ ರುದ್ರನ ಭಂಡಾರ ಅಧಿಕಾರಿಗಳು ಇಬ್ಬರು ಕುಮಾರ ರಾಮನಾಥನಲ್ಲಿ ಭಂಡಾರಿಗಳಾಗಿದ್ದರೆಂದಿದೆ. ಇವರುಗಳು ಭಂಡಾರಿ ಬುಕ್ಕ ಮತ್ತು ಹರಿಹರ (ರಾಮಶರ್ಮ ಎಂ.ಎಚ್. ೧೯೭೯-೮೦). ಕೆಳ

ಬಸವಪ್ಪ ನಾಯಕನ ಶಿವತತ್ವ ಚಿಂತಾಮಣಿಯೂ ಇದೇ ವಿಷಯವನ್ನು ಪುಷ್ಟೀಕರಿಸುತ್ತದೆ (ರಾಮಶರ್ಮ ಎಂ.ಎಚ್. ೧೯೩೯. QJMS. VOL. XX, PP: 8-9)

ರಣಧೀರ ರಾಮನಾಥ ಕೃತಿಯಲ್ಲಿ (ರಾಮಶರ್ಮ ಎಂ.ಎಚ್.೧೯೬೦, ಪು. ೯) ಕುಮ್ಮಟ ನಾಯಕರ ಕೇಂದ್ರವಾಗಿ ಕುಮ್ಮಟ ದುರ್ಗ ಎಂದು ಗುರುತಿಸಲಾಗಿದೆ. ಮುಮ್ಮಡಿ ಸಿಂಗೆಯನಾಯಕನಿಂದ ಹಿಡಿದು ಕುಮಾರ ರಾಮನಾಥನವರೆಗೂ ನಡೆದ ಐತಿಹಾಸಿಕ ಘಟನೆಗಳು, ದೆಹಲಿ ಸುಲ್ತಾನನು ಐದು ಭಾರಿ ನಡೆಸಿದ ಯುದ್ಧ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿವೆ. ಇವು ಸಾಹಿತ್ಯಿಕ ತುಣುಕುಗಳು ಮಾತ್ರ. ಸಾಹಿತ್ಯವು ಒಂದು ನಾಡಿನ ಸಾಂಸ್ಕೃತಿಕ ಸಂಕೇತ. ಸಾಹಿತ್ಯ ಸಂಸ್ಕೃತಿ ಮತ್ತು ನಾಗರೀಕತ್ವದ ನಿಧಿಯೂ, ಪ್ರತಿನಿಧಿಯೂ ಹೌದು. ಅದು ಜನಜೀವನದ ಗತ ಬಿಂಬವೂ ಆಗಬಲ್ಲದು (ಸೂರ್ಯನಾಥ ಕಾಮತ, ದೇವರ ಕೊಂಡಾರೆಡ್ಡಿ, ಎಸ್.ಎ. ಜಗನ್ನಾಥ (ಸಂ) ೧೯೯೧, ಪು. ೨೧೮).

ಹೀಗೆ ಸಾಹಿತ್ಯಿಕ ದೃಷ್ಟಿಯಿಂದ ಇದರ ಉದ್ದೇಶ ಹತ್ತು ಹಲವಾರು ಇದ್ದರೂ ಕಾವ್ಯ ಇಲ್ಲಿನ ಚರಿತ್ರೆ, ಶಾಸ್ತ್ರಕಥೆಗಳು ಸಾಹಿತ್ಯಿಕ ರೂಪಗಳಾಗಿ ಕಾಣಿಸಿಕೊಂಡಿವೆ. ಈ ಮೇಲಿನ ಸಾಹಿತ್ಯಿಕ ಮೂಲಾಧಾರಗಳು ಕರ್ನಾಟಕ ಇತಿಹಾಸದ ರಚನೆಯಲ್ಲಿ ಅದರಲ್ಲೂ ಹೆಚ್ಚಾಗಿ ಕುಮ್ಮಟದ ನಾಯಕರ ಕಾಲದ ಐತಿಹಾಸಿಕ ಘಟನೆಗಳಿಗೆ ಅತ್ಯುಪಯುಕ್ತವಾಗಿರುವುದನ್ನು ಗಮನಿಸಿದರೆ ಈ ಮೂಲಾಧಾರಗಳ ಮಹತ್ವ ತಿಳಿಯದೆ ಇರಲಾರದು.

ವಿದೇಶಿಯ ಮೂಲಾಧಾರಗಳು - ಪ್ರವಾಸೀ ಕಥನಗಳು

ದೇಶಿ ಸಾಹಿತ್ಯ, ವಿದೇಶಿ ಸಾಹಿತ್ಯ ಎಂತಿದ್ದರೂ ಸಾಹಿತ್ಯ ರಾಶಿಯ ಪಕ್ಷಿನೋಟ ಕನ್ನಡ ನಾಡಿನ ಇತಿಹಾಸ ಪುನಃ ರಚನೆಯಲ್ಲಿ ಗಣನೀಯ ಪಾತ್ರ ವಹಿಸಿದ್ದವೆಂಬುದಕ್ಕೆ ಪ್ರವಾಸ ಕಥನಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ಈ ಒಂದು ಹಿನ್ನೆಲೆಯಲ್ಲಿ ಕರ್ನಾಟಕದ ಚರಿತ್ರೆಯ ಅದರಲ್ಲೂ ಹೆಚ್ಚಾಗಿ ಕುಮ್ಮಟ ನಾಯಕರ ಇತಿಹಾಸ ಪುನರ್ರಚನೆಯಲ್ಲಿ ವಿದೇಶಿ ಸಾಹಿತ್ಯದಲ್ಲಿ ದೊರೆಯುವ ಕೆಲವು ಮುಖ್ಯಾಂಶಗಳನ್ನು ಗಮನಿಸಬಹುದು. ೧೬ನೇ ಶತಮಾನದಲ್ಲಿ ಫೆರ್ನಾವೊ ನ್ಯೂನಿಜ್ ([illegible]) ವಿಜಯನಗರಕ್ಕೆ ಅಂದು ಬಂದು ಟಿಪ್ಪಣಿ ಮಾಡಿದ ಇಲ್ಲಿನ ಇತಿಹಾಸ ಮತ್ತು ಪೂರ್ವೇತಿಹಾಸಕ್ಕೆ ಸಂಬಂಧಿಸಿದ ಕೆಲವು ಘಟನಾವಳಿಗಳು ಕುಮ್ಮಟದ ನಾಯಕರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲಿದೆ.

ದೆಹಲಿಯ ಸುಲ್ತಾನನ ಸೈನ್ಯ ಆನೆಗೊಂದಿಗೆ ಬಲವಾಗಿ ಮುತ್ತಿಗೆ ಹಾಕಲು, ಅಲ್ಲಿದ್ದ ರಾಜನು ವೀರಾವೇಶದಿಂದ ಪ್ರತಿಭಟಿಸಿದನೆಂದಿದೆ. ಕೊನೆಗೂ ಮಹಮದೀಯರ ಕೈ ಮೇಲಾಗಲು ಸಮೀಪದಲ್ಲಿದ್ದ 'ಕ್ರಿನಮಟ' ಎಂಬ ಕೋಟೆಯಲ್ಲಿ ಆಶ್ರಯ ಪಡೆದನು (ವರದರಾಜರಾವ್ ಜಿ. ೧೯೮೫, ಪು.೧-೨). ಸುಲ್ತಾನನು ಅನೇಕ ವರ್ಷಗಳ ಕಾಲ ಕ್ಯಾಂಪಿಯ ಮೇಲೆ ಯುದ್ಧವನ್ನು ಮಾಡಿ ಅಲ್ಲಿಂದ ಬಿಸ್ನಾಗ ರಾಜನ ಮೇಲೆ ಯುದ್ಧಕ್ಕೆ ಬಂದಂತಿದೆ. ಬಲ್ಲಾಗೇಟ್ (ಬಾಗಲಕೋಟೆ) ಕೋಟೆಯನ್ನು ವಶಪಡಿಸಿಕೊಂಡನೆಂದಿದೆ. ಬಾಗಲಕೋಟೆಯೂ ಆನೆಗೊಂದಿ ಕಂಪಿಲನ ರಾಜ್ಯದ ಉತ್ತರದ ಗಡಿಯಾಗಿತ್ತೆಂದು. ದೆಹಲಿ

ಸೈನ್ಯ ಸಮೇತವಾಗಿ ಯುದ್ಧಕ್ಕೆ ಕಳುಹಿಸಿ ಈ ಯುದ್ಧದಲ್ಲಿ ಕಂಪಿಲನ ಅವಸಾನವಾಗಿ ರಾಜ್ಯ ಸುಲ್ತಾನನ ವಶವಾಯಿತೆಂದು ದಾಖಲಿಸಿದ್ದಾನೆ (Eliot H.M. and Dowson. J. 1867-77, III, P. 236)

ಬರ್ನಿಯಂತೆ ಫೆರಿಸ್ತಾನನು ಪ್ರವಾಸ ಕಥನದಲ್ಲಿ ಇಲ್ಲಿ ಬಹ-ಉದ್-ದ್ದೀನ್ ಗುಷ್ತಾಫ್‌ನು ಸಗರ ನಾಡಿನ ಮಾಂಡಲೀಕನಾಗಿದ್ದು, ಸುಲ್ತಾನನ ಮಾಂಡಲೀಕತ್ವದ ಅಧೀನದಿಂದ ಸ್ವತಂತ್ರನಾಗಬೇಕೆಂದು ಆಶಿಸಿ ದೇವಗಿರಿಯ ಸೇವುಣರನ್ನು ಆಶ್ರಯಿಸಿ ಸುಲ್ತಾನನ ವಿರುದ್ಧ ದಂಗೆ ಎದ್ದನೆಂದಿದೆ. ಸಗರ ನಾಡಿನ ಸಂಪತ್ತು ಕಂಪಿಲರಾಯನ ಆಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿದ್ದರಿಂದ ಈ ಸಂಪತ್ತನ್ನು ಆಶಿಸಿ ಸುಲ್ತಾನನು ಕಂಪಿಲನ ಮೇಲೆ ಯುದ್ಧ ಮಾಡಬೇಕಾಗಿ ಬಂದಾಗ ಬಹ-ಉದ್-ದ್ದೀನ್‌ನು ಬಲ್ಲಾಳರಾಯನ ಮೊರೆಹೊಕ್ಕನು. ಬಲ್ಲಾಳನು ಸುಲ್ತಾನನ ಬಲವನ್ನರಿತು ಬಹ-ಉದ್-ದ್ದೀನನನ್ನು ಸುಲ್ತಾನನಿಗೆ ಒಪ್ಪಿಸಿದನು. ಹೀಗೆ ಸುಲ್ತಾನನ ಪ್ರಾಬಲ್ಯ ಹೆಚ್ಚಾದುದರ ಕುರಿತು ತನ್ನ ಪ್ರವಾಸೀಕಥನದಲ್ಲಿ ಫೆರಿಸ್ತಾ ಉಲ್ಲೇಖಿಸಿದ್ದಾನೆ (ವೆಂಕಟರಮಣಯ್ಯ ಎನ್. ೧೯೨೯, ಪು. ೧-೨).

ಹೀಗೆ ಸಾಹಿತ್ಯಿಕ ರಾಶಿ, ದೇಶೀಯ, ವಿದೇಶೀಯ ಮೂಲಾಧಾರಗಳು ಕುಮ್ಮಟದ ನಾಯಕರ ಇತಿಹಾಸದಲ್ಲಿ, ಮಹತ್ತರ ಪಾತ್ರವನ್ನು ವಹಿಸಿವೆ. ಒಟ್ಟಾರೆ ಒಂದು ತುಲನಾತ್ಮಕ ಅಧ್ಯಯನ ಮಾಡಿದರೆ ಇವುಗಳ ಮುಖ್ಯಾಂಶವನ್ನು ಗಮನಿಸಿದರೆ ವಸ್ತು-ನಿಷ್ಠ ವಿಷಯಗಳನ್ನು ಕ್ರೋಢೀಕರಿಸುವುದರಿಂದ ಈ ಸಾಹಿತ್ಯಿಕ ಪ್ರಮಾಣಭೂತ ಆಧಾರಗಳು ಕುಮ್ಮಟದನಾಯಕರ ಕಾಲ ಸಾಂಸ್ಕೃತಿಕ ಅಧ್ಯಯನದಲ್ಲಿ ಮಹತ್ತರ ಪಾತ್ರ ವಹಿಸಿವೆ.

ಕರ್ನಾಟಕದ ಇತಿಹಾಸ ರಚನೆಯಲ್ಲಿ ಅದರಲ್ಲೂ ಹೆಚ್ಚಾಗಿ ಕುಮ್ಮಟ ನಾಯಕರ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಸಾಹಿತ್ಯಿಕ ಆಧಾರಗಳು ಎಷ್ಟು ಮುಖ್ಯವೋ, ಪ್ರಾಕ್ತನ ಆಕರ ಸಾಮಗ್ರಿಗಳು ಅಷ್ಟೇ ಮುಖ್ಯ. ಇವು ಚರಿತ್ರೆಯ ಅಧ್ಯಯನದ ಸಾಧನಕ್ಕೆ ಅಡಿಗಲ್ಲು. ಉತ್ಖನನ, ಶಾಸನಗಳು, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ. ವೈಜ್ಞಾನಿಕ ಶಿಸ್ತಿಗೆ ಒಳಪಡುತ್ತದೆ. ಲಿಖಿತ ಚರಿತ್ರೆಗಿಂತ ಪೂರ್ವದ ಇತಿಹಾಸವನ್ನು ತಿಳಿಯಬಹುದಾದಲ್ಲಿ ಭೂ ಶೋಧನೆಯ ಪಾತ್ರ ಅತೀ ಮಹತ್ವದ್ದು. ಉತ್ಖನನ ಮತ್ತು ಪ್ರಾದೇಶಿಕ ಅನ್ವೇಷಣೆಯಲ್ಲಿ ಕಂಡುಕೊಂಡ ಅವಶೇಷಗಳ ವೈಜ್ಞಾನಿಕ ಅಧ್ಯಯನದಿಂದ, ಈ ಮೂಲಾಧಾರಗಳನ್ನು ಆಧರಿಸಿ. ಕುಮ್ಮಟ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನ ಕೈಕೊಂಡಿದೆ.

ಉತ್ಖನನವನ್ನು ಹಂಪೆಯ ಅರಮನೆಯ ಆವರಣದಲ್ಲಿ ಹಾಗೂ ಗಣ್ಯವ್ಯಕ್ತಿಗಳ ಅರಮನೆ ಆವರಣದಲ್ಲಿ ಮಾಡಲಾಗಿ. ಕುಮ್ಮಟ ನಾಯಕರ ಕಾಲದ ಅವಶೇಷಗಳು ಕಾಣಬರುತ್ತವೆ. ಈ ಅಂಶಗಳ ವಿಶೇಷತೆಯನ್ನು ವಾಸ್ತು ಶೈಲಿಯ ಪ್ರತ್ಯೇಕ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ. ಅನ್ವೇಷಣೆಗೆ ಸಂಬಂಧಿಸಿದಂತೆ ಕುಮ್ಮಟದುರ್ಗ, ಹಂಪೆ-ಆನೆಗೊಂದಿ, ಹೊಸಮಲೆದುರ್ಗ, ಹಾನೆಯ. ದೊರವದಿಗಳಲ್ಲಿ ಶಾಸನಗಳು, ದೇವಾಲಯಗಳು, ಕೋಟೆಗಳು, ಮೂರ್ತಿ ಶಿಲ್ಪಗಳು ಕಂಡುಬಂದಿವೆ.

ಇತಿಹಾಸ ಪುನರ್ರಚನೆಯಲ್ಲಿ, ಶಾಸನಗಳ ದೃಷ್ಟಿಯಿಂದ ಕರ್ನಾಟಕದ್ದು ಸಿಂಹಪಾಲು. ಆದರೆ ಈ ಶಾಸನಗಳು ತರ ತರವಾಗಿ. ನಾನಾ ಭಾಗಗಳಲ್ಲಿ ಚದುರಿಸಲ್ಪಟ್ಟಿವೆ. 'ರಾಜಾಜ್ಞೆ' ಅಥವಾ ಅಧಿಕೃತ ದಾಖಲೆಗಳಾಗಿ ಬರೆದಿಟ್ಟಂತಹವು ಶಾಸನಗಳು. ರಾಜ

ಸೇವೆ, ಸಮಾಜ, ಕಲೆ, ಧರ್ಮ, ಆರ್ಥಿಕ ಸ್ಥಿತಿಗತಿಗಳು, ರಾಜಕೀಯ ಮೊದಲಾದ ವಿಷಯಗಳನ್ನು ಹೊರಹಾಕಲು ಶಾಸನಗಳ ಪಾತ್ರ ಬಹಳ ಮಹತ್ವದ್ದು. ಕುಮ್ಮಟ ನಾಯಕರ ಇತಿಹಾಸಕ್ಕೆ ಸಂಬಂಧಿಸಿದಂತೆ ಈ ಶಾಸನಗಳು ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ಹಲವಾರು ಸ್ಥಳಗಳಲ್ಲಿ ದೊರೆತಿವೆ. ಅವುಗಳಲ್ಲಿ ಮುಖ್ಯವಾಗಿ ಕರ್ನಾಟಕದಲ್ಲಿ ಕುಮ್ಮಟದುರ್ಗ, ಹಂಪೆ, ಆನೆಗೊಂದಿ, ದೊರವದಿ, ಹೊಸಮಲೆ ದುರ್ಗ, ಮೆಟ್ರಿಗಳಲ್ಲಿ ದೊರೆತಿವೆ. ಈ ಶಾಸನಗಳ ಆಧಾರದಲ್ಲಿ ರಾಜಕೀಯ ಇತಿಹಾಸ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು, ಅರಿಯಲು ಹೆಚ್ಚು ಒತ್ತು ನೀಡಲಾಗಿದೆ.

ಒಂದು ನಾಡಿನ ಇತಿಹಾಸ ಎಂದರೆ ಅದೊಂದು ಸಾಂಸ್ಕೃತಿಕ ಸಂಪತ್ತು. ಸ್ಮಾರಕಗಳು ನಮ್ಮ ನಾಡಿನ ಸಾಂಸ್ಕೃತಿಕ ಸಂಪತ್ತು. ಕರ್ನಾಟಕವನ್ನು ಆಳಿ ಅಳಿದು ಉಳಿದ ಹಲವಾರು ರಾಜವಂಶಗಳ ಸ್ಮಾರಕಗಳು ಇಂದಿಗೂ ನಮ್ಮ ಗತಕಾಲದ ಉತ್ಕೃಷ್ಟತೆಯನ್ನು ಸೂಚಿಸುತ್ತದೆ. ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದುದರಿಂದ ಶಾಸನ, ದೇವಾಲಯ ಮತ್ತು ವಾಸ್ತು ಶಿಲ್ಪಗಳನ್ನು ಒಳಗೊಂಡು ಕುಮ್ಮಟದುರ್ಗ, ಹಂಪೆ, ಆನೆಗೊಂದಿ, ಹೊಸಮಲೆದುರ್ಗ, ದೊರವದಿ, ಚಿತ್ರದುರ್ಗ, ಹಾನೆಯ ಮತ್ತು ಇಲ್ಲಿಯ ಪರಿಸರದ ಸ್ಥಳಗಳಿಗೆ ಸೀಮಿತಗೊಳಿಸಿ, ಕುಮ್ಮಟ ನಾಯಕರ ನಾಡಿನ ಸಂಸ್ಕೃತಿಯ ಅಧ್ಯಯನವನ್ನು ಕೈಗೊಳ್ಳುವ ಪ್ರಯತ್ನ ಇದು. ಕೋಟೆ ಕೊತ್ತಳಗಳು ಇವು ಸ್ಮಾರಕಗಳೇ. ಈ ಕೋಟೆ ಕೊತ್ತಳಗಳು ಅಂದಿನ ಐತಿಹಾಸಿಕ ಗತಕಾಲದ ಕುರುಹುಗಳಾಗಿ ಇಂದಿಗೂ ಮೂಕ ಸಾಕ್ಷಿಯಾಗಿ ನಿಂತಿವೆ. ಇಂತಹ ಕೋಟೆ ಕೊತ್ತಲಗಳು ಕುಮ್ಮಟದುರ್ಗ, ಆನೆಗೊಂದಿ, ಹಂಪೆ, ಹೊಸಮಲೆದುರ್ಗ, ದೊರವದಿ, ಹಾನೇಯಗಳಲ್ಲಿ ಇವೆ.

ಪ್ರತಿಯೊಂದು ಐತಿಹಾಸಿಕ ತುಣುಕುಗಳಿಗೂ ತನ್ನದೇ ಆದ ವೈಶಿಷ್ಟ್ಯವಿರುತ್ತದೆ. ಈ ಐತಿಹಾಸಿಕ ಅವಶೇಷಗಳು ಇಲ್ಲದೇ ಇದ್ದಲ್ಲಿ ಅಥವಾ ಇದರ ನೆರವು ಇರದಿದ್ದಲ್ಲಿ ಇಂದು ಇತಿಹಾಸದ ಪುಟಗಳು ಖಾಲಿಯಾಗಿರುತ್ತಿದ್ದವೇನೋ? ಈವರೆಗೆ ದೊರೆತ ಆಕರಗಳು ಸ್ವತಂತ್ರವಾಗಿ ಅಥವಾ ಪರಸ್ಪರ ಪೂರಕವಾಗಿ ಕುಮ್ಮಟದ ನಾಯಕರ ಕಾಲದ ಇತಿಹಾಸ ಪುನರ್ರಚನೆ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಮಹತ್ವದ ಕೊಡುಗೆಯನ್ನು ನೀಡಿವೆ. ಕುಮ್ಮಟ ನಾಯಕರ ಕಾಲದ ದೇಗುಲಗಳು ಮೂರ್ತಿಶಿಲ್ಪ, ಅರಮನೆಗಳು, ಕೋಟೆ ಕೊತ್ತಲಗಳು, ಬಸದಿಗಳು, ಕುಮ್ಮಟ ನಾಯಕರ ಕಾಲದ ಕಲೆಯ ಉತ್ಕೃಷ್ಟತೆಯನ್ನು ಸೂಚಿಸುತ್ತದೆ. ಇವು ದೈವಿಕ ಸೊಬಗನ್ನು ಪ್ರತಿಬಿಂಬಿಸುತ್ತವೆ. ಜನರ ಉಡುಗೆ ತೊಡುಗೆ ಧಾರ್ಮಿಕ ಜೀವನ ಅವರ ಆಚಾರ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಇವು ನಮ್ಮ ನಾಡಿನ ಅಪೂರ್ವ ಐತಿಹಾಸಿಕ ಸಂಪತ್ತು. ಪ್ರಕಟಿತ ಮಾಹಿತಿಯ ಆಧಾರದ ಜೊತೆಗೆ ಕ್ಷೇತ್ರಕಾರ್ಯ ಮಾಡಿ ಸಾಂಸ್ಕೃತಿಕ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಭೂ ಭೌಗೋಳಿಕ ಹಿನ್ನೆಲೆ

ಮಾನವನು ಸಮಾಜ ಜೀವಿ. ಅವನು ಸಮಾಜವನ್ನು ಕಟ್ಟಲು ಅಲ್ಲಿನ ಪರಿಸರಕ್ಕೆ ಹೊಂದಿಕೊಳ್ಳಲು ವ್ಯತ್ಯಾಸಗಳಿಗೊಳಪಟ್ಟು ನಡೆಯುತ್ತಾನೆ. ಒಂದು ಜನಾಂಗದ ಸಂಸ್ಕೃತಿ ಅದು ಅಲ್ಲಿನ ನೆಲೆಯೂರಿದ ಭೂ ಭೌಗೋಳಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಇತಿಹಾಸ ಸಂಸ್ಕೃತಿ ಬೇರೆ ಬೇರೆ ಪದಗಳಾದರೂ ಭೂ ಭೌಗೋಳಿಕ ಇತಿಹಾಸ, ಸಂಸ್ಕೃತಿ ಒಂದಕ್ಕೊಂದು

ಪೂರಕವಾಗಿರುತ್ತದೆ. ಇತಿಹಾಸಕ್ಕೆ ಭೂ ಭೌಗೋಳಿಕ ಪರಿಸರವೇ ನೆಲೆಯಾಗಿರುತ್ತದೆ. ಪ್ರಸ್ತುತ ಕುಮ್ಮಟ ನಾಯಕರ ಕಾಲದ ಭೂ ಭೌಗೋಳಿಕ ಪರಿಸರದ ಪರಿಚಯ ಮಾಡಿದಾಗ ಈ ಅಧ್ಯಯನಕ್ಕೊಂದು ಪರಿಪೂರ್ಣತೆ ದೊರೆಯುತ್ತದೆ.

ಕುಮ್ಮಟ ನಾಯಕರ ಕಾಲದ ಇತಿಹಾಸ ಹಾಗೂ ಸಂಸ್ಕೃತಿಯ ಅಧ್ಯಯನ ಮಾಡಲು ಕುರುಹುಗಳು ಕುಮ್ಮಟದುರ್ಗ, ಆನೆಗೊಂದಿ, ದೊರವದಿ, ಹೊಸಮಲೆದುರ್ಗ ಮತ್ತು ಹಾಸೇಯದ ದುರ್ಗಗಳಲ್ಲಿ ಕಾಣಬಹುದು. ಈ ಒಂದು ಹಿನ್ನೆಲೆಯಲ್ಲಿ ಈ ಸ್ಥಳಗಳ ಭೂ ಭೌಗೋಳಿಕ ಪರಿಸರವನ್ನು ಮೊದಲು ಗಮನಿಸೋಣ.

ಕುಮ್ಮಟದುರ್ಗ

ಉತ್ತರ ಅಕ್ಷಾಂಶ ೭೬°-೪೦' ಪೂರ್ವರೇಖಾಂಶ ೧೫°-೨೦' (ರಾಯಚೂರು ಜಿಲ್ಲೆ ಗೆಝೆಟಿಯರ್ ನಕಾಶೆಯಂತೆ) ಕುಮ್ಮಟ ದುರ್ಗವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿಗೆ ಒಳಪಡುವುದು. ಈ ಪ್ರದೇಶದಲ್ಲಿ ಹೆಚ್ಚಿನ ಮಟ್ಟಿಗೆ ಗ್ರಾನೈಟ್ ಶಿಲೆ ಮತ್ತು ಉಸುಕು ಮಿಶ್ರಿತ ಕಲ್ಲುಗಳಿಂದ ಕೂಡಿದೆ. ಗ್ರಾನೈಟ್ ಶಿಲೆ ಈ ಭೂ ಪ್ರದೇಶದ ಒಂದು ಮುಖ್ಯ ಅಂಶವಾಗಿದೆ. ದೇವಾಲಯಗಳು, ಶಿಲ್ಪಮೂರ್ತಿಗಳು, ಕೋಟೆಯ ನಿರ್ಮಾಣಕ್ಕೆ ಯೋಗ್ಯವಾದುದರಿಂದ ಈ ಪರಿಸರದ ಶಿಲೆಯನ್ನು ದೇವಾಲಯ ಮೂರ್ತಿಶಿಲ್ಪ, ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಬಳಸಲಾಗಿದೆ. ಈ ಪ್ರದೇಶ ಸಮಷ್ಕಿತ ಹವಮಾನದಿಂದ ಕೂಡಿದ್ದು. ಮಳೆಯ ಪ್ರಮಾಣ ಅತಿಕಡಿಮೆ. ಇದರಿಂದ ಒಣಹವೆ ಪ್ರದೇಶವೆಂತಲೂ ಕರೆಯಬಹುದು.

ಆನೆಗೊಂದಿ

ಉತ್ತರ ಅಕ್ಷಾಂಶ ೧೫°-೨೦' ಪೂರ್ವರೇಖಾಂಶ ೭೬°-೩೦' ಯಲ್ಲಿದೆ (ರಾಯಚೂರು ಜಿಲ್ಲೆ ಗೆಝೆಟಿಯರ್ ನಕಾಶೆ). ಆನೆಗೊಂದಿ ಗಂಗಾವತಿ ತಾಲ್ಲೂಕಿನ ಕೊಪ್ಪಳ ಜಿಲ್ಲೆಗೆ ಒಳಪಡುತ್ತದೆ. ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದಕ್ಷಿಣಕ್ಕೆ ತುಂಗಭದ್ರಾ ನದಿಯ ಉತ್ತರ ದಡದಲ್ಲಿದೆ. ಪ್ರಕೃತಿ ರಮಣೀಯವಾದ ಬೆಟ್ಟ ಗುಡ್ಡಗಳು ಸುತ್ತಲೂ ಆವೃತವಾಗಿವೆ. ಆನೆಗೊಂದಿಯ ದಕ್ಷಿಣ ಭಾಗದಲ್ಲಿ ತುಂಗಭದ್ರಾ ನದಿ ಪ್ರವಹಿಸುತ್ತದೆ. ಆನೆಗೊಂದಿ ಒಮ್ಮೆ ಕಂಪಿಲನ ರಾಜಧಾನಿಯಾಗಿ ಮೆರೆದ ಸ್ಥಳ. ಬೆಟ್ಟಗುಡ್ಡಗಳು ಕಡಿದಾಗಿದ್ದು, ದುರ್ಗಮವಾಗಿವೆ. ಇಲ್ಲಿನ ಗ್ರಾನೈಟ್ ಶಿಲೆಯನ್ನು ಸುತ್ತಲಿನ ಶಿಲ್ಪ, ದೇವಾಲಯ ಹಾಗೂ ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಬಳಸಲಾಗಿದೆ. ಕುಮ್ಮಟದುರ್ಗ ಹಾಗೂ ಎಮ್ಮೆಗುಡ್ಡದ ಪ್ರಾಕೃತಿಕ ಮೇಲ್ಮೈ ಲಕ್ಷಣಗಳು ಆನೆಗೊಂದಿಯಲ್ಲಿಯೂ ಕಾಣಬರುತ್ತದೆ. ಒಟ್ಟಾರೆ ಮಾನವನು ಇಲ್ಲಿ ನೆಲೆಸಲು ತಕ್ಕ ವಾತಾವರಣ ನಿರ್ಮಾಣವಾಗಿದೆ. (Mysore state Gazetteer, Raichur District: 1975 pp.1-28)

ದೊರವದಿ

ದೊರವದಿ ಕುಮ್ಮಟ ನಾಯಕರ ಕಾಲದಲ್ಲಿ ರಾಜಧಾನಿಯಾಗಿ ಮೆರೆದ ಸ್ಥಳ. ದೊರವದಿ. ದೊರವಡಿ. ಅಂದಿನ ನಾಡು ಇಂದಿನ ಗ್ರಾಮ. ಸಂಡೂರು ತಾಲ್ಲೂಕಿನ ಬಳ್ಳಾರಿ ಜಿಲ್ಲೆಗೆ ಒಳಪಡುವುದು. ಉತ್ತರ ಅಕ್ಷಾಂಶ ೧೫°-೨೦' ಪೂರ್ವ ರೇಖಾಂಶ

೭೬°-೪೦'ಯಲ್ಲಿದೆ. (ಬಳ್ಳಾರಿ ಜಿಲ್ಲೆ ಗೆಝೆಟಿಯರ್ ನಕಾಶೆ) ದರೋಜಿ ಇಂದು ಗ್ರಾಮವಾದರೂ ಇಲ್ಲಿ ಹೊಸ ದರೋಜಿ ಮತ್ತು ಹಳೇ ದರೋಜಿ ಎಂದು ಪ್ರತ್ಯೇಕ ಗ್ರಾಮಗಳಾಗಿ ವಿಭಾಗಿಸಲಾಗಿದೆ. ದಕ್ಷಿಣ ದಿಕ್ಕಿನಲ್ಲಿ ಗುಡ್ಡ ಬೆಟ್ಟಗಳು ಗ್ರಾನೈಟ್ ಶಿಲೆಯಿಂದ ಕೂಡಿವೆ. ದಕ್ಷಿಣ ದಿಕ್ಕಿನಲ್ಲಿ ಸಂಡೂರು ಪ್ರಾಂತದಿಂದ ಪ್ರವಹಿಸುವ ದೊಡ್ಡಹಳ್ಳ ದರೋಜಿಯ ಪೂರ್ವ ಭಾಗದಲ್ಲಿದೆ. ಇದನ್ನು ನಾರೀಹಳ್ಳವೆಂತಲೂ ಕರೆಯುತ್ತಾರೆ. ಹಳೆ ದರೋಜಿಯ ಕೆಳಭಾಗದಲ್ಲಿ ಉತ್ತರಕ್ಕೆ ಸಮತಟ್ಟಾದ ಭೂ ಭಾಗ. ದಕ್ಷಿಣದಲ್ಲಿ ಪರ್ವತಗಳು ಗ್ರಾನೈಟ್ ಶಿಲೆಯನ್ನು ಹೊಂದಿವೆ. ಈ ಶಿಲೆಯನ್ನು ದೇವಾಲಯ ಹಾಗೂ ಕೋಟೆಯ ನಿರ್ಮಾಣಕ್ಕೆ ಬಳಸಲಾಗಿದೆ. ಕುಡಿಯಲು ಹಳ್ಳದ ನೀರು, ನೈಸರ್ಗಿಕ ಗುಹೆಗಳು ಜೀವನಕ್ಕೆ ಅನುಕೂಲಕರವಾದ ವಾತಾವರಣದ ಮುಖ್ಯ ವೈಶಿಷ್ಟ್ಯಗಳು. ದೊರವದಿಯ ಬೆಟ್ಟದ ಮೇಲೆ ರಾಮಲಿಂಗೇಶ್ವರ ದೇವಾಲಯವಿದ್ದು ಪಕ್ಕದಲ್ಲಿ ನೀರಿನ ಕೊಳ ಹಾಗೂ ಕೆರೆ ಇದೆ.

ಹೊಸಮಲೆದುರ್ಗ

ಹೊಸಮಲೆದುರ್ಗವನ್ನು ರಾಮನಮಲೆದುರ್ಗ ಅಥವಾ ರಾಮನಮಲೆ ಎಂದು ಕರೆಯಲಾಗುತ್ತಿದೆ. ಉತ್ತರ ಅಕ್ಷಾಂಶ ೧೫°-೧೦' ಪೂರ್ವರೇಖಾಂಶ ೭೬°-೨೦' ರಲ್ಲಿದೆ. ಹೊಸಮಲೆದುರ್ಗ (ಬಳ್ಳಾರಿ ಜಿಲ್ಲೆ ಗೆಝೆಟಿಯರ್ ನಕಾಶೆ) ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಬಳ್ಳಾರಿ ಜಿಲ್ಲೆಗೆ ಒಳಪಡುತ್ತದೆ. ಹೊಸಮಲೆದುರ್ಗ, ಹೊಸಪೇಟೆ-ಸಂಡೂರು ಮಾರ್ಗ ಮಧ್ಯದಲ್ಲಿ ಎತ್ತರವಾದ ಪರ್ವತದ ತಪ್ಪಲು ಪ್ರದೇಶವಾಗಿದ್ದು ಸಮುದ್ರ ಮಟ್ಟದಿಂದ ೯೯೧ ಮೀ. ಎತ್ತರವಾಗಿದೆ. ಹೊಸಮಲೆದುರ್ಗವು ಕುಮ್ಮಟದಂತೆ ರಾಜಧಾನಿಯಾಗಿ ಮೆರೆದ ಸ್ಥಳ. ಈ ಪರಿಸರ ಬೆಟ್ಟ, ಗುಡ್ಡ, ಅರಣ್ಯಗಳಿಂದ ಕೂಡಿದೆ. ಪಶ್ಚಿಮದಲ್ಲಿ ಬಯಲು ಪ್ರದೇಶ ಹಾಗೂ ತುಂಗಭದ್ರ ನದಿ ಪ್ರವಹಿಸುತ್ತಿದೆ. ಈ ಪ್ರದೇಶದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳು ಹೇರಳವಾಗಿ ಲಭ್ಯವಿದೆ. ಲಭ್ಯವಿರುವ ಕಬ್ಬಿಣದ ಅಂಶಗಳನ್ನೊಳಗೊಂಡ ಕಲ್ಲುಗಳನ್ನು ಕೋಟೆ, ನೀರಿನ ಕೊಳಗಳ ನಿರ್ಮಾಣಕ್ಕಾಗಿ ಉಪಯೋಗಿಸಿದ ಉದಾಹರಣೆಗಳಿವೆ. ಒಟ್ಟಾರೆ ಇಲ್ಲಿ ಜೀವನಕ್ಕೆ ಅನುಕೂಲಕರವಾದ ವಾತಾವರಣ, ಉತ್ತಮ ಹವಾಮಾನ ನಿರ್ಮಾಣವಾಗಿದೆ.

ಹಾನೇಯ

ಹಾನೇಯವನ್ನು ಹಾನಗಲ್ಲು ಎಂದು ಕರೆಯಲಾಗುತ್ತಿದೆ. ಉತ್ತರ ಅಕ್ಷಾಂಶ ೧೪°-೩೫' ಪೂರ್ವ ರೇಖಾಂಶ ೭೬°-೩೦' ರಲ್ಲಿದೆ (ಚಿತ್ರದುರ್ಗ ಜಿಲ್ಲೆ ಗೆಝೆಟಿಯರ್ ನಕಾಶೆ). ಈ ಗ್ರಾಮ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿಗೆ ಒಳಪಡುತ್ತದೆ. ಹಾನೇಯ ಗ್ರಾಮವು ಗ್ರಾನೈಟ್ ಬೆಟ್ಟ, ಪರ್ವತಗಳಿಂದಾವೃತವಾಗಿದೆ. ಈ ಪರಿಸರ ಅಶೋಕನ ಶಿಲಾ ಶಾಸನ ಸಿಕ್ಕ ಸ್ಥಳ. ಬ್ರಹ್ಮಗಿರಿ, ಜಟಿಂಗ ರಾಮೇಶ್ವರ ಹಾಗೂ ನುಂಕಮಲೆ ಸಿದ್ಧರ ಬೆಟ್ಟಗಳು ಇವೆ. ಈ ಪ್ರದೇಶವನ್ನು ಮಲೆಯ ಪಂಕ್ತಿ ರಾಜ್ಯವೆಂದು ಉಲ್ಲೇಖಿಸಲಾಗಿದೆ. 'ಮಲೆಯ ಪಂಕ್ತಿ' ಎಂದರೆ ಗುಡ್ಡ ಬೆಟ್ಟ ಹಾಗೂ ಅರಣ್ಯ ಪ್ರದೇಶವೆಂದು ಗುರುತಿಸಲಾಗುತ್ತದೆ. ಇದು ಎತ್ತರವಾದ ಪರ್ವತ ಪ್ರದೇಶಗಳೆಂದು ಸೂಚಿಸುತ್ತದೆ (ಕಿಟ್ಟೆಲ್. ೧೮೯೪. ಪು. ೧೨೦೪). ಮುಮ್ಮಡಿ

ಸಿಂಗೆನಾಯಕನ ಕಾಲದಲ್ಲಿ ರಾಜಧಾನಿಯಾಗಿ ಮೆರೆದ ಈ ಸ್ಥಳ ಗುಡ್ಡ ಬೆಟ್ಟಗಳಿಂದಾವೃತವಾಗಿದ್ದು, ತೊರೆಗಳ ನೀರು, ನೈಸರ್ಗಿಕ ಗುಹೆಗಳು ಜೀವನಕ್ಕೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸಿವೆ.

ಒಟ್ಟಾರೆ, ಕುಮ್ಮಟದುರ್ಗ, ಆನೆಗೊಂದಿ, ದೊರವದಿ, ಹೊಸಮಲೆದುರ್ಗ ಹಾಗೂ ಹಾನೇಯ ಈ ಪ್ರದೇಶಗಳು ಭೂ ಭೌಗೋಳಿಕ ಪ್ರದೇಶವನ್ನು ಕುಮ್ಮಟದ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನವನ್ನು ಪ್ರತಿಬಿಂಬಿಸಿವೆ. ಇಲ್ಲಿ ಭೂ ಭೌಗೋಳಿಕ ಪರಿಸರ, ಇಲ್ಲಿ ದೊರೆಯುವ ಹೆಚ್ಚಿನ ಮಟ್ಟಿಗೆ ಗ್ರಾನೈಟ್ ಶಿಲೆ ಭೂ ಭೌಗೋಳಿಕ ಪ್ರಭಾವವನ್ನು ಬೀರಿವೆ ಎಂಬುದನ್ನು ಇಲ್ಲಿ ಕೋಟೆ ಕೊತ್ತಲ, ದೇವಾಲಯ, ಶಾಸನಗಳು, ಮೂರ್ತಿ ಶಿಲ್ಪಗಳು ಸಾರಿ ಹೇಳುವಂತಿವೆ. ಇಲ್ಲಿ ದೊರೆತಿರುವ ಐತಿಹಾಸಿಕ ಕುರುಹುಗಳು ಕುಮ್ಮಟ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರಗಳಾಗಿ ಪರಿಣಮಿಸಿವೆ. ಈ ಆಕರಗಳೊಂದಿಗೆ ಭೂ ಭೌಗೋಳಿಕ ಸಂಪತ್ತು, ನದಿಕೆರೆ, ಹಳ್ಳ, ಬಾವಿಗಳು ಇಲ್ಲಿನ ಜನಸಮುದಾಯದವರಿಗೆ ವರದಾನವಾಗಿದೆ.

ಐತಿಹಾಸಿಕ ಹಿನ್ನೆಲೆ

ಹದಿನಾಲ್ಕನೇ ಶತಮಾನದ ಆದಿಭಾಗವು ದಕ್ಷಿಣ ಭಾರತದಲ್ಲಿ ಅದರಲ್ಲೂ ಹೆಚ್ಚಾಗಿ ಕರ್ನಾಟಕ ಚರಿತ್ರೆಯಲ್ಲಿಯೇ ಒಂದು ಪ್ರಮುಖ ಮೈಲಿಗಲ್ಲು. ಹೊಯ್ಸಳರು ತಮ್ಮ ರಾಜ್ಯದ ಉತ್ತರ ಭಾಗದ ಗಡಿಗಳನ್ನು ಸಂರಕ್ಷಿಸಲು ಅಸಮರ್ಥರಾದಾಗ ಸೇವುಣರು ಹೊಯ್ಸಳರ ರಾಜ್ಯದೊಳಗೆ ಬರುವಂತಾಯಿತು. (ಪಿ.ಬಿ. ದೇಸಾಯಿ, ೧೯೮೧, ಪು.೨೮೧) ದೇವಗಿರಿಯ ಸೇವುಣರು. ದ್ವಾರಸಮುದ್ರದ ಹೊಯ್ಸಳರು, ವಾರಂಗಲ್ಲಿನ ಕಾಕತೀಯರು, ದೆಹಲಿ ಸುಲ್ತಾನ ಅಲ್ಲಾ-ಉದ್-ದ್ದೀನ್ ಖಿಲ್ಜಿಯ ದಂಡನಾಯಕ ಮಲಿಕ್‌ಕಾಫರ್‌ನ ಪ್ರಬಲವಾದ ದಾಳಿಯಿಂದ ಅವನತಿಯನ್ನು ಕಂಡವು (ವೆಂಕಟರಮಣಯ್ಯ ಎನ್. ೧೯೨೯. ಪು. ೧-೫). ಈ ಅವಕಾಶವನ್ನು ಮುಮ್ಮಡಿ ಸಿಂಗೆಯ ನಾಯಕನು ಉಪಯೋಗಿಸಿಕೊಂಡು ಕುಮ್ಮಟದುರ್ಗವನ್ನು ಹಂಪೆಯ ಪರಿಸರದಲ್ಲಿದ್ದು. ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದನು. ಚರಿತ್ರೆಕಾರರು ಈ ಕುಮ್ಮಟ ದುರ್ಗದಿಂದ ಆಳ್ವಿಕೆ ನಡೆಸಿದ ಮುಮ್ಮಡಿ ಸಿಂಗೆಯ ನಾಯಕ ಹಾಗೂ ಇವನ ಉತ್ತರಾಧಿಕಾರಿ ಕಂಪಿಲದೇವ ಮತ್ತು ಕುಮಾರರಾಮನಾಥನನ್ನು ಕುಮ್ಮಟ ನಾಯಕರು ಎಂದು ಗುರುತಿಸಿದ್ದಾರೆ (ಮಹದೇವ ಸಿ. ಕರ್ನಾಟಕದಲ್ಲಿ ಕುಮಾರ ರಾಮನ ಪಂಥ ಅಪ್ರಕಟಿತ ಪು.೧). ಹದಿಮೂರನೆ ಶತಮಾನದಲ್ಲಿ ಪ್ರಾರಂಭಗೊಂಡ ಈ ಕುಮ್ಮಟ ನಾಯಕರ ಮೂಲದ ಕುರಿತು ಹಲವಾರು ಭಿನ್ನಾಭಿಪ್ರಾಯಗಳಿವೆ. ಈ ಕುರಿತಂತೆ ಖಚಿತತೆಯನ್ನು ವ್ಯಕ್ತಪಡಿಸುವುದು ಕಷ್ಟಸಾಧ್ಯ. ಈ ವಂಶದ ಕುಮಾರ ರಾಮನ ಸಾಂಗತ್ಯಗಳು ಇವರನ್ನು ಬೇಡರೆಂದು ತಿಳಿಸುತ್ತವೆ. ಕೈಫಿಯತ್ತುಗಳು ಮರುಳನವರೆಂದು, ಬೇಡರೆಂದು ಮುಮ್ಮಡಿ ಮನೆಯವರೆಂದು ಉಲ್ಲೇಖಿಸಿದೆ (ಕಲಬುರ್ಗಿ ಎಂ.ಎಂ. ೧೯೯೯. ಪು. ೪೬೬). ಹುಲ್ಲೂರು ಶ್ರೀನಿವಾಸ ಜೋಯಿಸರು ಪೋವಲ್ಲಿ ಕುಲದ ಅರಸರೆಂದಿದ್ದಾರೆ. ಕುಮ್ಮಟ ನಾಯಕರ ವಂಶಾವಳಿ ಕುರಿತಂತೆ ಸಾಹಿತ್ಯಿಕ ಮೂಲಾಧಾರಗಳು ಬೇರೆ ಬೇರೆ ಚಿತ್ರಗಳನ್ನೇ ನೀಡುತ್ತವೆ.

ಬಾಲಕುಮಾರ ರಾಮನ ಸಾಂಗತ್ಯದಲ್ಲಿ ಕುಮ್ಮಟ ನಾಯಕರನ್ನು ವಿಜಯನಗರೋತ್ತರ ಕಾಲದ ಬೇಡ ನಾಯಕರ ವಂಶದೊಂದಿಗೆ ಹೋಲಿಸಿದೆ. ಭಟ್ಟರ ಹಳ್ಳಿ ಕೈಫಿಯತ್ತಿನಲ್ಲಿ ಮುಮ್ಮಡಿ ಸಿಂಗೆಯ ನಾಯಕನ ಹೆಸರೇ ಕಂಡು ಬರುವುದಿಲ್ಲ.

(ಕಲಬುರ್ಗಿ ಎಂ.ಎಂ. ೧೯೯೪, ಪು. ೪೬೫-೪೮೯) ಹೀಗಾಗಿ ಕುಮ್ಮಟ ನಾಯಕರ ವಂಶಾವಳಿಯ ಚಿತ್ರಗಳು ಈವರೆಗೆ ಕಂಡು ಬಂದಿರುವುದು ಚಿತ್ರಣ ಅಸ್ಪಷ್ಟ. ಅಲ್ಲದೆ ಕುಮ್ಮಟರ ಅರಸರ ಮೂಲವನ್ನು ಕುರಿತಂತೆ ಸಾಂಗತ್ಯ ಮತ್ತು ಕೈಫಿಯತ್ತುಗಳ ಮಾಹಿತಿಯನ್ನು ಯಾವುದೇ ಚಾರಿತ್ರಿಕ ಆಧಾರವೂ ಸಮರ್ಥಿಸುವುದಿಲ್ಲ (ಮಹದೇವ ಸಿ., ಕರ್ನಾಟಕದಲ್ಲಿ ಕುಮಾರರಾಮ ಪಂಥ, ಪು. ೪).

ಪ್ರಸ್ತುತ ಶಾಸನಗಳನ್ನು ಆಧಾರವಾಗಿರಿಸಿಕೊಂಡು ನೋಡಿದಲ್ಲಿ ಕುಮ್ಮಟ ನಾಯಕರಿಗೆ ಮುಮ್ಮಡಿ ಸಿಂಗೆಯ ನಾಯಕನೇ ಮೂಲ ಪುರುಷ. ಈತನ ಹೆಂಡತಿ ಮಾರನಾಯಕಿ. ಇವರ ಮಗನೇ ಕಂಪಿಲರಾಯ, ಕಂಪಿಲರಾಯನ ಪತ್ನಿ ಗುಜ್ಜಲ ಹರಿಯಾಳ ದೇವಿ. ಇವರ ಮಗ ಕುಮಾರ ರಾಮ (ಸಾವಿತ್ರಿ ಎಸ್.ಎಂ. ೨೦೦೨, ಪು.೫). ಈ ರಾಜವಂಶಕ್ಕೆ ಸಂಬಂಧಿಸಿದ ಶಾಸನ ಹಂಪೆಯ ಹೇಮಕೂಟದಲ್ಲಿದೆ (ARIE. 1934-35, B, 352). ಪ್ರಸ್ತುತ ಕುಮ್ಮಟ ನಾಯಕರ ಕಾಲದ ಸಾಂಸ್ಕೃತಿಕ ಅಧ್ಯಯನಕ್ಕೆ ರಾಜಕೀಯ ಚರಿತೆ ಯಾವ ರೀತಿಯಲ್ಲಿ ಪೂರಕವಾಗಿದೆ ಎಂಬುದು ಗಮನಿಸಬೇಕಾದ ಅಂಶ. ಈ ಹಿನ್ನೆಲೆಯನ್ನು ಆಧರಿಸಿ ಮುಮ್ಮಡಿ ಸಿಂಗೆಯ ನಾಯಕ, ಕಂಪಿಲದೇವ ಮತ್ತು ಕುಮಾರ ರಾಮನಾಥನ ಆಳ್ವಿಕೆಯ ಘಟನಾವಳಿಗಳನ್ನು ಹೆಚ್ಚಿನ ಮಟ್ಟಿಗೆ ಶಾಸನಗಳನ್ನು ಮೂಲಾಧಾರವಾಗಿ ಇಟ್ಟುಕೊಂಡು ಇಲ್ಲಿ ಸೆರೆ ಹಿಡಿಯಲಾಗಿದೆ.

ಮುಮ್ಮಡಿ ಸಿಂಗೆಯ ನಾಯಕ

ಹದಿಮೂರನೆ ಶತಮಾನದ ಹಂಪೆಯ ಹೇಮಕೂಟದ ಶಾಸನವನ್ನು ಆಧರಿಸಿದರೆ, ಮುಮ್ಮಡಿ ಸಿಂಗೆಯ ನಾಯಕನು ಕುಮ್ಮಟ ನಾಯಕರ ಮನೆತನದ ಮೂಲಪುರುಷ. ಆದರೆ ಇದೇ ಶಾಸನದಲ್ಲಿ ಮುಮ್ಮಡಿ ಸಿಂಗೆಯ ನಾಯಕನ ತಂದೆ ಪೆರುಮೆಯ ನಾಯಕ. ಹೊಯ್ಸಳ ರಾಜ್ಯದಲ್ಲಿ ಅಂತಃಕಲಹ ನಡೆದೆ ಇತ್ತು (EC. XI. Chitradurga. No. 12). ಇವರ ಹೆಚ್ಚಿನ ಗಮನ ತಮಿಳು ಪ್ರದೇಶದ ಕಡೆಗೂ ಇದ್ದುದರಿಂದ ಉತ್ತರದ ಕಡೆಗೆ ಹೆಚ್ಚಾಗಿ ಗಮನವನ್ನು ನೀಡಲಿಲ್ಲ. ಈ ಸಂದರ್ಭದಲ್ಲಿ ಮುಮ್ಮಡಿ ಸಿಂಗೆಯ ನಾಯಕನು ಹಂಪೆಯ ಪರಿಸರದಲ್ಲಿರುವ ಕುಮ್ಮಟವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡಂತಿದೆ. ಕ್ರಿ.ಶ. ೧೨೭೬ ಬೇಲೂರಿನ ಶಾಸನ ಸಿಂಗೆಯನಾಯಕನ ಮಗ ಕಂಪಿಲರಾಯನು ದೋರಸಮುದ್ರದ ಮೇಲೆ ಯುದ್ಧವನ್ನು ಮಾಡಿದನು (MAR. 1932. PP. 440-50. No. 23). ಕಂಪಿಲ ದೇವನನ್ನು ಸೇವುಣ ರಾಣೆಯ ಖಂಡೆಯ ರಾಯನೆಂದು ಉಲ್ಲೇಖಿಸಿದೆ. ಸಿಂಗೇಯ ನಾಯಕನನ್ನು ಕಲಿಸಿಂಗನೆಂದು ಹೇಳಲಾಗಿದೆ.

ಕ್ರಿ.ಶ.೧೨೮೦ರ ಚನ್ನಗಿರಿಯ ಹಿರೇಕೋಗಲೂರು ಶಾಸನ (EC. VI. Shimoga. Channagiri. No.24). ಸೇವುಣ ರಾಮದೇವನು, ಕುರುಗೋಡು ನಾಡಿನ ದೊರವದಿಯಲ್ಲಿ ಮುಮ್ಮಡಿ ಸಿಂಗೆಯ ನಾಯಕನೊಡನೆ ನಡೆಸಿದ ಯುದ್ಧವನ್ನು ಉಲ್ಲೇಖಿಸಿದೆ. ಕುಮ್ಮಟದುರ್ಗ, ಆನೆಗೊಂದಿ, ಹೊಸಮಲೆದುರ್ಗ, ದೊರವದಿ ಸ್ಥಳಗಳು ಹಂಪೆಯ ಪರಿಸರಕ್ಕೆ ಒಳಪಡುತ್ತವೆ.

ಈ ಮೇಲಿನ ಶಾಸನಗಳನ್ನು ಅವಲೋಕಿಸಿದಲ್ಲಿ ದೊರವದಿಯನ್ನು ಮುಮ್ಮಡಿ ಸಿಂಗೆಯ ನಾಯಕನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಈ ಯುದ್ಧದ ನಂತರ ಬಹುಶಃ ಕುಮ್ಮಟ ದುರ್ಗವನ್ನು ಹಿಡಿದು ತನ್ನ ರಾಜಧಾನಿಯಾಗಿ ಮಾಡಿ

ಕೊಂಡಿರಬೇಕು (EC, VII, Shimoga, Channagiri, No.24). ಮುಮ್ಮಡಿ ಸಿಂಗೆಯ ನಾಯಕನು ಹೊಯ್ಸಳರೊಡನೆ ಮಾಡಿದ ಯುದ್ಧ ಕುರಿತು ಹೊಳಲಕೆರೆ ಶಾಸನವು ಸ್ಪಷ್ಟ ಪಡಿಸುತ್ತದೆ (EC, XI, Chitradurga, Holalkere, No.37). ಇತ್ತ ಕಡೆ ಸೇವುಣ ವೀರ ರಾಮದೇವನ ಸೈನ್ಯಾಧಿಪತಿ ಕನ್ನರ ದೇವನು ಸಿಂಗೆಯನಾಯಕನ ಮೇಲೆ ಯುದ್ಧವನ್ನು ಮಾಡಿದನು (MAR, 1935, No.39).

ಮುಮ್ಮಡಿ ಸಿಂಗೆಯ ನಾಯಕನ ಹೆಸರು ಮೊದಲ ಬಾರಿ, ಬೇಲೂರಿನ ಶಾಸನದಲ್ಲಿ ಕಂಡುಬರುತ್ತದೆ. ಕ್ರಿ.ಶ. ೧೨೮೧ರಲ್ಲಿ ಮುಮ್ಮಡಿ ಸಿಂಗೇಯನಾಯಕನು ಬೆಮ್ಮತ್ತೂರು ಕಲ್ಲಿನ ಮೇಲೆ ಯುದ್ಧವನ್ನು ಮಾಡುತ್ತಾನೆ (EC. XI, Chitradurga. Hiriyuru. No.86). ಬೆಮ್ಮತ್ತೂರ ಕಲ್ಲು ಹೊಯ್ಸಳರ ಪ್ರಾಂತ್ಯಾಡಳಿತ ಸ್ಥಳವಾಗಿತ್ತು. ಕ್ರಿ.ಶ. ೧೨೮೨-೮೩ರಲ್ಲಿ ಕಿನ್ನರ ದೇವನು ಮುಮ್ಮಡಿ ಸಿಂಗೆಯ ನಾಯಕನ ಮೇಲೆ ದಾಳಿ ಮಾಡುತ್ತಾನೆ. ಈ ಯುದ್ಧದಲ್ಲಿ ಸೇವುಣರ ವಣದೇವರಸನು ಮಡಿಯುತ್ತಾನೆ (MAR, 1935, No.39). ಸಿಂಗೆಯ ನಾಯಕನು ನಾಗವಿಕಳಾಸ ಪುರದೆಡೆಯಲ್ಲಿ, ಚಾವುಂಡರಸನು ಮೈಸೂರಿನ ಗೋಪರಸನನ್ನು ಕೊಲ್ಲುತ್ತಾನೆ (EC. VIII, Shimoga, Channagiri, No.23). ಈ ಸಂದರ್ಭದಲ್ಲಿ ಮುಮ್ಮಡಿ ಸಿಂಗೆಯ ನಾಯಕನು ತುಂಗಭದ್ರ ನದಿ ದಾಟಿ ಕುಮ್ಮಟ ದುರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಸಿಂಗೆಯ ನಾಯಕನ ಭಟರು ಮಹಾಪುರದ ಬೈರವ ದೇವರ ಪ್ರತಿಷ್ಠೆಯನ್ನು ಮಾಡಿಸಿದ್ದರ ಕುರಿತು ಆನೆಗೊಂದಿಯ ಶಾಸನವು ಉಲ್ಲೇಖಿಸುತ್ತದೆ (ಕೃಷ್ಣಪ್ಪ ಎಂ.ವಿ., ತಳವಾರ ಎಚ್.ಟಿ., ವಿ.ಅ.೨೦೦೧, ಪು. ೧೨೮). ಒಟ್ಟಾರೆ ಒಂದು ತುಲನಾತ್ಮಕ ಅಧ್ಯಯನವನ್ನು ಮಾಡಿ ನೋಡಿದರೆ ಹೊಯ್ಸಳರು ದೊರವದಿಯ ಮೇಲೆ ಸೇವುಣರ ಮೇಲೆ ಯುದ್ಧವನ್ನು ಮಾಡಿದಾಗ ಮುಮ್ಮಡಿ ಸಿಂಗೆಯ ನಾಯಕನು. ತನ್ನ ಸ್ವತಂತ್ರ ಅಸ್ತಿತ್ವಕ್ಕಾಗಿ ಪ್ರಯತ್ನಿಸಿದ್ದನ್ನು ಕಾಣಬಹುದು.

ಕ್ರಿ.ಶ. ೧೨೮೭ರ ನಂತರ ಈತನ ಹೆಸರುಳ್ಳ ಶಾಸನ ದೊರೆಯುವುದಿಲ್ಲವಾದ್ದರಿಂದ ಬಹುಶಃ ೧೨೮೭ರವರೆಗೆ ಈತನ ಆಳ್ವಿಕೆಯ ಕಾಲದಲ್ಲಿ ಈತನ ರಾಜ್ಯ ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳ ಮತ್ತು ಈಗಿನ ಬಾಗಲಕೋಟೆ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಗಳವರೆಗೆ ವಿಸ್ತರಿಸಿತ್ತು. ಈ ಹಿನ್ನೆಲೆಯಲ್ಲಿ ಲಕ್ಷ್ಮೇಶ್ವರದ ಶಾಸನವೂ ಕೂಡ ಈ ವಿಷಯವನ್ನು ಪುಷ್ಟೀಕರಿಸುತ್ತದೆ (ARIE, 1935-36, No.23). ಸೇವುಣರು ಕುಮ್ಮಟಕ್ಕೆ ಬಂದು ಸಿಂಗೆಯ ನಾಯಕನ ಮೇಲೆ ಯುದ್ಧವನ್ನು ಮಾಡುತ್ತಾರೆ. ಈ ಯುದ್ಧದಲ್ಲಿ ಸಿಂಗೆಯ ನಾಯಕನು ಗೆಲ್ಲುತ್ತಾನೆ.

ಕಂಪಿಲರಾಯ

ಸಿಂಗೆಯ ನಾಯಕನ ಮಗ ಕಂಪಿಲರಾಯನು ಕುಮ್ಮಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಕಂಪಿಲದೇವನು ದೇವಗಿರಿಯ ಸೇವುಣರಿಗೆ ಮಾಂಡಲೀಕ ಅಧಿಕಾರಿಯಾಗಿ ಕುಮ್ಮಟವನ್ನು ಕೇಂದ್ರವನ್ನಾಗಿರಿಸಿಕೊಂಡನು. ಕಂಪಿಲನು ದೆಹಲಿ ಸುಲ್ತಾನರಿಗೆ ಅಜೇದ್ಯನಾಗಿ ಉಳಿಯುತ್ತಾನೆ.

ಕ್ರಿ.ಶ. ೧೩೦೩ರ ಬಾಗವಾಳದ ಶಾಸನದಲ್ಲಿ ಕಂಪಿಲ ದೇವನು ಹೊಳಲ್ಕೆರೆಗೆ ಮತ್ತೆ ಯುದ್ಧವನ್ನು ಮಾಡುತ್ತಾನೆಂದಿದೆ. ಈ ಯುದ್ಧದಲ್ಲಿ ಹೊಯ್ಸಳರು ಸೋತು, ಸೋಮೆಯ ದಂಡನಾಯಕನು ಮಡಿಯುತ್ತಾನೆ. ಇದರಿಂದ ಚಿತ್ರದುರ್ಗವು ಕಂಪಿಲನ ವಶವಾಗುತ್ತದೆ (EC V, Holenarasipura. No. 30). ಕ್ರಿ.ಶ. ೧೩೦೩ರ ಹೊಳಲ್ಕೆರೆಯ ಜೇನುಕಲ್ಲು ಶಾಸನ ಕಂಪಿಲದೇವನು ಈ ಮೇಲಿನ ಯುದ್ಧದಲ್ಲಿ ಜಯಶಾಲಿಯಾದ ನೆಂದು ಉಲ್ಲೇಖಿಸುತ್ತಾದೆ (EC XI. Holalkere. No.106).

ವೀರಬಲ್ಲಾಳನ ಸೈನ್ಯವು ಸಿರಗುಪ್ಪೆಯಲ್ಲಿ ನಡೆದ ಯುದ್ಧದಲ್ಲಿ ಸೋತು ಶರಣಾಯಿತು (MAR. 1923. P. 119. No. 121). ಈ ವೇಳೆಗೆ ದೆಹಲಿ ಸುಲ್ತಾನನು ಕುಮ್ಮಟದ ಮೇಲೆ ದಾಳಿ ಮಾಡುತ್ತಾನೆ. ನೇಮಿಖಾನನ ಮುಂದಾಳತ್ವದಲ್ಲಿ ನಡೆದ ಯುದ್ಧದಲ್ಲಿ ಗಡೆಸಿಂಗ ನಾಯಕನ ತಮ್ಮ ಕಾಮಿನಾಯಕನು ಸಾಯುತ್ತಾನೆ (VPR. 1987-88. P. 212). ಕ್ರಿ.ಶ. ೧೩೦೪ರ ಹರಿಹರ ಮತ್ತು ಕೂಡಲಿಯ ಶಾಸನದಲ್ಲಿ ಕಂಪಿಲದೇವನನ್ನು ಖಂಡೆಯರಾಯನೆಂಬ ಹೆಸರಿನಿಂದ ಕರೆಯಲಾಗಿದೆ. ಕಂಪಿಲದೇವನ ಹೊಳೆನರಸೀಪುರ, ಜೇನುಕಲ್ಲು, ಲೋಕದಾಳು ಶಾಸನಗಳು ಬೆಮ್ಮತ್ತೂರು ಕಲ್ಲಿನ ಮೇಲೆ ನಡೆದ ಯುದ್ಧವನ್ನು ದಾಖಲಿಸಿವೆ (MAR. 1923. No.121). ಕ್ರಿ.ಶ. ೧೩೧೭ರ ಕುಮ್ಮಟದ ಶಾಸನದ ಪ್ರಕಾರ (VPR. 1987-88. P.211) ದೆಹಲಿ ಸುಲ್ತಾನನ ದಾಳಿಯು ಕುಮ್ಮಟದ ಮೇಲೆ ನಡೆದ ಯುದ್ಧದಲ್ಲಿ ಕಂಪಿಲನು ಜಯಶಾಲಿಯಾಗುತ್ತಾನೆ. ತುಳು ಕಾತ್ರನಾಯ್ಕನ ಅಳಿಯ ಗಡೆಸಿಂಗನು ಈ ಯುದ್ಧದಲ್ಲಿ ಮಡಿದನು (VPR. 1987-88. P. 213). ಹೊಯ್ಸಳ ಬಲ್ಲಾಳನು ಕಂಪಿಲನ ಮೇಲೆ ದೊರವದಿಯಲ್ಲಿ ನಡೆದ ಯುದ್ಧವನ್ನು ಮಾಡಿದ ವಿಷಯವನ್ನು ತಿಳಿಸುತ್ತದೆ. ಈ ಯುದ್ಧದಲ್ಲಿ ಕಂಪಿಲನ ರಾವುತ ಕಕ್ಕಲ ದೇವನು ಮತ್ತು ಹೊಯ್ಸಳರ ದಂಡನಾಯಕ ಕೂರುಕನಾಯಕರು ಮಡಿದು ಕಂಪಿಲದೇವನು ಜಯಶಾಲಿಯಾದನು (EC. IX. Hosakote. No.90). ಕ್ರಿ.ಶ. ೧೩೨೭ ಶಾಸನದಲ್ಲಿ (EC XI. Hiriyuru No.16) ಕಂಪಿಲದೇವನು ಹುಳಿಯೂರಿನ ಮೇಲೆ ಯುದ್ಧವನ್ನು ಮಾಡಿದನೆಂದಿದೆ. ತಿಪಟೂರಿನ ಶಾಸನವು ೧೩೨೭ರ ಕಾಲಕ್ಕೆ ಸೇರಿದ್ದು, ಇದೇ ವಿಷಯವನ್ನು ಉಲ್ಲೇಖಿಸುತ್ತದೆ (EC XII. Tipatur, No.24). ಹೊಯ್ಸಳ ಮೂರನೆ ಬಲ್ಲಾಳನು ಕಂಪಿಲನ ಮೇಲೆ ಹೊಸಮಲೆದುರ್ಗಕ್ಕೆ ದಂಡೆತ್ತಿ ಬಂದಾಗ ದಂಡನಾಯಕ ಬಯಿಚಯ್ಯನು ಯುದ್ಧದಲ್ಲಿ ಹೋರಾಡಿ ಗೆಲ್ಲುತ್ತಾನೆ ಇದರಿಂದ ಕಂಪಿಲದೇವನು ಸತತವಾಗಿ ಗೆಲುವನ್ನು ಸಾಧಿಸಿಕೊಂಡು ಬಂದಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. (ARIE. 1943-44. B.No 75. VPR. 1988-91. P. 240). ಕ್ರಿ.ಶ. ೧೩೨೭ರಲ್ಲಿ ಕಂಪಿಲದೇವನು ಹೊಯ್ಸಳರ ಸಾಮಂತ ಹುಳಿಯಾರಿನ ನಾಡ ಪ್ರಭುವನ್ನು ಸೋಲಿಸಿ ಹಿಂತಿರುಗಿ ಬರುವಾಗ ಹೊಯ್ಸಳರ ದಂಡನಾಯಕ ಮತ್ತು ಬೇಚೆಯ ದಂಡನಾಯಕನನ್ನು ಎದುರಿಸುತ್ತಾನೆ. ಈ ಯುದ್ಧದಲ್ಲಿ ಜಕ್ಕೆಯ ನಾಯಕನು ಮಡಿಯುತ್ತಾನೆ (EC XI, Hiriyur. No.16).

ಕ್ರಿ.ಶ. ೧೩೨೮ರ ಕಡಸೂರಿನ ಶಾಸನ ಹೊಯ್ಸಳರಿಗೂ ಮತ್ತು ಕುಮ್ಮಟ ನಾಯಕರಿಗೂ ನಡೆದ ಯುದ್ಧವನ್ನು ದಾಖಲಿಸಿದೆ (EC XII. Tiptur No.24). ಜನರು ಕಂಪಿಲ ಮತ್ತು ಸಿಡಿಲ ಬೊಮ್ಮರು ಮಡಿದ ನಂತರ ದುಃಖಿತರಾದರು (ARIE. 1935-36. EI. XXII. PP.184-85. SII. XX. 1965. PP. 331-32).

ಒಟ್ಟಾರೆ ಕಂಪಿಲದೇವನ ರಾಜ್ಯ ಹೊಯ್ಸಳ ಮತ್ತು ಸೇವುಣರ ಪೈಪೋಟಿಯ ತ್ರಿಕೋಣದ ಮಧ್ಯೆ ಪಡೆಯ ರಾಜ್ಯವಾಗಿತ್ತು. ನಿಜಗಲಿ ಕಟಕರಾಯ ರಾಜಧಾನಿ ಹೊಸಪಟ್ಟಣದಲ್ಲಿ ಬುಕ್ಕರಾಯನು ಪೃಥ್ವಿ ರಾಜಂಗೈಯುತ್ತಿರುವಲ್ಲಿ ಎಂದು ಚಿತ್ರದುರ್ಗದ ಶಾಸನದಲ್ಲಿದೆ (ಕ್ರಿ.ಶ. ೧೩೫೫-೫೬) (EC. XI, Chitradurga No.2, 3). ವೀರಬುಕ್ಕರಾಯನ ವಿಜಯನಗರ ಪಟ್ಟಣ ಎಂದು ಉಲ್ಲೇಖಿಸುವ ಶಾಸನಗಳು ಹಂಪೆಯಲ್ಲಿವೆ (VPR.1983-84.No.2-3). ಚಿತ್ರದುರ್ಗದ ಶಾಸನದಲ್ಲಿ ವೀರ ಬುಕ್ಕರಾಯನು ತುರಗದಳಕ್ಕೆ, ಸೇವುಣರ ದಳಕ್ಕೆ, ತೆಲುಂಗ ದಳಕ್ಕೆ, ಪಾಂಡ್ಯರ ದಳಕ್ಕೆ ಮಹೋನ್ನತನಾಗಿದ್ದನೆಂದು ಸ್ಪಷ್ಟವಾಗಿದೆ. ಕುಮ್ಮಟ ರಾಜ್ಯವು ತನ್ನ ಅಲ್ಪಕಾಲಾವಧಿಯಲ್ಲಿ ಮಹತ್ವದ ಕಾರ್ಯವನ್ನು ಸಾಧಿಸಿದೆ. ದೆಹಲಿಯ ಸುಲ್ತಾನರ ಪ್ರಬಲ ದಾಳಿಯನ್ನು ನಾಲ್ಕು ಸಲ ಎದುರಿಸಿದ ಕೀರ್ತಿ ಕುಮ್ಮಟಕ್ಕೆ ಸಲ್ಲುತ್ತದೆ. ಇಬನ್‌ಬತೂತನ ಪ್ರವಾಸಿ ಕಥನದಲ್ಲಿ ಕುಮ್ಮಟವು ದೆಹಲಿಯ ವಶವಾದ ನಂತರ ಆನೆಗೊಂದಿ ಮುಖ್ಯ ಆಡಳಿತ ಕೇಂದ್ರವಾದಂತೆ ಕಂಡುಬರುತ್ತದೆ (ARIE,1958-59. B.No.678). ರಾಜ್ಯಪಾಲ ಮಲಿಕ್ ಮಹ್ಮದ್ ಸ್ಥಳೀಯರ ಉಪಟಳ ತಡೆಯಲಾರದೆ ಹಿಂದಿರುಗುತ್ತಾನೆ. ಇದರ ನಿರ್ವಹಣೆಗೆ ಕಂಪಿಲ ಇಬ್ಬರು ಅಧಿಕಾರಿಗಳನ್ನು ನಿಯೋಜಿಸಿದನು. ಈ ವೇಳೆಗೆ ದಕ್ಷಿಣ ಭಾರತದ ಹಲವೆಡೆ, ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಹೋರಾಟ ಆರಂಭವಾಗಿತ್ತು. ಮುಸ್ಲಿಂ ಆಡಳಿತಗಾರರ ಉಚ್ಚಾಟನೆಗೆ ಪ್ರಯತ್ನಗಳು ಪ್ರಾರಂಭವಾದವು. ಈ ವೇಳೆಗೆ ಮೂರನೇ ಬಲ್ಲಾಳನು ತನ್ನ ರಾಜ್ಯದ ಉತ್ತರ ಭಾಗವನ್ನು ಸಂಗಮ ವಂಶಸ್ಥರನ್ನು ತನ್ನ (ಹರಿಹರ ಬುಕ್ಕರಾಯರು) ಮಾಂಡಲೀಕರನ್ನಾಗಿ ಮಾಡಿ, ಈ ಭಾಗದ ನಿರ್ವಹಣೆಯನ್ನು ಇವರಿಗೆ ವಹಿಸಿರಬೇಕು. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕುಮ್ಮಟದ ಪಾತ್ರ ಬಹಳ ಮಹತ್ವದ್ದಾಗಿದೆ.

ಕುಮಾರ ರಾಮನಾಥ

ಮುಮ್ಮಡಿ ಸಿಂಗೆಯ ನಾಯಕ, ಕಂಪಿಲರಾಯರ ಜೊತೆಗೆ ಕುಮಾರರಾಮನನ್ನು ಹೆಸರಿಸುವ ಶಾಸನಗಳು ಕಂಡುಬಂದಿವೆ. ಕ್ರಿ.ಶ. ೧೪೦೭ರಲ್ಲಿ ಸಂಗೂರಿನ ಶಾಸನ ಮಾದರಸ ಎಂಬುವನು ಕುಮಾರ ರಾಮನಾಥ ದೇವರನ್ನು ಪ್ರತಿಷ್ಠಾಪಿಸಿದನು (EI. No.23. No.28). ಈ ಮಾದರಸನು ಸೇನಾಪತಿ ಸಂಗಮನ ಮಗ ಹಾಗೂ ಕಂಪಿಲರಾಯನಲ್ಲಿ ಬಾಹತ್ತರ ನಿಯೋಗಾಧಿಪತಿ ಬೈಚವೆಗ್ಗಡೆಯ ಮೊಮ್ಮಗ. ಈ ಎಲ್ಲಾ ದೃಷ್ಟಿಯಿಂದ ಈ ಶಾಸನವು ಒಂದು ಮಹತ್ವದ ದಾಖಲೆ.

ಕ್ರಿ.ಶ.೧೪೧೮ರ ಆದೋನಿ ಊರಿನ ಗುಡ್ಡದ ಮೇಲೆ ಮಸೀದಿಯಲ್ಲಿರುವ ಕಂಬದ ಮೇಲಿನ ಶಾಸನ (ARIE. 1915. No.529. SII. IX, Pt.II, No.58). ಶ್ರೀ ಪ್ರೌಢದೇವರಾಯರ ಕಾಲದಲ್ಲಿ ತಿಪ್ಪಣ್ಣ ನಾಯಕರ ಮಕ್ಕಳು ಅವವಾನಿ ರಾಮನಾಯಕನು ಗುಡ್ಡದ ಮೇಲೆ ರಾಮದೇವರ ಗುಡಿಯನ್ನು ಕಟ್ಟಿಸಿದ ಉಲ್ಲೇಖವಿದೆ. ಇದು ರಾಮನಾಥನ ಹೆಸರಿನಲ್ಲಿ ಕಟ್ಟಿಸಿದ ಗುಡಿ. ಕ್ರಿ.ಶ. ೧೪೩೨ರ ತೀರ್ಥಹಳ್ಳಿಯ ಶಾಸನದಲ್ಲಿ (EC VIII. Thirthahalli. No.23) ಕುಮಾರ ರಾಮನಾಥನ ಸ್ಮರಣಾರ್ಥವಾಗಿ ಭೂಮಿ ದಾನ ಮಾಡಿದ ಉಲ್ಲೇಖವಿದೆ.

ಕ್ರಿ.ಶ.೧೩೨೮ರ ಹೊಸಮಲೆದುರ್ಗದಲ್ಲಿರುವ ಶಾಸನವೊಂದು ರಾಮನಾಥ ದೇವರ ದೇವಾಲಯವನ್ನು ಕಟ್ಟಿಸಿದ ವಿಷಯವನ್ನು ತಿಳಿಸುತ್ತದೆ. ಈ ದೇವಾಲಯವನ್ನು ಗೋಪಾಯಿ ಅವಳ ಕಿರಿಯ ಸಹೋದರ ರಾಮಣ್ಣನು, ಯುದ್ಧದಲ್ಲಿ ಮಡಿದ ಹೊಸಮಲೆಯ ರಾಮನಾಥ ವೊಡೆಯನ ನೆನಪಿಗಾಗಿ ನಿರ್ಮಿಸುತ್ತಾನೆ. ಈ ಶಾಸನದಲ್ಲಿ ಮುಮ್ಮಡಿ ಸಿಂಗೆಯನಾಯಕ, ಖಂಡೆಯರಾಯ, ಕಂಪಿಲರಾಯ, ವೀರಗುಜ್ಜಲ ಹರಿಯಾಳದೇವಿಯ ಮಗ ರಾಮನಾಥನೆಂದು ಹಾಗೂ ಕುಮ್ಮಟನಾಯಕರ ವಂಶಾವಳಿಯ ಉಲ್ಲೇಖವಿದೆ. ಆತನ ಹೆಸರಿನಲ್ಲಿ ನಿರ್ಮಿಸಿದ ದೇವಾಲಯ ಮತ್ತು ಸಾಧನೆಯ ಶಾಸನಗಳು ಆತನ ಶೌರ್ಯ ಪ್ರಶಸ್ತಿಯ ಪ್ರತೀಕಗಳೆಂದರೂ ತಪ್ಪಾಗಲಿಕ್ಕಿಲ್ಲ. ಕ್ರಿ.ಶ. ೧೪ನೇ ಶತಮಾನದ ಲಕ್ಷ್ಮೇಶ್ವರ ಶಾಸನದಲ್ಲಿ (SII. XX . No.294) ದಿಲ್ಲಿಯ ಸುಲ್ತಾನನ ದಾಳಿಯಿಂದ ನಡೆದ ಘೋರ ಯುದ್ಧದಲ್ಲಿ ಕಂಪಿಲನ ರಾಜ್ಯದ ಪಥನವಾಯಿತು. ಕಂಪಿಲ ಹಾಗೂ ಸಿಡಿಲ ಬೊಮ್ಮ ಮತ್ತು ರಾಮನಾಥರು ಮಡಿದಿದ್ದರಿಂದ ಜನರೆಲ್ಲರು ಚಿಂತಾ ಮಗ್ನರಾಗಿದ್ದರೆಂದಿದೆ.

ಒಟ್ಟಾರೆ ಕುಮ್ಮಟ ನಾಯಕರ ಅದರಲ್ಲೂ ಹೆಚ್ಚಾಗಿ ಸಿಂಗೆಯನಾಯಕ, ಕಂಪಿಲದೇವ ಹಾಗೂ ಕುಮಾರ ರಾಮನಾಥರು ಕರ್ನಾಟಕದ ಚರಿತ್ರೆಯಲ್ಲಿ ಮಹತ್ತರ ಕೊಡುಗೆ ನೀಡಿದ್ದಾರೆ ಎಂಬ ಅಂಶ ಶಾಸನಗಳಿಂದ ತಿಳಿದುಬಂದಿದೆ. ಗತಿಸಿದ ಕುಮ್ಮಟ ರಾಜ್ಯದ ತ್ಯಾಗ, ಬಲಿದಾನಗಳು ವಿಜಯನಗರ ಸ್ಥಾಪನೆಗೆ ಮೂಲ ಕಾರಣವಾಯಿತು. ವಿಜಯನಗರ ರಾಜ್ಯ ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಯಾಯಿತು.

ಬೈಚಯ ದಂಡನಾಯಕ

ಕುಮ್ಮಟ ನಾಯಕರ ಇತಿಹಾಸದಲ್ಲಿ ಸಿಂಗೆಯ ನಾಯಕ ಕಂಪಿಲದೇವ ಮತ್ತು ಕುಮಾರ ರಾಮನಾಥರ ಪಾತ್ರ ಎಷ್ಟು ಮಹತ್ವವನ್ನು ಪಡೆದಿದೆಯೋ, ಕುಮ್ಮಟ ನಾಯಕರ ಇತಿಹಾಸದುದ್ದಕ್ಕೂ ಅಷ್ಟೇ ಸರಿಸಮಾನವಾದ ವ್ಯಕ್ತಿತ್ವ ವುಳ್ಳಂತವನು ಬೈಚಯ ದಂಡನಾಯಕ. ಬೈಚಯ್ಯ ದಂಡನಾಯಕನ ತಂದೆ ಕೀರ್ತಿರಾಜ ಮೂಲತಃ ಸೇವುಣ ರಾಮಚಂದ್ರನಲ್ಲಿ ದಂಡನಾಯಕನಾಗಿದ್ದನು (EC XI. Davanagere, No.13). ಚಿತ್ರದುರ್ಗ ಜಿಲ್ಲೆಯ ಜಗಳೂರಿನ ಶಾಸನ ಕ್ರಿ.ಶ. ೧೨೭೬ರಲ್ಲಿ ಸೇವುಣ ರಾಮಚಂದ್ರರಾಯನು, ವೀರಬಲ್ಲಾಳನು ಆಳುತ್ತಿದ್ದ ಮತಂಗ ಭೂಧರವನ್ನು ಜಯಿಸಿದ ಕುರಿತಾಗಿ ಉಲ್ಲೇಖಿಸುತ್ತದೆ (EC XI. Jagalur, No.30). ಈ ಶಾಸನದಲ್ಲಿ ಬೈಯಿಚಯನಾಯಕನನ್ನೊಳಗೊಂಡು ಹಲವು ಮಾಂಡಲಿಕರನ್ನು ಮುಂದಿಟ್ಟುಕೊಂಡು ಕೊಟ್ಟೂರು ಸೀಮೆಯನ್ನು ಆಳುತ್ತಿದ್ದನೆಂದಿದೆ. ನಾಡ ಸೇನಬೋವ ಬೈಯಿಚಣ್ಣನು ಪೆರುಮಾಳೆ ದಂಡನಾಯಕನ ಹೆಸರಿನಲ್ಲಿ ಅಗ್ರಹಾರವನ್ನು ಕಟ್ಟಿಸುತ್ತಾನೆ. ಸೈನಿಕರಿಂದ (ಕಟಕ ಸೇನೆಯಿಂದ ಆದ ಕಿರುಕುಳ) ಪ್ರಜೆಗಳಿಗೆ ತೊಂದರೆಯಾಗಿದ್ದು ಈ ತೊಂದರೆಯನ್ನು ನೀಗಿಸುತ್ತಾನೆ (EC XI. Chitradurga. No.12). ಕ್ರಿ.ಶ. ೧೨೮೦ರಲ್ಲಿ ಬೈಚಯ ಮಂತ್ರಿಯನ್ನು ಕುಮ್ಮಟ ಬೀಚನೆಂದು ಕರೆದಿದ್ದು, ಹಾನೆಯ ಮತ್ತು ನಿಡುಗಲ್ಲು ಕೋಟೆಗಳನ್ನು ಕಟ್ಟಿಸಿದನು (EC XI. Molakalmuru. No.20) ಕ್ರಿ.ಶ. ೧೨೮೫ರ ಉಮತಾರ, ಬದಾಮಿಯ ಶಾಸನದಿಂದ ತೋರಗಲ್ಲಿನ ಮೇಲೆ ಯುದ್ಧ ಮಾಡಿದ. ಇದರಿಂದ ಬೈಚಯ ದಂಡನಾಯಕನು ಬದಾಮಿ ತೋರಗಲ್‌ಗಳ ಮೇಲೆ ಆಡಳಿತದ ನಿಯಂತ್ರಣವಿದ್ದ ವಿಷಯ ವ್ಯಕ್ತವಾಗುತ್ತದೆ (BK. No. 1928-29. No.179. SII XV, Vol. II. No.617).

ಕ್ರಿ.ಶ. ೧೩ನೇಯ ಶತಮಾನದ ಮೆಟ್ರಿಯ ಶಾಸನದಲ್ಲಿ ಮಹಾಪ್ರಧಾನ ಬೈಚಯ ದಂಡನಾಯಕನ ಅಧಿಕಾರಿ ಸಿರಿಯಣ್ಣನು ಹೇಳಿದ್ದು, ಮಲ್ಲಿಕಾರ್ಜುನ ದೇವಾಲಯದ ಛತ್ರಕ್ಕೆ ದತ್ತಿಯನ್ನು ಬಿಟ್ಟಿರುವುದು, ಆತನ ಧರ್ಮ ಸಮನ್ವಯತೆಯನ್ನು ಕಾಣಬಹುದು (Inscriptions of Bellary Dist, No.441, P. 145). ಹೊಯ್ಸಳ ಬಲ್ಲಾಳನು ಹೊಸಮಲೆಯ ದುರ್ಗದ ಮೇಲೆ ಯುದ್ಧಕ್ಕೆ ಬಂದಾಗ ಬೈಯಿಚಯ್ಯನು ಸಮರ್ಥನಾಗಿ ಎದುರಿಸುತ್ತಾನೆ. ಈ ಯುದ್ಧದಲ್ಲಿ ಬೈಚಬೋವನು ಮಡಿಯುತ್ತಾನೆ (ARIE. 1943-44, B.No.75). ಬೈಚಯ ದಂಡನಾಯಕನು, ಸಿಂಗೆಯನಾಯಕ, ಕಂಪಿಲರೊಡನೆ ಮಂತ್ರಿಯಾಗಿ, ಸಲಹೆಗಾರನಾಗಿ ಇದ್ದು ಹೊಯ್ಸಳರೊಡನೆ ನಡೆದ ಯುದ್ಧವನ್ನು ಸಮರ್ಪಕವಾಗಿ ಎದುರಿಸಿರುವುದನ್ನು. ಕ್ರಿ.ಶ. ೧೩೨೫ರ ಶಾಸನವೂ ಉಲ್ಲೇಖಿಸುತ್ತದೆ (EC XII, Tipatur, No.24). ಮದ್ದೂರಿನ ಅರುವನಹಳ್ಳಿ ಶಾಸನ ಕ್ರಿ.ಶ. ೧೩೫೮ರ ಶಾಸನ, ಭಟ್ಟರ ಬೈಯಿಚಣ್ಣನನ್ನು ಬಡವರ ಬಂಧು, ಉಭಯ ರಾಯವಿಗ್ರಹ ವಿನೋದ, ಪರಾಕಾಷ್ಠ ಪಿತಾಮಹ, ಸದ್ಗುಣ ಕರಂಡ, ದಯಾಂಬುದಿ ಸೋಮ, ಧೈರ್ಯ, ಸುಗಾತ್ರ, ಸಾರ ಗಾತ್ರ, ಸವಿತ್ರೇಯ ಕರ, ಚಾರಿತ್ರನು, ವಮಲಬಂದು, ಜಲದಿಂದ ಭದ್ರೋದಯಂ ಭೂಪಸ್ಥಾನ, ಚಿರಂಜಿತ, ಪ್ರಮುಖನು ಶ್ರೀಂಗಾರ ಹಾರಾಂಬುದ ವಿಖ್ಯಾತನು, ಜಗತಿ ದಿಗಂತರ ಕೀರ್ತಿಯ ಮಾಳವ್ವೆಯರ ಪುತ್ರನೆಂದು ಉತ್ಪ್ರೇಕ್ಷಿಸಿದೆ (EC VII, Maddur, Aruvanahalli, No.93).

ಉಳಿದ ಕುಮ್ಮಟದ ನಾಯಕರ ಶಾಸನಗಳನ್ನು ತುಲನಾತ್ಮಕ ಅಧ್ಯಯನ ಮಾಡಿ ನೋಡಿದಲ್ಲಿ, ಈ ರೀತಿಯ ಉತ್ಪ್ರೇಕ್ಷೆಗಳು ಉಳಿದ ಕುಮ್ಮಟ ನಾಯಕರಿಗೂ ಬಂದಿರಲಿಲ್ಲ. ಬೈಯಿಚಯ ದಂಡನಾಯಕನು ಕುಮ್ಮಟ ನಾಯಕರ ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದನೆಂದು ಇದರಿಂದ ತಿಳಿಯಬಹುದು. ಕ್ರಿ.ಶ. ೧೩೮೧ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ಅರುವನ ಹಳ್ಳಿಯ ಶಾಸನ ಶಕ ವರ್ಷ ೧೩೦೪ರ ದುರ್ಮತಿ ಸಂವತ್ಸರ, ದ್ವಿತೀಯ ವೈಶಾಖ ಬಹುಳ ೫ ಸೋಮವಾರ ಕೀರ್ತಿರಾಜರ ಮಗ ಭಟ್ಟರ ಬೈಯಿಚಯನು ತುಂಗಭದ್ರಾ ತೀರದ ವಿರೂಪಾಕ್ಷ ದೇವರ ಸಾನಿಧ್ಯದಲ್ಲಿ ಪರಮಪದವನ್ನೈದಸೆಂದಿದೆ. ಆತನ ಹಿರಿಯ ಮಗ ಬುಕ್ಕಣ್ಣನು ಪ್ರಾಯಶ್ಚಿತ ವಿಧಿಯನ್ನು ಪೂರೈಸಿ ಅಸ್ತಿಯನ್ನು ವಾರಣಾಸಿಗೆ ಕಳುಹಿಸಿ ಶಾಸನವನ್ನು ಸುಪ್ರತಿಷ್ಠೆಯಿಂದ ಮಾಡಿಸಿದುದನ್ನು ಬೈಯಿಚಪ್ಪನವರ ಗುಣಗಳನ್ನು ಮತ್ತು ಬಿರುದಾವಳಿಗಳನ್ನು ಹೇಳಿ ರಾಜ್ಯದ ಲಾಂಛನ ಮಕರ ಧ್ವಜ ವೆಂದು ಹೆಸರಿಸಿದೆ (EC VII, Maddur, Aruvanahalli, No.87).

ಒಟ್ಟಾರೆ ಕಂಪಿಲರಾಯ ರಾಜಧಾನಿ ಹಾಗೂ ಮಕರ ಧ್ವಜ ಮತ್ತು ಕಂಪಿಲರಾಯ ಆತನ ಪೂರ್ವಿಕರ ರಾಜಧಾನಿ ಹೊಸಪಟ್ಟಣ ಇಂದಿನ ಹಂಪೆ ಎಂದು ಶಾಸನಗಳು ಉಲ್ಲೇಖಿಸುತ್ತವೆ. ನಿಜಗಲಿ ಕಟಕರಾಯನ ರಾಜಧಾನಿ ಹೊಸಪಟ್ಟಣದಲ್ಲಿ ಬುಕ್ಕರಾಯನು ಪ್ರಥ್ವಿರಾಂಜಂಗೈ ಯ್ಯುತ್ತಿರಲು ಎಂದು ಚಿತ್ರದುರ್ಗದ ಶಾಸನ (EC XI, Chitradurga, No.2, 3) ಹಾಗೂ ವೀರಬುಕ್ಕರಾಯನ ವಿಜಯನಗರ ಪಟ್ಟಣದಲ್ಲಿ ಎಂದು ಹಂಪೆಯ ಎರಡು ಶಾಸನಗಳು ಉಲ್ಲೇಖಿಸಿವೆ (VPR, 1983-84, No.2, 3). ಕುಮ್ಮಟ ನಾಯಕರಿಗೆ ತಮ್ಮ ಅಲ್ಪ ಕಾಲಾವಧಿಯಲ್ಲಿ ದೇವಗಿರಿಯ ಸೇವುಣ, ವಾರಂಗಲ್ಲಿನ ಕಾಕತೀಯರು, ದೋರಸಮುದ್ರದ ಹೊಯ್ಸಳರೊಳಗೆ ಕಾದಾಡಿ ಎದುರಿಸಿದ ಕೀರ್ತಿ ಸಲ್ಲುತ್ತದೆ. ಕ್ರಿ.ಶ. ೧೩ ರಿಂದ ೧೪ನೇ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಅವರಲ್ಲೂ ಹೆಚ್ಚಾಗಿ ಕುಮ್ಮಟದ ನಾಯಕರ ವೀರತ್ವಕ್ಕೆ ಮನ್ನಣೆ ದೊರೆತಂತಿದೆ. ಕುಮ್ಮಟ ನಾಯಕರು ಅಲ್ಪ

ಅಳಿದರೂ ಅವರು ಬಿಟ್ಟು ಹೋಗಿರುವ ಹಲವಾರು ಕೊಡುಗೆಗಳು ಅವುಗಳಲ್ಲಿ ಮುಖ್ಯವಾಗಿ ದೇವಾಲಯ, ಮೂರ್ತಿ ಶಿಲ್ಪ, ಶಿಲಾ ಶಾಸನಗಳು ಇವರ ಸಾಂಸ್ಕೃತಿಕ ಅಧ್ಯಯನಕ್ಕೆ ಇಂದು ದಾರಿದೀಪವಾಗಿದೆ.

ಆಡಳಿತ ಪದ್ಧತಿ

ಪ್ರಾಚೀನ ಕರ್ನಾಟಕದಲ್ಲಿ ಕದಂಬ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರ ಅರಸುಮನೆತನಗಳು ರಾಜ್ಯಭಾರ ಮಾಡಿ ಅವೆಲ್ಲವೂ ಒಂದೇ ರಾಜನೀತಿ ಸೂತ್ರದ ಮೇಲೆ ರಾಜ್ಯ ಸೌಧವನ್ನು ಕಟ್ಟಿದವು. ಕದಂಬರ ಕಾಲದಲ್ಲಿ ಬನವಾಸಿ, ರಾಷ್ಟ್ರಕೂಟರ ಕಾಲದಲ್ಲಿ ಮಾನ್ಯಖೇಟ, ಕಲ್ಯಾಣದ ಚಾಲುಕ್ಯರ ಕಾಲದಲ್ಲಿ, ಕಲ್ಯಾಣ, ವಿಜಯನಗರದ ಕಾಲದಲ್ಲಿ, ಹಂಪೆ. ನಾಡಿನ ಸಾರ್ವತ್ರಿಕ ಬೆಳವಣಿಗೆಯಲ್ಲಿ ದೊಡ್ಡ ಪಾತ್ರವನ್ನು ವಹಿಸಿದ್ದರೂ, ಇದೊಂದು ಸಾಂಸ್ಕೃತಿಕ ಕೊಡುಗೆ. ಪ್ರಾಚೀನ ಕರ್ನಾಟಕದ ಆಳ್ವಿಕೆಯನ್ನು ಪರಿಶೀಲಿಸಿದರೆ ಒಂದೊಂದು ಗ್ರಾಮವೂ ಕೆಲವು ವಿಷಯಗಳಲ್ಲಿ ಆಡಳಿತದ ಪ್ರತ್ಯೇಕ ಘಟಕಗಳಂತೆ ನಡೆದು ಕೊಳ್ಳುತ್ತಿದ್ದವು. ಶಾಸನಗಳಲ್ಲಿ ಚಿತ್ರಿತವಾಗಿರುವಂತೆ ಒಂದೊಂದು ಗ್ರಾಮವು ವಿಶಾಲವಾದ ರಾಜ್ಯದೊಳಗಿನ ಒಂದು ಪುಟ್ಟ ರಾಜ್ಯವೆಂಬ ಭಾವನೆ ಬರುತ್ತದೆ(ಚಿದಾನಂದ ಮೂರ್ತಿ ಎಂ., ೧೯೭೯, ಪು. ೩೨೧).

ಪ್ರಸ್ತುತ ಅಧ್ಯಯನ ಕರ್ನಾಟಕದ ಕುಮ್ಮಟ ನಾಯಕರ ಕಾಲದ ಆಡಳಿತ ವ್ಯವಸ್ಥೆಗೆ ಸೇರಿದುದರಿಂದ ಕುಮ್ಮಟ ನಾಯಕರ ಕಾಲದ, ರಾಜ್ಯದ ಆಡಳಿತದ ಕ್ರಮವನ್ನು ಲಭ್ಯವಾದ ಸಾಹಿತ್ಯಿಕ ಮತ್ತು ಶಾಸನಗಳ ಆಧಾರದಲ್ಲಿ ಸೆರೆಹಿಡಿಯಲಾಗಿದೆ. ಕುಮ್ಮಟದ ನಾಯಕರ ಕಾಲದಲ್ಲಿ ಆಡಳಿತವು ಹಲವಾರು ಪ್ರಾಂತಗಳಾಗಿ ವಿಭಾಗಿಸಲ್ಪಟ್ಟು, ಮನ್ನೆಯರು, ಮಾಂಡಲೀಕರನ್ನು ನೇಮಕ ಮಾಡಿದ್ದರು. ರಾಜ್ಯವೆನ್ನುವುದು ರಾಜನಿಗೆ ಸೇರಿದುದು ಅದರ ರಕ್ಷಣೆ, ಅವನ ಹೊಣೆ, ಸೋಮದೇವನ ನೀತಿ ವಾಕ್ಯಾಮೃತದ ಪ್ರಕಾರ ಪ್ರಜೆಗಳನ್ನು ರಕ್ಷಿಸದವನು ರಾಜನೇ ಅಲ್ಲ, ಪ್ರಜಾಪಾಲನೆಯೇ ರಾಜನ ನಿಜವಾದ ಯಜ್ಞ. ರಾಜನಿರುವುದು ಪ್ರಜೆಗಳಿಗಾಗಿ, ಅವರ ಯೋಗಕ್ಷೇಮಕ್ಕಾಗಿ ಎಂಬುದು ಸಾರ್ವತ್ರಿಕವಾಗಿದ್ದಿತು. (ರಂಗನಾಥಸ್ವಾಮಿ, ೧೯೭೨, ಪು. ೧೬) ಪ್ರಸ್ತುತ ಕುಮ್ಮಟ ನಾಯಕರ ಕಾಲದಲ್ಲಿ ಒಳ ಆಡಳಿತವನ್ನು ನಿರ್ವಹಿಸಲು, ಆಯಾ ಪ್ರಾಂತೀಯ ಅಧಿಕಾರಿಗಳಾಗಿ ಸೇನಬೋವ, ನಾಡಸೇನ ಬೋವ, ಕುಲಕರ್ಣಿ, ತಳವಾರ, ಗುರಿಕಾರರು, ಸಾಮಂತ ಅಧಿಕಾರಿಗಳ ವರ್ಗ ಆ ರಾಜ್ಯದ ಸೈನಿಕ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಪ್ರತ್ಯೇಕ ಅಧಿಕಾರಿಗಳು ವ್ಯವಸ್ಥಿತರಾಗಿದ್ದರು. ರಾಜ, ಯುವರಾಜ, ಮಾಂಡಲೀಕರು, ಸೇನಬೋವ, ಗೌಡ, ತಳವಾರ, ಮಹಾಜನಗಳು, ಮಹಾನಾಡ ಸೆಟ್ಟಿಗಳು ಸಾಹಿತ್ಯಿಕ ಗ್ರಂಥಗಳಲ್ಲಿ, ಶಾಸನಗಳಲ್ಲಿ ದಾಖಲಿಸಲ್ಪಟ್ಟಿವೆ (ದೇವೀರಪ್ಪ ಹೆಚ್., ೧೯೬೪, ಪು. ೧೪-೧೯, ಕಲಬುರ್ಗಿ ಎಂ.ಎಂ., ೨೦೦೧, ಪು.೩೫೮).

ಪ್ರಾಚೀನ ಕರ್ನಾಟಕದ ದೊರೆಗಳು ದೊಡ್ಡ ಸೇನೆಯನ್ನು ಕಟ್ಟಿದ್ದರೂ ದೇಶವನ್ನಾಳುತ್ತಿದ್ದದ್ದು ಸೈನ್ಯಬಲದಿಂದ ಅಲ್ಲ (Dikshit V.R.R, 1969, P. 701). ರಾಜನು ತನ್ನ ಮಂತ್ರಿಗಳ ಮೂಲಕ ಆಡಳಿತವನ್ನು ನಡೆಸುತ್ತಿದ್ದನು. ಪ್ರಸ್ತುತ ಕುಮ್ಮಟ ನಾಯಕರ ಆಡಳಿತದಲ್ಲಿ ಮಂತ್ರಿಯ ಪಾತ್ರವನ್ನು ವಹಿಸಿದವನು ಬೈಚಯ ದಂಡನಾಯಕ. ನಂಜುಂಡ ಕವಿ ತನ್ನ ಕುಮಾರರಾಮ ಚರಿತದಲ್ಲಿ ಮಂತ್ರಿಯ ಸ್ಥಾನಮಾನ, ರಾಜ್ಯದ ಸುಭದ್ರ ಆಡಳಿತಕ್ಕೆ ತಳಹದಿ ಎಂಬ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ಕುಮ್ಮಟ

ನಾಯಕರ ಕಾಲದಲ್ಲಿ ಮೂರು ಜನ ಮಂಡಲಾಧಿಕಾರಿಗಳಿಗೆ ಮಂತ್ರಿಯಾಗಿ ಮೆರೆದ ಏಕೈಕ ವ್ಯಕ್ತಿ ಬೈಚಯ ದಂಡನಾಯಕ. ಈ ಬೈಚಯ ಮಂತ್ರಿ ಮಹಾ ನೀತಿವಂತನು, ಪತಿಕಾರ್ಯನಿಷ್ಠನು, ದಾನದಯಾಪರನು, ಉತ್ತಮ ಗುಣವುಳ್ಳವನು, ರಾಜಕೀಯ ದುರೀಣ, ಮಂತ್ರಿ ಚೂಡಾಮಣಿ, ಸಪ್ತಾಂಗ ಸೂತ್ರಗಳನ್ನು ಬಲ್ಲವ, ಸಚಿವಶಿರೋಮಣಿ, ರಾಜನಿಗೆ ನೀತಿ ಹೇಳುವ ಬುದ್ಧಿವಂತ, ರಾಜಕಾರ್ಯದುರಂದರ ಚತುರೋಪಾಯಗಳನ್ನು ಬಲ್ಲವನೆಂದಿದೆ. ಇಂದ್ರಜಾಲ, ಮಹೇಂದ್ರಜಾಲ ವಿದ್ಯೆಗಳನ್ನು ಬಲ್ಲವ. ಮಹಾಮಂತ್ರಿ ಬೈಚಯದಂಡನಾಯಕನೆಂದು ಉಲ್ಲೇಖಿಸಲ್ಪಟ್ಟರೆ (ದೇವೀರಪ್ಪ ಹೆಚ್. ೧೯೬೪, ಪು. ೨೯೦- ೩೧೩) ಬೈಚಯ ದಂಡನಾಯಕನನ್ನು ಸಿಂಗನರಾಜ್ಯ ವಿಸ್ತರಣೆಯಲ್ಲಿ ಮಹಾಮಂತ್ರಿ ಬಾಹತ್ತರ ನಿಯೋಗಾಧಿಪತಿ ಸಂಧಿ ವಿಗ್ರಹಿ ಎಂದು ಕುಮ್ಮಟ ಬೀಚನೆಂದು ಉಲ್ಲೇಖಿಸಿದೆ (EC XI, Molakalmuru, No.20, EC XI, Jagalur, No.30, SII IX, Pt.1,No. 152).

ಅಧಿರಾಜ ಅಥವಾ ಚಕ್ರವರ್ತಿಗಳ ಅಧೀನರಾಗಿದ್ದುಕೊಂಡು ಬೇರೆ ಬೇರೆ ರಾಜ್ಯಗಳನ್ನು ಆಳುತ್ತಿದ್ದರೂ ಅವರವರ ಪ್ರದೇಶಗಳಲ್ಲಿ ಸಾಮಂತರು ಅಧಿರಾಜರಂತೆ ಮಂತ್ರಿಗಳನ್ನು, ಸೇನೆಯನ್ನು ಹಾಗೂ ಇತರ ಅಧಿಕಾರ ವರ್ಗಗಳನ್ನು ಪಡೆದಿದ್ದರು. ಸಾಮಂತರಂತೆಯೇ ಅಧಿರಾಜರು, ಮಾಂಡಲೀಕರು, ಸರ್ವಾಧಿಕಾರಿಗಳು ಆದರೂ ಇಬ್ಬರಿಗೂ ಒಂದು ವ್ಯತ್ಯಾಸವನ್ನು ಕಾಣುತ್ತೇವೆ. ಅಧಿಕಾರಿಗಳು ತಮ್ಮ ರಾಜ್ಯವನ್ನು ಗೆದ್ದಿರುವುದರಿಂದ ತಮ್ಮ ಅಧೀನರು, ಮಹಾ ಮಾಂಡಲೀಕರು ಆಗಿದ್ದರೂ ಬೇರೆ ರಾಜರುಗಳಿಗೆ ಸೇವೆ ಸಲ್ಲಿಸುತ್ತಿದ್ದರೆನ್ನಲಾಗಿದೆ (ಚಿದಾನಂದ ಮೂರ್ತಿ ಎಂ., ೧೯೭೯, ಪು. ೩೨೯).

ಕುಮ್ಮಟ ನಾಯಕರ ಕಾಲಾವಧಿಯಲ್ಲಿ ಕಂಪಿಲರಾಯನು ಮಾಂಡಲೀಕನಾಗಿದ್ದು ಪ್ರಾಂತೀಯ ಅಧಿಕಾರಿಗಳನ್ನು ಹೊಂದಿದ್ದನೆಂದು ಕುಮಾರ ರಾಮನಾಥ ಚರಿತಗಳಲ್ಲಿ ದಾಖಲಿಸಿದೆ. ಪ್ರಾಂತಾಧಿಕಾರಿಗಳ ಹೆಸರುಗಳು ಈ ರೀತಿಯಲ್ಲಿದೆ (ದೇವೀರಪ್ಪ ಹೆಚ್., ೧೯೬೪, ಸಂ. ೩ ಪು. ೧೪-೧೯, ಕಲಬುರ್ಗಿ ಎಂ. ಎಂ., ೧೯೯೯, ಪು. ೧೨೦-೧೨೨). ರಾಯದುರ್ಗದ-ರಾಮದೇವ, ಉದಯಗಿರಿಯ ಪಂಪರಾಜ, ಕೊಪ್ಪಣದ ತಿಮ್ಮರಾಜ, ಗಂಡಿಕೋಟೆಯ ಗಂಗರಾಜ, ಆದವಾನಿಯ ನರಹರಿ, ಗುತ್ತಿಯ ಕಾಚಯ್ಯ (ಜಗತಾಪಿ) ತೊರೆಗಲ್ಲಿನ ಜಾಯಿ, ಜಕ್ಕಿಯ, ಚಿತ್ರದುರ್ಗದ ಸಿಂಗ, ದೇವದುರ್ಗದ ರಾಯನ ಮಗ ಿಡುಗಲ್ಲ ಕಾಮ, ಕುಂದುರುಪಿಯ ಗಂಗರಾಜ. ಗುಡಿಕೋಟೆಯ ದೇವ, ಕುರುಗೋಡಿನ ಸಂಗಮ. ಉಚ್ಚಂಗಿ ದುರ್ಗದ ವೀರ ಕುಜ್ಜೀರನಾಗ, ಕಲ್ಲಿಕೋಟೆಯ ಚಿಕ್ಕ, ಆಗುಂಬೆಯ ಮಾಚಿನಾಯಕ, ಓರುಗಲ್ಲ ಮಂತ್ರಿ ಲಿಂಗಣ್ಣ, ಸಂಪಿಗೆಯ ತಿಮ್ಮರಾಜ. ಮುಂಗಲಿ ತಾಂಬ್ರದೇವಯ್ಯ, ಮಂತ್ರಿ ಬೈಚಯ್ಯನ ಕುಮಾರ, ಹಡಪದ ಬೊಲ್ಲುಗ, ಬೇವಿನ ಸಂಗಯ್ಯ, ಹಂಪರಾಜ. ಕಂಪರಾಜ. ಕೊಂಡಿಯ ರಾಜ ಕಾಡು ಪ್ರಿಯ ಸಂಗಯ್ಯ, ಕುಂಬಾರಕಲ್ಲ ಒಕ್ಕಲಿಗರ ಮುದ್ದ, ನೆಗಳೂರ ತಳವಾರ, ಹಿರಿಯ ಕಬ್ಬಲಿಗರ ಾಗ, ಮಾದಿಗರ ಹಂಪ, ಕಾಟಣ್ಣ, ಸಂಗಮದೇವ, ಕಾಳಂಜಿಯ ಕಂಪ, ಕಂಪಿಲನ ರಾವುತ ಮಾಯಿದೇವ, ಸಾಯಿದೇವ. ಅಕ್ಕಸಾಲೆಯ ಚಿಕ್ಕ, ಕನೋಜದ ರಾವುತರು, ತುರುಕರು. ತಳವಾರ ನರಸಯ್ಯನ ಮಗ ಸಿಂಗ. ಸಿರಿಯಣ್ಣ ಗುರ್ಜರ ಕಂಪನ ಮಗ ಬಸವಯ್ಯ.

ಸೈನಿಕ ಆಡಳಿತಕ್ಕೆ ಸಂಬಂಧಿಸಿದಂತೆ ಕೆಲವೊಂದು ಸೈನಿಕ ಅಧಿಕಾರಿಗಳ ಹೆಸರು ಉಲ್ಲೇಖಿತವಾಗಿವೆ. ಅಳಿಯ ಸಂಗಣ್ಣ, ತೊಟ್ಟಿದ ಮಾಯಿದೇವ, ದಳಪತಿ ಕರಿಯ ಸಿಂಗಣ್ಣ, ದಳದುಳಿಕೆಯ ಸೋಮ, ನುಗ್ಗೆಹಳ್ಳಿಯ ನಾಗ, ಅರಿಮಲ್ಲಿದೇವ, ಭಂಡಾರಿ ಬುಕ್ಕಣ್ಣ, ಬೈರ, ಕರಡಿ ಕಲ್ಲಣ್ಣ ಜುಂಜಣ್ಣ, ಚಂದ, ಕೊಳ್ಳಿಯ ನಾಗ, ಗಂಡಿಕೋಟೆಯ ಗಂಗರಾಜ, ಕರಡಿಕಾಟ, ಅರಿದಾಳೆ ಲಿಂಗ, ವೆಂಕಿಯ ಬೊಮ್ಮ, ಹೊಲೆಯರ ಮಾರ, ಕಾಳಂಜಿಯ ಗಂಗ, ಕಠಾರಿಯ ಸಾಳುವ, ಗಿಂಡಿಯ ಲಕ್ಕ, ದೂಳಿಕೋಟೆಯ ತಿಮ್ಮ, ಚಿಕ್ಕ ಪೆಮ್ಮ, ಬೇಡರ ಲಕ್ಕ, ಬ್ಯಾಡರ ಬುಕ್ಕಿ ನಾಯಕ ಮುಂತಾದ ಸೈನಿಕ ಅಧಿಕಾರಿಗಳು ಕುಮಾರ ರಾಮನಾಥ ಚರಿತದಲ್ಲಿ ಉಲ್ಲೇಖಿತವಾಗಿದೆ (ದೇವೀರಪ್ಪ ಹೆಚ್., ೧೯೬೪, ಪು. ೧೪-೧೯).

ಸಾಹಿತ್ಯಿಕ ಕೃತಿಗಳು ಸೈನಿಕ ಶಕ್ತಿ ಕುರಿತು ಉಲ್ಲೇಖಿಸುತ್ತವೆ. ಸಮರದಲ್ಲಿ ಸೈನ್ಯದ ಒಂದು ಬೃಹತ್ ಕಲ್ಪನೆಯ ಚಿತ್ರಗಳು ಮೂಡಿ ಬಂದಿವೆ (ದೇವೀರಪ್ಪ ಎಚ್., ೧೯೫೫, ಸಂ.೨, ಪು. ೧೮೬-೨೦೦). ರಾಮನ ಮೇಲೆ ದಂಡೆತ್ತಿ ಬಂದ ಸುಲ್ತಾನನ ಕಡೆಯ ಮಾತಂಗಿಯ ಸೈನ್ಯದಲ್ಲಿ ಕರಿ ಹನ್ನೆರಡು ಸಾವಿರ, ಮೂರು ಸಾವಿರ ಕಂಬ, ತುರಗ ಹತ್ತು ಲಕ್ಕ ಚರರೊಂದಿಗೆ ಕೋಟಿ ನಡೆ ತಂದವಳು ಎಂದು ಕಾಲಾಳುಗಳ ಸಂಖ್ಯೆಯನ್ನು ಹೇಳಲಾಗಿದೆ. ಸೈನ್ಯದಲ್ಲಿ ಇಂತಿಷ್ಟು ಆನೆ ಕುದುರೆ ಕಾಲಾಳುಗಳಿಗೆ ಒಂದು ಘಟಕವೆಂದು ಭಾವಿಸಿ ಅಂತಹ ಎಷ್ಟೋ ಘಟಕಗಳು ಸೈನ್ಯದಲ್ಲಿದ್ದವು ಎಂದು ಹೇಳುವುದು ಸೈನ್ಯಶಕ್ತಿಯನ್ನು ಹೇಳುವ ಪದ್ಧತಿ (ಶುಕ್ರನೀತಿ, ಸಂ.೪, ೭೧, ಪು. ೧೨೮). ಮಾತಂಗಿಯ ಸೈನ್ಯ ಬಲವನ್ನು ವರ್ಣಿಸುವ ಸಂರ್ಭದಲ್ಲಿ ನಂಜುಂಡ ಕವಿ ಹೇಳಿದ ಕರಿಗಟೆಯೊಂದು, ಕರಖವಾರು, ತುರಗ ಸಾವಿರ, ಹತ್ತು ಸಾವಿರ ಮಂದಿ ಇರಲು ಅದನ್ನೊಂದು ಪೌಜೆಂದು ಹೇಳುವರು. ಬಲ್ಲ ಕರಣೀಕರು ಮಾಹರೆಂದು ಪೇಳ್ವರ ಕೋದಿದರು ಅದು ಹತ್ತಲಗದನ್ನು ಕರಲಗಂ ಪುಟರೆರಾದೊಡ್ಡರೆಂಬರು. ಆದೊಡವಿಸಿಂ ಹತ್ತೊಡಮಂ ನರವಿಂದ ರಾಮನಾಥನ ಮೇಲೆ ಹೀಗೆ ಸೈನ್ಯದಲ್ಲಿದ್ದ ಆನೆ, ಕುದುರೆ, ಸಾಮ್ರಾಜ್ಯದ ಸೈನ್ಯ ಬಲವನ್ನು ನಂಜುಂಡ ಕವಿ ತನ್ನ ರಾಮನಾಥ ಚರಿತದಲ್ಲಿ ವರ್ಣಿಸಿ ಐತಿಹಾಸಿಕ ಸತ್ಯಕ್ಕೆ ಉದಾಹರಣೆಯನ್ನು ನೀಡಿದ್ದಾನೆ (ದೇವೀರಪ್ಪ ಹೆಚ್. ೧೯೬೪, ಚರಿತ, ಪು. ೪೦೮-೪೨೨).

ನಂಜುಂಡ ಕವಿ, ಕಂಪಿಲನ ಸೈನ್ಯವನ್ನು ವರ್ಣಿಸುವಾಗ `ಆನೆಗೊಂದಿ ಇಂದಾನೆ, ಕುದುರೆ, ಕಾಲಾಳು ತಾನತಿ ವೇಗದಿಂ ಬಂದು' ಆನೆ ಕುದುರೆ, ಕಾಲಾಳುಗಳನ್ನು ಬಿಸಿಲಹಳ್ಳಿ ಕಣುವೆ ಇಂದ ದಂಡನಾಥನ ಕೆರೆಯವರೆಗೆ ಸಂದಣಿಸಿದ ಚತುರಂಗ ಬಲವ (ದೇವೀರಪ್ಪ ಎಚ್. ೧೯೫೫, ಸಂದಿ ೧೧, ಪದ್ಯ ೬೮-೬೯, ಪು. ೧೯೭) ಹೀಗೆ ಸೈನಿಕ ವ್ಯವಸ್ಥೆಯ ಕುರಿತಾಗಿ ಕುಮಾರ ರಾಮನಾಥ ಚರಿತದಲ್ಲಿ ಬರೆಯಲ್ಪಟ್ಟಿದೆ. ಶಾಸನಗಳಲ್ಲಿ ಉಲ್ಲೇಖಿಸುವಂತೆ ಮಹಾಜನಗಳ ಉಲ್ಲೇಖವಿದೆ. ಆಯಾ ಗ್ರಾಮಗಳಲ್ಲಿ ಪ್ರಮುಖ ಕಾರ್ಯಗಳನ್ನು ಮಾಡುವಾಗ ಮಹಾಜನಗಳನ್ನು ನೇಮಕ ಮಾಡುತ್ತಿದ್ದರು (EC XI, Davanagere. No.26). ಜೆಣ್ಣೆ ಹಳ್ಳಿಯ ಶಾಸನದಲ್ಲಿ ಹನ್ನೆರಡು ಮಂದಿ ಮಹಾಜನರು ಇರುವುದನ್ನು ಉಲ್ಲೇಖಿಸಿದೆ (ಕವಿ ಶಾಸಂ. ಹರಪನಹಳ್ಳಿ ನಂ. ೨೦೦ ಪು. ೬೪೭-೮).

ಸಾಮಂತ ಅಧಿಕಾರಿಗಳು ಆಯಾ ಪ್ರದೇಶದ ಆಡಳಿತ, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿರುವುದನ್ನು ಕಲ್ಲೇದೇವರಪುರದ ಶಾಸನ ದಾಖಲಿಸುತ್ತದೆ (EC XI, Jagaluru, No. ೬೦). ಸಾಮಂತ ಬೊಮ್ಮಯ್ಯ, ಬಿಣಗಿಯ ಮಾರಯ್ಯ, ಐವರ ಕೆರೆಯ

ಸಿಂಗಗೌತ, ಕಂಪಣಾಚಾರ್ಯ, ರಾಜಗುರು ಅವುಬಣದೇವ, ಮೂಳಯ್ಯ ಎಂಬ ಹೆಸರುಗಳು ಇದ್ದ ಉಲ್ಲೇಖವಿದೆ (ಕವಿಶಾಸಂ ೧ ಹರಪನಹಳ್ಳಿ ನಂ. ೨೦೦ ಪು. ೬೪೭-೪೮, EC XI, Jagalur, No.30). ರಾಯರಾಜಗುರು ಲಲಿತಕೀರ್ತಿ ಭಟ್ಟಾರಕರೆಂದು ಆನೆಗೊಂದಿಯ ಶಾಸನದಲ್ಲಿದೆ.

ಕುಮ್ಮಟ ನಾಯಕರ ಕಾಲಾವಧಿಯಲ್ಲಿ ಸೆಟ್ಟಿಗಳು ಮಹಾನಾಡ ಸೆಟ್ಟಿಗಳು ಪ್ರಮುಖ ಪಾತ್ರವನ್ನು ವಹಿಸಿದ್ದರು. ಜೀರ್ಣೋದ್ಧಾರ, ಮದುವೆ, ದಾನ, ದತ್ತಿಗಳನ್ನು ಬಿಟ್ಟ ಬಗ್ಗೆ ಕುಮಾರ ರಾಮನಾಥ ಚರಿತ ಮತ್ತು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ (ಕಲಬುರ್ಗಿ ಎಂ.ಎಂ. ೨೦೦೧, ಪು.೭೨-೫೫). ಕಲಿದೇವರಿಗೆ ಕೊಟ್ಟೂರು ನಾಡಿನ ಸೆಟ್ಟಿಗಳು ಧರ್ಮದತ್ತಿಯನ್ನು ಬಿಟ್ಟ ವಿಷಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ (EC XI, Jagaluru, No.30). ಕೋಗಳಿಯ ಪಾರ್ಶ್ವನಾಥ ಬಸದಿಗೆ ಅನೇಕ ಜನ ಸೆಟ್ಟಿಗಳು ದಾನಗಳನ್ನು ಕೊಟ್ಟಿರುವರು(SII IX, Pt. 1, No.341).

ನ್ಯಾಯ ಪರಿಪಾಲನೆಗೆ ಸಂಬಂಧಿಸಿದಂತೆ ರಾಜನ ಮುಖ್ಯ ಕರ್ತವ್ಯ ಆಡಳಿತದಲ್ಲಿ ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆ. ಶಿಷ್ಟರಿಗೆ ನ್ಯಾಯವು ದೊರಕುವಂತೆ ಏರ್ಪಾಟು ಮಾಡುವುದು ಕರ್ತವ್ಯ. ಅನ್ಯಾಯವನ್ನು ತೊಡೆದು ಹಾಕುವುದೇ ದಂಡವೆಂದು ಕಾಮಾಂದಕನು ಹೇಳತ್ತಾನೆ (Dikshit V.R.R, 1969, P.6) ಇಲ್ಲಿ ದಂಡವೆಂಬುದು ಸಪ್ತಾಂಗಗಳಲ್ಲಿಯೂ ಒಂದು. ರಾಜನಾದವನು ನ್ಯಾಯ ಪರಿಪಾಲನೆ ಮಾಡುವುದು ದಂಡವೆಂಬುದು ಲೋಕವನ್ನು ದಂಡದಿಂದಲೇ ಜಯಿಸಬೇಕೆಂದು, ದಂಡವೇ ಧರ್ಮವೆಂಬುದು ಇದರ ಅರ್ಥ ದಂಡನೀತಿ, ನ್ಯಾಯ ಪರಿಪಾಲನೆಯನ್ನು ಯಾವ ರೀತಿಯಲ್ಲಿ ಕೈಗೊಂಡ ಬಗ್ಗೆ ಶಾಸನಗಳಲ್ಲಿ ಸ್ಪಷ್ಟ ಚಿತ್ರಣ ದೊರಕುವುದು ಕಷ್ಟ.

ಸಪ್ತಾಂಗ ಸೂತ್ರಗಳು ಪ್ರಾಚೀನ ಭಾರತದ ರಾಜನೀತಿ ಪ್ರಕಾರ ರಾಜ್ಯವು ಸ್ವಾಮಿ, ಅಮಾತ್ಯ ಜನಪದ, ದುರ್ಗ. ಕೋಶ. ದಂಡ ಮತ್ತು ಮಿತ್ರ ಎಂಬ ಸಪ್ತಾಂಗಗಳಿಂದ ಕೂಡಿರಬೇಕೆಂದಿದೆ (ಶ್ರೀಕಂಠಶಾಸ್ತ್ರಿ, ೧೯೪೯, ಪು. ೫೬). ಪ್ರಸ್ತುತ ಸಪ್ತಾಂಗಗಳಲ್ಲಿ ಒಂದಾದ ದಂಡವೆಂಬುದು ನ್ಯಾಯ ಪರಿಪಾಲನೆಗೆ ಸಂಬಂಧಿಸಿದಂತೆ ಕುಮ್ಮಟ ನಾಯಕರ ಕಾಲಕ್ಕೆ ಚಿತ್ರದುರ್ಗದ ಶಾಸನವೊಂದು ದಾಖಲೆಯನ್ನು ನೀಡುತ್ತದೆ. ಈ ಶಾಸನದಲ್ಲಿ ಕಂಪಿಲನ ಸೈನ್ಯದಿಂದ ಅಗ್ರಹಾರ ನಾಶವಾಗಿ ಪ್ರಜೆಗಳು ತೊಂದರೆಗೊಳಗಾದಾಗ, ಪ್ರಜೆಗಳಿಗೆ ಸಾಮಾಜಿಕ ನ್ಯಾಯಕ್ಕಾಗಿ ಅಗ್ರಹಾರ ನಿರ್ಮಿಸಿ ಪ್ರಜೆಗಳಿಗೆ ಹೊಸ ಗ್ರಾಮವೊಂದನ್ನು ಕಟ್ಟಿಸಿದ್ದು ಕೆರೆಯನ್ನು ದುರಸ್ತಿಗೊಳಿಸಿರುವರು ಎಂದಿದೆ. ಕುಮ್ಮಟ ನಾಯಕರ ಕಾಲದ ಆಡಳಿತ ಪ್ರಾಂತಗಳಾಗಿ ವಿಂಗಡಿಸಲ್ಪಟ್ಟ ಅಧಿಕಾರಿ. ಮಾಂಡಲೀಕರು, ದಂಡನಾಯಕರು, ಸೇನಬೋವ, ನಾಡ ಸೇನಬೋವ, ಕುಲಕರ್ಣಿಗಳು ಹಾಗೂ ಸೈನಿಕರು. ಮಹಾಜನಗಳು. ಸೆಟ್ಟಿಗಳು. ಮಹಾನಾಡ ಸೆಟ್ಟಿಗಳು ಪ್ರಧಾನ ಪಾತ್ರವಹಿಸಿದ್ದರೆಂಬುದನ್ನು ಸಾಹಿತ್ಯಿಕ ಆಧಾರ ಮತ್ತು ಶಾಸನಗಳು ಉಲ್ಲೇಖಿಸುತ್ತವೆ. ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೆ ದೊರಕಿರುವುದು ಸಾಹಿತ್ಯಿಕ ಆಕಾರಗಳೇ ಹೆಚ್ಚಿನ ಪಾಲಿನವು.

ಅಧ್ಯಾಯ - ೨

ಐತಿಹಾಸಿಕ ಹೆಜ್ಜೆಗಳು - ಸಂಸ್ಕೃತಿ ಅಧ್ಯಯನ

ಐತಿಹಾಸಿಕ ಹೆಜ್ಜೆಗಳು - ಸಂಸ್ಕೃತಿ ಅಧ್ಯಯನ

ಸಾಂಸ್ಕೃತಿಕ ಅಥವಾ ಸಂಸ್ಕೃತಿ ಪದದ ಬಳಕೆ ಬಹು ಇತ್ತೀಚಿನದು. ಮೂಲ ಅರ್ಥದಲ್ಲಿ ಪ್ರಕೃತಿಯು ವಿವಿಧ ಸಂಸ್ಕಾರಗಳ ಮೂಲಕ ಹಾದು ಹೋಗುತ್ತಾ ಸಂಸ್ಕೃತಿಯಾಗಿ ಪರಿವರ್ತಿತವಾಗುತ್ತದೆ (ತಾಳ್ತಜೆ ವಸಂತಕುಮಾರ, ೧೯೯೮, ಪು. ೧). ಸಂಸ್ಕೃತಿ ಎಂಬ ಶಬ್ದ ಬಹು ವಿಸ್ತಾರವಾದದ್ದು. ಒಮ್ಮೊಮ್ಮೆ ಅದರ ಅರ್ಥವ್ಯಾಪ್ತಿಯ ಅರಿವಿಲ್ಲದೆ ಸಂಸ್ಕೃತಿ ಅಥವಾ ಸಾಂಸ್ಕೃತಿಕ ಶಬ್ದವನ್ನು ಉಪಯೋಗಿಸಲಾಗುತ್ತಿದೆ (ಚಿದಾನಂದಮೂರ್ತಿ, ೧೯೭೯, ಸಾ.ಅ.ಪು. ೪). ಸಂಸ್ಕೃತಿಯನ್ನು ಕುರಿತ ನಿಮ್ಮ ಗ್ರಹಿಕೆ ಏನು ಎಂದು ಕೇಳಿದಾಗ ಅಭಿಪ್ರಾಯಗಳು ಹಲವಾರು(ರಹಮತ್ ತರೀಕೆರೆ,(ಸಂ) ೨೦೦೧, ಸೊಲ್ಲು). ಸಂಸ್ಕೃತಿ ಎಂದರೆ ಒಂದು ಜನಾಂಗದ ಚರಿತ್ರೆ. ಜನಾಂಗದ ಅಥವಾ ಜನಜೀವನದ ಆಚರಣೆ ಎಂದರೆ ತಪ್ಪಾಗಲಿಕ್ಕಿಲ್ಲ. ಕನ್ನಡದಲ್ಲಿ ಸಂಸ್ಕೃತಿ ಎಂಬ ಪದಕ್ಕೆ ಸಂವಾದಿಯಾದ ಪದವೇ ಇಲ್ಲ. ಸಂಸ್ಕೃತಿ ಎಂಬುದು ಒಂದು ರಚನೆ. ಬೌದ್ಧಿಕವಾಗಿ ರೂಪಿಸಿಕೊಂಡು ಒಂದು ಪರಿಕಲ್ಪನೆ (ರಹಮತ್ ತರೀಕೆರೆ, (ಸಂ) ೨೦೦೧, ಸೊಲ್ಲು) ಸಂಸ್ಕೃತಿ ಎಂಬ ಶಬ್ದ ಒಂದು ದೇಶ ಅಥವಾ ಜನಾಂಗದ ಸಾಧನೆ. ನಾಗರಿಕತೆ ಎಂಬ ಅರ್ಥವನ್ನು ನಿಘಂಟುಗಳು ನೀಡುತ್ತವೆ (ಕನ್ನಡ ಸಾಹಿತ್ಯ ಪರಿಷತ್ ನಿಘಂಟು, ೧೯೯೫, ಸಂ.೮). ಕಿಟ್ಟೆಲ್ ನಿಘಂಟು (೧೮೯೪) 'ಸಂಸ್ಕೃತಿ' ಎಂಬ ಪದಕ್ಕೆ ಸಂಸ್ಕಾರವೆಂದಿದೆ.

ಸಮಾಜ ವಿಜ್ಞಾನದ ಬರಹಗಳಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಎಂಬ ಶಬ್ದಗಳನ್ನು ಒಟ್ಟೊಟ್ಟಿಗೂ ಕೆಲವೊಮ್ಮೆ ಬಳಸಲಾಗುತ್ತದೆ. ವಾಸ್ತವವಾಗಿ ರಾಜಕೀಯ, ಧಾರ್ಮಿಕ, ಸಾಮಾಜಿಕ ಶಬ್ದಗಳು ಸಂಸ್ಕೃತಿ ಅಥವಾ ಸಾಂಸ್ಕೃತಿಕ ಎಂಬ ಶಬ್ದದಲ್ಲಿ ಅಡಗಿರುತ್ತದೆ. ಸಾಂಸ್ಕೃತಿಕ ಅಥವಾ ಸಂಸ್ಕೃತಿ ಎಂಬ ಶಬ್ದವನ್ನು ನಾವು ಯಾವ ಅರ್ಥದಲ್ಲಿ ಬಳಸುತ್ತೇವೆ ಎನ್ನುವುದು ಇಲ್ಲಿ ಮುಖ್ಯ. ಪ್ರಸ್ತುತ ಈ ನನ್ನ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದು ದರಿಂದ ಕುಮ್ಮಟ ನಾಯಕರು ಬದುಕಿದ ರೀತಿ ಅವರ ಧರ್ಮಗಳು ಆರ್ಥಿಕ ವ್ಯವಸ್ಥೆ ಅವರ ಬಾಳನ್ನು, ಜೀವನದ ತಿರುಳನ್ನು ಸೆರೆಹಿಡಿದು ನಿರೂಪಿಸುವುದು ಇಲ್ಲಿ ಮುಖ್ಯ.

ಪ್ರಾಚೀನ ಭಾರತೀಯ ಅದರಲ್ಲೂ ಹೆಚ್ಚಾಗಿ ಕರ್ನಾಟಕದ ಸಮಾಜದ ಮೂಲ ದ್ರವ್ಯಧರ್ಮ. (ಶೀಲಾಕಾಂತ ಪತ್ತಾರ ೨೦೦, ಪು.೭೧) ಒಂದು ರಾಜ್ಯದ ನಿರ್ಮಾಣವಾಗಬೇಕಾದರೆ ಅಲ್ಲಿ ಪರಸ್ಪರ ಜನತೆಯ ವ್ಯವಸ್ಥಿತ ಸಮೂಹ ಪೂರಕ. ಕುಮ್ಮಟ ನಾಯಕರ ಸಾಂಸ್ಕೃತಿಕ ಅಧ್ಯಯನದಲ್ಲಿ ಸಾಮಾಜಿಕ ವ್ಯವಸ್ಥೆ. ಆರ್ಥಿಕ ವ್ಯವಸ್ಥೆ, ರಾಜಕೀಯ ಸ್ಥಿತಿಗತಿಗಳ ಅಧ್ಯಯನದಲ್ಲಿ ಸಾಹಿತ್ಯಿಕ ಆಕರವನ್ನೇ ಹೆಚ್ಚಾಗಿ ಬಳಸಲಾಗಿದೆ. ಸಾಹಿತ್ಯಿಕ ಆಧಾರದ ಜೊತೆಗೆ ಅಲ್ಲಲ್ಲಿ ಈ ಸಾಂಸ್ಕೃತಿಕ ಅಧ್ಯಯನದಲ್ಲಿ ಪುರಾತತ್ವ ಆಧಾರಗಳು, ಕೈಫಿಯತ್ತುಗಳು, ಜಾನಪದೀಯ ಕೃತಿಗಳು ಪೂರಕ ಮಾಹಿತಿಯನ್ನು ಒದಗಿಸಿವೆ.

ಸಾಮಾಜಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಅಧ್ಯಯನದ ಹಿತದೃಷ್ಟಿಯಿಂದ ಜನಜೀವನದ ಸ್ವರೂಪಕ್ಕೆ ಧರ್ಮವೇ ನಿರ್ಣಾಯಕ ಶಕ್ತಿ. ಜೀವನದ ಎಲ್ಲಾ ರಂಗಗಳಲ್ಲೂ ಧರ್ಮವು ಹಾಸು ಹೊಕ್ಕಾಗಿದೆ. ಧರ್ಮದ ಸ್ವರೂಪ ತಿಳಿದಾಗ ಅದಕ್ಕೆ ಅನುಗುಣವಾಗಿ ಸಾಮಾಜಿಕ ಜೀವನವು ಕಲುಷಿತವಾಯಿತು. ಧರ್ಮದ ನಿಜಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನದ ಹಸನುಗೊಳಿಸುವ ಯತ್ನ ಕರ್ನಾಟಕದಲ್ಲಿ ನಡೆಯಿತು. ಒಟ್ಟಾರೆ ಅಧ್ಯಯನದ ಹಿತ ದೃಷ್ಟಿಯಿಂದ ಮುಖ್ಯವಾಗಿ ಮೂರು ಭಾಗಗಳಾಗಿ ಇಲ್ಲಿ ವಿಂಗಡಿಸಿಕೊಂಡಿದ್ದೇನೆ.

೧. ವರ್ಗ-ವರ್ಣ-ಜಾತಿ

೨. ಸಮಾಜದಲ್ಲಿ ಸ್ತ್ರೀಯರಿಗಿದ್ದ ಸ್ಥಾನಮಾನ

೩. ಸಾಮಾಜಿಕ ಕಾರ್ಯಗಳು

೧. ವರ್ಗ - ವರ್ಣ - ಜಾತಿ

ವೇದ ಕಾಲದಿಂದಲೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಗಗಳನ್ನು ವಿಭಾಗಗೊಂಡಿದ್ದು ಎಲ್ಲರಿಗೂ ತಿಳಿದ ವಿಷಯ. ಬ್ರಾಹ್ಮಣ ಶಿರದಿಂದಲೂ, ಕ್ಷತ್ರಿಯನು ತೋಳಿನಿಂದಲೂ, ವೈಶ್ಯನು ತೊಡೆಯಿಂದಲೂ, ಶೂದ್ರನು ಪಾದಗಳಿಂದಲೂ ಜನಿಸಿದನೆಂದು ಹೇಳಲಾಗಿದೆ (ಚಿದಾನಂದ ಮೂರ್ತಿ, ೧೯೭೯, ಪು.೪೨೮). ಶತಪಥ ಬ್ರಾಹ್ಮಣ ಮುಂತಾದವುಗಳಲ್ಲಿ ಈ ವರ್ಗಗಳನ್ನು ವರ್ಣಗಳೆಂದು ಕರೆಯಲಾಗಿದೆ (ರಾಂಗೋಪಾಲ, ೧೯೮೩, ಪು.೧೧೪). ಕರ್ನಾಟಕದ ಅನೇಕ ಶಾಸನಗಳಲ್ಲಿ ವರ್ಣಪದ್ಧತಿಯ ಪ್ರಸ್ತಾಪವಿದೆ. ಈ ಪದ್ಧತಿ ಸಡಿಲಗೊಂಡು ವರ್ಣಸಂಕರ ಉಂಟಾಗಿ ಜಾತಿಗಳು ಹುಟ್ಟಿದವೆಂದು ಮನುವಿನ ಅಭಿಮತ (ಚಿದಾನಂದ ಮೂರ್ತಿ, ೧೯೭೯, ಪು.೪೨೯). ಪ್ರಸ್ತುತ ಈ ನನ್ನ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದುದರಿಂದ ಕುಮ್ಮಟ ನಾಯಕರ ಕಾಲದಲ್ಲಿದ್ದ ಜಾತಿ ವ್ಯವಸ್ಥೆಯಲ್ಲಿ, ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿ ಹುಟ್ಟಿಕೊಂಡ ಬೇರೆ ಬೇರೆ ಜಾತಿಗಳನ್ನು ಇಲ್ಲಿ ಹೆಸರಿಸಬಹುದು. ಬ್ರಾಹ್ಮಣರು, ಜೋಯಿಸರು, ಅವಧಾನಿಗಳು, ಶಾಸ್ತ್ರಿಗಳು, ವೇದಮಂತ್ರ ಪಠಣಕರೂ ಆಗಿರುವ ಬ್ರಾಹ್ಮಣರು ಪ್ರಮುಖ ಸ್ಥಾನವನ್ನು ಪಡೆದಂತೆ, ಸಾಹಿತ್ಯಿಕ ಗ್ರಂಥಗಳು ಹಾಗೂ ಶಾಸನಗಳು ಉಲ್ಲೇಖಿಸುತ್ತವೆ. ಇವರುಗಳು ಮದುವೆ ಹಾಗೂ ಯುದ್ಧದಂತಹ ಹಲವು ಕಾರ್ಯಗಳಲ್ಲೂ ಪ್ರಮುಖ ಸ್ಥಾನವನ್ನು ಪಡೆದಿದ್ದರು. ದಾನಧರ್ಮ, ಬ್ರಹ್ಮದತ್ತಿಗಳು, ವೇದಪಠಣ, ವಿದ್ಯಾಭ್ಯಾಸ, ಪಾಣಿಗ್ರಹಣ, ಪಟ್ಟಾಭಿಷೇಕ, ಕರ್ಮಗಳು ಮುಂತಾದ ಕಾರ್ಯಗಳು ಬ್ರಾಹ್ಮಣ ವರ್ಗಕ್ಕೆ ಮೀಸಲಾಗಿತ್ತು. ಸಮಾಜದಲ್ಲಿ ಅತ್ಯಂತ ಗೌರವಸ್ಥಾನ ನೀಡಲಾಗಿತ್ತು (ಕಲಬುರ್ಗಿ ಎಂ.ಎಂ. ೨೦೦೧, ಪು. ೬೮-೬೯). ಮುಮ್ಮಡಿ ಸಿಂಗೆಯ ನಾಯಕನು ಸ್ವರ್ಗಸ್ಥನಾದಾಗ ಕಂಪಿಲ ರಾಯನು ತಂದೆಯ ಹೆಸರಿನಲ್ಲಿ ಗೋದಾನ, ಭೂದಾನ ಮಾಡಿ, ಹೋಮ ಕರ್ಮಗಳನ್ನು ಮಾಡಿ ವೇದಗಳನ್ನು ಓದಿಸಿದನೆಂಬ ವಿಷಯ ಹೊಸಕುಮಾರ ರಾಮನ ಸಾಂಗತ್ಯದಲ್ಲಿ ಉಲ್ಲೇಖಿತವಾಗಿದೆ (ಕಲಬುರ್ಗಿ ಎಂ.ಎಂ. ೧೯೯೯, ಪು.೩೦).

ಕುಮಾರ ರಾಮನಾಥನ ಮದುವೆಯ ಸಮಯದಲ್ಲಿ ಕಂಪಿಲ ರಾಯನು ಬ್ರಾಹ್ಮಣ ಪುರೋಹಿತ, ಜೋಯಿಸ, ಅವಧಾನಿಗಳ ಸಮ್ಮುಖದಲ್ಲಿ ಅಮೃತ ಸಿದ್ಧಿಯೋಗದಲ್ಲಿ ರಾಮನಾಥನ ವಿವಾಹ ಕಾರ್ಯವನ್ನು ನಡೆಸಿದನು. ಈ ಸಂದರ್ಭದಲ್ಲಿ ಊರಿನ ಮಂತ್ರಿಗಳು, ಮಾಂಡಲೀಕರು, ಮಾನ್ಯರು, ಪಟ್ಟಣ ಶೆಟ್ಟಿಗಳು, ಹಟ್ಟಿಕಾರರು, ಕರಣಿಕರು, ರಾವುತ ರಾಣೆಯರು, ಗುರಿಕಾರರು, ಖಾನ ಹೇಜಿಬರು ಇದ್ದರು (ಕಲಬುರ್ಗಿ ಎಂ.ಎಂ. ೨೦೦೧, ಪು. ೬೬-೬೯).

ಬ್ರಾಹ್ಮಣ ವರ್ಗದ ಜೊತೆಗೆ ಇಲ್ಲಿ ಉಳಿದ ಸೆಟ್ಟಿಗಳು, ಹಟ್ಟಿಕಾರರು ಮುಸ್ಲಿಂಮರಾದ ಖಾನ ಹೇಜಿಬರು ಜಾತಿಯ ಪ್ರಸ್ತಾವನೆ ಯನ್ನು ಮಾಡಲಾಗಿದೆ. ಕಲಬುರ್ಗಿಯವರ ಹೊಸ ಕುಮಾರ ರಾಮನ ಸಾಂಗತ್ಯದಲ್ಲಿ ತಮ್ಮ ವೃತ್ತಿಯನ್ನೇ ಅನುಸರಿಸುವ ಜಾತಿ ವ್ಯವಸ್ಥೆಯನ್ನು ಶ್ರಮಿಕ ವರ್ಗವೆಂದು ಹೇಳಲಾಗಿದೆ. ಈ ಜಾತಿ ವ್ಯವಸ್ಥೆಯಲ್ಲಿ ವಿವಿಧ ವೃತ್ತಿಗಳನ್ನು ಆಶ್ರಯಿಸಿದ ಬೇಡರು, ಕಬ್ಬೇರರು, ಗೊಲ್ಲರು, ಕುರುಬರು, ಅಗಸರು, ಕಂಬಾರರು, ಕುಂಬಾರರು, ಜಾಡರು, ವೈಶ್ಯರು, ಶಬರರು, ಕಾಮಾಟಿಗರು, ಪಾಂಚಾಳರು, ಕೊಮಟಿಗರು, ಡೊಂಬರು, ಹೊಲೆಯ, ಮಾದಿಗರು, ಕೊರವರು ಮುಂತಾದ ವೃತ್ತಿಯವರ ಶ್ರಮಿಕ ವರ್ಗಗಳ ಚಿತ್ರಣಗಳಾಗಿ ಉಲ್ಲೇಖಿಸಲಾಗಿದೆ (ಕಲಬುರ್ಗಿ ಎಂ.ಎಂ. ೧೯೯೯, ಪು. ೨೬೪-೨೬೫). ಕುಮ್ಮಟ ನಾಯಕರ ಕಾಲದ ಸಾಮಾಜಿಕ ಜೀವನದಲ್ಲಿ ಸೆಟ್ಟಿಗಳ ಪಾತ್ರ ಮಹತ್ವವಿದ್ದಂತೆ ತೋರುತ್ತದೆ. ಕುಮಾರರಾಮನಾಥನ ವಿವಾಹ ಸಂದರ್ಭದಲ್ಲಿ ಮಹಾನಾಡ ಸೆಟ್ಟಿಗಳು ಪಟ್ಟಣಸ್ವಾಮಿಗಳು ವೈಶ್ಯರು ಉಡುಗೊರೆಯನ್ನು ನೀಡಿದರೆಂಬ ವಿಷಯ ಕುಮಾರ ರಾಮನಾಥ ಚರಿತದಲ್ಲಿ ಉಲ್ಲೇಖವಿದೆ (ಕಲಬುರ್ಗಿಎಂ.ಎಂ. ೨೦೦೧, ಪು.೭೫-೮೨) .

ಸೆಟ್ಟಿ, ಮಹಾನಾಡ ಸೆಟ್ಟಿಗಳ ಉಲ್ಲೇಖ ಶಾಸನಗಳಲ್ಲೂ ವ್ಯಕ್ತವಾಗಿದೆ. ಉದಾಹರಣೆಗಾಗಿ ಕ್ರಿ.ಶ.೧೨೮೯ರ ಶಾಸನವೊಂದು ಕೊಟ್ಟೂರು ನಾಡಿನ ಸೆಟ್ಟಿಗಳು ಕಲಿದೇವರಿಗೆ ಬಿಟ್ಟ ಧರ್ಮದ ಕುರಿತಾಗಿದೆ (EC XI, Jagalur, No.30). ಕ್ರಿ.ಶ.೧೨೭೫ರ ಶಾಸನ ಸೆಟ್ಟಿಗಳ ಪಟ್ಟಿಯನ್ನು ಒಳಗೊಂಡಿದೆ (SII IX , Pt. I, No.346). ಬ್ರಾಹ್ಮಣ ವರ್ಗ, ಸೆಟ್ಟಿಗಳು ಶ್ರಮಿಕ ವರ್ಗದಂತೆ ಜೈನರು ಕುಮ್ಮಟ ದುರ್ಗದಲ್ಲಿದ್ದ ಉಲ್ಲೇಖಗಳಿವೆ. ಇಲ್ಲಿನ ಸಮೀಪದ ಕೊಪ್ಪಳ ಜೈನ ಕೇಂದ್ರವಾಗಿದ್ದುದರಿಂದ ಅಲ್ಲಿನ ಪ್ರಭಾವ ಈ ಪ್ರದೇಶದ ಮೇಲೆ ಬಿದ್ದಿರಲು ಸಾಕು. ಕುಮ್ಮಟದುರ್ಗದಲ್ಲಿನ ಪಂಚಪರಮೇಷ್ಠಿಗಳ ಬಸದಿ ಇಲ್ಲಿ ಜೈನರಿದ್ದರೆಂಬುದನ್ನು ಪುಷ್ಟಿಯನ್ನೊದಗಿಸಿದೆ.

ಒಟ್ಟಿನಲ್ಲಿ ವರ್ಗ, ವರ್ಣ ಅಥವಾ ಜಾತಿಗಳ ಸ್ಥಿತಿಗತಿಯನ್ನು ನೋಡಿದರೆ ಒಟ್ಟಾರೆ ಕಾಣುವ ಅಂಶ ಅವರಲ್ಲಿರುವ ಒಗ್ಗಟ್ಟು ಅಥವಾ ಇನ್ನೊಂದು ಸಂಘಟನೆ ಭಾರತದಲ್ಲಿನ ಧರ್ಮದ ಕಟ್ಟುಪಾಡುಗಳಿಗಿಂತಲೂ ಬಿಗಿಯಾಗಿದವು. ಜಾತಿಯ ನಿಯಮಗಳನ್ನು ಪರಿಪಾಲಿಸದಿದ್ದಲ್ಲಿ ಆ ಸಮಾಜದ ಔದಾಸೀನ್ಯದ ಫಲಗಳನ್ನು ನಾವು ಇಂದಿಗೂ ಕಾಣುತ್ತೇವೆ. ಹೀಗಾಗಿ ಜಾತಿ ಅಥವಾ ಸಮಾಜದ ಭಯ ಒಟ್ಟಾರೆ ಜಾತಿಗಳು ದೊಡ್ಡ ಸಮಾಜದಲ್ಲಿ ಇದ್ದರೂ ಸ್ಪಷ್ಟವಾದ ಗೆರೆಗಳಿಂದ ಪ್ರತ್ಯೇಕಗೊಂಡ ಚಿಕ್ಕ ಸಾಮಾಜಿಕ ಪ್ರಪಂಚಗಳು (Gokale B.G., P.5).

ಸಮಾಜದಲ್ಲಿ ಸ್ತ್ರೀಯರಿಗಿದ್ದ ಸ್ಥಾನ

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಅತ್ಯಂತ ಪವಿತ್ರ ಸ್ಥಾನವನ್ನು ನೀಡಲಾಗಿದ್ದರೂ ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಎಲ್ಲಾ ಕಾಲದಲ್ಲಿಯೂ ಒಂದೇ ತೆರನಾಗಿಲ್ಲ. ಉದಾಹರಣೆಗಾಗಿ ವೇದಕಾಲದಲ್ಲಿ ಕಡಿಮೆಯಾಯಿತು (ಚಿದಾನಂದ ಮೂರ್ತಿ, ೧೯೭೯, ಪು. ೪೦೭). ಎಲ್ಲಿ ಸ್ತ್ರೀ ಗೌರವಿಸಲ್ಪಡುವಳೋ ಆ ಸ್ಥಳ ಸಕಲ ಸಂಪತ್ತಿನಿಂದ ಕೂಡಿರುವುದೆಂದು ವಾಡಿಕೆ ಇಂದಿಗೂ ಇದೆ. ಸ್ತ್ರೀಯನ್ನು ಜನನಿ ಎಂದು ಕರೆಯಲಾಗಿದೆ (Altekar A.S., 1956, P.3-4).

ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸೀಮಿತವಾಗಿರಿಸಿಕೊಂಡು ಇಲ್ಲಿನ ಸ್ತ್ರೀ ಸ್ಥಿತಿಗತಿಗಳ ಪ್ರಸ್ತಾವನೆಯನ್ನು ಮಾಡಲಾಗಿದೆ. ಕುಮ್ಮಟ ನಾಯಕರ ಕಾಲದಲ್ಲಿ ಸ್ತ್ರೀಗೆ ಗೌರವ ಸ್ಥಾನ ಇತ್ತೆಂಬುದು ಸಾಹಿತ್ಯಿಕ ಗ್ರಂಥಗಳಲ್ಲಿ ಹಾಗೂ ಶಾಸನಗಳಲ್ಲಿ ಉಕ್ತವಾಗಿದೆ. ನಂಜುಂಡ ಕವಿ ರಚಿಸಿದ ರಾಮನಾಥ ಚರಿತದ ಪರನಾರಿ ಸೋದರ, ಪರದಾರ ಸೋದರ, ರಾಮನ ಪದ ಕೃತಿ ಎಂದು ಉಲ್ಲೇಖಿಸಲಾಗಿದೆ. ಆನೆಗೊಂದಿಯ ತಾಮ್ರಶಾಸನ ಪರನಾರಿ ದೂರರುಂ ದೊಸೋಪಹಾರಿ ಎಂದು ಉಲ್ಲೇಖಿಸಿದೆ (VPR, 1987-88, P.22). ಹೇಮಕೂಟ ಪರ್ವತದಲ್ಲಿನ ಶಾಸನವೊಂದು ಕಂಪಿಲರಾಯನ ಕಾಲಕ್ಕೆ ಸೇರಿದೆ (VPR,1983-84, No-1, P.21). ಈ ಶಾಸನದಲ್ಲಿ ತಾಯಿ ತಂದೆಯ ಹೆಸರಿನಲ್ಲಿ ಶಿವಾಲಯವನ್ನು ಕಟ್ಟಿಸಿದ ಮಾಹಿತಿ ಇದೆ. ತಾಯಿ ಮಾರಾನಾಯಿಕಿತಿ ತಂದೆ ಸಿಂಗೆಯ ನಾಯಕ ಮತ್ತು ಪೆರುಮೆಯ ನಾಯಕರ ಹೆಸರಿನಲ್ಲಿ ಕಟ್ಟಿಸಿದ ಶಿವಾಲಯ ಎಂದಿದೆ (VPR, 1983-84, N0-1, P.21). ಸ್ತ್ರೀ ಪೂಜ್ಯನೀಯಳು ಇದು ಕುಮ್ಮಟದ ನಾಯಕರ ಕಾಲದಲ್ಲೇನು ಹೊರತಾಗಿಲ್ಲ. ಬೈಚಯ ದಂಡನಾಯಕನ ತಾಯಿಯನ್ನು ಸೀತೆ ಮತ್ತು ಅರುಂದತಿಯಂತಹ ಗುಣವುಳ್ಳ ಸ್ತ್ರೀಯೆಂದು ಹೊಗಳಲಾಗಿದೆ (EC XI, Molakalmuru, No.20). ರಾಮನಾಥನನ್ನು ವೀರಗುಜ್ಜಲ ಹರಿಹರ ದೇವಿಯರ ಮಗನೆಂದು ಹೆಸರಿಸಿ ತಾಯ್ತನದ ಮಟ್ಟವನ್ನು ಉನ್ನತಗೊಳಿಸಲಾಗಿದೆ (VPR, 1988-91, P.24). ಕುಮಾರ ರಾಮನಾಥ ಮತ್ತು ಪತ್ನಿ ಚಲುವೆ ನಾಯಿಕಿತಿಯ ಹೆಸರಿನಲ್ಲಿ ಅವರ ಮಗನಾದ ಗೋಪಿನಾಯಕನು ಪೆನುಗೊಂಡೆ ಕೋಟೆಯ ತೀರ್ಥವನ್ನು ಮಾಡಿಸಿ ಆ ತೀರ್ಥಕ್ಕೆ ರಾಮತೀರ್ಥವೆಂದು ಹೆಸರಿಸಿದೆ. ತಾಯಿಯ ಹೆಸರಿನಲ್ಲಿ ತೀರ್ಥವನ್ನು ಹೆಸರಿಸಿರುವುದು ಸ್ತ್ರೀಯೊಬ್ಬಳ ಉನ್ನತ ಸ್ಥಾನವನ್ನು ಹೆಚ್ಚಿಸಿದಂತಾಗಿದೆ (SII VII, No.525). ಕೋನೇರಿ ನಾಯಕನ ಮಗಳು ಗೋಪಾಯಿ ರಾಮನಾಥ ದೇವರ ಗುಡಿಯನ್ನು ಕಟ್ಟಿಸಿರುವುದು ಹೆಣ್ಣೊಬ್ಬಳ ಸಾಧನೆ (ಕವಿಶಾಸಂ-೨ ಕೊಪ್ಪಳ ಜಿಲ್ಲೆ, ಕೊಪ್ಪಳ ನಂ. ೧೬೭, ಪು. ೧೫೯). ಸ್ತ್ರೀಯೊಬ್ಬಳು ರಾಮನಾಥನ ಹೆಸರಿನಲ್ಲಿ ಗುಡಿಯನ್ನು ಕಟ್ಟಿಸಿದ ಉದ್ದೇಶ ನೂರಾರು ವೀರರಿಗೆ ಸ್ವರ್ಗವಾಗಬೇಕೆಂದು ತನ್ನ ದೇಶದ ಮತ್ತು ತಾಯ್ನೆಲದ ಅಭಿಮಾನ ಸ್ತ್ರೀಯರಿಗಿದ್ದ ಉನ್ನತ ಸ್ಥಾನವನ್ನು ತೋರಿಸುತ್ತದೆ. ಕ್ರಿ.ಶ. ೧೩೩೨ರ ಶಾಸನವೊಂದು ಕಂಪಿಲ ರಾಯನು ಜೊಮ್ಮರಳ ದೊಡಿಯಮ್ಮ ಮುರ್ರಪ್ಪೆ ಎಂಬುವಳಿಗೆ ಮಾನ್ಯವನ್ನು ಕೊಟ್ಟಿದ್ದನ್ನು ಹೆಸರಿಸುತ್ತದೆ. ಅಲ್ಲಿ ಕಂಪಿಲನನ್ನು ಕುಮ್ಮಟ ಭೂದೇವನೆಂದು ಕರೆಯಲಾಗಿದೆ(EC VII, Maddur, No.132). ಮದ್ದೂರಿನ ಶಾಸನ (EC VII, Maddur, No.308-309)ಬಾಚಪ್ಪನು ತನ್ನ ತಾಯಿಯ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸಿ, ತೆಂಗಿನ ಮರಗಳನ್ನು ನೆಡಿಸಿ, ಅರಳಿ ಮರಗಳಿಗೂ, ಮುಂಜಿಯನ್ನು ಮಾಡಿಸಿದನೆಂದಿದೆ.

ವೀರನೊಬ್ಬನು ಯುದ್ಧದಲ್ಲಿ ಮಡಿದು ವೀರಸ್ವರ್ಗಸ್ಥನಾದಾಗ ಅವನ ಪತ್ನಿಯೂ ಸಹ ಆತನ ವೀರತ್ವವನ್ನು ಸಾರುವ ಉದ್ದೇಶದಿಂದ ವೀರಗಲ್ಲನ್ನು ನಿಲ್ಲಿಸಿ ತನ್ನ ಪತಿಯ ಹೆಸರನ್ನು ನಾಡಿಗೆ ತಿಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದನ್ನು ಅನೇಕ ಶಾಸನಗಳಲ್ಲಿ ಕಾಣುತ್ತೇವೆ. ಇದಕ್ಕೆ ಪೂರಕವಾಗಿ ಕ್ರಿ.ಶ. ೧೩೧೦ರ ಶಾಸನವೊಂದು ಪುಷ್ಟಿಯನ್ನು ನೀಡುತ್ತದೆ. ಹೊಯ್ಸಳರ ದಂಡನಾಯಕನಾದ ಕುರುಕ ನಾಯಕ, ಕಂಪಿಲನರಾಯನ ದೊರವದಿಯ ಮೇಲೆ ಯುದ್ಧವನ್ನು ಮಾಡಿ ಮಡಿಯುತ್ತಾನೆ. ಮಡಿದು ವೀರಸ್ವರ್ಗ ಸೇರಿದಾಗ ಕುರುಕ ನಾಯಕನ ಸತಿ ಚಂದವ್ವೆ ನಾಯಿಕಿತಿ ನಿಲ್ಲಿಸಿದ ಶಾಸನವೆಂದಿದೆ (EX VIII. Nagara. No.19).

ಕ್ರಿ.ಶ. ೧೩೦೬ ಮತ್ತು ೧೩೧೭ರಲ್ಲಿ ದೆಹಲಿ ಸುಲ್ತಾನರು ಕುಮ್ಮಟದ ಮೇಲೆ ಯುದ್ಧವನ್ನು ಮಾಡಿದಾಗ ರಾಮನಾಯಕನ ಅಕ್ಕನೇ ಈ ಸ್ಮಾರಕಶಿಲೆ ನಿಲ್ಲಿಸಿದಳು. ಈ ವೀರಗಲ್ಲು ಒಂದು ವೈಶಿಷ್ಟ್ಯಪೂರ್ಣ ಪ್ರಾಮುಖ್ಯತೆಯನ್ನು ಪಡೆದಿದೆ (VPR. 1987-88. P.212). ಒಟ್ಟಾರೆ ಸ್ತ್ರೀಯ ಸ್ಥಾನ ಕುಮ್ಮಟ ನಾಯಕರ ಕಾಲದಲ್ಲಿ ಗೌರವ ಸ್ಥಾನದಲ್ಲಿತ್ತೆಂದು ಸಾಹಿತ್ಯಿಕ ಹಾಗೂ ಪುರಾತತ್ವ ಆಕರಗಳು ನಿರೂಪಿಸಿವೆ.

ಸಹಗಮನ ಪದ್ಧತಿ

ಪ್ರಾಚೀನ ಕಾಲದಲ್ಲಿ ಜನತೆಗೆ ಈ ಲೋಕದಂತಹ ಇನ್ನೊಂದು ಲೋಕವಿದೆ ಎಂಬ ನಂಬಿಕೆ ಬೇರೂರಿತ್ತು. ವ್ಯಕ್ತಿ ಮಡಿದಾಗ ಅವನಿಗೆ ಇಷ್ಟವಿದ್ದ ವಸ್ತುಗಳನ್ನು ಆತನು ಪರಲೋಕಕ್ಕೆ ಹೋಗಲು ಅವನ ಜೊತೆ ಇಡುತ್ತಿದ್ದರು. ಬಹುಶಃ ಸಹಗಮನ ಪದ್ಧತಿಗೆ ಇದು ಮೂಲ ಕಾರಣವಿರಬಹುದು (Altekar A.S.,1956, PP.115-16). ಪತಿಯ ಜೊತೆಯಲ್ಲಿ ಆತನ ಪತ್ನಿಯನ್ನು ಸುಡುವ ಪದ್ಧತಿ ಭಾರತದಲ್ಲಷ್ಟೆಯಲ್ಲದೆ ಗ್ರೀಕ್, ಜರ್ಮನಿ, ಯುರೋಪ್, ಏಷ್ಯಾ ಜನಾಂಗಗಳಲ್ಲಿಯೂ ಇತ್ತು (Kane P.V., History of Dharma Sastras, Vol.II, P. 625).

ಆದರೆ ವೈದಿಕ ಹಂತದಿಂದ ನೋಡಿದಾಗ ಆ ಯುಗದಲ್ಲಿ ಸಹಗಮನ ಪದ್ಧತಿ ಇರಲಿಲ್ಲ. ಬ್ರಾಹ್ಮಣಕಗಳಲ್ಲಿಯೂ, ಗೃಹ್ಯ ಸೂತ್ರಗಳಲ್ಲಿಯೂ ಸಹಗಮನವನ್ನು ಹೆಸರಿಸಿಲ್ಲ(Altekar. A..S. 1956. P.118). ಮಹಾಭಾರತದಲ್ಲಿ ಸಹಗಮನ ಪದ್ಧತಿ ಕಾಣಿಸಿಕೊಂಡಿದ್ದರೂ ಮಾದರಿಯ ಸಹಗಮನ ಮಾಡದೇ ಹಾಗೇ ಉಳಿಯುತ್ತಾಳೆ (ಚಿದಾನಂದಾ ಮೂರ್ತಿ. ೧೯೭೯. ಪು.೩೧೪). ಉತ್ತರ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಈ ಪದ್ಧತಿ ಕಾಶ್ಮೀರದಲ್ಲಿ ಪ್ರಚಲಿತವಾಗಿತ್ತೆಂಬುದು ಕಲ್ಹಣನ ರಾಜ ತರಂಗಿಣಿ ಉಲ್ಲೇಖಿಸುತ್ತದೆ. ದಕ್ಷಿಣ ಭಾರತದಲ್ಲಿ ಸಹಗಮನ ಪದ್ಧತಿ ಹೆಚ್ಚು ಪ್ರಚಾರದಲ್ಲಿರಲಿಲ್ಲ. ಚಿತೆಯನ್ನು ಏರುವುದು, ಬಿಡುವುದು ಅವರಿಷ್ಟದ್ದಾಗಿತ್ತು (Altekar A.S., 1956. P.128). ಕರ್ನಾಟಕದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಚೀನ ಉಲ್ಲೇಖ ದೊರಕುವುದು ಕ್ರಿ.ಶ. ೪೦೦ರ ಸೊರಬ ತಾಲ್ಲೂಕಿನ ಶಾಸನದಲ್ಲಿ ಕದಂಬ ವಂಶದ ರಾಣಿಯೊಬ್ಬಳು ಮುಕ್ತಳಾದಂತೆ ಆ ಶಾಸನವು ತಿಳಿಸುತ್ತದೆ (EC VII. Soraba. No.524). ಪ್ರಸ್ತುತ ಅಧ್ಯಯನವನ್ನು ಕುಮ್ಮಟ ನಾಯಕರ

ಕಾಲಕ್ಕೆ ಸೀಮಿತವಾಗಿರಿಸಿಕೊಂಡು ಕುಮ್ಮಟನಾಯಕರ ಕಾಲಾವಧಿಯಲ್ಲಿ ರೂಢಿಯಲ್ಲಿದ್ದ ಸಹಗಮನ ಪದ್ಧತಿಯ ಕೆಲವು ಅಂಶಗಳನ್ನು ಇಲ್ಲಿ ಪ್ರಸ್ತಾವನೆಯನ್ನು ಮಾಡಲಾಗಿದೆ.

ಪತಿಯ ಜೊತೆಯಲ್ಲಿ ಪತ್ನಿಯರು ಸಹಗಮನ ಮಾಡುವ ಪ್ರಸಂಗ ಸಾಹಿತ್ಯಿಕ ಗ್ರಂಥವಾದ ರಾಮನಾಥ ಚರಿತದಲ್ಲಿ ಪ್ರಸ್ತಾಪವಿದೆ (ದೇವೀರಪ್ಪ ಹೆಚ್. ೧೯೫೫, ಪು. ೬೦). ಇಲ್ಲಿ ಕಂಪಿಲರಾಯನು ಕುಮ್ಮಟದ ಯುದ್ಧಕ್ಕೆ ಹೊರಡುವ ಮುನ್ನ ಕಂಪಿಲರಾಯನೇ ರಾಣಿ ಪರಿವಾರದವರನ್ನು ಅಗ್ನಿಗರ್ಪಿಸಿ ವೀರಾವೇಶದಿಂದ ಹೋರಾಡಿದನೆಂದಿದೆ. ರಾಮನಾಥನು ದೇವಾಗಾರಕ್ಕೆ ತೆರಳಿ ಶಿವಲಿಂಗವನ್ನು ಪೂಜಿಸಿದನು. ಪತಿದೇವನ ಮರಣವಾರ್ತೆಯನ್ನು ಕಿವಿಯಿಂದ ಕೇಳುವ ಪೂರ್ವದಲ್ಲಿ ಮಹಾಸತಿಯರು ಜೈ ಶಂಕರ, ಜೈ ರಣಧೀರ ರಾಮನಾಥ ಎನ್ನುತ್ತ ಅಗ್ನಿ ಪ್ರವೇಶ ಮಾಡಿದರು (ವರದರಾಜರಾವ್, ೧೯೬೩, ಪು. ೧೪೦). ಸಹಗಮನ ಪದ್ಧತಿಯ ಕುರಿತು ಹೊಸ ಕುಮಾರ ರಾಮನ ಸಾಂಗತ್ಯದಲ್ಲೂ ಪದ್ಯಗಳಲ್ಲಿ ಮೂಡಿಬಂದಿದೆ. ಸತಿ ಹೋಗುವ ಸಂದರ್ಭದಲ್ಲಿ ಅಲಂಕಾರವನ್ನು ಮಾಡಿಕೊಂಡು ರತ್ನ ಖಚಿತ ಆಭರಣಗಳನ್ನು ನವವಧುವಿನಂತೆ, ವಸ್ತ್ರಾಭರಣವನ್ನು ಧರಿಸಿ. ತಲೆಯಲ್ಲಿ ಕೇದಿಗೆಯನ್ನು ಮುಡಿದು, ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು, ಸುಗಂಧ ದ್ರವ್ಯಗಳನ್ನು ಮೈಗೆ ಲೇಪಿಸಿಕೊಂಡು ಕಂಪಿಲ ರಾಯನಲ್ಲಿ ಮೊರೆಯಿಟ್ಟು ಪತಿರಾಮನಾಥನನ್ನು ಹಿಂಬಾಲಿಸುವೆವು ಎಂಬ ಕಾವ್ಯ, ಹೊಸ ಕುಮಾರರಾಮನ ಸಾಂಗತ್ಯದಲ್ಲಿ ಮನಮುಟ್ಟುವಂತೆ ಕಾವ್ಯವನ್ನು ಕಟ್ಟಲಾಗಿದೆ (ಕಲಬುರ್ಗಿ ಎಂ.ಎಂ. ವೀರಣ್ಣ ರಾಜೂರು, ೧೯೯೯, ಪು. ೨೪೦-೫೦).

ಆನೆಗೊಂದಿಯ ಶಾಸನವೊಂದು (VPR, 1984-87, P. 176) ಸಹಗಮನ ಪದ್ಧತಿಯ ಕುರಿತು ಉಲ್ಲೇಖಿಸುತ್ತದೆ. ವೀರ ತಿಂಮಾಯಿ ಎಂಬುವಳು ತನ್ನ ಪತಿ ಯುದ್ಧದಲ್ಲಿ ಮಡಿದುದರಿಂದ ಬೆಂಕಿಯಲ್ಲಿ ಹಾರಿದಳೆಂದಿದೆ. ಮೊಳಕಾಲ್ಮುರಿನ ಶಾಸನ (EC XI, Molakalmuru, No.12) ಸ್ತ್ರೀಯರು ಪ್ರಾಣವನ್ನು ಸಿಡಿತಲೆಯ ರೂಪದಲ್ಲಿ ನೀಡುತ್ತಿದ್ದುದನ್ನು ಉಲ್ಲೇಖಿಸಿದೆ. ಯುದ್ಧದಲ್ಲಿ ರಾಜನು ಸೋತಾಗ, ತಮ್ಮ ತಾಯ್ನೆಲ ಪರಾಧೀನವಾದಾಗ ಪರರಾಜರ ಒಡೆತನವನ್ನು ಒಪ್ಪಿಕೊಳ್ಳದೆ ತಾಯ್ನಾಡಿಗಾಗಿ ಪ್ರಾಣಾರ್ಪಣೆಗೈದ ಇಂತಹ ಪ್ರಸಂಗ ನಿಜಕ್ಕೂ ಆದರಣೀಯ. ಇಂತಹ ಸ್ತ್ರೀಯ ಕೆಚ್ಚೆದೆಯನ್ನು ಪುಷ್ಟೀಕರಿಸಲು ಶಾಸನಗಳು ಮಹದುಪಕಾರವನ್ನು ಮಾಡಿವೆ. ಕಂಪಿಲರಾಯನ ರಾಣಿ ರತ್ನಾಜಿಯ ಚಾಡಿ ಮಾತಿಗೆ ಒಳಪಟ್ಟು ಕುಮಾರರಾಮನಿಗೆ ಮರಣ ದಂಡನೆ ವಿಧಿಸಿದರು. ಇದರಿಂದ ರಾಮನಾಥನ ಪತ್ನಿಯರು ಅಗ್ನಿಪ್ರವೇಶ ಮಾಡಲು ಕಂಪಿಲರಾಯನ ಅಪ್ಪಣೆಯನ್ನು ಕೇಳುತ್ತಾರೆ. (ಕಲಬುರ್ಗಿ ಎಂ.ಎಂ. ೧೯೯೯, ಪು. ೨೪೩-೨೫೦) ಸುಲ್ತಾನರು ಕುಮ್ಮಟಕ್ಕೆ ಮುತ್ತಿಗೆ ಹಾಕಿದಾಗ, ಸುಲ್ತಾನರ ಕೈ ಮೇಲಾಗುವ ವೇಳೆಯಲ್ಲಿ, ರಾಮನಾಥನು ತನ್ನ ಪತ್ನಿಯರನ್ನು ಭೇಟಿ ಮಾಡಿ, ನಿನ್ನ ನನ್ನ ಋಣಾನುಬಂಧ ತೀರಿತು. ನೀನು ಉತ್ತಮಳು ದೇಹವನ್ನು ಮತ್ತೊಬ್ಬರಿಗೆ ತೋರಿಸಬೇಡವೆನ್ನುತ್ತಾನೆ. ಇದಕ್ಕೆ ಪ್ರತಿಯಾಗಿ ತನ್ನ ಪತಿಯ ಪ್ರಾಣವಿರುವವರೆಗೂ ಜೀವಂತವಾಗಿದ್ದು ನಂತರ ಪ್ರಾಣತ್ಯಾಗ ಮಾಡುವೆನೆಂದು ರಾಮನಾಥನ ಪತ್ನಿಯೇ ಹೇಳುವ ಈ ಮಾತುಗಳು ಸಹಗಮನ ಪದ್ಧತಿಯನ್ನು ಪುಷ್ಟೀಕರಿಸುತ್ತದೆ. ಒಟ್ಟಾರೆ ಕುಮ್ಮಟದ ನಾಯಕರ ಕಾಲದಲ್ಲಿ ಅದರಲ್ಲೂ ಹೆಚ್ಚಾಗಿ ಕರ್ನಾಟಕದಲ್ಲಿ ಅಂದಿನ ಸಹಗಮನದ ಈ ಪದ್ಧತಿ ಒಂದು ಐತಿಹಾಸಿಕ ನಿದರ್ಶನ. ಒಡೆಯನಿಗಾಗಿ ಪ್ರಾಣತ್ಯಾಗ ಮಾಡುವುದು ಅಥವಾ ಪತಿಗಾಗಿ

ಪ್ರಾಣತ್ಯಾಗ ಮಾಡುವುದು ಕೃತಜ್ಞತೆಯ ಅಥವಾ ಭಕ್ತಿಯನ್ನು, ಅಂದಿನ ಪರಂಪರೆಯನ್ನು ಸೂಚಿಸುತ್ತದೆ. ಅದು ಇಂದು ಅರ್ಥಹೀನವಾಗಿರುವುದು, ಆಧುನಿಕ ಯುಗದಲ್ಲಿ ಈ ಸಂಪ್ರದಾಯವನ್ನು ಕೈ ಬಿಟ್ಟಿದೆ.

ದೇವದಾಸಿ ಪದ್ಧತಿ

ದೇವದಾಸಿಯರು ಅಂದರೆ ದೇವರ ದಾಸಿಯರು, ದೇವರ ಸೇವೆಗೆ ಮೀಸಲಾದವರು ಎಂದರ್ಥ. ಮೊದಲು ಈ ಸಂಪ್ರದಾಯ ದೇವದಾಸಿಯರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಪುಣ್ಯಕಾರಿ ಎಂಬುದು ವಾಡಿಕೆ (Encyclopeadia of Social Sciences. Vol-12. P. 533). ಕರ್ನಾಟಕದಲ್ಲಿ ಇಂದಿಗೂ ಈ ಸಂಪ್ರಾದಾಯ ಉಳಿದುಕೊಂಡು ಬಂದಿದೆ. ಕುಮ್ಮಟದ ನಾಯಕರ ಕಾಲದ ಕುಮಾರ ರಾಮನ ಸಾಂಗತ್ಯದಲ್ಲಿ ಕೆಲವೊಂದು ಅಧ್ಯಾಯಗಳಲ್ಲಿ ವೇಶ್ಯೆ ಅಥವಾ ಸೂಳೆ ಎಂಬ ಪದ ಪ್ರಯೋಗವ ಉಲ್ಲೇಖವಿದೆ. ಕುಮಾರ ರಾಮನಾಥನು ವಿಹಾರಾರ್ಥವಾಗಿ ಒಂದು ರಾತ್ರಿ ಸೂಳೆಯ ಕೇರಿಯಲ್ಲಿ ಸುತ್ತಾಡಿ ಬರುವ ಪ್ರಸಂಗವಿದೆ. ಇದರಿಂದ ದೇವದಾಸಿಯರಿಗಾಗಿ ಪ್ರತ್ಯೇಕ ವಾಸಸ್ಥಳಗಳಿದ್ದವೆಂಬುದು ಸ್ಪಷ್ಟವಾಗುತ್ತದೆ (ವರದರಾಜರಾವ್, ೧೯೬೩ ಪು. ೧೩). ಹೊಸಕುಮಾರ ರಾಮನ ಸಾಂಗತ್ಯದಲ್ಲಿ "ಎಸೆವ ಸೂಳೆಯ ಕೇರಿ ಹೊಸ ಪರಿ ಸಂಭ್ರಮ ಮಿಸುನಿಗೆಲ್ಲ ಸದುಪ್ಪರಿಗೆ ಬಿಸಜ ಗಂಧಿನಿಯರು ಒಪ್ಪುತಿಹರು ಅಲ್ಲಿ ಕುಶಲವಿಟರ ಕೂಡಿ ಕೊಳ್ಳುತ" (ಕಲಬುರ್ಗಿ ಎಂ.ಎಂ., ೧೯೯೯, ಪು.೬೯) "ಸೂಳೆ" ಎಂಬ ಶಬ್ದದ ಅರ್ಥ ಸೇವಾ ಕಾರ್ಯಗಳನ್ನು ಮಾಡುವವಳೆಂದು ಸೂಚಿಸುತ್ತದೆ. ದೇವದಾಸಿಯರು ದೇವರ ಸೇವೆಗೆ ಮೀಸಲಾದವರು. ದೇವದಾಸಿಯರು ದೇವಸ್ಥಾನದ ಅಕ್ಕ-ಪಕ್ಕದಲ್ಲಿ ವಾಸಿಸುತ್ತಿದ್ದರೆಂದು ಶಾಸನವೊಂದು (EI Vol-XV. P. 87) ತಿಳಿಸುತ್ತದೆ. ಸೂಳೆ ಎಂಬ ಶಬ್ದದ ಅರ್ಥವು ವೇಶ್ಯೆ ಎಂಬ ಅರ್ಥದಲ್ಲೂ ಬಳಸಲ್ಪಡುತ್ತದೆ. ಕ್ರಿ.ಶ.೧೦೫೫ರ ಶಾಸನವೊಂದು ದೇವಾಲಯದಲ್ಲಿ ಪ್ರತಿದಿನ ಪೂಜೆಯ ವೇಳೆಗೆ "ಓಲಗದ ಸೂಳೆಯರ್‌ರುವಗಳ್ ಮತ್ತಾರೆಪ್ಪತ್ತನಾಲ್ಕು" ಎಂದು ಬಳಸಲಾಗಿದೆ. (EI XIII. No. 14) ಸೂಳೆ ಎಂಬ ಪದ ಸೂಳ್ ಎಂಬ ಪದದಿಂದ ಬಂದಿದೆ. ಕೆಲವು ಶಾಸನಗಳಲ್ಲಿ ಸೂಳೆವೆಣ್ ಎಂದಿದೆ. ಸೂಳೆಯರಿಗೆ ದಾನ ಕೊಟ್ಟಂತೆ ಉಲ್ಲೇಖಿತವಾಗಿದೆ. (SII IX. No. 101) ಶಾಸನಗಳಲ್ಲಿ "ಕಂಬದ ಸೂಳೆಯರು" ಎಂಬ ಶಬ್ದವಿದೆ (EI XV. P. 82). ಸಭಾ ಮಂಟಪದಲ್ಲಿನ ಬೇರೆ ಬೇರೆ ಕಂಬಗಳ ಹತ್ತಿರ ನಿಂತು ಸೇವೆ ಸಲ್ಲಿಸುತ್ತಿದ್ದ "ಕಂಬದ ಸೂಳೆಯರ್" ಎಂಬ ಹೆಸರು ಬಂದಿರಬಹುದು. ದೇವದಾಸಿಯರೆಲ್ಲರೂ ವೇಶ್ಯೆಯರೇ. ವೇಶ್ಯೆಯರೆಲ್ಲರೂ ದೇವದಾಸಿಯರಲ್ಲ, ದೇವಾಲಯದ ದತ್ತಿಗಳಲ್ಲಿ ಸೂಳೆ ಎಂಬ ಶಬ್ದ ಬಂದಾಗ ಅದು ದೇವದಾಸಿಯರನ್ನು ಸೂಚಿಸುತ್ತದೆ. ಬೇರೆ ಕಡೆ ಈ ಶಬ್ದ ಬಳಸಲ್ಪಟ್ಟರೆ ಅದು ವೇಶ್ಯೆ ಎಂದು ಸೂಚಿಸುತ್ತದೆ. ಶಾಸನಗಳಲ್ಲಿ ಈ ಕುರಿತಂತೆ ಪುಟಗಳನ್ನು ತಿರುವಿ ನೋಡಿದರೆ ದೇವದಾಸಿಯರ ವಿಷಯದಲ್ಲೂ ವೇಶ್ಯೆಯರ ಗೌರವ ಭಾವನೆಯೂ ಇದೆ (ಚಿದಾನಂದ ಮೂರ್ತಿ ಎಂ., ೧೯೭೮, ಪು. ೧೮೭).

ಕುಮ್ಮಟ ನಾಯಕರ ಇತಿಹಾಸಕ್ಕೆ ಸಂಬಂಧಿಸಿದಂತೆ ಕುಮಾರರಾಮನ ಸಾಂಗತ್ಯದಲ್ಲಿ ವೇಶ್ಯವೃತ್ತಿ ಎಂಬ ಶಬ್ದ ಬಳಸಲ್ಪಟ್ಟಿದೆ (ವರದರಾಜರಾವ್, ೧೯೬೩ ಪ್ರಸ್ತಾವನೆ ಪು. XIII). ಹೊಸಮಲೆದುರ್ಗದಲ್ಲಿ ಸೂಳೆಯರ ಕೇರಿ ಇತ್ತು (ಕಲಬುರ್ಗಿ ಎಂ.ಎಂ.

೧೯೯೯, ಪು. ೩೯). ಕುಮಾರ ರಾಮನ ಚೆಂಡಿನಾಟ ಆಡುವ ಬಯಲಿಗೆ ಸೂಳೆಗೇರಿಯ ಸೂಳೆಯರೆಲ್ಲ ಸಿಂಗರಿಸಿಕೊಂಡು ಬಂದರು. ಸೂಳೆ ಹಂಪಾಜಿ, ಸುರತದ ಸಂಗಿ, ಉರವ ಕೊಂಡೆಯ ಸೋಮಿ, ಉದಯಗಿರಿಯ ಸಿದ್ದಿ, ಹೊಸ್ನೂರ ಪಿರೂಪಾಂಬಿ, ಓರುಗಲ್ಲಿನ ಸೂಳೆ ಎಲ್ಲಾಜಿ, ಬಂಕಾಪುರ ಎಲ್ಲಾಜಿ, ಹೊಸಪೇಟೆಯ ಹಂಪಾಜಿ, ಉಳೆಬೀಡಿ(ಹಳೆಬೀಡು)ನ ಹಂಪಾಜಿ, ಬಸವಾಜಿ, ಬೇಲೂರ ನಾಗಾಜಿ, ತೆಕ್ಕಲ ಕೋಟೆಯ ನಾಗಿ, ಆದೋನಿಯ ನಾಗಾಜಿ, ಕುಂಬಕೋಣೆ ನಾಗಾಯಿ ಈ ವೇಶ್ಯೆಯರು ತಮ್ಮ ವೃತ್ತಿಯನ್ನು ವ್ಯಾಪಾರವಾಗಿಯೂ ಮಾಡಿಕೊಂಡಿದ್ದ. ಇದರಲ್ಲಿ ಕೆಲವರು ಜೂಜಾಡುವ ವೇಶ್ಯೆಯರು ಓಡಿ ಹೊನ್ನನ್ನು ಕೊಳ್ಳುವ ಸೂಳೆಯರು ಹೊನ್ನನ್ನು ಶುಲ್ಕವಾಗಿ ತೆಗೆದುಕೊಳ್ಳುವರು. ಹೀಗೆ ತೆರ ತೆರನಾದ ಶಬ್ದಗಳು ಹೊಸ ಕುಮಾರ ರಾಮನಾಥ ಸಾಂಗತ್ಯದಲ್ಲಿವೆ (ಕಲಬುರ್ಗಿ ಎಂ.ಎಂ., ೧೯೯೯, ಪು. ೧೫೮-೬೨). ಒಟ್ಟಾರೆ ಶಾಸನಗಳು ಆಕಾರಗಳ ಜೊತೆಗೆ ಸಾಹಿತ್ಯಿಕ ಆಧಾರಗಳು ದೇವದಾಸಿಯರ, ಸೂಳೆಯರ, ವೇಶ್ಯೆಯರ ಕುರಿತು ಉಲ್ಲೇಖಿಸುತ್ತದೆ. ಶಾಸನಗಳಲ್ಲಿ `ಸೂಳೆದರೆ` ಎಂಬ ಶಬ್ದವೂ ಇದೆ (EC XI, Davanagere, No.133). ಸೂಳೆಯರೆಲ್ಲಿಯ ಕನ್ನಡಿ ವಣಮಂ, ಸೂಳೆಯರೆಲ್ಲರ ಕನ್ನಡಿ ವಣಂ ಕನ್ನಡಿ ತೆರಿಗೆ ಎಂದು ಶಾಸನಗಳಲ್ಲಿ ಉಲ್ಲೇಖಿಸುತ್ತದೆ (EC VII, Shikaripura, No. 295). ಇದರ ಅರ್ಥ ಸರಕಾರ ಸೂಳೆಯರ ಮೇಲೆ ತೆರಿಗೆಯನ್ನು ಹಾಕುತ್ತಿತ್ತು ಎಂಬುದು ಸ್ಪಷ್ಟ. ಒಟ್ಟಾರೆ ಸೂಳೆ ಅಥವಾ ವೇಶ್ಯೆ ಎಂಬ ಪದ ಅಪಮಾನಕರವೆಂದು ಜನರು ಭಾವಿಸಿರಲಿಲ್ಲ. ಶಾಸನಗಳು ಹಾಗೂ ಸಾಹಿತ್ಯಿಕ ಆಧಾರಗಳು ಹೆಚ್ಚಿನ ಮಟ್ಟಿಗೆ ಗೌರವ ಭಾವನೆಯಿಂದಲೇ ಈ ಶಬ್ದಗಳನ್ನು ಪುಷ್ಟೀಕರಿಸಿವೆ.

ಸಾಮಾಜಿಕ ಕಾರ್ಯಗಳು

ದೇವಾಲಯದ ಪ್ರಾರಂಭಿಕ ಹುಟ್ಟು ಖಚಿತವಾಗಿಲ್ಲದಿದ್ದರೂ ದೇವಾಲಯಗಳ ಬೆಳವಣಿಗೆ ದೇವಾಲಯಗಳಲ್ಲಿ ನಡೆಯುವ ಕಾರ್ಯಗಳನ್ನು ಪರಿಶೀಲಿಸಿದಲ್ಲಿ, ದೇವಾಲಯಗಳು ಇತ್ತೀಚಿಗೆ ಪೂಜಾಕಾರ್ಯಗಳೆಂದು (Altekar A.S., 1934, P. 289) ಪರಿಗಣಿತವಾದವು. ದೇವಾಲಯಗಳು ಪ್ರಾರಂಭವಾಗಲು ಜನರ ಭಕ್ತಿ ಮತ್ತು ನಿಷ್ಠೆಗಳೇ ಕಾರಣ. ದೇವರನ್ನು ಪ್ರತಿಷ್ಠಾಪಿಸುವ ಸಂಗತಿ ಹಲವು ಶಾಸನಗಳಲ್ಲಿವೆ. ಶಾಸನಗಳಲ್ಲಿ ದೇವಾಲಯವನ್ನು ಕಟ್ಟಿಸಿದವನ ಹೆಸರು ಉಲ್ಲೇಖಿತವಾಗಿರುತ್ತದೆ. ಉದಾಹರಣೆಗಾಗಿ ಲೋಕ ಮಹಾದೇವಿ ಕಟ್ಟಿಸಿದ ದೇವಸ್ಥಾನ ಲೋಕೇಶ್ವರ ದೇವಸ್ಥಾನ (EI VII, P.4) ವ್ಯಕ್ತಿಯ ಹೆಸರಿನಲ್ಲಿ ದೇವಸ್ಥಾನವನ್ನು ಕಟ್ಟಿಸುವ ಸಂಪ್ರದಾಯ ಇತ್ತೀಚಿನವರೆಗೂ ಉಳಿದುಕೊಂಡು ಬಂದಿದೆ (ಚಿದಾನಂದ ಮೂರ್ತಿ ಎಂ. ೧೯೭೯, ಪು. ೧೭೪). ದೇವಸ್ಥಾನವನ್ನು ಕಟ್ಟಿಸಿದರೆ ಸಾಲದು ಅದು ನಡೆಯುತ್ತಾ ಊರ್ಜಿತವಾಗಬೇಕಾಗುತ್ತದೆ. ಈ ಕಾರಣ ದತ್ತಿಗಳನ್ನು ಬಿಡುವ ಪದ್ಧತಿಯು ವ್ಯಕ್ತಿಗಳಿಂದ, ಗ್ರಾಮಗಳಿಂದ ನಡೆಯುತ್ತಿತ್ತು. 'ದೇವಭೋಗ' ಎಂಬ ಶಬ್ದ ದೇವಸ್ಥಾನದ ಆಸ್ತಿ (EC IX, NL No. 60). ದೇವಾಲಯಕ್ಕೆ ದತ್ತಿಯನ್ನು ಬಿಡುವ ಉದ್ದೇಶ ದೇವಸ್ಥಾನದ ಸೇವಾಕಾರ್ಯಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುವುದಕ್ಕಾಗಿ ದೇವಸ್ಥಾನದ ಹಣವು ಸರಿಯಾಗಿ ವಿನಿಯೋಗವಾಗಬೇಕು. ಕೋಶದಲ್ಲಿ ಹಣವಿದ್ದರೆ, ಸಾಲವಾಗಿ ಕೊಟ್ಟು, ಆ ಬಡ್ಡಿಯನ್ನು ಸರಿಯಾಗಿ ವಿನಿಯೋಗಿಸಬೇಕು. ವಿನಿಯೋಗವಾಗುವ ಈ ಹಣ ಸಾಮಾಜಿಕ ಕಾರ್ಯಗಳಿಗಾಗಿ ಉಪಯೋಗಿಸಲ್ಪಡಬೇಕು. ಹೀಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ದೇವಾಲಯ ಒಂದು ಸಾಮಾಜಿಕ ಸಂಸ್ಥೆಯಾಗಿ

ಮೆರೆಯುವುದೇ ಇದರ ಹಿನ್ನೆಲೆಯ ಉದ್ದೇಶ. ಈ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸೀಮಿತವಾಗಿರುವುದರಿಂದ, ಕುಮ್ಮಟನಾಯಕರ ಕಾಲದ ಸಾಮಾಜಿಕ ಕಾರ್ಯಗಳ ಸ್ಥೂಲನೋಟ ಇಲ್ಲಿದೆ.

ವಿದ್ಯೆ ಎಂಬುದು ನಿಜವಾದ ಧನ. ಇದನ್ನು ಯಾರೂ ಅಪಹರಿಸಲಾರರು. ಇದೊಂದು ಅನರ್ಘ್ಯವಾದುದು, ಅಕ್ಷಯವಾದುದು. ಪ್ರಾಚೀನ ಭಾರತದ ಅದರಲ್ಲೂ ಹೆಚ್ಚಾಗಿ ಕರ್ನಾಟಕದ ಸಾಮಾಜಿಕ ರಚನೆಯನ್ನು ತುಲನಾತ್ಮಕ ಅಧ್ಯಯನ ಮಾಡಿ ನೋಡಿದಲ್ಲಿ ಇದು ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಆತನ ವಿಕಾಸದ ಗುರಿಯನ್ನು ಮುಖ್ಯವಾಗಿಟ್ಟುಕೊಂಡಂತೆ ಕಾಣುತ್ತದೆ. ವಿದ್ಯಾಭ್ಯಾಸದ ಗುರಿ ವಿಕಾಸವಾದುದರಿಂದ ವಿದ್ಯಾಭ್ಯಾಸ ಪದ್ಧತಿಯೂ ಅದನ್ನು ಹೊಂದಿಕೊಂಡಂತೆ ಕಾಣಸುತ್ತದೆ (ಚಿದಾನಂದ ಮೂರ್ತಿ ಎಂ., ೧೯೭೯, ಪು. ೨೦೬). ಪ್ರಾರಂಭಿಕ ಹಂತದಲ್ಲಿ ವಿದ್ಯಾಸಂಸ್ಥೆಗಳೆಂದು ಕರೆಯಿಸಿಕೊಳ್ಳುವ ಕೇಂದ್ರಗಳಿದ್ದಿಲ್ಲ. ವಿದ್ಯಾರ್ಥಿ ಯಾವ ಸಂಸ್ಥೆಗೂ ಸೇರಿದವನಲ್ಲ, ಉಪಾಧ್ಯಾಯನಿಗೆ ಸೇರಿದವನು. ಇದರಿಂದ ಒಬ್ಬೊಬ್ಬ ವಿದ್ಯಾರ್ಥಿಯ ಶೀಲಾದಿಗಳಿಗೂ ಗಮನವೀಯಲು ಸಾಧ್ಯವಾಯಿತು. ಶಾಸನಗಳ ಅಧ್ಯಯನವನ್ನು ಮಾಡಿ ನೋಡಿದಲ್ಲಿ ಕರ್ನಾಟಕವಲ್ಲಿ ವ್ಯವಸ್ಥಿತ ವಿದ್ಯಾಕೇಂದ್ರವೆಂದರೆ ವಿಧ್ಯಾಸ್ಥಾನವೆಂದು, ಇದು ದೇವಸ್ಥಾನ. ವಿದ್ಯಾದಾನವು ಪ್ರಮುಖವಾಗಿ ನಡೆಯುತ್ತಿದ್ದುದು. ೧. ಅಗ್ರಹಾರ, ೨. ದೇವಸ್ಥಾನ, ೩. ಬ್ರಹ್ಮಪುರಿ, ೪. ಘಟಿಕಾ ಸ್ಥಾನ.

ಜಟಂಗ ರಾಮೇಶ್ವರವು ಒಂದು ಘಟಿಕಾಸ್ಥಾನ (ಕಲಬುರ್ಗಿ ಎಂ.ಎಂ., ೧೯೯೯, ಪು. ೧೭೦). ಓದುವ ಹಲಗೆ, ಕಡತ ಬಳಪಗಳು ವೇದ ಗ್ರಂಥಗಳನ್ನಿಡುವ ಪೆಟ್ಟಿಗೆ, ಬರೆಯುವ ಗ್ರಂಥಗಳ ಸಲಕರಣೆಗಳು ಇವು ಹೊಸ ಕುಮಾರರಾಮನ ಸಾಂಗತ್ಯದಲ್ಲಿ ಉಲ್ಲೇಖಿಸಲ್ಪಟ್ಟಿವೆ (ಕಲಬುರ್ಗಿ ಎಂ.ಎಂ., ೧೯೯೯, ಪು. ೨೨೫). ಕುಮಾರರಾಮನಾಥನು ಗಜ ಅಶ್ವಗಳ ವಿದ್ಯೆಯನ್ನು ಕಲಿತನೆಂದು ಕುಮಾರರಾಮಯ್ಯನ ಚರಿತ್ರೆಯಲ್ಲಿ ಉಲ್ಲೇಖಿತವಾಗಿದೆ (ಕಲಬುರ್ಗಿ ಎಂ.ಎಂ., ೨೦೦೧, ಪು. ೧೨).

ಸಾಹಿತ್ಯಿಕ ಆಧಾರಗಳ ಜೊತೆಗೆ ಶಾಸನಗಳು ವಿದ್ಯಾಕೇಂದ್ರವಾಗಿ ಮೆರೆದ ಜಟಂಗ ರಾಮೇಶ್ವರದ ಕುರಿತು ಉಲ್ಲೇಖಿಸುತ್ತವೆ. ಮೊಳಕಾಲ್ಮೂರಿನ ಶಾಸನವೊಂದು ''ವಿದ್ಯಾದಾನಕಂ ದೇವೇಂದ್ರ ಪಂಡಿತರ್ಗೆ ದಾರಪೂರ್ವಕಂ ಎಂದು ಉಲ್ಲೇಖಿಸಿದೆ'' (EC. XI. Molakamuru, No-29). ವಿಜಯನಗರದ ಕಾಲದಲ್ಲೂ, ಜಟಂಗ ರಾಮೇಶ್ವರ ಪರಿಸರದಲ್ಲಿ ಅಗ್ರಹಾರ ಘಟಿಕ ಸ್ಥಾನವಿದ್ದ ಬಗ್ಗೆ ಶಾಸನಗಳು ಉಲ್ಲೇಖಿಸುತ್ತದೆ. ಬಹುಶಃ ಇದು ಮುಂದುವರಿದಿರಬಹುದು. ಕ್ರಿ.ಶ. ೧೨೮೭ರ ಕುಮ್ಮಟದ ನಾಯಕರ ಕಾಲದ ಇನ್ನೊಂದು ಶಾಸನ ಅಗ್ರಹಾರ ಮತ್ತು ಬ್ರಹ್ಮಪುರಿಗಳನ್ನು ಉಲ್ಲೇಖಿಸುತ್ತವೆ (EC XI ಚಿತ್ರದುರ್ಗ, ನಂ.೧೨).

ಕುಮ್ಮಟ ನಾಯಕರ ಕಾಲದ ವಿದ್ಯಾಭ್ಯಾಸದ ಕೇಂದ್ರಗಳಿಗೆ ಸಂಬಂಧಿಸಿದಂತೆ, ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲವಿದ್ದರೂ ಲಭ್ಯವಾದ ಸಾಹಿತ್ಯಿಕ ಮತ್ತು ಶಾಸನಗಳ ಆಕರಗಳು ಅಗ್ರಹಾರ, ಘಟಿಕಾಸ್ಥಾನ ಮತ್ತು ಬ್ರಹ್ಮಪುರಿಯ ಕುರಿತು ಪೂರಕ ಮಾಹಿತಿಯನ್ನು ನೀಡಿವೆ. ಅಗ್ರಹಾರವೆಂದರೆ ಅಗ್ರ+ಆಹಾರ ಅಂದರೆ ಶ್ರೇಷ್ಠವಾದ ಸ್ಥಳ. ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳವೆಂದು ಅರ್ಥ (ಶಬ್ದವಿಹಾರ, ಪು. ೫೧-೬೧). ಬ್ರಹ್ಮಪುರಿ ಅಂದರೆ ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು

ವಾಸಿಸುವ ಭಾಗ (Mores, 1931, P. 279) ಅಗ್ರಹಾರಗಳು ಊರುಗಳಾದರೆ ಬ್ರಹ್ಮಪುರಿಗಳು ಪಟ್ಟಣಗಳ ಭಾಗ. ಘಟಿಕಾ ಸ್ಥಾನವೆಂಬುದು ಅಗ್ರಹಾರ, ಬ್ರಹ್ಮಪುರಿಗಳು ದೇವಸ್ಥಾನಗಳಂತೆ ಇದೊಂದು ವಿದ್ಯಾಕೇಂದ್ರ. ಜಟಿಂಗ ರಾಮೇಶ್ವರ ಘಟಿಕ ಸ್ಥಾನವಾಗಿತ್ತು ಎಂದು ಹೇಳುವ ಮೊಳಕಾಲ್ಮೂರು ಶಾಸನವು, ಇದೊಂದು ವಿದ್ಯಾಕೇಂದ್ರ ಎಂದು ತಿಳಿಸುತ್ತದೆ. ಘಟಿಕಾ ಎಂಬುದು ಮಣ್ಣಿನ ಪಾತ್ರೆ-ಕಾಲವನ್ನು ಅಳೆಯಲು ಉಪಯೋಗಿಸುತ್ತಿದ್ದ ಮಣ್ಣಿನ ಪಾತ್ರೆ. ಹಿಂದಿನ ಕಾಲದಲ್ಲಿ ಕಾಲವನ್ನು ನಿರ್ಧರಿಸಲು ನೀರನ್ನೋ, ಮರಳನ್ನೋ ತುಂಬಿಡುತ್ತಿದ್ದರು ಎನ್ನುವುದುಂಟು (ಚಿದಾನಂದಮೂರ್ತಿ ಎಂ. ೧೯೭೯). ಇಂತಹ ಕಾಲ ಮಾಪನ ಯಂತ್ರಗಳು ಪ್ರಾಚೀನ ಕರ್ನಾಟಕಗಳಲ್ಲಿ ದೇವಸ್ಥಾನ ಮಠಗಳಲ್ಲಿ ಇರುತ್ತವೆಂಬುದು ಶಾಸನಗಳ ಆಧಾರಗಳಿವೆ(EI XIII, P. 229). ಕುಮ್ಮಟ ನಾಯಕರ ಕಾಲದ ಅಗ್ರಹಾರ, ಬ್ರಹ್ಮಪುರಿ, ಘಟಿಕಾ ಸ್ಥಾನಗಳ, ಶಬ್ದಗಳ ಪದ ಪ್ರಯೋಗ ವಿಜಯನಗರದ ಶಾಸನಗಳಲ್ಲೂ ಮುಂದುವರಿದುದು ವ್ಯಕ್ತವಾಗುತ್ತದೆ.

ತಟಾಕ-ಕೆರೆಗಳ ನಿರ್ಮಾಣ

ಸಾಮಾಜಿಕ ಕಾರ್ಯಗಳಲ್ಲಿ ಬಹುಮುಖ್ಯವಾದುದು ಕೆರೆಗಳ ನಿರ್ಮಾಣ. ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಮನುಷ್ಯರು, ಪಕ್ಷಿಗಳು ನೀರನ್ನು ಕುಡಿದು ತೃಪ್ತರಾಗುತ್ತಾರೊ ಅವರು ಅಶ್ವಮೇಧ ಯಾಗದ ಫಲವನ್ನು ಪಡೆಯುತ್ತಾರೆ. ಕರ್ನಾಟಕದಲ್ಲಿ ಕನ್ನಡಿಗರ ಔದಾರ್ಯ ಮುಖ್ಯವಾಗಿ ಪ್ರಕಟವಾಗಿರುವುದು ದೇವಾಲಯ ನಿರ್ಮಾಣ ಮತ್ತೊಂದು ತಟಾಕ ನಿರ್ಮಾಣ ಕುಮ್ಮಟದ ನಾಯಕರ ಕಾಲಕ್ಕೆ ಸಂಬಂಧಿಸಿದಂತೆ ಇಂತಹ ಕಟ್ಟಡಗಳ ನಿರ್ಮಾಣ, ಮಠಮಾನ್ಯ ಅರವಟ್ಟಿಕೆಗಳ ನಿರ್ಮಾಣ, ಸಾಮಾಜಿಕ ಕಾರ್ಯಗಳಲ್ಲಿ ಮುಖ್ಯವಾದುದು (ಕಲಬುರ್ಗಿ ಎಂ.ಎಂ., ೨೦೦೧, ಪು. ೩೬೨) ಕೆರೆ ಬಹಳ ಕಾಲ ಉಳಿಯಬೇಕಾದರೆ ಅದರ ಯೋಗಕ್ಷೇಮದ ಕಡೆ ಗಮನವೀಯಬೇಕು. ಇಲ್ಲದಿದ್ದಲ್ಲಿ ಕೆರೆ ಒಡೆಯಬಹುದು ಅಥವಾ ಹಾಳಾಗಬಹುದು. ಹೀಗಾಗಿ ಕೆರೆಗಾಗಿ ಜಮೀನನ್ನು ಬಿಡುವ ಪದ್ಧತಿ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಕ್ರಿ.ಶ. ೧೨೮೦ ಬೆಣ್ಣೆಹಳ್ಳಿಯ ಶಾಸನವೊಂದು ಅರುವಟ್ಟಿಗೆಯನ್ನು ಕಟ್ಟಿಸಿದ ಉಲ್ಲೇಖವನ್ನು ತಿಳಿಸುತ್ತದೆ. ಬಾಯಾರಿಕೆಯನ್ನು ಹಿಂಗಿಸಲು ದಾರಿಗಳ ಪಕ್ಕದಲ್ಲಿ ಅರುವಟ್ಟಿಗೆಗಳಿರುತ್ತಿದ್ದವು. ಸತ್ರಗಳಿಗೆ ದೇವಸ್ಥಾನಗಳಿಗೆ ಸ್ವತಂತ್ರವಾಗಿಯೂ ಅರವಟ್ಟಿಗೆಗಳು ಇರುವುದುಂಟು. ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದಂತೆ ರಾಜ ಅಲುಬಳ ದೇವ ರಾಣಿಯನ್ನು ರಮಾಬಾಯಿಗೆ ಧರ್ಮಕ್ಕೆ ಸಂತೆಯಲ್ಲಿ ಅರವಟ್ಟಿಗೆಯನ್ನು ಕಟ್ಟಿಸಿದನೆಂದು (IK., Vol II. No.20, 23, P.104) ಉಲ್ಲೇಖಿಸಲಾಗಿದೆ. ಸಂಡೂರು ತಾಲ್ಲೂಕಿನ ದರೋಜಿಯ ಕೆರೆಯನ್ನು ಸಿಂಗೆಯನಾಯಕನು ಕಟ್ಟಿಸಿದ್ದುದಾಗಿ ಕೈಫಿಯತ್ತುಗಳು ಉಲ್ಲೇಖಿಸುತ್ತವೆ. (ಕಲಬುರ್ಗಿ ಎಂ.ಎಂ., ೧೯೯೪, ಪು. ೫೦೯).

ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದಂತೆ ಸಾಹಿತ್ಯಿಕ ಆಧಾರಗಳು, ಶಾಸನಗಳು, ಕೈಫಿಯತ್ತುಗಳು ದಾಖಲಿಸುವುದರ ಜೊತೆಗೆ ಇಂದಿಗೂ ಉಳಿದು ಬಂದ ವಕ್ರಾಣಿ ಕೆರೆ, ಬೊಲ್ಲನ ಕೆರೆ, ರಾಮನ ದೊಣೆ, ಹಾಲು ಭಾವಿ, ಮಾವಿಗ ಹಂಪಯ್ಯನ ಕೆರೆ, ಸಾಮಾಜಿಕ ಕಾರ್ಯಗಳಲ್ಲಿ ಉಪಯೋಗವಾಗುತ್ತಿತ್ತೆಂಬ ಮಾತನ್ನು ಪುಷ್ಟೀಕರಿಸಿವೆ(ಸಾವಿತ್ರಿ ಎಂ.ಎಂ., ೨೦೦೧, ಪು. ೨೩-೨೪).

ಕುಟುಂಬ ವ್ಯವಸ್ಥೆ

ವ್ಯಕ್ತಿಯ ಸಾಮಾಜಿಕ ಜೀವನದಲ್ಲಿ ಕುಟುಂಬ ವ್ಯವಸ್ಥೆ ಬಹು ಮುಖ್ಯ ಪಾತ್ರವಹಿಸುತ್ತದೆ. ಕುಮ್ಮಟದ ನಾಯಕರ ಕಾಲದಲ್ಲಿ ಅವಿಭಕ್ತ ಕುಟುಂಬ ಪದ್ಧತಿ ರೂಢಿಯಲ್ಲಿತೆಂದು ಕುಮಾರ ರಾಮನ ಸಾಂಗತ್ಯವು ಉಲ್ಲೇಖಿಸುತ್ತದೆ. ಕುಮಾರ ರಾಮನಾಥನ ಮದುವೆ ಪ್ರಸಂಗದಲ್ಲಿ ವಿವಾಹಕ್ಕಾಗಿ ಕನ್ಯೆಯರನ್ನು ನಿಶ್ಚಯಿಸಲು ಗುರುಹಿರಿಯರು, ವೇದಪಾಠಕರು, ಜೋಯಿಸರು, ಅವದಾನಿಗಳ ಸಮಕ್ಷಮದಲ್ಲಿ ನಿರ್ಧಾರವನ್ನು ಕೈಗೊಂಡರು(ಕಲಬುರ್ಗಿ ಎಂ.ಎಂ., ೨೦೦೧, ಪು.೬೬). ಗುತ್ತಿಯ ಉತ್ತುಂಗರಾಯ, ಜಗತಾಪಿಚಾರಮರಾಯ, ಬೈಚಪ್ಪ, ಮಂಚಣ್ಣನವರು ತಮ್ಮ ಹೆಣ್ಣುಮಕ್ಕಳಿಗೆ ಉಡುಗೆಯಾಗಿ ಮುತ್ತಿನ ಹಾರ, ರತ್ನದ ಹಾರ, ಚಿನ್ನದ ಹೊನ್ನುಗಳ ಕಾಂತಿರತ್ನಗಳನ್ನು ಉಡುಗೊರೆಯಾಗಿ ನೀಡಿದರು (ಕಲಬುರ್ಗಿ ಎಂ.ಎಂ., ೨೦೦೧, ಪು. ೭೩). ಇದು ಕುಟುಂಬ ವ್ಯವಸ್ಥೆಯಲ್ಲಿನ ಸಾಮರಸ್ಯವನ್ನು ಪ್ರತಿಬಿಂಬಿಸುತ್ತದೆ.

ಬಹುಪತ್ನಿತ್ವ

ಕುಮ್ಮಟ ನಾಯಕರ ಕಾಲದಲ್ಲಿ ಬಹುಪತ್ನಿತ್ವ ಪದ್ಧತಿ ರೂಢಿಯಲ್ಲಿತ್ತೆಂದು ಕುಮಾರರಾಮನ ಸಾಂಗತ್ಯಗಳಲ್ಲಿ ಉಲ್ಲೇಖವಿವೆ. ಉದಾಹರಣೆಗೆ ಕಂಪಿಲನ ಸೋದರತ್ತೆಯ ಮಗಳನ್ನು ಮುಮ್ಮಡಿ ಸಿಂಗನಾಯಕನು, ವಿವಾಹ ಮಾಡಿಸಿದ್ದು ನಂತರ, ಕಂಪಿಲನೆ ಹರಿಯಾಳದೇವಿ ಹಾಗೂ ರತ್ನಾಜಿಯರನ್ನು ಮದುವೆಯಾದನೆಂದಿದೆ (ಕಲಬುರ್ಗಿ ಎಂ.ಎಂ., ೨೦೦೧, ಪು.೩). ಕುಮಾರರಾಮನ ಚರಿತ್ರೆಯಲ್ಲಿ ಐದು ಜನ ಕನ್ಯೆಯರನ್ನು ಮದುವೆಯಾದನೆಂದು ಉಲ್ಲೇಖಿಸಿದೆ. ಇದರಿಂದ ಬಹುಪತ್ನಿತ್ವ ರೂಢಿಯಲ್ಲಿತ್ತೆಂಬುದು ಸ್ಪಷ್ಟ, (ಕಲಬುರ್ಗಿ ಎಂ.ಎಂ., ೨೦೦೧, ಪು. ೬೪-೭೮).

ಅಂತರ್ಜಾತೀಯ ವಿವಾಹವು ಇತ್ತೆಂಬುದಕ್ಕೆ ಸಾಹಿತ್ಯಿಕ ಆಧಾರಗಳು ಪುಷ್ಟೀಕರಿಸುತ್ತದೆ. ಕಂಪಿಲರಾಯನು ಗುಜ್ಜಲ ಆರೇಯ ಚಾರಮರಾಯನ ಮಗಳು ಹರಿಯಾಳ ದೇವಿಯನ್ನು ಮದುವೆಯಾದದ್ದು, ಇವು ಅಂತರ್ಜಾತೀಯ ವಿವಾಹಗಳು ನಡೆಯುತ್ತಿದ್ದವೆಂಬುದಕ್ಕೆ ಪುರಾವೆಗಳು (ಕಲಬುರ್ಗಿ ಎಂ.ಎಂ., ೨೦೦೧, ಪು.೮). ಕಂಪಿಲರಾಯನು ಬೇಟೆಗಾಗಿ ಬಂದಾಗ ರೆಡ್ಡಿ ಜನಾಂಗದವರಾದ ದೇವಿರೆಡ್ಡಿ ಮತ್ತು ಎಲ್ಲಮ್ಮ ದಂಪತಿಗಳ ಮಗಳು ರತ್ನಜಿಯ ಸೌಂದರ್ಯವನ್ನು ಕಂಡು ಅವಳೊಡನೆ ಕಂಪಿಲರಾಯನು ವಿವಾಹ ಮಾಡಿಕೊಳ್ಳುತ್ತಾನೆ (ಕಲಬುರ್ಗಿ ಎಂ.ಎಂ., ೨೦೦೧, ಪು. ೧೪-೧೬).

ಮಂತ್ರಿ ಬೈಚಪ್ಪ ಜೈನನಾದರು ಆತನ ಮಗಳೊಬ್ಬಳನ್ನು ಕುಮಾರರಾಮನಿಗೆ ಕೊಟ್ಟು, ವಿವಾಹ ಮಾಡುವರು (ಕಲಬುರ್ಗಿ ಎಂ.ಎಂ. ೨೦೦೧, ಪು. ೫೯-೭೮). ಬಹುಪತ್ನಿತ್ವಕ್ಕೆ ಸಂಬಂಧಿಸಿವೆ ಹಾಗೂ ಅಂತರ್ಜಾತೀಯ ವಿವಾಹಕ್ಕೆ ಸಂಬಂಧಿಸಿದಂತೆ ಪೂರಕ ಮಾಹಿತಿಯನ್ನು ಇದು ಒದಗಿಸುತ್ತದೆ. ಬಹು ಪತ್ನಿತ್ವಕ್ಕೆ ಸಂಬಂಧಿಸಿದಂತೆ ಕರ್ನಾಟಕ ಶಾಸನಗಳು ಮಾಹಿತಿಯನ್ನು ವರ್ಣಿಸುತ್ತಿದ್ದರೂ ಕುಮ್ಮಟದ ನಾಯಕರ ಕಾಲದ ಈ ಕುರಿತಂತೆ ಶಾಸನಗಳು ಲಭ್ಯವಾಗಿಲ್ಲ. ಒಟ್ಟಾರೆ ಸ್ತ್ರೀ ಕುಮ್ಮಟ ನಾಯಕರ ಕಾಲದಲ್ಲಿ ಸಮಾಜದಲ್ಲಿ ಗೌರವ ಸ್ಥಾನವನ್ನು ಪಡೆದಿದ್ದಾಳೆಂಬುದನ್ನು ಸಾಹಿತ್ಯಿಕ ಮತ್ತು ಶಾಸನಗಳ ಆಕರಗಳು ಪೂರಕ ಮಾಹಿತಿಯನ್ನು ನೀಡಿವೆ.

ಆರ್ಥಿಕ

ಯಾವುದೇ ಒಂದು ರಾಜ್ಯದ ನಿರ್ಮಾಣವಾದಬೇಕಾದರೆ ಹೆಚ್ಚಿನ ಮಟ್ಟಿಗೆ ಅಲ್ಲಿ ಸಪ್ತಾಂಗ ಸೂತ್ರಗಳು ಪ್ರಮುಖವಾಗುತ್ತವೆ. ಸಪ್ತಾಂಗ ಸೂತ್ರಗಳಲ್ಲಿ ಮುಖ್ಯವಾದುವುಗಳಲ್ಲೊಂದಾದ ಕೋಶ, ಆರ್ಥಿಕ ಮೌಲ್ಯವಾಗಿದೆ. ಕೋಶವನ್ನು ವೃದ್ಧಿ ಪಡಿಸಲು ಕೃಷಿ, ವ್ಯಾಪಾರ ಮುಂತಾದ ಅಂಶಗಳು ಬಹುಮುಖ್ಯ. ಕೃಷಿಯ ಉಪಯೋಗಕ್ಕೆ ಕೆರೆಬಾವಿಗಳು ಅಗತ್ಯವಾದವುಗಳು (Gururajachar, S., 1974, P. 140-41). ಕರ್ನಾಟಕದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಕುರಿತಂತೆ ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಆದರೆ ಪ್ರಾಚೀನ ಕರ್ನಾಟಕ ಸಂಸ್ಕೃತಿಯ ಹಲವಾರು ಮುಖಗಳನ್ನು ನೋಡಲು ಹೊರಟರೆ, ನಮ್ಮ ಅಧ್ಯಯನವು ಎಷ್ಟು ಆಳಕ್ಕೆ ಹೋಗಬಹುದೋ ಅಷ್ಟು ಹೋಗಿಲ್ಲವೆನ್ನಬಹುದು (ಚಿದಾನಂದ ಮೂರ್ತಿ ಎಂ., ೧೯೭೯, ಪು.೬೬೩). ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲದ ಆರ್ಥಿಕ ವ್ಯವಸ್ಥೆಗೆ ಸೀಮಿತವಾಗಿರುವುದರಿಂದ ಸಾಹಿತ್ಯಿಕ ಆಧಾರಗಳು, ಶಾಸನಗಳು ಮಾಹಿತಿಯನ್ನು ನೀಡುತ್ತವೆ.

ವ್ಯಾಪಾರ

ಪ್ರಾಚೀನ ಕರ್ನಾಟಕದಲ್ಲಿ ಒಂದೊಂದು ವೃತ್ತಿಯ ಒಂದೇ ಜಾತಿಯ ಜನರು ಸಂಘವೆಂಬಂತೆ ಈ ಸಂಘವನ್ನು ಪರಿಭಾಷಿಕವಾಗಿ ಶ್ರೇಣಿಗಳೆಂದು ನೀತಿ ಗ್ರಂಥಗಳು (EI. VI. P.166) ಹೆಸರಿಸುತ್ತಿದೆ. ಬೇರೆ ಬೇರೆ ವೃತ್ತಿಯವರು, ಒಟ್ಟಾಗಿ ವ್ಯವಹರಿಸುತ್ತಿದ್ದರು. ಕರ್ನಾಟಕದ ಪ್ರಾಚೀನ ಶಾಸನಗಳಲ್ಲಿ ವ್ಯಾಪಾರಿ ಸಂಘಗಳಾದ ಅಯ್ಯಾವಳೆ-೫೦೦ರ, ಮುಮ್ಮುರಿ ದಂಡಗಳು ಎಂಬ ಶಬ್ದಗಳು ಕಾಣಿಸಿಕೊಳ್ಳುತ್ತವೆ. ಇವರು ಮೂಲತಃ ವ್ಯಾಪಾರ ವೃತ್ತಿಯವರು. ಈ ವರ್ತಕ ಜಾತಿ ಯಾವುದು ಈ ಶಾಖೆಗಳು ಯಾವುವು? ಅವರ ಕರ್ತವ್ಯಗಳೇನು? ಎಂಬುದರ ಬಗ್ಗೆ ಶಾಸನಗಳು ಹೆಚ್ಚು ಬೆಳಕನ್ನು ಚೆಲ್ಲುವುದಿಲ್ಲ. ಒಟ್ಟಾರೆ ಕರ್ನಾಟಕದ ಶಾಸನಗಳು ಅಲ್ಲಲ್ಲಿ ವ್ಯಾಪಾರಿ ಸಂಘಗಳ ಕುರಿತು ಉಲ್ಲೇಖಿಸುತ್ತವೆ.

ಕುಮ್ಮಟ ನಾಯಕರ ಕಾಲದಲ್ಲಿ ವಾಣಿಜ್ಯೋದ್ಯಮ ಮುಖ್ಯವಾದ ಅಂಶ. ಕುಮಾರರಾಮನ ಸಾಂಗತ್ಯದಲ್ಲಿ, ಕುಮಾರ ರಾಮನ ಚರಿತ್ರೆಯಲ್ಲಿ ಬೆಳ್ಳಿ ಕಾಲುಂಗರ ಆಭರಣಗಳನ್ನು ಮಾರುವ ಚಿನಿವಾರರ ಅಂಗಡಿಗಳು ವೀಳ್ಯದ ಎಲೆ, ಅಡಿಕೆ ಅಂಗಡಿಗಳು, ಅಕ್ಕಿ, ಗೋಧಿ, ಸಕ್ಕರೆ, ಎಣ್ಣೆ, ತುಪ್ಪ ಮುಂತಾದ ದಿನಸಿ ಅಂಗಡಿಗಳು, ಬುಕ್ಕಿಟ್ಟು, ಪುಣುಗು, ಜವ್ವಾದಿಯನ್ನು ಮಾರುವ ಅಂಗಡಿ ಸಾಲುಗಳು, ಸುಗಂಧ ದ್ರವ್ಯದ ಅಂಗಡಿ, ಧನಿಕ ವರ್ತಕರ ಭವ್ಯ ಸೌಧಗಳು, ಸೆಟ್ಟಿಗಳು, ಪಟ್ಟಣ ಸ್ವಾಮಿಗಳು, ಮಿಂಡಗುದಲಿ ಸೆಟ್ಟಿಗಳು (ವ್ಯಾಪಾರಿಗಳು) (ಕಲಬುರ್ಗಿ ಎಂ.ಎಂ., ೧೯೯೯, ಪದ್ಯ ೫೬-೬೦).

ಆನೆಗೊಂದಿಯ ಚೈತ್ಯಾಲಯ ಹಾಗೂ ಗಾಣಿಗಿತ್ತಿಯ ಜೈನ ದೇವಾಲಯದ ಶಾಸನ (IK.1. V.I. 1996. N.42) ಮಾಣಿಕ್ಯಗಳನ್ನು ಮಾರುವ ಬೀದಿಗಳು ಇದ್ದವೆಂದು ಸೂಚಿಸುತ್ತದೆ. ಕ್ರಿ.ಶ. ೧೪೯೯ರ ಮಾದಿನೂರು ಶಾಸನ, ವ್ಯಾಪಾರಿ ನಾಗಿಶೆಟ್ಟಿ ಎಂಬುವರು ಶಿವಾಲಯದ ವೆಚ್ಚಕ್ಕಾಗಿ ತೋಟವನ್ನು ದಾನವಾಗಿ ಕೊಟ್ಟಿರುವರು (ಕ.ವಿ.ಸಾ. ಸಂ. ೨, ಕೊಪ್ಪಳ,

ಸಂ.೨೪). ಮಲ್ಲಿಸೆಟ್ಟಿ ಎಂಬುವರು ಎರಂಬಗೆಯ ನಗರ ಜಿನಾಲಯ ಹಾಗೂ ಅಮರಾಪುರದ ಜಿನಾಲಯುಗಳನ್ನು ಜೀರ್ಣೋದ್ಧಾರ ಮಾಡಿಸಿದರೆಂದಿದೆ. ಈ ಶಾಸನದಲ್ಲಿ ವ್ಯಾಪಾರಿಗಳ ಹೆಸರುಗಳು ಸೆಟ್ಟಿ ಮತ್ತು ಮಲ್ಲಸೆಟ್ಟಿಯರ ಹೆಸರುಗಳು ವ್ಯಕ್ತವಾಗಿರುತ್ತವೆ (ವಿ.ಅ., ಸಂ. ೩, ೧೯೯೭, ಪು. ೯೪-೯೬).

ತೆರಿಗೆ ಪದ್ಧತಿ

ತೆರಿಗೆ ಪದ್ಧತಿಯಲ್ಲಿ ರಾಜ್ಯಕ್ಕೆ ಬರುವ ಮುಖ್ಯವಾದ ಆದಾಯ ತೆರಿಗೆ, ರಾಜನು ಪ್ರಜೆಗಳನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಹಣವೇ ತೆರಿಗೆ ಎಂದು ಗೌತಮ ಸಂಹಿತೆ. ನಾಗಸಂಹಿತೆ ಮುಂತಾದ ಸಾಹಿತ್ಯಕ ಕೃತಿಗಳು ಉಲ್ಲೇಖಿಸುತ್ತವೆ (EC, XI, Dg. No.90). ಧರ್ಮದಿಂದ ರಾಜ್ಯವನ್ನಾಳುವ ರಾಜನಿಗೆ ಬೆಳೆಯಲ್ಲಿ ಮೂರನೆಯ ಒಂದು ಭಾಗ ಸಲ್ಲಬೇಕೆಂದಿದೆ (EC, VIII, SB. 184). ರಾಜನು ಸರಿಯಾಗಿ ಕಾರ್ಯ ನಿರ್ವಹಿಸದಿದ್ದರೆ ತೆರಿಗೆಯನ್ನು ಹಿಂತಿರುಗಿಸಬೇಕಾಗಿತ್ತು. ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದಂತೆ ತೆರಿಗೆಯ ಕುರಿತು ಶಾಸನಗಳು ಹಾಗೂ ಸಾಹಿತ್ಯಿಕ ಆಧಾರಗಳ ಮಾಹಿತಿಯನ್ನು ನೀಡುತ್ತವೆ. ಕ್ರಿ.ಶ. ೧೨೮೦ರ ಬೆಣ್ಣೆ ಹಳ್ಳಿ ಶಾಸನವೊಂದು ಬಿಲ್ಲುವಡಿಗೆ, ಕಬ್ಬಿಲವಡಿಗೆ ತೆರಿಗೆಗಳ ಕುರಿತು ಪ್ರಸ್ತಾಪಿಸುತ್ತದೆ. ಇದೇ ಗ್ರಾಮ ಇನ್ನೊಂದು ಶಾಸನದಲ್ಲಿ ಎಮ್ಮೆ ಹಾಗೂ ಹಸುಗಳ ಮೇಲೆ ತೆರಿಗೆಗಳನ್ನು ವಸೂಲು ಮಾಡುವ ಹೆಗಡೆಗಳನ್ನು (ತೆರಿಗೆ ಅಧಿಕಾರಿಗಳ) ಹೆಸರಿಸುತ್ತದೆ (ARIE No. 208, 1918) (SII, IX, Part I, No. 369) ಇಂಗಳೇಶ್ವರದ ಶಾಸನವೊಂದು ತೆರಿಗೆಯನ್ನು ನಿಯುಕ್ತಿಗೊಳಿಸಲು ಮತ್ತು ಸಂಗ್ರಹಕ್ಕಾಗಿ ಅಧಿಕಾರಿಗಳು ಇದ್ದರೆಂಬ ಬಗ್ಗೆ ಸುಂಕಾಧಿಕಾರಿ ಬಿಸುವರಸ ಎಂದಿದೆ (SII, IXV, Part II, No. 195). ಉಜ್ಜಯಿನಿಯ ಶಾಸನವೊಂದು, ಸುಂಕಗಳನ್ನು ವಸೂಲು ಮಾಡುವ ಕೇಣಿಕಾರರು ಹಾಗೂ ವ್ಯಾಪಾರದ ಗುತ್ತಿಗೆಕಾರರನ್ನು ಉಲ್ಲೇಖಿಸುತ್ತದೆ (ARIE, 1925, No. 309 ಕೆ. ವಿಶಾಸಂ-I, ಕೂಡ್ಲಿಗಿ-೯). ಏಟ್ಟಾರೆ ಸೇವುಣರ ಕಾಲದಲ್ಲಿ ತೆರಿಗೆ ಪದ್ಧತಿ ಇಲ್ಲಿತ್ತೆಂಬುದನ್ನು ಶಾಸನಗಳು ಉಲ್ಲೇಖಿಸುತ್ತದೆ. ಕುಮ್ಮಟನಾಯಕರು ಸೇವುಣರ ಮಾಂಡಲಿಕರಾದ್ದರಿಂದ ಈ ತೆರಿಗೆ ಪದ್ಧತಿ ಇವರಿಗೂ ಅನ್ವಯವಾಗುತ್ತದೆ.

ನಾಣ್ಯಗಳು

ಮಾನವನ ಸಾಂಸ್ಕೃತಿಕ ಅಧ್ಯಯನದಲ್ಲಿ, ಕರ್ನಾಟಕದ ನಾಣ್ಯ ಚರಿತ್ರೆಯಲ್ಲಿ ಅದರಲ್ಲೂ ಹೆಚ್ಚಾಗಿ ಕುಮ್ಮಟದ ನಾಯಕರ ಸ್ಥಾನ ಬಹುಮುಖ್ಯವಾಗಿದೆ. ಅಬ್ದುಲ್ ರಜಾಕ್ ಈ ದೇಶದಲ್ಲಿ ಮೂರು ತರಹದ ನಾಣ್ಯಗಳಿವೆ ಎಂದು ಹೇಳಿದ್ದಾನೆ. ಅವು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು (ಮಹಾಲಿಂಗಂ ಟಿ.ವಿ., ೧೯೫೫, ಪು. ೧೦೧) ಇವುಗಳಲ್ಲಿ ವಿವಿಧ ನಾಣ್ಯಗಳು ನಿರ್ಮಿತವಾಗುತ್ತವೆ. ಇವು ಗದ್ಯಣ ಕಟಕ ಗದ್ಯಾಣ. ಕಾಟಿ ಗದ್ಯಾಣ, ಹೊನ್ನು ಮುಂತಾದ ನಾಣ್ಯಗಳ ಹೆಸರುಗಳು ಸಾಹಿತ್ಯಿಕ ಆಕರ ಮತ್ತು ಶಾಸನಗಳಲ್ಲಿ ಕಂಡುಬರುತ್ತದೆ. ನಾಣ್ಯಗಳಲ್ಲಿ ಪ್ರಸಿದ್ಧವಾದದ್ದು ಗದ್ಯಾಣ ಅಥವಾ ಪೊನ್ನು ಗದ್ಯಾಣಕ್ಕೂ ಉಳಿದ ನಾಣ್ಯಗಳಿಗೂ ಇರುವ ಸಂಬಂಧ ಹೀಗಿದೆ.

೧ ಗದ್ಯಾಣ	-	೧೦ ಪಣ
೧ ಪಣ	-	೨ ಅಡ್ಡ
೧ ಪಣ	-	೪ ಹಾಗ
೧ ಪಣ	-	೧೬ ವೀಸ
೧ ಹಾಗ	-	೨ ಬೇಳೆ

ಇವುಗಳಲ್ಲಿ ವೀಸ ಅತ್ಯಂತ ಕನಿಷ್ಠವಾದುದು (ಚಿದಾನಂದ ಮೂರ್ತಿ ಎಂ., ೧೯೭೯, ಪು. ೩೯೦-೯೧). ಇವುಗಳ ಮುಖ ಬೆಲೆಯಲ್ಲಿ ಕೆಲವು ಕಡೆ ವ್ಯತ್ಯಾಸವಿರುತ್ತದೆ.

ಕುಮ್ಮಟ ನಾಯಕರ ರಾಜ್ಯವನ್ನು ಕಟಕ ರಾಜ್ಯ ಅಥವಾ ಮಕರ ರಾಜ್ಯವೆಂದು ಶಾಸನಗಳು ಉಲ್ಲೇಖಿಸುತ್ತವೆ (EC. XV. Tumkur. Supplementry. No.40). ಸೇವುಣರ ಕಾಲದಲ್ಲಿ ಕಟಕ ರಾಜ್ಯವನ್ನು ವಶಪಡಿಸಿಕೊಂಡ ಬಗ್ಗೆ ಸೇವುಣ ಮಹದೇವನನ್ನು ಶ್ರೀಮದ್ ವಿಜಯ ಕಟಕ ನಿವಾಸವೆಂದು ಉಲ್ಲೇಖಿಸಿದೆ. ೧೨೬೭-೬೮ರಲ್ಲಿ ಮಹದೇವನು ಕಟಕ ರಾಜ್ಯವನ್ನು ಜಯಿಸಿ ತನ್ನ ರಾಜ್ಯದಲ್ಲಿ ವಿಲೀನಗೊಳಿಸಿದನೆಂದಿದೆ (EC XI, Chitradurga, No.24). ಚಿತ್ರದುರ್ಗದ ಶಾಸನವೊಂದು ಬುಕ್ಕರಾಯನು ಕಟಕರಾಯನ ರಾಜಧಾನಿಯನ್ನು ಪುನರ್ ನವೀಕರಿಸಿ ಹೊಸಪಟ್ಟಣ ಎಂದು ಹೆಸರನ್ನು ಇಟ್ಟನೆಂದು ಈ ಶಾಸನ ಕಟಕರಾಯ ಕಂಪಿಲರಾಯನ ರಾಜಧಾನಿ ಇಂದಿನ ವಿಜಯನಗರವೆಂದು ಶಾಸನ ಪುಷ್ಟೀಕರಿಸುತ್ತದೆ (VPR. 1983-84. 2-3). ಕಟಕ ಗದ್ಯಾಣವು ವಿಜಯನಗರದ ಅರಸರಲ್ಲೂ ಬಳಕೆಯಲ್ಲಿತ್ತು (E.I. XXXVII. No.34).

ಭಂಡಾರದ ಅಧಿಕಾರಿಗಳು

ಸಾಹಿತ್ಯಿಕ ಮತ್ತು ವಿದೇಶಿ ಇತಿಹಾಸಕಾರರ ಕಥನದಲ್ಲಿ, ಕಂಪಿಲನ ಆಸ್ಥಾನದಲ್ಲಿ, ಭಂಡಾರದ ಅಧಿಕಾರಿಗಳಿದ್ದರೆಂಬುದನ್ನು ಉಲ್ಲೇಖಿಸುತ್ತವೆ (ದೇವಿರಪ್ಪ, ಹೆಚ್., ೧೯೫೫. ಪು.೬೩, EC II. ಶ್ರವಣ ಬೆಳಗೊಳ. ಸಂ.೨). ಆನೆಗೊಂದಿಯ ಶಾಸನವೊಂದು ಹರಿಹರನು ಕಾಮಿ ಹೆಗಡೆ ಭಂಡಾರದ ಅಧಿಕಾರಿ ಹರಿಯಪ್ಪನೆಂಬ ಹೆಸರನ್ನು ಉಲ್ಲೇಖಿಸುತ್ತದೆ (ವಿ.ಅ.ಸಂ. ೬. ಸಂ.೨) ಭಂಡಾರಿ ಬುಕ್ಕ. ಭಂಡಾರಿ ಹರಿಹರನ ಉಲ್ಲೇಖಗಳು ಕುಮಾರ ರಾಮನಾಥ ಚರಿತದಲ್ಲಿದೆ.

ಕೇಣಿಕಾರರು

ಆನೆಗೊಂದಿಯ ತಾಮ್ರ ಶಾಸನವೊಂದು ಕೇಣಿಕಾರರು (ಸಗಟು ವ್ಯಾಪಾರಿಗಳು) ಕುರಿತು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ(VPR. 1987-88. P. 21) ಕಲ್ಯಾಣದ ಕೇಣಿ ಕಂದಾರದ ಕೇಣಿ. ಕರಹಡ ಕೇಣಿ, ಕೊಲ್ಹಾರದ ಕೇಣಿ. ಹಾನಗಲ್ಲ ಕೇಣಿ. ಗಂಗಾಪುರ ಕೇಣಿ, ವಲ್ಹಾರದ ಕೇಣಿ. ಚಲದಂಕರಾಮನೆಂಬ ಮಲೆಯಾರದ ಕೇಣಿಗಳಿವೆ. ಈ ಕೇಣಿಕಾರರು ಬಹುಶಃ ವ್ಯಾಪಾರಿ ಸಂಘದ ಜನರಿದ್ದಿರಬೇಕು.

ಕೆರೆ - ತಟಾಕಗಳು

ಕೆರೆಗಳು ಪ್ರಾಚೀನ ಕರ್ನಾಟಕದ ಅದರಲ್ಲೂ ಹೆಚ್ಚಾಗಿ ಕುಮ್ಮಟ ನಾಯಕರ ಕಾಲದಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದಿವೆ. ನೀರಾವರಿಯು ನದಿ, ಬಾವಿ, ಕೆರೆಯನ್ನು ಅವಲಂಬಿಸಿದೆ. ಶ್ರೀಮಂತರು ಮತ್ತು ಸಾಮಂತರು ಕೆರೆಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ಭಾವಿಸಿದ್ದರು (ಚಿದಾನಂದ ಮೂರ್ತಿ ಎಂ., ೧೯೭೯, ಪು. ೬೬೫) ಗ್ರಾಮೀಣಾ ಪ್ರದೇಶದಲ್ಲಿ ಕೃಷಿ ಆರ್ಥಿಕದ ಮುಖ್ಯ ಘಟಕವಾದುದರಿಂದ ಕೃಷಿ ಮುಖ್ಯವಾಗಿ ಕೆರೆ ಬಾವಿ ನೀರನ್ನು ಅವಲಂಬಿಸುವಂತಾಯಿತು. ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸೀಮಿತವಾದುದರಿಂದ, ಲಭ್ಯವಾದ ಸಾಹಿತ್ಯಿಕ ಮತ್ತು ಶಾಸನಗಳ ಆಧಾರದಲ್ಲಿ ಕೆರೆಗಳ ಒಂದು ಚಿತ್ರಣ ನೀಡಲಾಗಿದೆ.

ಮರಿಯಮ್ಮನ ಹಳ್ಳಿಯ ಸಮೀಪವಿರುವ ದಂಡನಾಯಕನ ಕೆರೆ ಹೊಸಮಲೆ ಬೆಟ್ಟದ ಪಶ್ಚಿಮ ದಿಕ್ಕಿನಲ್ಲಿದ್ದು, ಹೊಸ ಮಲೆದುರ್ಗದಲ್ಲಿನ ಕಂಪಿಲನ ಪರಿವಾರಕ್ಕೆ ಈ ಕೆರೆಯಿಂದ ನೀರಿನ ಪೂರೈಕೆ ಆಗುತ್ತಿತ್ತು. ಇದು ನಂಜುಂಡ ಕವಿಯ ರಾಮನಾಥ ಚರಿತದಲ್ಲಿ ಉಲ್ಲೇಖವಿದೆ (ದೇವಿರಪ್ಪ ಹೆಚ್., ೧೯೫೮, ಪು.೬೪-೬೯). ಕಣಿವೆಯಿಂದ ದಂಡನಾಯಕನ ಕೆರೆಯ ವರೆಗೂ ಎಂಬುದಾಗಿ ಕುಮ್ಮಟ ಕೇಸರಿಯಲ್ಲಿ ವರ್ಣಿಸಲಾಗಿದೆ (ವರದರಾಜರಾವ್, ೧೯೬೩ ಪು. ೨೩). ಕ್ರಿ.ಶ. ೧೩೪೪ರ ಶಾಸನವೊಂದು ಬುಕ್ಕರಾಯನ ಸಮುದ್ರ, ಕೀರ್ತಿ ಸಮುದ್ರ, ಬಾಚಪ್ಪನ ಕೆರೆ, ಚೌಡಪ್ಪನ ಕಾಲುವೆ, ಮಾಳವ್ವೆಯ ಕೆರೆಗಳನ್ನು ಕಟ್ಟಿಸಿದ್ದು ಕುರಿತು ಶಾಸನ ಉಲ್ಲೇಖಿಸುತ್ತದೆ (EC, VII. Maddur, No.37).

ದರೋಜಿ ಕೆರೆಯನ್ನು ಸಿಂಗನೆಂಬ ಸರದಾರನು ಕಟ್ಟಿಸಿದ್ದನೆಂದೂ ಇದನ್ನು ಸಿಂಗನ ಕೆರೆ ಎಂಬ ವಾಡಿಕೆ ಇದೆ. ಸಿಂಗನು ಕಟ್ಟಿಸಿದ ಈ ಕೆರೆಯ ಉಲ್ಲೇಖ, ದರೋಜಿಯ ಕೈಫಿಯತ್ತಿನಲ್ಲಿದೆ (ಕಲಬುರ್ಗಿ ಎಂ.ಎಂ., ೧೯೯೪, ಪು. ೫೫೦). ಕ್ರಿ.ಶ. ೧೩೧೦ರ ಶಾಸನವೊಂದು, ಹೊಯ್ಸಳ ಬಲ್ಲಾಳನ ಸೈನ್ಯಾಧಿಪತಿ ಕುರುಕ ನಾಯಕನು ದೊರವದಿಗೆ ಎತ್ತಿ ನಡೆದಲ್ಲಿ ಕುಮ್ಮಟ ನಾಯಕರ ಕಾಲದಲ್ಲಿ ಕೆರೆಯನ್ನು ಕಟ್ಟಿಸಬಹುದು (EC, VIII, Nagara, No.19). ಅರುವನ ಹಳ್ಳಿಯ ಇನ್ನೊಂದು ಶಾಸನ ಬುಕ್ಕರಾಯನ ಸಮುದ್ರ, ಮಾಳವ್ವೆಯ "ಕೆರೆ", ನಾಗವ್ವೆಯ ಕೆರೆ, ಚೌಡಪ್ಪನ ಕಾಲುವೆ, ಅಡಿಕೆಯ ತೋಟ, ತೆಂಗಿನ ತೋಟಗಳನ್ನು ಉಲ್ಲೇಖಿಸುತ್ತದೆ (EC. VII. Maddur, 87-89). ಕ್ರಿ.ಶ. ೧೫೫೯ರ ಮಾದಿನೂರಿನ ಇನ್ನೊಂದು ಶಾಸನ ದೇವಾಲಯಕ್ಕೆ ಬಿಟ್ಟ ತೋಟವನ್ನು ಉಲ್ಲೇಖಿಸುತ್ತದೆ (ಕ.ವಿ.ಶಾಸಂ.೨, ಕೊಪ್ಪಳ, ಮಾದಿನೂರು). ಕೆರೆಬಾವಿಗಳನ್ನು ತೋಡಿಸುವುದು ಸಾರ್ವಜನಿಕ ಕಾರ್ಯಗಳು ಪುಣ್ಯ ಕಾರ್ಯಗಳೆಂದು ಗೌರವಿಸಲ್ಪಡುತ್ತಿತ್ತು (ಶ್ರೀಮತಿ ರಾಧಾ ಕೃಷ್ಣಮೂರ್ತಿ, ೧೯೯೬, ಪು.೩೨೬). ಮಳೆಯೇ ನೀರಿನ ಮೂಲ, ಮಳೆಯ ನೀರಿನ ಕೆಲಭಾಗ ಹೊಳೆ, ಹಳ್ಳ, ಕೆರೆ, ತೊರೆ, ಬಾವಿ, ಸಾಗರ, ಸರೋವರಗಳಲ್ಲಿ ನೀರು ಪ್ರವಹಿಸುತ್ತದೆ. ಭೂಮಿಯ ಮೇಲೆ ಸಂಗ್ರಹವಾಗುತ್ತದೆ. ಸಾಹಿತ್ಯಿಕ ಮತ್ತು ಶಾಸನಗಳ ಆಧಾರದ ಜೊತೆಗೆ ಈಗಲೂ ಕಾಣುವುವು. ಈಗಲೂ ಹಲವು ಕೆರೆಗಳು ಕುಮ್ಮಟ ನಾಯಕರ ಕಾಲದ ನೀರಿನ ವ್ಯವಸ್ಥೆಯನ್ನು ಪುಷ್ಟೀಕರಿಸುತ್ತದೆ. ಇಂತಹವುಗಳಲ್ಲಿ, ಜೊಲ್ಲನ ಕೆರೆ, ವಕ್ರಾಣಿ ಕೆರೆ, ಮಾದಿಗ ಹಂಪಯ್ಯನ ಕೆರೆ, ರಾಮನ ದೋಣೆ ಇತರ ದೋಣೆಗಳು, ಹಾಲುಬಾವಿಗಳು, ಹೊಸಮಲೆ ದುರ್ಗದಲ್ಲಿ ಅಯ್ಯನ ಕೊಳ್ಳ, ತಾಯಮ್ಮನ ಕೊಳ್ಳ ಮುಖ್ಯವಾಗಿದೆ.

ಜೊಲ್ಲನ ಹೆಸರಿನಲ್ಲಿ ಕುಮ್ಮಟ ದುರ್ಗದಲ್ಲಿ ಬೃಹತ್ತಾದ ಕೆರೆ ಒಂದಿದೆ. ಕುಮ್ಮಟದ ಜನರು ತುಂಗಭದ್ರಾ ನದಿ ದೂರವಿರುವುದರ ಪ್ರಯುಕ್ತ ಮಳೆಗಾಲದಲ್ಲಿ ಸಂಗ್ರಹಿಸಿದ ನೀರನ್ನು ಅವಲಂಬಿಸಿರುತ್ತಿದ್ದರು. ನದಿಯ ಸಮೀಪ ಮೂರು ಕೆರೆಗಳನ್ನು ಮತ್ತು ಸ್ವಾಭಾವಿಕ ದೋಣಿಗಳಲ್ಲಿ ನೀರನ್ನು ಸಂಗ್ರಹಿಸಿಡುತ್ತಿದ್ದರು (Patil C.S., 1991, P 206).

ಕುಮಾರ ರಾಮನಿಗೂ, ಜೊಲ್ಲನಿಗೂ ಇರುವ ಸಂಬಂಧ ಸುಪ್ರಸಿದ್ಧ. ಈ ಜೊಲ್ಲನ ಹೆಸರಿನಲ್ಲಿ ಬೃಹತ್ತಾದ ಕೆರೆಯೊಂದಿದೆ. ಕುಮಾರರಾಮನ ಗುಡ್ಡ, ಕಾಟಪ್ಪನ ಗುಡ್ಡ ಮತ್ತು ಜೊಲ್ಲನ ಗುಡ್ಡದಿಂದ ಹರಿದು ಬರುವ ಈ ನೀರು ಜೊಲ್ಲನ ಕೆರೆಯಲ್ಲಿ ಸಂಗ್ರಹವಾಗುತ್ತದೆ. ನೀರು ಸಂಗ್ರಹ ಹೆಚ್ಚಾಗುವಂತೆ ಮಾಡಲು ಜೊಲ್ಲನ ಗುಡ್ಡ ಮತ್ತು ಕುಮಾರ ರಾಮನ ಗುಡ್ಡದ ಮಧ್ಯದಲ್ಲಿ ಅರ್ಧಚಂದ್ರಕಾರದಲ್ಲಿ ಒಂದು ಏರಿಯನ್ನು ಕಟ್ಟಲಾಗಿದೆ. ಇಂದು ಕೆರೆಯಲ್ಲಿ ನೀರಿಲ್ಲದಿದ್ದರೂ ಇಲ್ಲಿ ಮುಕ್ಕುಂಪೆಯ ಜನರು ಇಂದಿಗೂ ಬೇಸಾಯ ಮಾಡುತ್ತಿದ್ದಾರೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪು.೧೭).

ವಕ್ರಾಣಿ ಕೆರೆ : ಹೆಸರೇ ಸೂಚಿಸುವಂತೆ ಅರ್ಧವೃತ್ತಾಕಾರದಲ್ಲಿದ್ದು ವಕ್ರವಾಗಿದೆ. ಮಾದಿಗ ಹಂಪಯ್ಯನ ಗುಡ್ಡ ಮತ್ತು ಕುಮಾರರಾಮನ ಗುಡ್ಡದ ನಡುವೆ ವಕ್ರವಾಗಿ ಕಟ್ಟಿರುವುದರಿಂದ ಇದಕ್ಕೆ ವಕ್ರಾಣಿ ಎಂಬ ಹೆಸರು ಬಂದಿರಬೇಕು. ಕೆರೆಗೆ ಇಳಿದು ನೀರು ತೆಗೆದುಕೊಂಡು ಹೋಗಲು ವಿಸ್ತಾರವಾಗಿ ಮೆಟ್ಟಿಲುಗಳನ್ನು ಕಲ್ಲಿನಿಂದ ಕಟ್ಟಲಾಗಿದೆ. ಈ ಕೆರೆ ಇಂದಿಗೂ ಉತ್ತಮ ಸ್ಥಿತಿಯಲ್ಲಿದ್ದು ಮೊದಲು ದನಗಳಿಗೆ, ಕುದುರೆಗಳಿಗೆ, ಆನೆಗಳಿಗೆ ಕುಡಿಯುವ ನೀರನ್ನು ಕೊಡಲಾಗುತ್ತಿತ್ತೆಂದು ಹೇಳುವ ವಾಡಿಕೆ (ಪಾಟೀಲ ಸಿ.ಎಸ್., ೧೯೯೧, ಪು.೨೦೬) ಇದೆ.

ಮಾದಿಗ ಹಂಪಯ್ಯನ ಕೆರೆ : ಇದು ಗುಡ್ಡದಲ್ಲಿದ್ದು ಈಶ್ವರ ದೇವಾಲಯದ ಸಮೀಪದಲ್ಲಿ ಕಲ್ಲುಗಳಿಂದ ಕೆರೆಯನ್ನು ಕಟ್ಟಲಾಗಿದೆ. ದೇವಾಲಯಕ್ಕೆ ಬರುವ ಜನರಿಗಾಗಿ ಈ ನೀರನ್ನು ಉಪಯೋಗಿಸಲಾಗುತ್ತಿತ್ತು (ಪುರುಷೋತ್ತಮ ಬಿಳಿಮಲೆ, ೧೯೯೯, ಪು.೧೭).

ರಾಮನ ದೋಣೆ : ಗುಡಿಯ ನೈರುತ್ಯ ದಿಕ್ಕಿನಲ್ಲಿ ಬಂಡೆಗಳ ನಡುವೆ ಹೊಂಡವೊಂದಿದೆ. ಪ್ರಾಕೃತಿಕ ಸಹಜವಾದ ಈ ಹೊಂಡದಲ್ಲಿ ಯಾವಾಗಲೂ ನೀರಿರುತ್ತದೆ. ಹಬ್ಬಕ್ಕೆ ಬಂದ ಜನ ದೋಣೆಯಲ್ಲಿ ಸ್ನಾನ ಮಾಡಿ ಈ ಹೊಂಡದ ನೀರನ್ನೇ ಬಳಸುತ್ತಾರೆ. ಪೂಜೆಗೆ ಸಂಬಂಧಿಸಿದಂತೆ ಗಂಗಾಸ್ನಾನ, ಗಂಗಾಪೂಜೆ, ಸಾಮೂಹಿಕ ಭೋಜನಗಳು ಇತ್ಯಾದಿ ಇಲ್ಲೇ ನಡೆಯುತ್ತವೆ. ಪ್ರಖ್ಯಾತವಾದ ಈ ಹೊಂಡ ರಾಮನ ದೋಣೆ ಎಂದು ಹೆಸರಾಗಿದೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪು.೧೮).

ಹಾಲುಬಾವಿ : ಹಾಲುಬಾವಿ ಕುಮಾರ ರಾಮನ ಗುಡ್ಡದ ಪಶ್ಚಿಮ ದಿಕ್ಕಿಗಿದ್ದು, ಈ ಬಾವಿ ಹಾಳಾಗಿದ್ದುದರಿಂದ ಹಾಲುಬಾವಿ ಎಂಬ ಹೆಸರು ಬಂದಿರಲಿಕ್ಕೆ ಸಾಕು. ಹಳೆ ಕುಮ್ಮಟದ ಜನರು ಈ ನೀರನ್ನು ಉಪಯೋಗಿಸುತ್ತಿದ್ದಿರಬೇಕು. ರಾಮನ ದೋಣೆಯ ಹಾಗೆ ಇನ್ನೂ ನಾಲ್ಕೈದು ಬಾವಿಗಳು ಕುಮಾರ ರಾಮನ ಬೆಟ್ಟದಲ್ಲಿವೆ. ಈ ದೋಣೆಗಳಲ್ಲಿ ನೀರಿದ್ದು ಮಳೆಯ ನೀರು ಜಾಗ್ರತೆಯಾಗಿ ಶೇಖರವಾಗುವಂತೆ ಮಾಡಲಾಗಿದೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪು. ೧೮).

ಒಟ್ಟಾರೆ ಇಲ್ಲಿರುವ ಕೆರೆ ಮತ್ತು ದೋಣಿಗಳು ಇಲ್ಲಿನ ಜನರ ನೀರಿನ ಅವಶ್ಯಕತೆಯನ್ನು ಪೂರೈಸುತ್ತಿತ್ತು ಎಂಬುದು ಸ್ಪಷ್ಟ. ಕುಮ್ಮಟ ದುರ್ಗದ ಅವನತಿಗೆ ನೀರಿನ ಅಭಾವವು ಒಂದು ಕಾರಣವೆನ್ನುವುದು ಎಂದು ಹೇಳಲಾಗಿದೆ (ಮಹಾದೇವ ಸಿ., ೧೯೯೮, ಪು. ೩೩). ಮಾನವನ ಜೀವನ ಅವಲಂಬಿತವಾಗಿರುವುದು ಮುಖ್ಯವಾಗಿ ಕೃಷಿ ಎಂದು ಮೇಲೆ ಹೇಳಲಾಗಿದೆ. ಕೃಷಿಗೆ ಈ ಕೆರೆಗಳ ನೀರನ್ನು ಉಪಯೋಗಿಸಿರಬಹುದಾಗಿದೆ.

ಒಟ್ಟಾರೆ ಕುಮ್ಮಟ ನಾಯಕರ ಕಾಲಾವಧಿ ಅರ್ಧ ಶತಮಾನದಷ್ಟು ದೀರ್ಘವಾಗಿದೆ. ಈ ಕುಮ್ಮಟ ನಾಯಕರ ಅರಸು ಮನೆತನ ಕೇಂದ್ರಸ್ಥಾನ ಕುಮ್ಮಟ ದುರ್ಗ, ಹೊಸಮಲೆದುರ್ಗ. ಹಾನೇಯ. ಆನೆಗೊಂದಿ, ದೊರವದಿಗಳಾಗಿದ್ದವು. ಲಭ್ಯವಾದ ಸಾಹಿತ್ಯಿಕ ಹಾಗೂ ಶಾಸನಗಳ ಆಧಾರದಲ್ಲಿ ಪ್ರಾಚೀನ ಕುಮ್ಮಟ ನಾಯಕರ ಕಾಲದ ಆರ್ಥಿಕ ವ್ಯವಸ್ಥೆಯ ಎಲ್ಲಾ ರೂಪಗಳನ್ನು ಹೇಳುವುದು. ಕಷ್ಟವಾದರೂ, ಇವರು ಹೊಯ್ಸಳ ಮತ್ತು ಸೇವುಣರ ಮಾಂಡಲೀಕರಾದುದರಿಂದ ಅಲ್ಲಿನ ಆರ್ಥಿಕ ವ್ಯವಸ್ಥೆಯ ಜೊತೆಗೆ ತಮ್ಮದೇ ಆದ ಆರ್ಥಿಕತನವನ್ನು ರೂಪಿಸಿಕೊಂಡಿದ್ದರೆನ್ನಬಹುದು.

ಧರ್ಮಗಳು

ಶೈವಧರ್ಮ

ಶೈವ ಧರ್ಮ ಪ್ರಾಚೀನತೆಯ ದೃಷ್ಟಿಯಿಂದ ವೇದ ಕಾಲಕ್ಕಿಂತ ಹಿಂದಿನದು. ಹರಪ್ಪ ಮತ್ತು ಮಹೇಂಜೋದಾರೋಗಳ ಮುದ್ರಿಕೆಗಳು ಪಶುಪತಿಯ ಚಿತ್ರಣವನ್ನು ನೀಡುವುದರ ಮೂಲಕ ಶೈವಧರ್ಮ ಅತಿ ಪ್ರಾಚೀನವೆಂಬುದನ್ನು ಸ್ಪಷ್ಟಪಡಿಸುತ್ತದೆ (Sir John Marshall ; 1920, P.52-53). ಕರ್ನಾಟಕದಲ್ಲಿ ಪ್ರಾರಂಭ ಕಾಲದಿಂದಲೂ ಶೈವಧರ್ಮ ಪ್ರಚಲಿತದಲ್ಲಿದೆ. ಈವರೆಗೆ ತಿಳಿದಂತೆ ಕರ್ನಾಟಕದ ಶೈವ ದೇವಾಲಯದ ಪ್ರಾಚೀನ ಉಲ್ಲೇಖ ಬಾದಾಮಿ ಸಮೀಪದ ವಾಸನದಲ್ಲಿ ಸಿಕ್ರ ೨-೩ನೇ ಶತಮಾನದ ಶಾಸನದಿಂದ ತಿಳಿದು ಬರುತ್ತದೆ (ಪಾಡಿಗಾರ ಶ್ರೀನಿವಾಸ, (ಸಂ.) ಗುರುಲಿಂಗ ಕಾಪಸೆ, ಹಿರೇಮಠ ಆರ್.ಸಿ. ೧೯೯೦, ಪು. ೨೩).

ಪ್ರಸ್ತುತ ಶೈವ ಧರ್ಮವು ಕುಮ್ಮಟ ನಾಯಕರ ಕಾಲಕ್ಕೆ ಸೀಮಿತವಾದುದರಿಂದ ಕುಮ್ಮಟದ ನಾಯಕರ ಕಾಲದಲ್ಲಿ ಪ್ರವಹಿಸಿದ ಶೈವಧರ್ಮದ ಚಿತ್ರಣ ಇಲ್ಲಿದೆ. ಸಾಹಿತ್ಯಿಕ ಆಕರಗಳು, ಕೈಫಿಯತ್ತುಗಳು, ವೀರಗಲ್ಲುಗಳು ಶೈವಧರ್ಮದ ಸ್ಪಷ್ಟತೆಯನ್ನು ತಿಳಿಸುತ್ತದೆ. ಸಾಹಿತ್ಯಿಕ ಆಧಾರಕ್ಕೆ ಸಂಬಂಧಿಸಿದಂತೆ ಕುಮಾರ ರಾಮನಾಥ ಚರಿತ, ಮಹಾಲಿಂಗ ಸ್ವಾಮಿಯ ಪಾಂಚಾಳ ಗಂಗನ ಚೆನ್ನರಾಮನ ಸಾಂಗತ್ಯ, ಬಾಲ ರಾಮನ ಸಾಂಗತ್ಯ, ಹೊಸಕುಮಾರ ರಾಮನ ಸಾಂಗತ್ಯ, ಕುಮಾರ ರಾಮಯ್ಯನ ಚರಿತ್ರೆ, ಕೈಫಿಯತ್ತುಗಳು, ಹರಿಹರನ ರಗಳೆಗಳು, ಧಾರ್ಮಿಕ ಇತಿಹಾಸದ ಮೇಲೆ ಬೆಳಕು ನೀಡುತ್ತದೆ. ಕಂಪಿಲರಾಯನು ಕಂಪಲಿಯ ಸೋಮೇಶ್ವರ ದೇವರ ವರಪ್ರಸಾದದಿಂದ ಹುಟ್ಟಿದುದರಿಂದ ತನ್ನ ಮಗನಿಗೆ ಕಂಪಲಿಯ ಸೋಮೇಶ್ವರನ ಹೆಸರನ್ನೇ ಇಟ್ಟಿನೆಂದಿದೆ (ಕಲಬುರ್ಗಿ ಎಂ.ಎಂ. ವೀರಣ್ಣ ರಾಜೂರು, ೧೯೯೯, ಪು.೧೧). ಕರ್ನಾಟಕ ಕೈಫಿಯತ್ತು ಕೂಡ ಮುಮ್ಮಡಿ ಸಿಂಗನಿಗೆ

ಸಂತಾನವಿಲ್ಲದಾಗ ಕಂಪಲಿ ಸೋಮೇಶ್ವರನ ದರ್ಶನದಿಂದ ಪುತ್ರ ಸಂತಾನವಾಯಿತೆಂದು ಉಲ್ಲೇಖಿಸುತ್ತದೆ (ಕಲಬುರ್ಗಿ ಎಂ.ಎಂ. ೧೯೯೪, ಪು.೪೯೨).

ನಂಜುಂಡ ಕವಿಯ ಕುಮಾರ ರಾಮನಾಥ ಚರಿತದಲ್ಲಿ ಕುಮಾರರಾಮ ಪೃಥ್ವಿಯಲ್ಲಿ ಜನನವಾಗುವ ಹಿನ್ನೆಲೆಯಲ್ಲಿ ಶಿವನ ಓಲಗದಲ್ಲಿ ಶಿವನು ಪಾರ್ವತಿಯೊಂದಿಗೆ ಇರುವ ಸಮಯದಲ್ಲಿ ಓರ್ವ ಗಣನಾಥನು ಓಲಗಕ್ಕೆ ಬಂದು ಪರಮೇಶ್ವರನಿಗೆ ಮಾತ್ರ ನಮಸ್ಕರಿಸಿ ಹೋಗುವನು. ಇದರಿಂದ ಪಾರ್ವತಿಯು ಕೋಪಗೊಂಡು ಋಷಿಮುನಿಗಳು ನನಗೆ ನಮಿಸುವಾಗ ಇವನಾರೆಂದು ಪಾರ್ವತಿ ಕೇಳಿದಾಗ ಈ ಗಣನಾಥನೆ ಪಾಂಡವರಲ್ಲಿ ಅರ್ಜುನನಾಗಿದ್ದವನೆಂದು ಇವನ ಪರವದುಗಳನ್ನು ನೋಡದವನು ಹಾಗೂ ವನಿತೆಯರಿಗೆ ಕಾಯದಿಂದ ನಮಸ್ಕರಿಸುವುದಿಲ್ಲವೆಂದು ಶಿವನು ಪಾರ್ವತಿಗೆ ಹೇಳಿದಾಗ ಇವನಿಗೆ ಅಹಂಕಾರ ಹೆಚ್ಚಾಯಿತು. ಆದುದರಿಂದ ಇವನು ಪುನಃ ಭೂಮಿಯಲ್ಲಿ ಹುಟ್ಟುವಂತೆ ಮಾಡುವೆನೆಂದು ಶಾಪವನಿತ್ತಳೆಂಬಿದೆ. ಈ ಹಿನ್ನೆಲೆಯಲ್ಲಿ ಇವರು ಶೈವ ಮತಾವಲಂಬಿಗಳೆಂದು ಕುಮಾರ ರಾಮನಾಥ ಚರಿತದ ಪೀಠಿಕಾ ಸಂಧಿಯಲ್ಲಿ ಉಲ್ಲೇಖಿಸಿದೆ (ದೇವೀರಪ್ಪ ಹೆಚ್. ೧೯೫೫, ಪೀಠಿಕಾ ಸಂಧಿ-೧). ಜಟ್ಟಂಗಿ ರಾಮೇಶ್ವರನ ದಯದಿಂದ ಹರಿಯಾಳ ದೇವಿಗೆ ಕುಮಾರ ರಾಮನೂ, ದಾದಿಯೊಬ್ಬಳ ಹೊಟ್ಟೆಯಲ್ಲಿ ಖಳ್ಳರಾಮನೂ (ಕಳ್ಳರಾಮ) ಹುಟ್ಟುತ್ತಾರೆ. ಇಲ್ಲಿ ಜಟ್ಟಂಗಿ ರಾಮೇಶ್ವರನೆಂದರೆ ಶಿವನೆ. ಇವನ ದಯದಿಂದಲೇ ಕುಮಾರ ರಾಮನ ಜನನವಾಯಿತೆಂದು ಪಾಂಚಾಳ ಗಂಗನ ಚೆನ್ನರಾಮನ ಸಾಂಗತ್ಯ ತಿಳಿಸುತ್ತದೆ (ವರದರಾಜರಾವ್ ೧೯೬೪ ಪು. ೯೬. ಸಂಧಿ-೩, ಪದ್ಯ ೪೨-೪೩).

ಮಹಾಲಿಂಗ ಸ್ವಾಮಿಯ ಬಾಲರಾಮನ ಸಾಂಗತ್ಯದಲ್ಲಿ ಕಂಪಿಲನು ಜಟ್ಟಂಗಿ ರಾಮೇಶ್ವರನ ಗುಡಿಯಲ್ಲಿ ನೀನು ಈಶ್ವರನು ಕಾಲ ಭೈರವನಂಥ ಕುಮಾರನಾಗಲಿ ಎಂದು ಕೇಳಿದಾಗ ತ್ರಿಶೂಲದ ಪ್ರಸಾದವನ್ನು ಶಿವನು ಕೊಟ್ಟನೆಂದು, ಈ ಪ್ರಸಾದ ಫಲದಿಂದ ಕುಮಾರ ರಾಮನ ಜನನವಾಯಿತೆಂದಿದೆ. ಕಂಪಿಲರಾಯನು ಪುತ್ರ ವರವನ್ನು ಬೇಡುವಾಗ ರಾಮೇಶ್ವರನಿಗೆ ಪೂಜೆ ಪುನಃಸ್ಕಾರಗಳನ್ನು ಮಾಡಿರುವನು ಇದರಿಂದ ಕುಮ್ಮಟದ ನಾಯಕರು ಶೈವ ಅನುಯಾಯಿಗಳೆಂದು ಸ್ಪಷ್ಟವಾಗುವುದು (ವರದರಾಜರಾವ್, ೧೯೬೪, ಪು.೧೨೧).

ಇದೇ ಕೃತಿಯಲ್ಲಿ ಈಶ್ವರನಿಂದ ಕಂಪಿಲರಾಯನು ಪ್ರಸಾದವನ್ನು ಪಡೆದು ಪುತ್ರ ಸಂತಾನವಾದುದನ್ನು ಸ್ವಪ್ನದಲ್ಲಿ ಕಾಣುತ್ತಾನೆ. ಈ ಸ್ವಪ್ನದಲ್ಲಿ ಈಶ್ವರನು ಪ್ರತ್ಯಕ್ಷನಾಗಿ ''ಹೆದರ ಬೇಡವೊ ಮಗನೆ ಹೃದಯದೊಳೋರ್ವನು ಚದುರ ಪ್ರತಾಪ ಜನಿಸುವನು'' ಎಂದು ನುಡಿಯುವನು. ಸಾರಂಗ ಮುನಿಗಳು ಕುಮಾರ ರಾಮನ ಭವಿಷ್ಯವನ್ನು ಹೇಳಿ, ಜನನಿಯಿಂದ ಮರಣವಾಗುವುದೆಂದು ತಿಳಿಸುತ್ತಾನೆ. ನಾರದರು ಹೊಸಮಲೆಯ ತಪೋಮಗ್ನರಾಗಿರುವ ಋಷಿ ಮುನಿಗಳಿಗೆ ತಿಳಿಸುತ್ತಾರೆ. ಇಲ್ಲಿ ರಾಮನನ್ನು ಪರಶುರಾಮನೆಂದು, ರೇಣುಕೆಯು ರತ್ನಾಜಿ ಜನ್ಮದಲ್ಲಿ ಹುಟ್ಟಿರುವರೆಂಬ ಅಂಶವನ್ನು ಬೆಳಕಿಗೆ ತರುತ್ತಾರೆ. ಇದಕ್ಕೆ ಹೊಸಮಲೆದುರ್ಗದ ಶಿಲಾಪಟ್ಟಿಕೆಯಲ್ಲಿ ನಾರದ, ಈಶ್ವರ, ವೀರಭದ್ರ, ಮೂರ್ತಿಶಿಲ್ಪ ಇದಕ್ಕೆ ಪೂರಕ ಸಾಕ್ಷಿಯನ್ನೊದಗಿಸಿದೆ.

ಸಾಹಿತ್ಯಿಕ ಆಧಾರಕ್ಕೆ ಸಂಬಂಧಿಸಿದಂತೆ ಹೊಸ ಕುಮಾರ ರಾಮನ ಸಾಂಗತ್ಯದಲ್ಲಿ, ಕುಮಾರ ರಾಮನಾಥ ಚರಿತದಲ್ಲಿ, ಕೈಫಿಯತ್ತುಗಳಲ್ಲಿ, ಶೈವ ಧರ್ಮದ ಕುರುಹುಗಳು ಕಾಣಸಿಗುತ್ತವೆ. ಹೊಸಕುಮಾರ ರಾಮನ ಸಾಂಗತ್ಯದಲ್ಲಿ ಕಾಪಾಲಧರ,

ಕಾಪಾಲಿ, ಕಾಪಾಲಭೈರವ ಎಂಬ ಹೆಸರುಗಳು ಶಿವನ ಹೆಸರು ಮತ್ತು ಶಿವನ ರೂಪಕ್ಕೆ ಸಂಬಂಧಿಸಿದವು (ಕಲಬುರ್ಗಿ ಎಂ.ಎಂ. ವೀರಣ್ಣ ರಾಜೂರು, ೧೯೯೯, ಪು.೩೧೬). ಹೊಸಕುಮಾರ ರಾಮನ ಸಾಂಗತ್ಯದಲ್ಲಿ ಕುಮಾರ ರಾಮನಾಥನು ಜಟ್ಟಿಂಗಿ ರಾಮೇಶ್ವರನ ಅನುಗ್ರಹದಿಂದ ಹುಟ್ಟಿರುವನೆಂದಿದೆ (ಕಲಬುರ್ಗಿ ಎಂ.ಎಂ., ವೀರಣ್ಣ ರಾಜೂರು, ೧೯೯೯, ಪು. ೩೧).

ಕುಮಾರ ರಾಮಯ್ಯನ ಚರಿತೆಯಲ್ಲಿ ಕುಮಾರ ರಾಮನ ಜನನವಾಗುವುದಕ್ಕೆ ಮುನ್ನ ಕೈಲಾಸದಲ್ಲಿ ಶಿವನ ಒಡ್ಡೋಲಗದಲ್ಲಿ ಶಿವ ಪಾರ್ವತಿಯವರ ನಿರ್ಧಾರದಂತೆ ಭೂಮಿಯಲ್ಲಿ ರಾಮನಾಥನ ಅವತಾರವಾಯಿತೆಂದಿದೆ (ಕಲಬುರ್ಗಿ ಎಂ.ಎಂ., ೨೦೦೧ ಪು.೬-೧೨). ಒಟ್ಟಾರೆ ಕುಮಾರರಾಮನ ಜನನ ಶಿವನ ವರ ಪ್ರಸಾದದಿಂದ ಆಯಿತೆಂದು ಇವರು ಶೈವ ಪಂಥಕ್ಕೆ ಸೇರಿದವರೆಂಬುದನ್ನು ಸಾಹಿತ್ಯಿಕ ಮತ್ತು ಕೈಫಿಯತ್ತುಗಳು ಉಲ್ಲೇಖಿಸುತ್ತವೆ.

ಲಭ್ಯವಿರುವ ಶಾಸನಗಳು ಕೂಡ, ಇವರು ಶೈವ ಮತಾವಲಂಬಿಗಳು ಎಂಬುದನ್ನು ಪುಷ್ಟೀಕರಿಸುತ್ತವೆ. ಶಿವನ ಪುರಾಣಗಳಿಗೆ ಸಂಬಂಧಿಸಿದಂತೆ ಅಮೃತ ಮಥನ, ಕಾಮದಹನ ಹಾಗೂ ಗಿರಿಜಾಕಲ್ಯಾಣದ ಕುರಿತು ಆನೆಗೊಂದಿಯ ತಾಮ್ರಶಾಸನ ಉಲ್ಲೇಖಿಸುತ್ತದೆ(VPR, 1987-88, P.17-34). ಆನೆಗೊಂದಿಯ ಇನ್ನೊಂದು ಶಾಸನ ಇವರು ಭೈರವನ ಪರಮಭಕ್ತರೆಂದಿದೆ. ಈ ಶಾಸನದಲ್ಲಿ ಆನೆಗೊಂದಿಯನ್ನು ಮಹಾಪುರವೆಂದು ಕರೆದಿದ್ದು ಸಿಂಗೆನಾಯಕನ ಭಟರು (ಸೈನಿಕರು) ಭೈರವನ ಪ್ರತಿಷ್ಠೆಯನ್ನು ಮಾಡಿಸಿದರು ಎಂದಿದೆ (ಮಂಜುನಾಥಯ್ಯ ಟಿ.ಎಂ., ೨೦೦೧, ಪು. ೧೨೮). ಈ ಶಾಸನದ ಅಂತ್ಯದಲ್ಲಿ ''ಸಮಯಶಾಸನ ಪುರಾಣಂ ಪಾರ್ವತೀಶ ವಿರೂಪಾಕ್ಷ ನಕ್ಷಯಂ ನಾಶವಾಗದಿರುವುದು ಎಂಬುದನ್ನು ಅರ್ಥೈಸುತ್ತದೆ. ಇಲ್ಲಿ ಬರುವ ಅಮೃತ ಮಥನ, ಕಾಮದಹನ, ಮತ್ತು ಗಿರಿಜಾ ಕಲ್ಯಾಣ ಇವು ಶೈವ ಪಂಥವೆಂಬುದನ್ನು ಪುಷ್ಟೀಕರಿಸುತ್ತದೆ(VPR. 1987-88. PP 17-34).

ಕ್ರಿ.ಶ. ೧೩೦೦ ಶತಮಾನದ ಕಲ್ಲೇದೇವರ ಪುರದ ಶಾಸನದಲ್ಲಿ ಕಲಿದೇವರಿಗೆ ದಾನಗಳನ್ನು ಮಾಡಿದ ಉಲ್ಲೇಖವಿದೆ. ಕಲಿ ದೇವರೆಂದರೆ ಈಶ್ವರ. ಹೀಗಾಗಿ ಇವರು ಶೈವ ಧರ್ಮಕ್ಕೂ ಪ್ರೋತ್ಸಾಹ ನೀಡುತ್ತಿದ್ದಾರೆಂದು ಈ ಶಾಸನದಿಂದ ತಿಳಿದು ಬರುತ್ತದೆ (EC. XI. Jagalur, No.30).

ಮರಡಿ ಪುರದ ಶಾಸನ ಹಂಪೆಯ ಹೇಮಕೂಟದಲ್ಲಿಯ ಜಡೆಯ ಶಂಕರ ದೇವರಿಗೆ ದಾನ ಮಾಡಿದ ವಿಷಯವನ್ನು ದಾಖಲಿಸಿದೆ (EC. VIII. Mandya. ಕವಿಶಾಸಂ-೩, ನಂ. ೫೭, ಪು.೪೮-೪೯). ಹಂಪೆಯ ಹೇಮಕೂಟದ ಶಾಸನ ಶ್ರೀ ಸಂಗಮೇಶ್ವರ ದೇವರ ದಿವ್ಯಪಾದ ಪದ್ಮಾರಾಧಕರು ಎಂದು ತಮ್ಮನ್ನು ಕರೆದುಕೊಂಡಿದ್ದಾರೆ. ಕಂಪಿಲರಾಯನ ತಾಯಿ ಮಾರಾನಾಯಕಿತಿ ತಂದೆ ಮುಮ್ಮಡಿ ಸಿಂಗೆಯ ನಾಯಕ ಹಾಗೂ ಪೆರುಮೆಯ ನಾಯಕನ ಹೆಸರಿನಲ್ಲಿ ಶಿವಾಲಯ ಕಟ್ಟಿಸಿರುವರು (VPR. 1983-84. No. P. 32, ವಿಜಯನಗರ ಅಧ್ಯಯನ ಸಂ. ೬, ನಂ. ೨೩, ಕವಿಶಾಸಂ-೩ ೨೦೦೦, ನಂ. ೫೯, ಪು.೫೦).

ಈ ಕಾರಣದಿಂದ ಕುಮ್ಮಟ ನಾಯಕರು ಶೈವ ಸಂಪ್ರದಾಯವನ್ನು ಅನುಸರಿಸಿದ್ದರೆಂಬುದಂತು ಸ್ಪಷ್ಟ. ಪ್ರಧಾನ ಮಂತ್ರಿ ಬೈಚಯ ದಂಡನಾಯಕ ಮೆಟ್ರಿಯ ಮಲ್ಲಿಕಾರ್ಜುನ ದೇವಾಲಯದ ಛತ್ರಕ್ಕೆ ಭೂಮಿಯನ್ನು ದಾನ ಮಾಡಿರುತ್ತಾನೆ

(Channabasappa S. Patil, 1997, No. 441, 143) ಕ್ರಿ.ಶ. ೧೩೦೦ರ ಹರಿಹರದ ಶಾಸನವೊಂದು ಕಂಪಿಲರಾಯನು ಹರಿಹರೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಪುನಃ ದತ್ತಿಗಳನ್ನು ನೀಡಿದನೆಂದಿದೆ. ಈ ಎಲ್ಲಾ ಶಾಸನಗಳ ಆಧಾರದಿಂದ ಕುಮ್ಮಟದ ನಾಯಕರು ಶೈವಧರ್ಮದವರಾಗಿ, ಇವರು ಶೈವ ಧರ್ಮ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿದ್ದರು ಎನ್ನುವುದನ್ನು ಶಾಸನಗಳು ಪ್ರತಿಪಾದಿಸಿವೆ.

ಇಲ್ಲಿ ಪುರಾತತ್ವ ಆಕರಗಳು ಒಂದು ಗಮನಾರ್ಹವಾದ ಅಂಶ. ಕುಮ್ಮಟ ದುರ್ಗದಲ್ಲಿ ಮಲ್ಲಿಕಾರ್ಜುನ ಗುಡಿ, ಜಟ್ಟಂಗಿ ರಾಮೇಶ್ವರ ಗುಡಿ, ಹೊಸಮಲೆದುರ್ಗದಲ್ಲಿ ಈಶ್ವರನ ಗುಡಿ, ಕಂಪಲಿಯ ಸೋಮೇಶ್ವರ ಗುಡಿ, ದೊರವಡಿಯ ರಾಮಲಿಂಗೇಶ್ವರ ಗುಡಿ. ಕಂಪಿಲರಾಯನ ಹಾಗೂ ಇಲ್ಲಿನ ಶಿಲ್ಪ ಮೂರ್ತಿಗಳು ಕುಮ್ಮಟದ ನಾಯಕರ ಕಾಲದಲ್ಲಿ ಶೈವ ಸಂಪ್ರದಾಯಕ್ಕೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿದ್ದರು.

ಶಕ್ತಿ ಆರಾಧನೆ

ಧರ್ಮ ಎಂಬುದು ಲೌಕಿಕ ಮತ್ತು ಪರಮಾರ್ಥಿಕ. ಮೊದಲನೆಯದು ರೂಢಿಗತವಾಗಿ ಜನರಲ್ಲಿ ಆಚರಣೆಯಲ್ಲಿರುತ್ತದೆ. ಎರಡನೇಯದು ಧರ್ಮಗ್ರಂಥಗಳು ಉಕ್ತವಾಗಿರುವ ತಾತ್ವಿಕ ರೂಪ. ಎಲ್ಲಿಯವರೆಗೆ ಧರ್ಮದ ಮೂಲ ತತ್ವಗಳಿಗೆ ಭಂಗ ಬರುವುದಿಲ್ಲವೋ ಅಲ್ಲಿಯವರೆಗೆ ಲೌಕಿಕ ಧರ್ಮಾಚರಣೆಗೆ ಆಕ್ಷೇಪ ಇರುವುದಿಲ್ಲ. ಸಾಹಿತ್ಯಿಕ ಕೃತಿಗಳಲ್ಲಿ ಉಲ್ಲೇಖಿಸಲಾದ ಧಾರ್ಮಿಕ ಆಚರಣೆಯನ್ನು ಪರಿಶೀಲಿಸಿದರೆ ಮುಖ್ಯವಾಗಿ ಶಕ್ತಿದೇವತೆಗಳಿಗೆ ಹರಕೆ ಹೋರುವ ಪದ್ಧತಿ ಮೊದಲು ಇತ್ತು. ನಂಜುಂಡ ಕವಿಯ ಈ ಕೃತಿಯಲ್ಲಿ ಕುಟಿಲದೇವತೆಗಳಿಗೆ ಹರಕೆ ಆಹ್ವಾನೆ ಉಪಾಸನೆಯ ಕುರಿತು ಮಾಹಿತಿ ಸಿಗುತ್ತವೆ. ಕೆಳವರ್ಗದ ಜನತೆಗೆ ಉಪಕಾರಿಗಳಾಗಿ ಅವರು ಪೂಜೆಯನ್ನು ಕೈಗೊಳ್ಳುವ ದೈವಗಳೆಂದರೆ ಸಾಮಾನ್ಯವಾಗಿ ಸ್ತ್ರೀ ದೇವತೆಗಳು (ಚಿದಾನಂದ ಮೂರ್ತಿ ಎಂ. ೧೯೭೯, ಪು. ೧೦೦). ಕುಮಾರರಾಮನ ಮನಮೋಹಕ ರೂಪಕ್ಕೆ ಸೋತ ರಾಣಿರತ್ನಾಜಿಗೆ ಅವಳ ದೂತಿಸಂಗಿ ಧೈರ್ಯ ಹೇಳಿ ಹೆಸರುಳ್ಳ ''ಮಾಕಾಳಿಯುಂಟು ಚಾಮುಂಡಿಯುಂಟು... ಏನ ಬೇಡಿದೊಡೆ ಬೆಸನುಳ್ಳ ಕುಟಿಲ ದೇವತೆಯುಂಟು'' ಈ ಕುಟಿಲದೇವತೆಗಳೆಲ್ಲ ತನ್ನ ತುಟಿಯ ಮಂತ್ರಾಕ್ಷರದಿಂದ ನಟಿಸುತ್ತಿಹವು ಅವುಗಳ ಮೇಲೆ ತನಗಿರುವ ಸ್ವಾಮಿತ್ವವನ್ನು ಸಂಗಿ ಹೆಮ್ಮೆಯಿಂದ ಹೇಳಿ ಹೇಳಿಕೊಳ್ಳುತ್ತಾಳೆ. ಅವರನ್ನು ಬೇಡಿ ರಾಮನನ್ನು ನಿನಗೆ ಒಲಿಯುವಂತೆ ಮಾಡುವೆನೆಂದು ಈ ಶಕ್ತಿ ದೇವತೆಗಳಿಲ್ಲದೆ ಏನನ್ನು ಬೇಕಾದರೂ ಮಾಡಲು ಸಾಧ್ಯವಾಗುವುದಿಲ್ಲ? ಎಂದು ಆ ದೇವತೆಗಳ ಹಿರಿಮೆಗಳ ಹೆಸರನ್ನು ಹೆಸರಿಸಿ ಕಾರ್ಯ ಸಾಧನೆ ಮಾಡುವುದಾಗಿ ಧೈರ್ಯಹೇಳುತ್ತಾಳೆ. ಶಕ್ತಿ ದೇವತೆಗಳ ಪೂಜೆಯನೊಲಿದ ಭಕ್ತಿಯನ್ನು ಮಾಡಿ ರಾಮನನ್ನು ವಿಶ್ಯಕ್ತಿಗೊಳಿಸಿ ನಿನ್ನನ್ನು ಕೂಡಬೇಕೆಂಬಾ ಶಕ್ತಿಯ ಪುಟ್ಟಿಸಿ ಕೊಡುವೆ ಎಂದೆನ್ನುತ್ತಾಳೆ(ದೇವೀರಪ್ಪ ಹೆಚ್. ೧೯೫೫. ಪು. ೨೪). ಸಂಗಿ ಎಷ್ಟು ವಿಧದಲ್ಲಿ ಈ ದೇವತೆಗಳನ್ನು ಪೂಜಿಸಿದಳು ಎಂಬ ವಿಸ್ತಾರವಾಗಿ ವಿವರಗಳನ್ನು ನಂಜುಂಡ ಕವಿ ಕೊಡುತ್ತಾನೆ(ದೇವೀರಪ್ಪ ಹೆಚ್., ೧೯೫೫, ಪದ್ಯ ೧೮, ಪು. ೨೬). ಒಟ್ಟಾರೆ ಕಷ್ಟವನ್ನು ಅನುಭವಿಸಿ ಆದರೂ ಸಾಧನೆ ಮಾಡುತ್ತೇನೆಂಬುದು ಇಲ್ಲಿ ನಾಡಾಡಿ ದೇವರುಗಳ ಆರಾಧನೆ ಹಿಂದಿನಿಂದ ಬೆಳೆದುಬಂದಿರಬೇಕು. ಶಕ್ತಿ ಆರಾಧನೆಯನ್ನು

ಸಾಹಿತ್ಯಿಕ ಆಧಾರಗಳು ಪುಷ್ಟೀಕರಿಸುತ್ತವೆ. ಪುರಾತತ್ವ ಆಕರಗಳನ್ನು ಪರಿಶೀಲಿಸಿದರೆ ಕಾಳಿ, ದುರ್ಗ, ರೇಣುಕಾದೇವಿಯರ ಆರಾಧನೆ ಇತ್ತೆಂಬುದಂತೂ ಸ್ಪಷ್ಟ. ಕುಮ್ಮಟದುರ್ಗದಲ್ಲಿ ಕಾಳಿ ತಾಯಮ್ಮ ಚಿತ್ರದುರ್ಗದ ಉಚ್ಚಂಗಮ್ಮನ ಗುಡಿ, ಹುಲಿಗೆಯ ಹುಲಿಗೆಮ್ಮನ ಗುಡಿ, ಕಡಿರಾಮಪುರದ ತಾಯಮ್ಮನ ಶಿಲ್ಪ, ಹೊಸಮಲೆದುರ್ಗದ ಕಾಳಿ ಮತ್ತು ದೇವಿಯ ಶಿಲ್ಪಗಳು ದೂರವದಿಯ ತಾಯಮ್ಮನ ಗುಡಿ, ಆನೆಗೊಂದಿಯ ದುರ್ಗಾದೇವಿ ಗುಡಿ ಮುಂತಾದವು ಇಲ್ಲಿ ಶಕ್ತಿ ದೇವತೆಗಳ ಆರಾಧನೆ ಇತ್ತೆಂದು ಸಾಹಿತ್ಯಿಕ ಆಧಾರಗಳ ಜೊತೆಗೆ ಪುರಾತತ್ವ ಆಧಾರಗಳು ಸ್ಪಷ್ಟಪಡಿಸಿವೆ.

ವೈಷ್ಣವ ಧರ್ಮ

ವೈಷ್ಣವ ಧರ್ಮ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಆಧಾರಗಳು ತುಲನಾತ್ಮಕ ದೃಷ್ಟಿಯಿಂದ ನೋಡುವುದಾದರೆ ಕಡಿಮೆ ಎಂದೇ ಹೇಳಬೇಕು. ಕುಮ್ಮಟದ ನಾಯಕರ ಅಂತ್ಯದ ಕಾಲದಲ್ಲಿ ಮಳಖೇಡದ ವಾದಿರಾಜ ಯತಿಗಳನ್ನು ಕುಮಾರ ರಾಮನಾಥನು ನಿಂದಿಸಿದ್ದನು. ಆಪಾದನೆಗಳನ್ನು ಮಾಡಿ ವಿಪ್ರರ ಶಾಪವು ರಾಮನಿಗೆ ಬಂದರೆ ಅವನನ್ನು ಸುಲಭದಲ್ಲಿ ಜಯಿಸಬಹುದೆಂದು, ವಾದಿವಿದ್ಯಾನಂದರ ಶಿಷ್ಯರ ಮೂಲಕ ಕುಮಾರ ರಾಮನು ನಿಂದಿಸಿದನೆಂದು ಮಾತಂಗಿ ಹೇಳಿ ಕಳುಹಿಸಿ ವಿಪ್ರರ ಶಾಪವು ರಾಮನಾಥನ ಮೇಲೆ ಬರುವಂತೆ ನಡೆಸಿದ ತಂತ್ರವಾಗಿದೆ (ವರದರಾಜರಾವ್, ೧೯೬೪, ಪು. ೬೨-೬೩). ವಿಪ್ರ ನಿಂದೆಯನ್ನು ಮಾಡಿಸಲು ಬಂದವಾದಿ ವಿದ್ಯಾನಂದ ಸ್ವಾಮಿಗಳ ಶಿಷ್ಯರಿಗೆ ರಾಮನು ಸನ್ಮಾನಿಸಿ ಕಳುಹಿಸಿದನೆಂದಿದೆ (ವರದರಾಜರಾವ್, ೧೯೬೪, ಪು. ೬೩). ಕುಮ್ಮಟ ನಾಯಕರ ಕಾಲದಲ್ಲಿ ವೈಷ್ಣವ ಸಂಪ್ರದಾಯವನ್ನು ತಿಳಿಯಲು ಈ ಮೇಲಿನ ಅಂಶಗಳು, ಕುಮಾರ ರಾಮನು ವೈಷ್ಣವ ಸಂಪ್ರದಾಯವನ್ನು ವಿರೋಧಿಸುತ್ತಿರಲಿಲ್ಲ ಎಂಬುದಕ್ಕೆ ಸಾಕ್ಷಿಯಾಗಿವೆ. ಆನೆಗೊಂದಿಯ ತಾಮ್ರ ಶಾಸನದ ಶಿವನ ಮೂರು ಪುರಾಣಗಳಲ್ಲಿ ಹರಿಬ್ರಹ್ಮ, ಬೃಹಸ್ಪತಿ, ದೇವೇಂದ್ರರ ಉಲ್ಲೇಖವಿದೆ (VPR. 1987-88 PP.19.21).

ಕ್ರಿ.ಶ. ೧೨೮೦ರ ಕಲ್ಲೇದೇವರ ಪುರದ ಶಾಸನದಲ್ಲಿ, ಹರಿ, ಗುಹ, ರಾಮ, ಭೀಮ, ನಾರಾಯಣ ಎಂದು ವಿಷ್ಣುವಿನ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ (EC, XI. Jagalur No. 30). ಕ್ರಿ.ಶ. ೧೩೦೦ರಲ್ಲಿ ಕಂಪಿಲರಾಯನು ಹರಿಹರದ, ಹರಿಹರೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಬ್ರಹ್ಮ ದತ್ತಿಗಳನ್ನು ನೀಡಿರುವನೆಂದಿದೆ (EC XI Davanagere. No. 26). ಕುಮ್ಮಟದ ಸಮೀಪವಿರುವ ಎಮ್ಮೆ ಗುಡ್ಡದಲ್ಲಿರುವ ಕನಕಾಚಲ ದೇವಾಲಯ ಕುಮ್ಮಟದಲ್ಲಿರುವ ಆಂಜನೇಯ ದೇವಾಲಯ, ಕನಕಗಿರಿಯ ಕನಕಾಚಲ ದೇವಾಲಯ ಹೊಸಮಲೆದುರ್ಗದ ರಾಮನಾಥ ದೇವಾಲಯದಲ್ಲಿರುವ ಕೇಶವ ಶಿಲ್ಪ, ಆಂಜನೇಯ ದೇವಾಲಯ, ದೊರವದಿಯಲ್ಲಿರುವ ವಿಷ್ಣು ಶಿಲ್ಪಗಳು ವೈಷ್ಣವ ಧರ್ಮವು ಪ್ರಚಲಿತದಲ್ಲಿತ್ತು ಎಂಬುದನ್ನು ಸಾಬೀತು ಪಡಿಸಿದೆ. (ಸುಜಾತ ಮಲ್ಲನ ಗೌಡ, ೨೦೦೦, ಪು. 372. VPR. 1987-88. P. 209. VPR. 1988-91. PP. 236-247).

ಬಾಲರಾಮನ ಸಾಂಗತ್ಯದಲ್ಲಿ ಹೇಳುವ ಸಾಹಿತ್ಯಿಕ ಆಕರಗಳಲ್ಲಿ ಕುಮಾರ ರಾಮನನ್ನು ಪರಶುರಾಮನ ಅವತಾರವೆಂದು ಉಲ್ಲೇಖಿಸಲ್ಪಟ್ಟಿದೆ. ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದಲ್ಲಿ ಸಾಹಿತ್ಯಿಕ

ಆಕರಗಳು ಕಡಿಮೆಯಾದರೂ ಇಲ್ಲಿನ ವೈಷ್ಣವ ಪಂಥದ ದೇವಾಲಯಗಳು, ಇವು ಇಲ್ಲಿ ವೈಷ್ಣವ ಧರ್ಮವಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ.

ಜೈನಧರ್ಮ

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮ ಇತಿಹಾಸವೇ ಆಗಿದೆ (Saletore B.A., 1934, P. 2). ಜೈನಧರ್ಮ, ಕರ್ನಾಟಕಕ್ಕೆ ಕ್ರಿಸ್ತಪೂರ್ವ ಕಾಲದಲ್ಲಿಯೇ ಪ್ರವೇಶಿಸಿತು. ಕರ್ನಾಟಕಲ್ಲಿ ಅದರಲ್ಲೂ ಹೆಚ್ಚಾಗಿ ದಕ್ಷಿಣ ಕರ್ನಾಟಕದಲ್ಲಿ ಬಾದಾಮಿ ಗುಡ್ಡದ ಗವಿಗಳು ದಿಗಂಬರರು ವಾಸಮಾಡಲು ಪರಿಸರವನ್ನು ಒದಗಿಸಿತು. ಶ್ವೇತಾಂಬರರು ಕ್ರಿ.ಶ. ಒಂದನೇಯ ಶತಮಾನದಲ್ಲಿ ಮಾನ್ಯಖೇಡದ ಪರಿಸರದಲ್ಲಿ ಇದ್ದರು (MAR, 1923, P. 10-11). ಕ್ರಿ.ಶ. ೨-೩ನೇ ಶತಮಾನದಲ್ಲಿ ಶ್ವೇತಾಂಬರ ದಿಗಂಬರರೆಂಬ ಎರಡು ಕವಲುಗಳು ಕಾಣಿಸಿಕೊಂಡವು (ಚಿದಾನಂದ ಮೂರ್ತಿ ಎಂ.ಎಂ. ೧೯೭೯, ಪು.೨೧).

ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲದ ಜೈನಧರ್ಮಕ್ಕೆ ಸೀಮಿತವಾದುದರಿಂದ ಈ ಕುರಿತಂತೆ ಸಾಹಿತ್ಯಿಕ ಆಕರಗಳು ಶಾಸನಗಳು, ಬಸದಿಗಳು ಹಾಗೂ ಜೈನ ಮೂರ್ತಿ ಶಿಲ್ಪಿಗಳು ಇಲ್ಲಿ ಜೈನಧರ್ಮ ಪ್ರವಹಿಸಿತ್ತು ಎಂಬುದನ್ನು ಪುಷ್ಟೀಕರಿಸಿವೆ. ಉತ್ತರ ಕರ್ನಾಟಕದಲ್ಲಿ, ಕೊಪ್ಪಳ ಮತ್ತು ಬಾದಾಮಿ ಗುಡ್ಡಗಳ ಗವಿಗಳು, ದಿಗಂಬರರು ವಾಸಮಾಡುವ ಸ್ಥಳವೆಂದು ಉಲ್ಲೇಖಿಸಲಾಗಿದೆ.

(ಪ್ರಸ್ತುತ ಕೊಪ್ಪಳ ಭಾಗ ಜೈನ ಕೇಂದ್ರವಾಗಿದ್ದು ಇದು ಕುಮ್ಮಟ ದುರ್ಗದ ಪರಿಸರಕ್ಕೆ ಒಳಪಡುತ್ತದೆ. ಸಾಹಿತ್ಯಿಕ ಆಕರಗಳಾದ ಕುಮಾರರಾಮ ಚರಿತದಲ್ಲಿ ಕುಮಾರ ರಾಮನ ಕುರಿತಾದ ಕನ್ನಡ ಕಾವ್ಯಗಳಲ್ಲಿ ನಿರೂಪಿಸಿದಂತೆ ಕುಮಾರರಾಮನ ಮೊದಲ ಭಾರಿ ಕುಮ್ಮಟವನ್ನು ನೋಡಲು ಬಂದಾಗ ಅಲ್ಲಿ ಜೈನರು ವಾಸವಾಗಿದ್ದರು. ಅವರು ಆತನಿಗೆ ಊಟೋಪಚಾರದಿಂದ ತೃಪ್ತಿಗೊಳಿಸಿದ ನಂತರ ಕುಮಾರ ರಾಮನು ಮರಳಿದ ಮೇಲೆ ಆ ಜಾಗವನ್ನು ಶುದ್ಧಗೊಳಿಸಿದರು. ಇದನ್ನು ಕೇಳಿದ ಕುಮಾರರಾಮನು ಅಲ್ಲಿಗೆ ಸಾಕಷ್ಟು ಕೋಣಗಳನ್ನು ಕೊಂಡೊಯ್ದು ಅವುಗಳನ್ನು ಕತ್ತರಿಸಿದನಂತೆ. ಗಾಬರಿಗೊಂಡ ಜೈನರು ಆ ಊರು ಬಿಟ್ಟು ಕೊಪ್ಪಳಕ್ಕೆ ಬಂದರೆಂದು ಐತಿಹ್ಯವಿದೆ. ಆದರೆ ಇನ್ನೊಂದು ಐತಿಹ್ಯದ ಪ್ರಕಾರ ಕುಮಾರ ರಾಮನ ಗುರುಗಳಾಗಿದ್ದವರು ಒಬ್ಬ ಜೈನ ತೀರ್ಥಂಕರರು ಇಲ್ಲಿ ವಾಸಿಸುತ್ತಿದ್ದರೆಂದು ಕುಮಾರ ರಾಮನು ಗೌರವದಿಂದ ನೋಡುತ್ತಿದ್ದ ಜಾಗವಿದೆಂದು ವಾಡಿಕೆ ಇದೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪು.೧೮, ಕಲಬುರ್ಗಿ ಎಂ.ಎಂ., ೧೯೯೯, ಪು. ೧೨೨, ಪದ್ಯ ೩೧-೩೨). ಪರಸ್ಪರ ಹೇಳಿಕೆಗಳು ಏನೇ ಇರಲಿ ಈ ಹೇಳಿಕೆಗಳು ಆಗಿನ ಕಥಾ ಪ್ರಸಂಗವನ್ನು ನಿರೂಪಿಸುತ್ತದೆ.)

ಪ್ರಸ್ತುತ ಈಗಿನ ಕೊಪ್ಪಳ ಇಂದಿಗೂ ಜೈನ ಕೇಂದ್ರವಾಗಿದ್ದು ಕುಮ್ಮಟದ ಪರಿಸರದಲ್ಲಿರುವುದಂತೂ ನಿಜ. ಕುಮಾರರಾಮನು ಕುಮ್ಮಟದುರ್ಗ ನಿರ್ಮಾಣ ಮಾಡುವಾಗ ಅಲ್ಲಿದ್ದ ಜೈನರನ್ನು ಒಕ್ಕಲೆಬ್ಬಿಸಿ ದುರ್ಗ ನಿರ್ಮಾಣ ಮಾಡಿಸುವುದಾಗಿ ಕುಮಾರ

ರಾಮನ ಚರಿತೆ ಉಲ್ಲೇಖಿಸುತ್ತದೆ (ದೇವೀರಪ್ಪ ಹೆಚ್., ೧೯೫೯, ಪು. ೨೬೪, ೬೫). ಒಟ್ಟಾರೆ ಜೈನಧರ್ಮದ ಕುರಿತಂತೆ ಸಾಕಷ್ಟು ಸಾಹಿತ್ಯಿಕ ಆಕರಗಳು ಸಿಗುವುದಿಲ್ಲವಾದರೂ ಲಭ್ಯವಾದ ಸಾಹಿತ್ಯಿಕ ಆಕರಗಳು ಶಾಸನಗಳೂ ಪುಷ್ಟೀಕರಿಸುತ್ತವೆ. ಈ ವಿಷಯವಸ್ತು ಒಂದು ತುಲನಾತ್ಮಕ ಅಧ್ಯಯನ ಮಾಡಿನೋಡಿದರೆ ಜೈನಧರ್ಮವು ಕುಮ್ಮಟ ನಾಯಕರ ಕಾಲದ ಪೂರ್ವದಲ್ಲಿ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಜೈನ ಗುರುಗಳಾದ ಮಾದವ ಚಂದ್ರ, ಭಟ್ಟಾಕರು ಲಲಿತ ಕೀರ್ತಿ ಭಟ್ಟಾರಕ ರಾಯಾಚಾರ್ಯ. ಶ್ರೀ ಪಾಳೆತ್ರ್ಯ ವಿದ್ಯದೇವ, ಚಂದ್ರಸೇನದೇವ, ಪೂಜ್ಯಪಾದ ಸ್ವಾಮಿ ಮೆಯಿಲಾಪುರ ಹಗರದೇವ ಸಿಂಹಾನಂದಾ ಚಾರ್ಯ, ಸಿಂಹನಂದಾರ್ಯ ಧರ್ಮಭೂಷಣ ಭಟ್ಟಾರಕರು ಮುಂತಾದ ಜೈನಗುರುಗಳು ಇಲ್ಲಿದ್ದು ಭಟ್ಟರ ಬಾಚಣ್ಣ ಹಾಗೂ ಆತನ ಸಹೋದರ ಮಲ್ಲಿಸೆಟ್ಟಿ, ಲಕ್ಕಿ ಸೆಟ್ಟಿಯರು ಜೈನಧರ್ಮ ಪ್ರತಿಷ್ಠಾಪಿಸಲು ಶ್ರಮಿಸಿದರೆಂದು ಶಾಸನಗಳಲ್ಲಿ ಉಲ್ಲೇಖವಿದೆ (ಕವಿ.ಶಾಸಂ. ೩ ಪು. XXXXIII).

ಸಾಹಿತ್ಯಿಕ ಮತ್ತು ಶಾಸನಗಳ ಆಧಾರಗಳಲ್ಲಿ ಜೈನ ಧರ್ಮದ ಕುರಿತು ಸಾಕಷ್ಟು ಪೂರಕ ಮಾಹಿತಿಗಳಿದ್ದರೂ ಕೆಲವೊಂದು ಮಾಹಿತಿಗಳು ಚರ್ಚಾಸ್ಪದ. ಏಕೆಂದರೆ ಕುಮಾರರಾಮನ ಕಾಲದಲ್ಲಿ ಜೈನರು ಕೊಪ್ಪಳಕ್ಕೆ ಬಂದರೆಂದು ಹೇಳಲಾಗಿದೆ. ಅಲ್ಲದೆ ಜೈನ ಧರ್ಮವನ್ನು ಪುನಃ ಪ್ರತಿಷ್ಠಾಪಿಸಲು ಶ್ರಮಿಸಿದ್ದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಆದಾಗ್ಯು ಕುಮ್ಮಟದ ನಾಯಕರು ಜೈನ ಧರ್ಮವನ್ನು ಜೈನಧರ್ಮದವರನ್ನು ಜೈನ ಧರ್ಮದವರಲ್ಲದವರನ್ನು ಕಡೆಗಣಿಸಿರಲಿಲ್ಲವೆಂಬುದಕ್ಕೆ ಬೈಚಯದಂಡನಾಯಕನು ಸಿಂಗೆಯ ನಾಯಕ, ಕಂಪಿಲರಾಯ ಮತ್ತು ಕುಮಾರ ರಾಮ ಈ ಮೂವರು ಅರಸರ ಕಾಲದಲ್ಲೂ, ಜೈನನಾದರೂ ದಂಡನಾಯಕನಾಗಿ ಮುಂದುವರಿಸಿರುವುದು ಜೈನಧರ್ಮವನ್ನು ಕಡೆಗಣಿಸಿರಲಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಬ್ರಹ್ಮಗಿರಿಯ ಶಾಸನದಲ್ಲಿ ಕುಮ್ಮಟದ ಬೀಚನೆಂದು ಬೈಚಯ ದಂಡನಾಯಕನನ್ನು ಹೆಸರಿಸಿರುತ್ತಾರೆ. ಈತನು ಪರಮಜೈನನಾಗಿದ್ದನೆಂದು ಶಾಸನ ಉಲ್ಲೇಖಿಸುತ್ತದೆ (EC XI. Molakalmuru. No.20). ಮುಮ್ಮಡಿ ಸಿಂಗೆಯ ನಾಯಕನ ಕಾಲದಲ್ಲಿ ಯಲಬುರ್ಗದ ಜೈನಧರ್ಮಕ್ಕೆ ತೊಂದರೆ ಆಯಿತೆಂದು ನಂತರ ಮಲ್ಲಿಸೆಟ್ಟಿ ಎಂಬುವರು ಪಿ. ಎರಂಬರಗೆಯ ನಗರ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿದರೆಂದಿದೆ (ಚನ್ನಬಸಪ್ಪ ಎಸ್. ಪಾಟೀಲ. ೧೯೯೭. ಪಿ.ಎ. ಸಂ-೩ ಪು. ೯೪-೯೬).

ಕ್ರಿ.ಶ. ೧೩೭೯ರ ಅಮರಾಪುರದ ಶಾಸನವೊಂದು ಇಂಗಳೇಶ್ವರದ ಬಳಿಯ ದೇವಾಲಯವನ್ನು ಜೀರ್ಣೋದ್ಧಾರ ಹಾಗೂ ಎರಂಬರಗೆಯ ಜಿನಾಲಯ ಕುಮ್ಮಟದ ನಾಯಕರ ರಾಜ್ಯದಲ್ಲಿ ಒಂದೇ ವೇಳೆಗೆ ನಡೆಯಿತೆಂದು ತಿಳಿಸುತ್ತದೆ. ಅಮರಾಪುರದ ಬ್ರಹ್ಮ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ೨೦೦೦ ಅಡಿಕೆ ಮರದ ತೋಟವನ್ನು ಬಸದಿಯ ಶೆಟ್ಟಿಗಳಿಗಾಗಿ ದತ್ತಿ ಬಿಟ್ಟನು (ASIE, 1917, No. 40, EC XII, Sira, No.32).

ಕುಮ್ಮಟ ನಾಯಕರ ಕಾಲದಲ್ಲಿ ಜೈನಧರ್ಮಕ್ಕೆ ಪ್ರೋತ್ಸಾಹ ದೊರಕಿರುವುದನ್ನು ಶಾಸನಗಳಲ್ಲಿ ವ್ಯಕ್ತವಾಗುತ್ತದೆ. ಜೈನಧರ್ಮದ ಗುರುಗಳನ್ನು ರಾಜ ಗುರುಗಳನ್ನಾಗಿ ಮಾಡಿರುವುದನ್ನು ಆನೆಗೊಂದಿಯ ಶಾಸನ ಉಲ್ಲೇಖಿಸುತ್ತದೆ. ಕ್ರಿ.ಶ.

೧೬೩೫ (ಕವಿಶಾಸಂ-೨ ಗಂಗಾವತಿ ಸಂ. ೫೮ ಪು. ೩೫೭)ರಲ್ಲಿ ಲಲಿತ ಕೀರ್ತಿ ಭಟ್ಟಾರಕರನ್ನು ಶ್ರೀಮದ್ ರಾಯ ರಾಜಗುರು ಎಂದು ಉಲ್ಲೇಖಿಸಿದೆ. ಇದು ಕಂಪಿಲರಾಯನ ಕಾಲಕ್ಕೆ ಸಂಬಂಧಿಸಿದ ಶಾಸನ.

ಕುಮ್ಮಟ ದೇವಾಲಯವನ್ನು ಬುದ್ದಪ್ಪನ ಗುಡಿಯೆಂದು ಸ್ಥಳೀಯರು ಕರೆಯುತ್ತಿದ್ದು ಆನೆಗೊಂದಿಯಲ್ಲಿನ ಶಾಸನದಲ್ಲಿ ಮಂತ್ರಿ ಬುಪ್ಪರಾಜನನ್ನು ಕುರಿತು ಹೆಸರಿಸುವ ಶಾಸನವಿದೆ. ಈ ದೇವಾಲಯವನ್ನು ಜೈಚಯ ದಂಡನಾಯಕನು ಕಟ್ಟಿಸಿರಬಹುದಾಗಿದೆ(Channabasappa Patil, 1996. P-42).

(ಹಂಪೆಯ ಎರಡು ಶಾಸನಗಳು ಜೈನಧರ್ಮವನ್ನು ಉಲ್ಲೇಖಿಸುತ್ತವೆ. ಧರ್ಮಭೂಷಣ ಭಟ್ಟಾರಕರು ಹಾಗೂ ಮಯಿಲಾಪುರದ ಹರ್ಗದೇವರೆಂವಿದೆ (VPR. 1984-87, No.40-41,IK.I No.115-116 ಕವಿಶಾಸಂ 3. ಸಂ. 156-157 ಪು. 122-23). ಸಾಹಿತ್ಯಿಕ ಆಕರಗಳಲ್ಲಿ ಉಲ್ಲೇಖವಿರುವ ಯಕ್ಷಿಣಿ ದೇವತೆಗಳ ಸ್ತುತಿಸಿ ಜೈಚಪ್ಪನು ಕುಮಾರರಾಮನಾಥನನ್ನು ರಕ್ಷಿಸಲು ಇಂದ್ರನ ಕುರಿತು ಆಹ್ವಾನಿಸುವ ಸನ್ನಿವೇಶ ತುಂಬ ಪ್ರಮುಖವಾಗಿದೆ. ಜ್ವಾಲಾಮಾಲಿನಿ ಕಲ್ಪದಲ್ಲಿ ಹೇಳಿರುವಂತೆ ಜೈಚಪ್ಪನು ಮಂತ್ರಗಳನ್ನು ಹೇಳುವುದರಿಂದ ಇಂದ್ರನು ಪ್ರತ್ಯಕ್ಷನಾಗಿ ದೇವತೆಯೊಬ್ಬನನ್ನು ಕರೆದು ಕುಮಾರರಾಮ ಮತ್ತಿತರನ್ನು ನೆಲಮಾಳಿಗೆಯಲ್ಲಿಟ್ಟು, ಪ್ರತಿರೂಪಗಳನ್ನು ಸೃಷ್ಟಿಸಿ ಅವರು ಸತ್ತರೆಂದು ಕಂಪಿಲರಾಯನಿಗೆ ಜೈಚಪ್ಪನು ತಿಳಿಸುತ್ತಾನೆ.)

(ಜೈನ ಸಂಪ್ರದಾಯದಲ್ಲಿ ಆಚರಿಸುವ ಪ್ರಸಿದ್ಧ ಯಕ್ಷಿ ಜ್ವಾಲಾಮಾಲಿನಿ ತಾಂತ್ರಿಕ ವಿದ್ಯೆಯ ಅಧಿದೇವತೆ (ದೇವೀರಪ್ಪ ಹೆಚ್., ೧೯೬೪, ಪು. ೩೧೫-೩೪೦).)

ಶಾಸನಗಳ ಹೊರತಾಗಿ ಜೈನಧರ್ಮವಿತ್ತೆಂಬ ಬಗ್ಗೆ ಕುಮ್ಮಟ ದುರ್ಗ ಹಾಗೂ ಅದರ ಪರಿಸರದಲ್ಲಿ ಜೈನಬಸದಿಗಳು ಪೂರಕ ಮಾಹಿತಿಯನ್ನು ನೀಡುತ್ತದೆ. ಕುಮ್ಮಟ ದುರ್ಗದ ಜಿನಾಲಯ ಹಾನೇಯದ ಜಿನಾಲಯ. ಜಿನಾಲಯ ಎಲಬುರ್ಗದ ನಗರ ಜಿನಾಲಯ. ಹುಲಿಗೆಯ ಜಿನಾಲಯ. ಆನೆಗೊಂದಿಯ ಚೈತ್ಯಾಲಯ, ಕಾಮಲಾಪುರದ ಕುಂತು ಜಿನನಾಥ ಜಿನಾಲಯ ಇವಕ್ಕೆ ಉತ್ತಮ ಉದಾಹರಣೆ ಶ್ರವಣಬೆಳಗೊಳದಲ್ಲಿ ಕಂಪಿಲರಾಯನು ಕಟ್ಟಿಸಿದ ಚಂದ್ರನಾಥ ಬಸದಿ ಕುಮ್ಮಟದ ನಾಯಕರ ಕಾಲದ ಜೈನ ಬಸದಿಗಳಿತ್ತೆಂಬ ಬಗ್ಗೆ ಉತ್ತಮ ಉದಾಹರಣೆ.

ಎಲಬುರ್ಗದ ಪಾರ್ಶ್ವನಾಥನಮೂರ್ತಿ ವಿಕ್ಟೋರಿಯ ಅಲ್ಬರ್ಟ್ ಮ್ಯೂಸಿಯಂನಲ್ಲಿರುವ ಪಾರ್ಶ್ವನಾಥಮೂರ್ತಿ, ಸಾಲಾರ್‌ಜಂಗ ಮ್ಯೂಸಿಯಂನಲ್ಲಿರುವ ಪಂಚಪರಮೇಷ್ಠಿಗಳ ಜೈನಶಿಲ್ಪ, ಕಾಮಲಾಪುರ ಚೈತ್ಯಾಲಯದ ಲಲಾಟಬಿಂಬದಲ್ಲಿರುವ ಜೈನಬಿಂಬ. ಜೈನಮೂರ್ತಿ ಶಿಲ್ಪಗಳು ಈ ಕಾಲದ ಉತ್ತಮ ಉದಾಹರಣೆಗಳು. ಹೀಗೆ ಇಲ್ಲಿನ ಜೈನಧರ್ಮ ಕುರಿತಂತೆ ಚದುರಿದಂತೆ ಮಾಹಿತಿಗಳು ದೊರಕಿದ್ದರೂ ಇವುಗಳ ವಿವರವಾದ ಅಧ್ಯಯನ ನಡೆಯಬೇಕಿದೆ. ಬಿಟ್ಟಾರೆ ಈ ಪರಿಸರದಲ್ಲಿನ ಕೊಪ್ಪಳ. ಆನೆಗೊಂದಿ. ಹಾನೇಯ ದೊರವದಿ ಹೊಸಮಲೆದುರ್ಗದಲ್ಲಿನ ಶಿಲ್ಪಗಳು ಇರುವುದು, ಕುಮ್ಮಟದ ನಾಯಕರ ಕಾಲದಲ್ಲಿ ಜೈನಧರ್ಮ ಪ್ರವಹಿಸಿತ್ತು ಎಂಬುದನ್ನು ಸ್ಪಷ್ಟೀಕರಿಸಿವೆ.

(ಒಟ್ಟಾರೆ ಶೈವಧರ್ಮ, ವೈಷ್ಣವ ಧರ್ಮ ಮತ್ತು ಜೈನಧರ್ಮ, ಶಕ್ತಿಪಂಥಗಳಿಗೆ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ಸಾಹಿತ್ಯಿಕ ಕೃತಿಗಳು ಮತ್ತು ಶಾಸನಗಳು ಹೆಚ್ಚಿನ ಮಟ್ಟಿಗೆ ಶಕ್ತಿ ದೇವತೆಯ ಆರಾಧನೆ ಮತ್ತು ಉಪಾಸನೆಯನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ಬಹುಶಃ ಶಕ್ತಿದೇವತೆಯ ಆರಾಧನೆ ಈ ಓಬಿನಿಂದಲೂ ಬೆಳೆದು ಬಂದಿರಬೇಕು. ಸಾಹಿತ್ಯಿಕ ಆಕರಗಳ ಜೊತೆಗೆ ಕುಮ್ಮಟದುರ್ಗದಲ್ಲಿ ಪುರಾತತ್ವ ಪುರಾವೆಗಳು ತಾಯಮ್ಮ, ಚಿತ್ರದುರ್ಗದಲ್ಲಿ ಉಚ್ಚಂಗಿ ಹುಲಿಗೆಯಲ್ಲಿ ಹುಲಿಗೆಮ್ಮ ಗುಡಿಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ಶಕ್ತಿದೇವತೆಯ ನಂತರ ಶೈವ ಧರ್ಮವು ಹೆಚ್ಚು ರೂಢಿಗತವಾಗಿತ್ತು ಎಂಬುದು ಸಾಹಿತ್ಯಿಕ ಮತ್ತು ಪುರಾತತ್ವ ಆಧಾರದ ಮೇಲೆ ತಿಳಿಯುತ್ತದೆ. ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಆಕರಗಳು ದೊರೆಯದಿದ್ದರೂ ಲಭ್ಯವಾದ ಶಾಸನಗಳು ವೈಷ್ಣವ ಸಂಪ್ರದಾಯ ಇತ್ತೆಂಬುದರ ಬಗ್ಗೆ ಖಚಿತತೆಯನ್ನು ವ್ಯಕ್ತಪಡಿಸುತ್ತವೆ. ಜೈನಧರ್ಮ ಇಲ್ಲಿತ್ತೆಂಬ ಬಗ್ಗೆ ಯಾವ ಸಂಶಯವೂ ಇಲ್ಲ. ಏಕೆಂದರೆ ಇದರ ಪರಿಸರದಲ್ಲಿರುವ ಕೊಪ್ಪಳ ಇಂದಿಗೂ ಜೈನಕೇಂದ್ರ. ಇಲ್ಲಿ ಲಭ್ಯವಾದ ಶಾಸನಗಳು ಜೈನಮುನಿಗಳ ಹೆಸರನ್ನು ತಿಳಿಸುತ್ತವೆ. ಜೈನರಿಗೂ ಮತ್ತು ಕುಮಾರರಾಮನಿಗೂ ಭಿನ್ನಾಭಿಪ್ರಾಯಗಳಿದ್ದರೂ ಜೈನಧರ್ಮವನ್ನು ಕಡೆಗಣಿಸಲಿಲ್ಲ ಎಂಬುದಕ್ಕೆ ಆತನ ಗುರುಗಳಾದ ಜೈನ ತೀರ್ಥಂಕರರು ಇಲ್ಲಿ ವಾಸಿಸುತ್ತಿದ್ದರೆಂದು ಮತ್ತು ಬೈಚಯ ದಂಡನಾಯಕನು ಮೂಲತಃ ಜೈನನಾಗಿದ್ದನು. ಇದು ಶಾಸನಗಳಿಂದ ವ್ಯಕ್ತವಾದುದರಿಂದ ಕುಮ್ಮಟ ನಾಯಕರು ಜೈನಧರ್ಮವನ್ನು ಕಡೆಗಣಿಸಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಶಕ್ತಿ ಆರಾಧನೆ ಎಂಬುದು ಕುಮ್ಮಟ ನಾಯಕರ ಕಾಲದಲ್ಲಿ ಬಹಳ ಮಹತ್ವವಾದ ಸ್ಥಾನವನ್ನು ಪಡೆದಿತ್ತೆಂಬುದು ಈ ಅಧ್ಯಯನದಿಂದ ತಿಳಿದುಬಂದ ಗಮನಾರ್ಹವಾದ ಅಂಶ.)

(ಧಾರ್ಮಿಕ ಆಚರಣೆಯನ್ನು ಪರಿಶೀಲಿಸಿದರೆ ಕುಮ್ಮಟ ನಾಯಕರ ಕಾಲದಲ್ಲಿನ ಕುಮಾರರಾಮನನ್ನೇ ದೈವವಾಗಿ ಪೂಜಿಸಲಾಗುತ್ತದೆ. ದೈವತ್ವಕ್ಕೇರಿದ ಕುಮಾರರಾಮ ಕಂಪಲಿ, ಕುಮ್ಮಟದುರ್ಗದ ಪರಿಸರದಲ್ಲಿನ ಜನಪದರಲ್ಲಿ ದೇವ ಬಹುಮುಖ್ಯ. ಏಕೆಂದರೆ ಕುಮಾರರಾಮನ ಬಗೆಗೆ ಸಂಬಂಧಿಸಿದ ಜಾತ್ರೆ, ಆಚರಣೆ, ನಂಬಿಕೆ, ಕಥೆ, ಗೀತೆ, ಕಾವ್ಯಗಳು ಈ ಕುರಿತು ಪೂರಕ ಮಾಹಿತಿಯನ್ನು ನೀಡುತ್ತವೆ. ಭಿನ್ನ ಭಿನ್ನವಾದ (ಪಟ್ಟಿಗಳು), ಕಥೆಗಳು ಜಾನಪದ ಲೋಕವನ್ನು ಸೃಷ್ಟಿಸಿಕೊಂಡಿವೆ. ಹೊಸಪೇಟೆ, ಕಂಪ್ಲಿ, ಹರಪನ ಹಳ್ಳಿ, ಸಾಗರ, ಭಟ್ಕಳ ಮುಂತಾದ ಪ್ರದೇಶಗಳಲ್ಲಿ ಬಗೆ ಬಗೆಯ ಐತಿಹ್ಯಗಳು ದೊರೆಯುತ್ತವೆ. ಕ್ರಿ.ಶ. ೧೫೧೦ರಲ್ಲಿ ನಂಜುಂಡ ಕವಿ ಕುಮಾರರಾಮ ಚರಿತವನ್ನು ಬರೆದು ಕುಮಾರಾಮನನ್ನು ಅರ್ಜುನನೊಡನೆ ಸಮೀಕರಿಸಿದ್ದಾರೆ. ಪಾಂಚಾಳ ಗಂಗನು ಕುಮಾರರಾಮನನ್ನು ಜಾನಪದ ರೂಪಕ್ಕೆ ಅನುಸಂಧಾನಗೊಳಿಸಿದ್ದಾನೆ. ಮಹಾಲಿಂಗ ಸ್ವಾಮಿ ಕಾವ್ಯ ಭಕ್ತಿಯುಗದಲ್ಲಿ ಹುಟ್ಟಿ ಪರಶುರಾಮನ ಅವತಾರವೆಂದು ಹರಿಕಥೆ ಪರಂಪರೆಯಲ್ಲಿ ತೋರಿಸಲಾಗಿದೆ. ಲಿಖಿತ ಕಾವ್ಯಗಳು ಕೂಡ ಸಹಾಯಕಾರಿಯಾಗಿವೆ. ಉದಾಹರಣೆಗೆ ಗದಗಿಮಠ ಅವರ ಕುಮಾರರಾಮನ ದುಂದುಮೆ, ಜೆ.ಪಿ.ಮಾವಿನಕುಳಿ ಸಂಪಾದಿಸಿದ ತಂಪಿನ ರಾಜನ ಕುಳಿಗಳು (೧೯೬೨ರಲ್ಲಿ) ಕ.ರಾ.ಕೃಷ್ಣಸ್ವಾಮಿ ಸಂಪಾದಿಸಿದ ಧೀರ ಕುಮಾರರಾಮ, ಜೀ.ಶಂ.ಪರಮಶಿವಯ್ಯ ಸಂಪಾದಿಸಿದ ಚೆನ್ನಿಗರಾಮ, ಡಾ. ಲಿಂಗಯ್ಯ ಮೊದಲು ಸೃಷ್ಟಿಸಿದ ಚೆನ್ನಿಗರಾಮ, ಅಂಬಳಿಕೆ ಹಿರಿಯಣ್ಣ ಬರೆದಿರುವ ಚೆನ್ನಗರಾಮ, ಕಾಟುಗರಾಮ, ಡಾ.ಕೆ.ಎಂ.ಮೈತ್ರಿ ಸಂಪಾದಿಸಿದ ಕುಮಾರರಾಮ ಮತ್ತು ಕಷ್ಟಗೊಳ್ಳದ

ಮಹಾಕಾವ್ಯಗಳು ಇವೆಲ್ಲವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನಡೆಯುವ ಸಂಪ್ರದಾಯವನ್ನು ಪರಿಶೀಲಿಸಿದರೆ ಕುಮಾರರಾಮನನ್ನು ದೈವವಾಗಿ ಪೂಜಿಸಲಾಗುತ್ತಿದೆ. ವಿವಿಧ ಸ್ಥಳಗಳಲ್ಲಿ ವಿವಿಧ ರೀತಿಯಿಂದ ಪೂಜೆಗೊಳ್ಳುತ್ತಿದ್ದರೂ ಇಲ್ಲಿ ಪಂಥ 'ಕುಮಾರ ಪಂಥ' ಎಂಬುದು ಗಮನಾರ್ಹ ಅಂಶ. ಕುಮಾರರಾಮ ಸ್ವಾಮಿಗಾಮೇಶ್ವರ, ಗ್ರಾಮದೇವರು. ಅಸ್ರರಾಯ ಇತ್ಯಾದಿ ಹೆಸರುಗಳಿಂದ ಕುಮಾರರಾಮನನ್ನು ಕರೆಯುತ್ತಾರೆ. ಕೆಲವೆಡೆ ಉದಾಹರಣೆಗೆ ಮಲೆನಾಡಿನ ಪ್ರಮುಖ ಗ್ರಾಮದೇವತೆ 'ಕುಮಾರ ರಾಮ' ಜಾನಪದಗಳ ಮೂಲಕ ಪುರಾಣ, ಕಾವ್ಯ, ಆಚರಣೆ, ಜಾತ್ರೆ, ನಂಬಿಕೆ, ಸಂಪ್ರದಾಯ, ವಿಧಿ ವಿಧಾನಗಳ ಮೂಲಕ ಕುಮಾರ ರಾಮನ ಸಂಪ್ರದಾಯವನ್ನು ರೂಪಿಸಿಕೊಂಡಿದ್ದಾರೆ. ಅಸ್ರರಾಯ ಪದ್ಧತಿ ಎನ್ನುವ ಅರ್ಥದಲ್ಲಿ ಜನಪದರು ಬಳಸುತ್ತಾರೆ. ಇವೆಲ್ಲವೂ ಸಂಸ್ಕೃತಿಯ ಅಧ್ಯಯನವೇ ಈ ಸಾಂಸ್ಕೃತಿಕ ಅಧ್ಯಯನಕ್ಕೆ ವಾಸ್ತುಕಲೆ, ಮೂರ್ತಿಶಿಲ್ಪಗಳೂ ಕುಮ್ಮಟದ ನಾಯಕರ ಕಾಲದ ಅಧ್ಯಯನಕ್ಕೆ ಹೊಸ ತಿರುವನ್ನು ನೀಡಿದೆ. ಸಾಹಿತ್ಯಿಕ ಮತ್ತು ಮರಮುಟ್ಟು ಆಕರಗಳನ್ನು ಒಂದೆಡೆ ಸೆರೆ ಹಿಡಿದು ವಾಸ್ತುಕಲೆ ಮತ್ತು ಮೂರ್ತಿಶಿಲ್ಪದ ಕುರಿತು ಪ್ರತ್ಯೇಕವಾಗಿ ಮುಂದಿನ ಅಧ್ಯಯನದಲ್ಲಿ ಹೇಳಲಾಗಿದೆ.)

ಧಾರ್ಮಿಕ ನಂಬಿಕೆಗಳು

ಜಾತ್ರೆ ಮತ್ತು ಉತ್ಸವ

ಹಬ್ಬಗಳು ಮತ್ತು ರಥೋತ್ಸವಗಳು ಜನರ ಧಾರ್ಮಿಕ ಜೀವನವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಹಬ್ಬಗಳಂತೆಯೇ ಕಾಲ ಕಾಲಕ್ಕೆ ದೇವರ ಹೆಸರಿನಲ್ಲಿ ನಡೆಯುವ ಜಾತ್ರೆಗಳು, ರಥೋತ್ಸವಗಳು ಬೀರುವ ಪರಿಣಾಮ ಮಹತ್ತರವಾದುದು. ಹಬ್ಬಗಳು ಮನೆಮನೆಯಲ್ಲಿ ಆಚರಿಸಲ್ಪಡುವುದಾದರೆ ಹತ್ತು ಹಲವು ಜನ ಸುತ್ತಮುತ್ತಲ ಹಳ್ಳಿಯ ಜನ ಜಾತ್ರೆ ರಥೋತ್ಸವದಲ್ಲಿ ಸೇರುತ್ತಾರೆ. ಜಾತ್ರೆಗಳಲ್ಲಿ ಪಾಲ್ಗೊಳ್ಳುವುದರಿಂದ ಧರ್ಮಶ್ರದ್ಧೆ ಜಾಗೃತವಾಗುತ್ತದೆ (ಶ್ರೀಕಂಠ ಶಾಸ್ತ್ರಿ ೧೯೮೯, ಪು. ೨೬೮). ಜಾತ್ರೆ ಎಂಬುದು ಒಂದು ಅನುಭವ ಪ್ರಪಂಚ ನೋಡುವವರ ಕಣ್ಣಿಗೆ ಇದೊಂದು ಹಬ್ಬದಂತೆಯೇ. ಜಾತ್ರೆಗಳೆಂದರೆ ಜನ ಜಂಗುಳಿ ಅವರವರ ಊಟ ವಸತಿ ಎಲ್ಲೆಂದರಲ್ಲಿ ನಡೆದುಹೋಗುತ್ತದೆ. ಸಾಹಿತ್ಯಿಕ ಕೃತಿಗಳು ಸಮಾಜದಲ್ಲಿ ಕಾಣುವ ವಾಸ್ತವ ಸಂಗತಿಗಳನ್ನು ಪ್ರತಿಬಿಂಬಿಸುತ್ತವೆ. ಜಾತ್ರೆ ಸೇರುವುದು, ಊರಿನ ಕೀರ್ತಿ ಕಲಶವಿದ್ದಂತೆ. ಜಾತ್ರೆಗೆ ಹೋಗಬೇಕೆಂಬ ಮನೋಭಾವ ಜನರಲ್ಲಿ ತೀವ್ರವಾದಾಗ ಅವರು ತಮಗೆ ಎಷ್ಟೇ ಕಷ್ಟಗಳಿರಲಿ ಅವುಗಳನ್ನು ಎದುರಿಸಿ ಜಾತ್ರೆಗೆ ಹೋಗುತ್ತಿರುತ್ತಾರೆ (ಬಸವಪುರಾಣ ೧೯೬೯, ೪೨-೧೨). ಹಬ್ಬ, ಜಾತ್ರೆ, ರಥೋತ್ಸವ ಶಬ್ದಗಳು ಒಂದಕ್ಕೊಂದು ಪೂರಕವಾಗಿವೆ. ಪ್ರಸ್ತುತ ಕುಮ್ಮಟ ನಾಯಕರ ಕಾಲದಲ್ಲಿ ನಡೆದ-ನಡೆಯುವ ಜಾತ್ರೆ, ರಥೋತ್ಸವದ ಪಕ್ಷಿನೋಟ ಇಲ್ಲಿದೆ.

ಸೋಮೇಶ್ವರ ಜಾತ್ರೆ

(ಕಂಪ್ಲಿಯ ಸೋಮೇಶ್ವರನು ಮೂಲತಃ ಕಂಪಿಲರಾಯನ ಮನೆ ದೈವ. ಆರಾಧ್ಯ ದೈವ. ಕಂಪ್ಲಿಯ ಸೋಮೇಶ್ವರ

ದೇವಾಲಯವನ್ನು ಕಂಪಿಲನೇ ಕಟ್ಟಿಸಿದನೆಂಬ ವಾಡಿಕೆಯೂ ಇದೆ. ಈಶ್ವರ ನಾಮಸಂವತ್ಸರ ವೈಶಾಖ ಶುದ್ಧ ಸಪ್ತಮಿಯಂದು ಈ ಜಾತ್ರೆ ನಡೆಯುತ್ತದೆ. ಯುಗಾದಿಯಾದ ಹನ್ನೊಂದನೇ ದಿನ ಜಾತ್ರೆ ನಡೆಯುತ್ತದೆ. ಈ ಜಾತ್ರೆಗೆ ಆಹ್ವಾನ ಪತ್ರಿಕೆ ಕೊಡುವ ಪದ್ಧತಿ ಇದೆ. ಮಾಂಗಲ್ಯಧಾರಣೆ ಮಾಡುವಾಗ ಐದು ಕಲಶ ತುಂಬಿಟ್ಟು ಕಳಸಕ್ಕೆ ದಾರಸುತ್ತಿ ಮಾಂಗಲ್ಯಧಾರಣೆ ಮಾಡುತ್ತಾರೆ. ಪಲ್ಲಕ್ಕಿ ಉತ್ಸವ ೨.೩೦ ಗಂಟೆಗೆ ನಡೆಯುತ್ತದೆ. ಈ ಉತ್ಸವದಲ್ಲಿ ಉತ್ಸವ ಮೂರ್ತಿಗಳನ್ನಿಟ್ಟು, ಗುಡಿಯ ಸುತ್ತ ವಾದ್ಯವೃಂದ ನಡೆಯುತ್ತದೆ. ಪಂಚಮಿ ದಿವಸ ತೇರಿಗೆ ಕಳಶ ಪೂಜೆ ಮಾಡಿ ತೇರಿಗೆ ಕಳಶಧಾರಣೆ ಮಾಡುತ್ತಾರೆ. ಜಾತ್ರೆ ನಡೆಯುವ ಸಪ್ತಮಿ ದಿವಸ ಶ್ರೀ ಸ್ವಾಮಿಗೆ ಮಹಾರುದ್ರಾಭಿಷೇಕವಿರುತ್ತದೆ. ಸಂಜೆ ೫.೦೦ ಗಂಟೆ ಸುಮಾರಿಗೆ ನಂದಿಕೋಲಿನೊಂದಿಗೆ ರಥೋತ್ಸವ ಪ್ರಾರಂಭವಾಗುತ್ತದೆ. ತೇರಿಗೆ ಸನ್ನೆ ಹಾಕಲೆಂದು, ಕಬ್ಬೇರರಿಗೆ ಹತ್ತಿರದ ಹಳ್ಳಿಯವರಾದ ಮುದ್ದಾಪುರದ ಜನರನ್ನು ಕರೆಸುತ್ತಾರೆ. ರಥದ ಹಗ್ಗವನ್ನು ಸಾಮಾನ್ಯವಾಗಿ ಎಲ್ಲಾ ಜನಾಂಗದವರೂ ಸೇರಿ ರಥೋತ್ಸವವನ್ನು ಯಶಸ್ವಿಗೊಳಿಸುತ್ತಾರೆ. ಮೂರನೆಯ ದಿನ ಕಟ್ಟಿದ ಕಂಕಣವನ್ನು ವಿಸರ್ಜನೆ ಮಾಡುತ್ತಾರೆ. ಜನರಿಗೆ ಕುಮಾರ ರಾಮನೆ ಶ್ರೇಷ್ಠನೆಂಬ ನಂಬಿಕೆಯಿರುವುದೆ. ಕುಮಾರರಾಮನು ಚಾರಿತ್ರಿಕ ಪುರುಷನಾಗಿದ್ದರೂ ದೈವವಾಗಿ ನೆಲೆಯೂರಿರುವುದು. ಜಾನಪದ-ಜನಪದರ ಮೂಲಕವೂ ಆಗಿರಬಹುದು(ಸಾವಿತ್ರಿ ಎಸ್.ಎಂ., ೨೦೦೨, ಪು. ೪೦-೪೧).)

ಕುಮ್ಮಟ ಜಾತ್ರೆ

ಇತಿಹಾಸ ಪ್ರಸಿದ್ಧವಾದ ಕುಮಾರ ರಾಮನಿಗೆ ಅವನು ವಾಸಿಸುತ್ತಿದ್ದ ಎಸ್ಥಳವಾದ ಕುಮ್ಮಟದುರ್ಗದಲ್ಲಿ ಈಗಲೂ ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಅಕ್ಕಪಕ್ಕದ ಹಳ್ಳಿಗಳಾದ ಇಂದರಗಿ, ಮುಕ್ಕುಂಪೆ, ಜಬ್ಬಲಗುಡ್ಡ, ಹುಲಿಗಿ, ಗಂಗಾವತಿ ಮತ್ತು ಆನೆಗೊಂದಿಯಿಂದ ಸಾಕಷ್ಟು ಸಂಖ್ಯೆಯಲ್ಲಿ ಜನರು ಭಾಗವಹಿಸುತ್ತಾರೆ. ಅಗಿಹುಣ್ಣಿಮೆಯಾದ ಆರನೆ ದಿವಸ ಇಂದರಗಿಯಲ್ಲಿ ಕುಮಾರರಾಮ ಮತ್ತಿತ್ತರ ಐದು ತಲೆಗಳಿಗೆ ವಿಶೇಷ ಪೂಜೆ ಇರುತ್ತದೆ. ಗಂಗೆಪೂಜೆ ಮಾಡಿ ಊಡಿ ತುಂಬಿಸಿದ ಮೇಲೆ ಬಿಲ್ಲಾಟವೂ ಇರುತ್ತದೆ. ಗಂಗಾಪೂಜೆ ಮಾಡಿದ ನಂತರ ಮಾಂಸದ ಎಡೆ ಇರಿಸಿ ಎಲ್ಲರೂ ಕೈಮುಗಿದು ಪ್ರಸಾದ ಸ್ವೀಕರಿಸುತ್ತಾರೆ. ಏಳನೆಯ ದಿವಸ ಆರು ತಲೆಗಳನ್ನು ಆರು ಜನ ಪೂಜಾರಿಗಳು ಕೈಯಲ್ಲಿ ಹಿಡಿದುಕೊಂಡು ನೇರವಾಗಿ ಮುಕ್ಕುಂಪೆ ಗ್ರಾಮಕ್ಕೆ ಬರುತ್ತಾರೆ. ಮಲ್ಲಾಪುರದಿಂದ ಐದು ತಲೆಗಳನ್ನು ಹಿಡಿದುಕೊಂಡು ಪೂಜಾರಿಗಳು ಬರುತ್ತಾರೆ. ಮುಕ್ಕುಂಪೆಯ ಹೊರ ಹೊಲಯದಲ್ಲಿ ಎಲ್ಲಾ ಜನರು ಸೇರಿ ಡೋಲು, ವಾದ್ಯ, ಕೊಳಲು ನುಡಿಸುತ್ತಾ ಮೆರವಣಿಗೆಯಲ್ಲಿ ಬರುತ್ತಾರೆ. ಎಲ್ಲಾ ತಲೆಗಳನ್ನು ತರುವವರು ಗಂಡಸರೇ ಆಗಿರುತ್ತಾರೆ. ಸಾಯಂಕಾಲ ನಾಲ್ಕು ಗಂಟೆಗೆ ಮುಕ್ಕುಂಪೆಯ ಊರೊಳಗೆ ಮೆರವಣಿಗೆ ಬರುತ್ತಿರುವಾಗ ಜನರು ಅಕ್ಕಿದೀಪ ಇಟ್ಟು, ಕೈ ಮುಗಿಯುವ ಪದ್ಧತಿ ಇದೆ. ಕತ್ತಲಾಗುವ ಹೊತ್ತಿಗೆ ಪೂಜಾರಿಗಳು ತಂದ ತಲೆಗಳನ್ನು ತಂಬಿಗೆ ನಿಲುವುಗಳ ಮೇಲೆ ಇರಿಸುತ್ತಾರೆ. ಕಳಶಗಳನ್ನು ಪೂಜೆಯ ನಂತರ ಬಿಗಿಯುತ್ತಾರೆ. ಕೈಗೆ ಕಳಶಕ್ಕೆ ಕಂಕಣ ಕಟ್ಟಲಾಗುತ್ತದೆ. ಜಗಲಿಯ ಮೇಲೆ ಹನ್ನೆರಡು ತಲೆಗಳನ್ನು ಇಡುತ್ತಾರೆ. ರಾತ್ರಿ ಊರಿನ ಗೌಡ ಹೋತ ಒಂದನ್ನು ಬಲಿ ಕೊಡುತ್ತಾನೆ. ಮೂರನೆಯ ದಿನ ಹುಣ್ಣಿಮೆಯಾದ ಎಂಟನೆಯ ದಿನ ಮುಂಜಾನೆ ಆರು ಗಂಟೆಗೆ ಹನ್ನೆರಡು ಜನ ಪೂಜಾರಿಗಳು ತಲೆಗಳನ್ನು ಕೈಯಲ್ಲಿ ಹಿಡಿದುಕೊಂಡು ಮುಕ್ಕುಂಪೆಯಿಂದ ಕುಮ್ಮಟದುರ್ಗಕ್ಕೆ ಬರುತ್ತಾರೆ. ಊರಿನ ಜನರು ಎಲ್ಲರೂ ಸೇರಿ ಕುಮಾರ ರಾಮನ

ಗುಡಿಯನ್ನು ಸೇರುತ್ತಾರೆ. ಇಡೀ ಗುಡಿ ಮಾವಿನ ತೋರಣ ಬಾಳೆಯ ದಿಂಡುಗಳಿಂದ ಶಿಂಗರಿಸಲ್ಪಡುತ್ತದೆ. ಮಧ್ಯಾಹ್ನದ ಹೊತ್ತಿಗೆ ಪೂಜಾರಿಗಳು ರಾಮನ ದೋಣೆಗೆ ಹೋಗುತ್ತಾರೆ. ಅಲ್ಲಿ ರಾಮನ ದೋಣೆಯ ಬಳಿ ದೀಪ ಹಚ್ಚಿ ಬೆಲ್ಲಗೆ ಅಕ್ಕಿ, ವೀಳ್ಯದೆಲೆ ಇರಿಸುತ್ತಾರೆ. ಭಸ್ಮ ಧರಿಸಿದ ಪೂಜಾರಿಗಳ ಐದು ಬಿಂದಿಗೆ ನೀರನ್ನು ಹೊತ್ತುಕೊಂಡು ರಾಮಸ್ವಾಮಿ ಗುಡಿಗೆ ಬರುತ್ತಾರೆ. ಗರ್ಭಗುಡಿಯಲ್ಲಿ ಒಂದು ಬಿಂದಿಗೆ ನೀರನ್ನಿಳಿಸಿದ ಮೇಲೆ ಮುಖ್ಯ ಪೂಜಾರಿಯು ಜಟ್ಟಿಂಗಿ ರಾಮೇಶ್ವರನ ಪೂಜೆ ಮಾಡಿಸುತ್ತಾನೆ. ಈ ಹನ್ನೆರಡು ಶಿರಗಳಲ್ಲಿ (ತಲೆ) ಕುಮಾರ ರಾಮನದು ಯಾವುದು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಈ ಜಾತ್ರೆಯಲ್ಲಿ ಮುಕ್ಕುಂಪೆ, ಜಬ್ಬಲಗುಡ್ಡ ಮತ್ತು ಇಂದರಗಿಯವರ ಪಾತ್ರ ಬಹಳ ಮಹತ್ವದ್ದು. ಇದಕ್ಕೆಲ್ಲಾ ಉಳಿದ ಊರವರಿಗೆ ನೀರ್ಗೊಳನ್ನು ಹಂಚುತ್ತಾರೆ. ವಸ್ತ್ರವನ್ನು ಮುಂದೊಡ್ಡಿ ನೀರ್ಗೊಳವನ್ನು ತೆಗೆದುಕೊಳ್ಳುತ್ತಾರೆ. ಊರಿಗೆ ತೆಗೆದುಕೊಂಡು ಹೋಗಿ ತಮ್ಮ ಹೊಲದಲ್ಲಿ ಸುರಿಯುತ್ತಾರೆ. ಹೀಗೆ ಮಾಡುವುದರಿಂದ ಫಸಲು ಚೆನ್ನಾಗಿ ಬೆಳೆಯುವುದೆಂಬ ನಂಬಿಕೆ ಜನರಲ್ಲಿದೆ. ಕೊನೆಯದಾಗಿ ಅಕ್ಕಿ ಪಡಿಯ ಕಾರ್ಯವನ್ನು ಮಾಡುತ್ತಾರೆ. ಒಂದು ತಟ್ಟೆಯಲ್ಲಿ ಅಕ್ಕಿಯನ್ನು ಹಾಕಿಕೊಂಡು ಹೂ, ಹಣ್ಣು, ಕಾಯಿ ಇಟ್ಟುಕೊಂಡು ರಾಮಸ್ವಾಮಿ ಗುಡಿಗೆ ಐದು ಸುತ್ತು ಪ್ರದಕ್ಷಿಣೆ ಹಾಕುತ್ತಾರೆ. ನಂತರ ಅಕ್ಕಿಪಡಿಯನ್ನು ಸುರಿದುಕೊಂಡು ಒಂದೊಂದು ಕಾಯಿ ಹೋಳನ್ನು ಭಕ್ತರಿಗೆ ಕೊಡುತ್ತಾರೆ. ಅಕ್ಕಿ ಪಡಿಯನ್ನು ಊರಿನ ಮುಖ್ಯಸ್ಥರಿಗೂ ವಿತರಿಸುತ್ತಾರೆ. ಅಕ್ಕಿ ಪಡಿ ಹುಲಿಗಿಗೆ ಬಂದನಂತರ ಹುಲಿಗಿ ಜಾತ್ರೆ ಪ್ರಾರಂಭವಾಗುತ್ತದೆ. ಹುಲಿಗಿ ದೇವಸ್ಥಾನದ ಪೂಜಾರಿಗಳಲ್ಲೊಬ್ಬರು ಕುಮಾರ ರಾಮನ ಜಾತ್ರೆಗೆ ಬಂದಿರುತ್ತಾರೆ. ಅಕ್ಕಿಪಡಿಯನ್ನು ತೆಗೆದುಕೊಂಡು ಹೋದ ನಂತರ ಹುಲಿಗಿ ಜಾತ್ರೆ ಆರಂಭವಾಗುತ್ತದೆ. ಕುಮ್ಮಟದಿಂದ ತೆಗೆದುಕೊಂಡು ಹೋದ ಅಕ್ಕಿಯನ್ನು ಪಾಯಸ ಮಾಡುತ್ತಾರೆ. ಅಕ್ಕಿಪಡಿಯ ವಿತರಣೆ ಆದ ನಂತರ ಮಾಂಸದೂಟ ನಡೆಯುತ್ತದೆ. ರಾತ್ರಿ ಇಲ್ಲಿಯೇ ತಂಗಿದ್ದು ಮೂರನೆಯ ದಿನ ತಮ್ಮ ತಮ್ಮ ಊರುಗಳಿಗೆ ಹೋಗುತ್ತಾರೆ (ಪುರುಷೋತ್ತಮ ಬಿಳಿಮಲೆ : ೧೯೯೯ ಪು. ೨೮-೩೨).

ಜಾತ್ರೆಗಳಂತೆ ಹಬ್ಬಗಳು ಬೀರುವ ಪರಿಣಾಮ ಅಗಾಧವಾದದ್ದು. 'ಹಬ್ಬ' ಎಂಬ ಶಬ್ದ ಪರಿಮಿತ ಅರ್ಥದಲ್ಲಿ ಏನೇ ಇರಲಿ ವಿಶಾಲ ಅರ್ಥದಲ್ಲಿ ಇದೊಂದು ಧಾರ್ಮಿಕ ನಂಬಿಕೆ, ಸಂಕಲ್ಪಸಿದ್ಧಿ, ಮನಕ್ಕೆ ದೊಡ್ಡ ಹಬ್ಬ. ಸಾಧುಸಜ್ಜನರೊಳಗಿರುವುದೇ ಭಾಗಿರಥೀಲಿ ತೇಲಾಡುವುದೇ ಹಬ್ಬ. ನಿಶ್ಚಿತ ಯೋಗಿಗೆ ಅನುದಿನ ಹಬ್ಬ. "ಸಾಲವಿಲ್ಲದವನ ಸಂಸಾರವೇ ಹಬ್ಬ" ಎಂಬ ಪುರಂದರದಾಸರ ಮಾತು ಮನಸ್ಸಿಗೆ ತೃಪ್ತಿಯನ್ನು ತಾಳಿ ಸುಖಿಯಾಗಿರಲು ಸಂಕಲ್ಪಸಿದ್ಧಿಯೇ ಸುಖಿಯಾದ ಹಬ್ಬವೆಂದು ಹೇಳಿರುತ್ತಾರೆ (ಪುರಂದರದಾಸರ ಕೀರ್ತನೆ, ೧೯೬೨, ಪು. ೧-೫೦). ಹಾಲುಹಯನುಳ್ಳಲ್ಲಿ ಕೇಳದೆ ಹಬ್ಬವನ್ನು ಸವಿಯುವುದು ಎಂಬುದು ಚಾಮರಸನ ಅಭಿಪ್ರಾಯ (ಪ್ರಭುಲಿಂಗ ಲೀಲೆ ಪದ್ಯ ಸಂ. ೨೪೮). ಒಬ್ಬೊಬ್ಬ ಕವಿಯ ಅರ್ಥದಲ್ಲಿ ಹಬ್ಬದ ಅರ್ಥ ವಿಧವಿಧವಾಗಿ ವರ್ಣಿತವಾಗಿದೆ. ಹಿಂದಿನವರು ಆಚರಿಸಿಕೊಂಡು ಬಂದಿರುವ ಸಂಪ್ರದಾಯಗಳಲ್ಲಿ ಜನರಿಗೆ ಇರುವ ನಂಬಿಕೆ ಹಬ್ಬವೇ. ಒಟ್ಟಿನಲ್ಲಿ ಹಬ್ಬ-ಹುಣ್ಣಿಮೆ, ವ್ರತಾಚರಣೆ ಒಬ್ಬೊಬ್ಬರ ದೃಷ್ಟಿಯಲ್ಲಿ ಒಂದೊಂದು ದೊಡ್ಡದಾಗಿರುತ್ತದೆ. ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದ್ದುದರಿಂದ, ಕುಮ್ಮಟ ನಾಯಕರ ಕಾಲದ ಹಬ್ಬ ಸಂಪ್ರದಾಯದ ಆಚರಣೆಯ ಕುರಿತು ಲಭ್ಯವಾದ ಆಕರಗಳ ಆಧಾರದಲ್ಲಿ, ವಿವಿಧ ಸ್ಥಳಗಳಲ್ಲಿ ನಡೆಯುವ ಹಬ್ಬದ ಕಿರುನೋಟದ ಚಿತ್ರಣವನ್ನು ಇಲ್ಲಿ ಸೆರೆಹಿಡಿಯಲಾಗಿದೆ.

ಕರ್ನಾಟಕದ ಹಲವಾರು ಭಾಗಗಳಲ್ಲಿ ಕುಮಾರರಾಮನ ಆಚರಣೆಗಳು ನಡೆಯುತ್ತವೆ. ಇಂತಹ ಸಂಪ್ರದಾಯ ನಡೆಯುವ ಸ್ಥಳಗಳಲ್ಲಿ ಕುಮ್ಮಟದುರ್ಗ, ಹೊಸಮಲೆದುರ್ಗ, ಸಾಗರ, ತುಮಕೂರು (ದೊಡ್ಡಪಾಲನಹಳ್ಳಿ), ಹುಲಿಗಿ, ಮುಕ್ಕುಂಪೆ, ಇಂದರಗಿ, ಜಬ್ಬಲಗುಡ್ಡ, ಮಲ್ಲಾಪುರ, ಕಂಪಿಲಿ, ಉತ್ತರ ಕನ್ನಡದ ಕೆಲವು ಭಾಗಗಳು, ದೊಡ್ಡಪಾಲನಹಳ್ಳಿ, ಹಿರೇಗಲ್ಲು ಮುಖ್ಯವಾಗಿವೆ.

ಮುಕ್ಕುಂಪೆ : ಇದು ಕುಮ್ಮಟ ದುರ್ಗಕ್ಕೆ ಹೊಂದಿಕೊಂಡಿರುವ ಸ್ಥಳ. ಮುಕ್ಕುಂಪೆಯ ಜನರೆಲ್ಲ ಸೇರಿ ಕುಮಾರ ರಾಮನಿಗೆ ಪ್ರಸ್ಥ ಮಾಡುವ ದಿನವನ್ನು ನಿರ್ಧರಿಸಿ ಊರಿನಲ್ಲಿ ಚಂದಾ ಎತ್ತಿ ಜನರೆಲ್ಲ ಕುಮ್ಮಟದುರ್ಗಕ್ಕೆ ಹೋಗುತ್ತಾರೆ. ಮೇಕೆಯನ್ನು ಬಲಿಕೊಟ್ಟು, ಕರ್ಪೂರ ಮಾಡಿಕೊಂಡು ಮಾಂಸದ ಊಟವನ್ನು ಸಾಮೂಹಿಕವಾಗಿ ಎಲ್ಲರೂ ಮಾಡುತ್ತಾರೆ (ಸಾವಿತ್ರಿ ಎಸ್.ಎಂ. ೨೦೦೩, ಪು.೩೩). ಮುಕ್ಕುಂಪೆಯಲ್ಲಿ ಕುಮಾರರಾಮನ ಗುಡಿ ಇಲ್ಲದಿದ್ದರೂ, ಕಾರ್ತಿಕ ಮಾಸದಲ್ಲಿ ಕುಮ್ಮಟದುರ್ಗಕ್ಕೆ ಹೋಗಿ ದೀಪೋತ್ಸವವನ್ನು ಮಾಡಿಕೊಂಡು ಬರುತ್ತಾರೆ. ಹರಕೆಯನ್ನು ಹೊತ್ತು ಕುಮ್ಮಟದುರ್ಗದ ಬೆಟ್ಟವನ್ನು ಹತ್ತಿ ಮೂಲರಾಮನ ಗುಡಿಗೆ ಬಂದು ಪೂಜೆಯನ್ನು ಸಲ್ಲಿಸುತ್ತಾರೆ.

ಇಂದರಗಿ : ಕುಮ್ಮಟದುರ್ಗದಿಂದ ೧೮ ಮೈಲು ದೂರದಲ್ಲಿದೆ. ಇಲ್ಲಿ ಕುಮಾರರಾಮನ ಗುಡಿ ಇದ್ದರೂ ಮೂರ್ತಿ ಇಲ್ಲ. ರುಂಡವನ್ನು ಪೆಟ್ಟಿಗೆಯಲ್ಲಿಟ್ಟು, ತುಂಬಿದ ಕೊಡವನ್ನು ಜಗಲಿಯ ಮೇಲಿಟ್ಟು, ಪೂಜೆ ಮಾಡುವ ಪದ್ಧತಿ ಇದೆ. ಎಷ್ಟೋ ಮನೆತನಗಳಿಗೆ ಈತನು ಕುಲದೇವರೂ ಕೂಡ. ಕುಮ್ಮಟದಲ್ಲಿ ಜಾತ್ರೆ ನಡೆಯುವ ಎರಡು ದಿನ ಮುಂಚೆ ಜಿಲ್ಲಾಟದ ಆಚರಣೆ ಇಲ್ಲಿದೆ. ಧೂಪ, ದೀಪ ಹಾಗೂ ತುಂಬಿದ ಕೊಡ ಸಮೇತ ಕುಮ್ಮಟದುರ್ಗಕ್ಕೆ ಹೋಗಿ ಊರ ಅಗಸೆಯ ಬಳಿ ಬಂದು ಬೇಟೆ ಬಲಿ ಕೊಡುತ್ತಾರೆ. ಇಲ್ಲಿನ ಪೂಜಾರಿಗಳು ಗಂಗಾಮತಸ್ಥರು. ಸಂಜೆ ಮುಖವಾಡಗಳನ್ನು ತೆಗೆದುಕೊಂಡು ವಾದ್ಯಸಮೇತ ಇಂದರಗಿಯ ಗುಡಿಯಲ್ಲಿಡುತ್ತಾರೆ.

ಜಬ್ಬಲ ಗುಡ್ಡ : ಇಲ್ಲಿ ಕುಮಾರ ರಾಮನ ಗುಡಿ ಇದೆ. ಗಂಗಾಮತಸ್ಥರೆ ಈ ಗುಡಿಯ ಪೂಜಾರಿಗಳೂ ಕೂಡ. ಇಲ್ಲಿರುವ ಗುಡಿಯಲ್ಲಿ ಆರು ಮುಖವಾಡಗಳು ಇದ್ದು ಭರ್ಜಿ ತುಂಬಿದ ಕೊಡಕ್ಕೆ ಪ್ರತಿದಿನ ಪೂಜೆ ಸಲ್ಲಿಸುತ್ತಾರೆ. ಕಾರ್ತೀಕ ಮಾಸದಲ್ಲಿ ಮಾತ್ರ ಮುಕ್ಕುಂಪೆ ಜನರೊಂದಿಗೆ ಕುಮ್ಮಟಕ್ಕೆ ಹೋಗಿ ರಾಮನಿಗೆ ದೀಪೋತ್ಸವವನ್ನು ಸಲ್ಲಿಸುತ್ತಾರೆ. ರಾಮನ ಆಧಾರದಲ್ಲಿ ಮೈನೆರೆದವರೆ ಜಬ್ಬಲಗುಡ್ಡದಲ್ಲಿ ಪೂಜೆ ಸಲ್ಲಿಸುವ ಪದ್ಧತಿ ಕೂಡ ಇದೆ. ಜಾತ್ರೆ ದಿನ ಪೂಜಾರರು ಇಂದರಗಿಗೆ ಹೋಗಿ ದೇವರುಗಳನ್ನು ಜಬ್ಬಲ ಗುಡ್ಡದಲ್ಲಿಟ್ಟು, ಸಂಜೆ ಜಬ್ಬಲಗುಡ್ಡ ಮತ್ತು ಇಂದಿರಗಿಯಿಂದ ಕುಮ್ಮಟದುರ್ಗಕ್ಕೆ ಹೋಗುತ್ತಾರೆ. ಮಕ್ಕಳಿಗೆ ಅನ್ನಪ್ರಾಶನ, ಜವಳ, ನಾಮಕರಣ, ದೀಪಾನಮಸ್ಕಾರ ಹಾಕುವ ಆಚರಣೆಗಳು ಇಲ್ಲಿವೆ.

ಮಲ್ಲಾಪುರ : ಮಲ್ಲಾಪುರ ಗ್ರಾಮ ಕುಮ್ಮಟದುರ್ಗದ ಹತ್ತಿರವಿದ್ದು ರಾಮಸ್ವಾಮಿ ಗುಡಿ ಎಂಬುದು ಜನರ ವಾಡಿಕೆಯ ಮಾತು. ಇಲ್ಲಿ ಜಾತ್ರೆ ಕುಮ್ಮಟದುರ್ಗದ ಜಾತ್ರೆ ನಡೆಯುವ ದಿನವೇ ನಡೆಯುತ್ತದೆ. ಈ ತರಹದ ಆಚರಣೆಗಳನ್ನು ಗಂಗಾಪತಿ ಮತ್ತು ಒಡ್ಡರ ಹಟ್ಟಿಯ ಸುತ್ತಮುತ್ತಲ ಗಂಗಾಮತಸ್ಥರು ಮತ್ತು ಕುರುಬರು ಆಚರಿಸುತ್ತಾರೆ.

ಕಂಪಿಲಿ : ಇಲ್ಲಿ ಕುಮಾರರಾಮನು ಕೆಲವರ ಮನೆದೇವರಾದರೆ ಸೋಮೇಶ್ವರನು ಇನ್ನು ಕೆಲವರ ಮನೆದೇವರಾಗಿದ್ದಾನೆ. ಕುಮಾರರಾಮನ ತಂದೆ ಕಂಪಿಲರಾಯನ ಮನೆದೇವರ ದೇವಸ್ಥಾನದಲ್ಲಿ ಕುಮಾರ ರಾಮನ ಶಿಲ್ಪವು ಇದೆ. ಸೋಮೇಶ್ವರನ ಜಾತ್ರೆಯ ದಿನ ವಿಶೇಷ ಪೂಜೆ ಸಲ್ಲಿಸುತ್ತಾರೆ. ಮೊದಲು ಇಲ್ಲಿ ಗುಂಡಬ್ರಹ್ಮಯರ ಆಚರಣೆ ಪ್ರಚಲಿತದಲ್ಲಿತ್ತು. ಅಂದರೆ ಇಲ್ಲಿ ಗುಂಡ ಬ್ರಹ್ಮಯ್ಯನಿಗೆ ವಿಶೇಷ ಪೂಜೆ ನಡೆಯುತ್ತದೆ. ಮಂಡಲಿ ಮೊನೆಯನ್ನು ಶೂಲಕ್ಕೆ ಹೊಂದಿಸಿ ಕಾಣಿಕೆ ಇಡುತ್ತಾರೆ. ಇದನ್ನೇ ಶೂಲದ ಹಬ್ಬವೆಂದು ಕರೆಯುತ್ತಾರೆ. ಶೂಲಕ್ಕೇರಿಸಿದ ಕೆಲವು ಶಿಲ್ಪ ಮೂರ್ತಿಗಳು ಇದಕ್ಕೆ ಉತ್ತಮ ಉದಾಹರಣೆ. ಇಂತಹ ಶಿಲ್ಪ ಮೂರ್ತಿಗಳು ಶಿವಮೊಗ್ಗ, ಬುಕ್ಕಸಾಗರದ ವೀರಭದ್ರ ದೇವಾಲಯ, ಮೈಲಾರ, ಚಿತ್ರದುರ್ಗ, ಬಳ್ಳಾರಿಯಲ್ಲಿ ಇರುವುವು.

'ಡೊಂಬರ ಹಬ್ಬ' ಎಂಬುದು ಡೊಂಬರ ನಂಬಿಕೆ. ಅಂದರೆ ಕುಮಾರ ರಾಮನನ್ನು ತಮ್ಮ ವಂಶದ ಮಗ ಎಂದು ಡೊಂಬರ ನಂಬಿಕೆ. ಡೊಂಬರಿಗೆ ಈತನು ಗ್ರಾಮ ದೇವತೆ. ಅಲೆಮಾರಿಗಳಾದ ಅವರ ಈತನ ಗುಡಿ ಇರದೇ ಇದ್ದರೆ, ಸಿದ್ದೇಶ್ವರ ಅವರ ದೇವರೆಂದು ಹೇಳುವ ಪದ್ಧತಿ ಇದೆ. ಎರಡು ದಿನದ ಹಬ್ಬಕ್ಕೆ ಮಿತಿ ಇರುವುದಿಲ್ಲ ೪-೬ ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಹಳ್ಳಿಗರು ಸೇರಿ ಈ ಹಬ್ಬವನ್ನು ಆಚರಿಸುವ ಪದ್ಧತಿ ಇದೆ. ಇಂತಹ ಆಚರಣೆಗಳು ದಕ್ಷಿಣ ಕನ್ನಡದಲ್ಲಿ ಇದೆ. ಮಣಿಪಾಲದ ಹಿರೇಗೂಡಿನ, ತಾನಗೊಡು ಎಂಬಲ್ಲಿ ಶೂಲದ ಹಬ್ಬ, ದಾನದ ಹಬ್ಬ, ಕುಮಾರರಾಮನ ಬಲಿ ಎಂಬ ಉತ್ಸವಗಳು ಇಂದಿಗೂ ನಡೆಯುತ್ತವೆ. ಹೀಗೆ ಒಂದೊಂದೆಡೆ ಈ ಪದ್ಧತಿ ಇದೆ. ಮಲೆನಾಡಿನಾದ್ಯಂತ ಕುಮಾರ ರಾಮನ ಆಚರಣೆ ಕಂಡುಬರುತ್ತವೆ. ಕೆಲವೊಮ್ಮೆ ಊರುಗಳಲ್ಲಿ ಗುಡಿಗಳಿದ್ದರೆ. ಮತ್ತೆ ಕೆಲವೊಮ್ಮೆ ಮರದ ಕೆಳಗಡೆ ಕಾಡು ಕಲ್ಲೊಂದಕ್ಕೆ ಕಲ್ಲಿನ ಗೂಡನ್ನು ನಿರ್ಮಿಸಿ ಅದೇ ಕುಮಾರರಾಮನೆಂದು ಪೂಜಿಸುವ ಪದ್ಧತಿ ಇದೆ. ಈ ಹಬ್ಬ ಸುಗ್ಗಿಯ ನಂತರ ಬರುವುದರಿಂದ ಈ ದೇವರನ್ನು ಕೃಷಿ ಮತ್ತು ರಕ್ಷಣಾ ದೇವರನ್ನಾಗಿಯೂ ಆರಾಧಿಸುತ್ತಾರೆ. ಈ ಹಬ್ಬಗಳನ್ನು ಒಂದೊಂದೆಡೆ ಒಂದೊಂದು ಹೆಸರಿನಿಂದ ಕರೆಯುತ್ತಾರೆ. ಉದಾಹರಣೆಗೆ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಡೊಂಬರ ಹಬ್ಬ, ಸಾಗರ, ಸೊರಬಗಳಲ್ಲಿ ದೊಡ್ಡ ಬಾಗಿಲ ದೇವರ ಹಬ್ಬವೆಂತಲೂ, ಉತ್ತರ ಕನ್ನಡದ ಅಂಕೋಲ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಕುಮಾರರಾಮನ ಹಬ್ಬ ಅಥವಾ ಬಂಡಿ ಹಬ್ಬವೆಂತಲೂ ಕರೆಯುತ್ತಾರೆ. ಇಲ್ಲಿ ಐದು ಜನರು ದೇವರ ಮುಖಗಳನ್ನು ಹೊತ್ತುಕೊಂಡು ಐದು ಮುಖಗಳ ಪ್ರದರ್ಶನ ಮಾಡುವುದು ಇಲ್ಲಿನ ಹಬ್ಬದ ವೈಶಿಷ್ಟ್ಯತೆ. ಡೊಂಬರು ಮತ್ತು ಡೊಂಬತಿಯರು ತಾವು ತಂದಿದ್ದ ಡೊಳ್ಳುಗಳನ್ನು ವೃತ್ತಕಟ್ಟಿದ ಮರಕ್ಕೆ ನೇತುಹಾಕಿ ಡೊಳ್ಳನ್ನು ನುಡಿಸುತ್ತಾರೆ. ಈ ಶಬ್ದವನ್ನು ಕೇಳಿದ ಗ್ರಾಮದ ಮುಖಂಡ ಮರದ ಒಂದು ಅರೆಯನ್ನು ಕಡಿದು ನಿಲ್ಲಿಸುತ್ತಾನೆ. ಇದೇ ಅರೆ ಹಬ್ಬ . ಗ್ರಾಮದ ಮುಖ್ಯಸ್ಥ ಅರೆ ಹೊಡೆದ ಮೇಲೆ ಈ ಆಚರಣೆಯನ್ನು ಮಾಡುವರು. ಗ್ರಾಮದ ಜನರು ಎಲ್ಲರೂ ಸೇರಿಕೊಂಡು ರಥಕಟ್ಟೆ ಮತ್ತು ಬದಿಗಳನ್ನು ಸ್ವಚ್ಛಗೊಳಿಸಿ ಸಗಣಿ ಸಾರಿಸಿ, ಚಪ್ಪರಹಾಕಿ ಮಾವಿನ ತಳಿರು ತೋರಣ ಕಟ್ಟಿ ಅಲಂಕರಿಸುತ್ತಾರೆ. ಕಟ್ಟಿಗೆ ದೊಂದಿಯನ್ನು ಹೊತ್ತು ರಥಕಟ್ಟೆಯಿಂದ ರಥಕಟ್ಟೆಗೆ ಸಾಗಿಸುತ್ತಿರುತ್ತಾರೆ. ಚಲವಾದಿಗಳು ಚಮ್ಮಾಳ, ಕೊಂಬು, ಕಹಳೆಯನ್ನು ಹೊರಡಿಸಿ ಶ್ರುತಿ ಮಾಡಿಕೊಂಡಿರುತ್ತಾರೆ. ಡೊಂಬರು ಬಂದಾಗ ಡೋಲು, ಹಾರ್ಮೋನಿಯಂ, ತಾಳ, ಮದ್ದಳೆಗಳನ್ನು ತಂದಿರುತ್ತಾರೆ.

ಅರೆ ಹಬ್ಬದಂತೆ ಹುರುಳಿ ಚೀರುವುದು ಇನ್ನೊಂದು ಆಚರಣೆ. ದೇವಸ್ಥಾನದ ಬಳಿ ಬಂದು ಉಪವಾಸವಿದ್ದು, ದೇವರುಗಳನ್ನು ಹೊಳೆಸ್ನಾನ ಮಾಡಿಸಲು ಉತ್ಸವ ಹೊರಡಿಸುತ್ತಾರೆ. ಒಬ್ಬೊಬ್ಬ ಚೌತಿಗಾರನು ಮೂರ್ತಿಗಳನ್ನು ಹೊತ್ತು ಡೊಳ್ಳಿನವರನ್ನು ಹಿಂಬಾಲಿಸುತ್ತಾನೆ. ಐದು ಕಳಸಗಳು, ಉದ್ದಗತ್ತಿ, ಚೋಣ, ಕಂಚಿನದೋಣಿ, ಮರದಚೋಣ, ಕಂಚಿನ ಕುದುರೆ, ಉದ್ದಗತ್ತಿ, ಕಬ್ಬಿಣದ ಸಲಾಕೆ ಮತ್ತು ಐದು ಬಿದಿರಿನ ಮುಖಗಳನ್ನು ಹೊತ್ತು ಮೆರವಣಿಗೆಯೊಂದಿಗೆ ತರುತ್ತಾರೆ. ಈ ಉತ್ಸವದಲ್ಲಿ ಪೂಜಾರಿಗಳು, ಗ್ರಾಮಸ್ಥರೂ, ಚೌತೀದಾರರೂ, ದೀವಟಿಗೆಯವರು, ಡೊಂಬರು ಪಾಲ್ಗೊಳ್ಳುತ್ತಾರೆ.

ಭೂತನ ಸೋನಿ : ಭೂತನ ಸೋನಿ ಹಬ್ಬದ ಮೊದಲ ಕ್ರಿಯೆಗಳು ಕಡ್ಡಾಯವಾಗಿ ಗುರುವಾರ ಪ್ರಾರಂಭವಾಗುತ್ತದೆ. ಸೂರ್ಯಾಸ್ತದ ವೇಳೆಗೆ ಈ ಆಚರಣೆಗೆ ಮನೆಗೊಬ್ಬರಂತೆ ಭೂತದ ಕಟ್ಟೆಗೆ ಬಂದು ಸೇರುತ್ತಾರೆ. ಗಣಮಕ್ಕಳು, ಚೌತಿದಾರರು, ಕಳಸ ಹೊತ್ತವರು, ಗ್ರಾಮದ ಪ್ರಮುಖರು ಉಪಸ್ಥಿತರಿರುವರು. ಈ ವ್ಯಕ್ತಿಗಳಲ್ಲಿ ಊರ ಪ್ರಮುಖರು ಬರದಿದ್ದರೆ ಸೋನಿ ಆರಂಭವಾಗುವುದಿಲ್ಲ. ಎಲ್ಲರೂ ಸೇರಿದ ಮೇಲೆ ಗ್ರಾಮದೇವತೆಗಳು ಆಳ್ವಿಕೆಗೊಳ್ಳುತ್ತವೆ. ಈ ವೇಳೆಯಲ್ಲಿ ಯಾವ ತೊಂದರೆ ಆಗದಂತೆ ಭಕ್ತಿಯಿಂದ ಪ್ರಾರ್ಥನೆ ಮಾಡುತ್ತಾರೆ. ಭೂತಗಳು ತಮ್ಮ ಪೂರ್ಣ ಸಹಕಾರವನ್ನು ಸೂಚಿಸಿ ಮೈಬಿಟ್ಟು ಹೋಗುತ್ತವೆ. ಗಣಮಕ್ಕಳಲ್ಲಿ ಅಸ್ರರಾಯ ಬರುವವನೆ ಕಾರ್ಯಕ್ಕೆ ಆಧಾರವಾಗಿರುತ್ತಾನೆ. ಗಣಮಕ್ಕಳ ಮೇಲೆ ದೇವರ ಆಳ್ವಿಕೆ ಆದ ಮೇಲೆ ಸೋನಿಯ ಪೂಜಾಕಾರ್ಯ ಪ್ರಾರಂಭವಾಗುತ್ತದೆ. ಇಲ್ಲಿನ ಪೂಜಾರಿ ಒಕ್ಕಲಿಗನೇ ಆಗಿರುತ್ತಾನೆ. ಪೂಜಾ ಕಾರ್ಯ ಮಾಡುವುದರಿಂದ ಆತ ಪೂಜಾರಿ ಎಂದು ಕರೆಯಿಸಿಕೊಳ್ಳುತ್ತಾನೆ. ಭೂತದ ಬಲಿಗಾಗಿ ತಂದಿದ್ದ ಕುರಿಗಳನ್ನು ಗ್ರಾಮದ ತಳವಾರನೊಬ್ಬ ಬಲಿ ಅರ್ಪಿಸುತ್ತಾನೆ. ಕಡುಬು, ಪಿಚ್ಚಕಡುಬು, ಮಾಂಸಗಳನ್ನು, ಭೂತನ ಕಟ್ಟೆಯ ಎದುರಿಗೆ, ಹನ್ನೊಂದು ಬಾಳೆ ಎಲೆಯಲ್ಲಿ ಎಡೆ ಇಡುತ್ತಾರೆ. ಪೂಜಾರಿ ಧೂಪದೀಪ ಬೆಳಗಿಸಿ ಗಂಟೆ ಬಾರಿಸುತ್ತಾನೆ. ಸ್ವಲ್ಪ ಸಮಯದ ನಂತರ ಎಡೆಯನ್ನು ಉಪವಾಸವಿದ್ದ ಗಣಮಕ್ಕಳು, ಊರ ಮುಖಂಡರು ತಿನ್ನುತ್ತಾರೆ. ಯಾವುದೇ ಕಾರಣಕ್ಕೂ ಚಿಕ್ಕ ಮಕ್ಕಳು ಮತ್ತು ಹೆಂಗಸರು ಭೂತನಕಟ್ಟೆಗೆ ಬರುವಂತಿಲ್ಲ. ಈ ಸಮಾರಂಭಕ್ಕೆ ಬಂಧುಬಾಂಧವರು ಸೇರುತ್ತಾರೆ. ಊಟದ ನಂತರ ಸೋನಿ ಮುಗಿಯುತ್ತದೆ. ಸೋನಿ ಹಬ್ಬ ಅರೆಹಬ್ಬದಂತೆ ಕಲಶದ ಗುಂಡಿಯನ್ನು, ಮಾಡಿ ತೊಳೆದ ಕಲಶದ ಪಾತ್ರೆಯನ್ನು, ಗುಂಡಿಯಲ್ಲಿ ಮುಳುಗಿಸುತ್ತಾರೆ. ಇಲ್ಲಿ ಗದ್ದುಗೆ ನಿರ್ಮಿಸಿ ಗದ್ದುಗೆಯ ಮೇಲೆ ಕಳಶ, ದೇವರ ಪ್ರತಿಮೆ ಇಟ್ಟು ಅಲಂಕರಿಸುತ್ತಾರೆ. ಪೂಜಾರಿಯಿಂದ ದೇವರಿಗೆ ಹಣ್ಣು ಕಾಯಿ ಸೇವನೆ ನಡೆಯುತ್ತದೆ. ಬೆಳಿಗ್ಗೆ ಉಪವಾಸವಿದ್ದ ಎಂಟು ಮಂದಿ ಚೌತಿದಾರರು ಮಡಿಯಲ್ಲಿದ್ದು ಒಂದೊಂದು ಪ್ರತಿಮೆಯನ್ನು ಹೊತ್ತು ನಿಲ್ಲುತ್ತಾರೆ. ದೀವಟಿಗೆಯವರು, ಡೊಳ್ಳಿನವರು, ಓಲಗದವರು, ಡೊಂಬರತಿಯವರು, ಮೂಲರಥ ಕಟ್ಟೆಯ ಕಡೆ ಚಲಿಸುತ್ತಾರೆ. ಹೊಳೆಯಿಂದ ಹೊರಟ ಉತ್ಸವದಲ್ಲಿ, ಒಬ್ಬ ಗಣ ಮಗನ ಮೇಲೆ ಭೂತ ಆವಾಹನೆಗೊಳ್ಳುತ್ತದೆ. ವಾದ್ಯಕೊಂಬುಗಳ ನಾದ ತಾರಕಕ್ಕೇರಿ ಡೊಳ್ಳಿನ ಸದ್ದು ತೀವ್ರವಾಗುತ್ತದೆ. ದೇವರು ಬಂದುದನ್ನು ಚೌತಿದಾರರ ಬಳಿ ಬಂದು ತಮ್ಮ ತಮ್ಮ ಮೂರ್ತಿಯನ್ನು ಹೊತ್ತುಕೊಂಡು ಕುಣಿಯುತ್ತಾರೆ. ಹಸಿದು ಬಂದಿದ್ದು ಅಸ್ರರಾಯ ಎಂದು ಕರೆಯುತ್ತಾರೆ. ಮೊದಲು ಬರುವ ದೇವರು 'ಕುಮಾರರಾಮನೆ' ಎಂಬುದು ಜನರ ನಂಬಿಕೆ ಮತ್ತು ವಾಡಿಕೆ. ಊರಿನ ಕೊನೆಯ ಗಡಿ ಕುಮಾರರಾಮನದಾಗಿರುತ್ತದೆ. ಈ ರಥಕಟ್ಟೆಯಲ್ಲಿ ಎಲ್ಲಾ ದೇವರ ಮೂರ್ತಿಗಳನ್ನು ಇಟ್ಟು, ಪೂಜಾ ಸಾಮಗ್ರಿಗಳನ್ನು ಇಟ್ಟು, ಹಣ್ಣು ಕಾಯಿ ಸೇವೆ ಸಲ್ಲಿಸುತ್ತಾರೆ.

ಅರೆಹಬ್ಬ : ಡೊಂಬರ ಹಬ್ಬಕ್ಕೆ ಗ್ರಾಮಸ್ಥರನ್ನು ಆಹ್ವಾನಿಸುವ ವಿಶೇಷ ಪದ್ಧತಿ ವಿಧಿವತ್ತಾಗಿ ನಡೆಯುತ್ತದೆ. ಬೇರೆ ಬೇರೆ ಊರಿನವರು ಬಂದು ಗುಂಪು ಗುಂಪಾಗಿ ನಿಲ್ಲುತ್ತಾರೆ. ಮೆರವಣಿಗೆ ಮೂಲರಥಿಗೆ ಬಂದು ನಿಲ್ಲುತ್ತದೆ. ಆಯಾ ಊರಿನ ಪ್ರಮುಖರು ಬಂದು ಕೇಳಿಕೊಳ್ಳುವ ಪದ್ಧತಿಯೂ ಇದ್ದು, ಈ ಹಬ್ಬವನ್ನು ಹೊಳೆಯಲ್ಲಿ ನಡೆಸುತ್ತಾರೆ. ಈ ಹಬ್ಬದಲ್ಲಿ ಎಂಟು ರಥ ಕಟ್ಟೆಯುವರಿದ್ದು, ಒಂದರಿಂದ ಇನ್ನೊಂದು ರಥಕಟ್ಟೆಗೆ ಬರುವಾಗ ಡೊಂಬರತಿಯರು ನೃತ್ಯವನ್ನು ಮಾಡುವ ಪದ್ಧತಿ ಇದು. ಇವರು ಯಾವಾಗಲೂ ಮುಖವಾಡ ಹಿಡಿದಿರುವವರ ಎದುರೇ ನಿಲ್ಲುತ್ತಾರೆ. ಮೆರವಣಿಗೆಯ ಮುಂಚೂಣಿಯಲ್ಲಿ ಡೊಂಬ ಡೊಂಬರತಿಯರೇ ಇರುತ್ತಾರೆ. ಹೀಗೆ ಇರುವುದಕ್ಕೆ ಹೋಳಿಕೆ ರಾಮನೇ ಕಾರಣವೆಂದು, ಪ್ರಾಜಿಯವರ ವಂಶದವರೇ ಎಂದು ಹೇಳುತ್ತಾರೆ.

ಎಡೆಹಬ್ಬ : ಈ ಹಬ್ಬದಲ್ಲಿ ಅಕ್ಕಿ, ಬೆಲ್ಲ ಹಾಲಿನಿಂದ ಹುಗ್ಗಿಯನ್ನು ತಯಾರಿಸಲಾಗುತ್ತದೆ. ಕುಮಾರರಾಮನ ಗುಡಿಯ ಒಳಗೆ ಈ ಅಡುಗೆಯನ್ನು ತಯಾರಿಸಲಾಗುತ್ತದೆ. ಎಡೆ ಹುಗ್ಗಿಯಲ್ಲದೆ ಐದು ಅಥವಾ ಏಳು ಬಗೆಯ ತರಕಾರಿ ಪಲ್ಯ ಇತ್ಯಾದಿ ಶಾಖಾಹಾರಿ ಅಡುಗೆಗಳು ಇರುತ್ತವೆ. ಅಡುಗೆ ಪದಾರ್ಥವನ್ನು ಬುಟ್ಟಿಯಲ್ಲಿ ತುಂಬಿ ರಥಕ್ಕೆ ಕೊಂಡೊಯ್ಯುತ್ತಾರೆ. ಈ ರಥಕ್ಕೆ ಎದುರು ನೂರಾಒಂದು ಕುಡಿಯ ಬಾಳೆಯ ಎಲೆಯ ಮೇಲೆ ನಿಯಮದಂತೆ ಆಹಾರ ಪದಾರ್ಥಗಳನ್ನು ಬಡಿಸುತ್ತಾರೆ. ಪ್ರತಿ ಎಡೆ ಪೂಜೆ ಸಲ್ಲಿಸಿದ ನಂತರ ಗ್ರಾಮದ ಪ್ರಮುಖ ದೈವವೊಂದು ಗಣಮಗನ ಮೈದುಂಬಿ ತನ್ನ ತೃಪ್ತಿಯನ್ನು ವ್ಯಕ್ತಪಡಿಸುತ್ತದೆ. ನಂತರ ಎಡೆಗಳನ್ನು ಕೈವಾಳದವರಿಗೆ ನೀಡಿ ಹುಗ್ಗಿಯನ್ನು ಗಣಮಕ್ಕಳು ಚೌತಿದಾರರಿಗೆ ನೀಡಲಾಗುವುದು. ನಂತರ ಡೊಳ್ಳಿನವರು ಇಂದೋಗಿ ನಾಳೆ ಬನ್ನಿ .... ಎಂದು ಹೇಳುತ್ತಾ ದೇವರನ್ನು ಕಳುಹಿಸುವ ಪದ್ಧತಿ ಇದೆ.

ಗ್ರಾಮದೇವರ ಹಬ್ಬ : ಗ್ರಾಮದ ಸಮಸ್ತರು ಈ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಗ್ರಾಮಸ್ಥರ ಸಮಸ್ಯೆಗಳನ್ನು ದೇವರ ಮುಂದಿಟ್ಟು ಬಗೆಹರಿಸಿಕೊಳ್ಳುವ ಪದ್ಧತಿ ಇದೆ. ಉತ್ಸವದ ಮುಂಚೂಣಿಯಲ್ಲಿ ದೊಂಬಲೆಯರು ನರ್ತನಗೈಯ್ಯುತ್ತಿರುತ್ತಾರೆ. ಬೆಳಕಿಗಾಗಿ ಕಟ್ಟೆ, ದೊಂದಿಯನ್ನು ಉರಿಸುತ್ತಿರುತ್ತಾರೆ. ಗ್ರಾಮದ ಪ್ರಮುಖ ದೈವಗಳು ಗಣಮಕ್ಕಳ ಮೈದುಂಬುತ್ತವೆ. ಇದಕ್ಕೆ ದೇವವಾಳಿಕೆ ಎಂದು ಹೆಸರು. ಹಿಂದಿನ ರಾತ್ರಿಯಂತೆ ಕೊನೆಯಲ್ಲಿ ಮೂಲರಥಗೆ ಮರಳಿ ಬಂದ ಮೇಲೆ ಮೈದುಂಬಿದ್ದ ದೈವಗಳು ಮೈ ಬಿಡುತ್ತವೆ.

ಅಸ್ರಾಯದ ಹಬ್ಬ : ಇದು ಹಿರಿಯರನ್ನು ಸ್ಮರಿಸುವ ಹಬ್ಬ. ದೇವರ ಮೂರ್ತಿಗಳನ್ನು ಹೊರುವ ಚೌತಿದಾರರು ಮತ್ತು ಗಣಮಕ್ಕಳು ಉಪವಾಸದಿಂದಿದ್ದು ಮೂರ್ತಿ ಮತ್ತು ಕಲಶಗಳನ್ನು ಮೆರವಣಿಗೆಯಲ್ಲಿ ಹೊತ್ತು ದೇವರನ್ನು ಹೊಳೆ ಮೀಯಿಸುತ್ತಾರೆ. ಸಣ್ಣ ಪುಟ್ಟ ಹರಕೆಗಳನ್ನು ಹೊತ್ತ ಭಕ್ತರು ಹರಕೆ ಸಲ್ಲಿಸಿದ ನಂತರ ರಥಗೆ ಉತ್ಸವದಲ್ಲಿ ಸಾಗುತ್ತದೆ. ರಥಗಳು ಮುಗಿದ ಮೇಲೆ ಅಸ್ರಾಯನ ಕಟ್ಟೆಗೆ ಬರುತ್ತಾರೆ. ಈ ಕಟ್ಟೆಯ ಎದುರಿನಲ್ಲಿ ಶೂಲದ ಕೋಲನ್ನು ನಿಲ್ಲಿಸಿ ಕೋಳಿಯನ್ನು ಶೂಲಕ್ಕೆ ಜೀವಂತವಾಗಿ ಸಿಕ್ಕಿಸಿ, ಈ ಶೂಲದ ಸುತ್ತ ವೃತ್ತಾಕಾರದಲ್ಲಿ ಡೊಂಬ ಡೊಂಬತಿಯವರು ನರ್ತನ ಮಾಡುತ್ತಿರುತ್ತಾರೆ. ಗ್ರಾಮದ ಎಲ್ಲಾ ದೈವಗಳಿಗೆ ಪೂಜಾರಿಗಳು ಎಡೆಮಾಡಿ ಕೋಳಿ, ಕುರಿಗಳನ್ನು ಬಲಿಕೊಡುತ್ತಾರೆ.

ಕೊಂಡ ಹಾಯುವ ಹಬ್ಬ : ಇದು ಡೊಂಬರ ಹಬ್ಬದ ನಾಲ್ಕನೆಯ ದಿನ. ಈ ಕಾರ್ಯಕ್ಕೆ ಮೊದಲು ಚೌತಿದಾರರು, ಗಣಮಕ್ಕಳನ್ನು ಡೊಂಬ ಡೊಂಬತಿಯರು ಪುರೋಹಿತನ ಮನೆಗೆ ಹೋಗಿ ಬರುವ ಪದ್ಧತಿ ಇದೆ. ಪುರೋಹಿತನ ಮನೆಯಿಂದ ಬರುವಷ್ಟರಲ್ಲಿ ದೇವಾಲಯದ ಎದುರು ಕೊಂಡದ ಕೆಂಡ ಸಿದ್ಧವಾಗಿರುತ್ತದೆ. ಚೌತಿದಾರರು ದೇವರ ಕಲಶಗಳನ್ನು ಹೊತ್ತವರು, ಹರಕೆಗಳನ್ನು ಸಲ್ಲಿಸುವವರು, ಮೈದುಂಬಿದ ಗಣ ಮಕ್ಕಳು ಕೊಂಡ ಕೆಂಡವನ್ನು ಹಾಯುತ್ತಾರೆ. ನಂತರ ಕಲ್ಯಾಣೋತ್ಸವವನ್ನು ನಡೆಯಿಸಿ ದೇವರನ್ನು ಗುಡಿದುಂಬಿಸುತ್ತಾರೆ. ಹಬ್ಬದ ವ್ಯವಸ್ಥಾಪಕರು, ಡೊಂಬರ ಹಬ್ಬದಲ್ಲಿ ಸಹಕರಿಸಿದ ದೀವಟಿಗೆ ಹಬ್ಬದ ತಳವಾರರಿಗೆ, ಅಗಸರಿಗೆ, ಚಲವಾದಿಗಳಿಗೆ, ದೀವರರಿಗೆ ಮತ್ತು ಕೈವಾಡದವರಿಗೆ ಅಕ್ಕಿ, ಹಣ, ಛತ್ರ, ಸಂಭಾವನೆ ನೀಡುತ್ತಾರೆ. ಉಳಿದ ಪಾತಿಗೆ ಹಣ ಮತ್ತು ದವಸ ಧಾನ್ಯಗಳನ್ನು ಗಣಮಕ್ಕಳು ಮತ್ತು ಚೌತಿದಾರರಿಗೆ ಹಂಚುತ್ತಾರೆ.

ಹಬ್ಬ ಎಂಬುದು ಬಿವಿದೆಡೆಯಲ್ಲಿ ವಿವಿಧ ರೀತಿಯಲ್ಲಿ ಆಚರಿಸುವ ಪದ್ಧತಿ ಇದೆ. ಸಾಗರ, ಸೊರಬ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಹಬ್ಬವನ್ನು ಮಳೆಗಾಲದಲ್ಲಿ, ಜೂನ್ ತಿಂಗಳಿನಲ್ಲಿ ಮಾಡುತ್ತಾರೆ. ತೀರ್ಥಹಳ್ಳಿ ಹೊಸನಗರಗಳಲ್ಲಿ ಕಂಚಿನ ಕುದುರೆ, ಜಿಂಕೆ, ಕುದುರೆ ಸವಾರ, ಬೆಳ್ಳಿ, ಛತ್ರ, ಕಬ್ಬಿಣದ ಕಂಠ ಮತ್ತು ಐದು ಮುಖವಾಡಗಳು ಇರುತ್ತವೆ. ನಾಲ್ಕು ಮುಖವಾಡಗಳು ಕೆಂಪಗಿದ್ದು ಒಂದು ಹಸಿರು ಬಣ್ಣದಾಗಿರುತ್ತದೆ. ಇವು ವರ್ಷಕ್ಕೊಮ್ಮೆ ಮಾತ್ರ ಪ್ರದರ್ಶನವಾಗುತ್ತವೆ. ಕೂಗತೆ, ಹುಣಸೂರು, ಮುತ್ತೂರು, ಮಂಚಿನ ಕಾಮ ಮತ್ತು ಬರದ ಹಳ್ಳಿಗಳಲ್ಲಿ ಈ ಕುಮಾರ ರಾಮನ ದೇವಸ್ಥಾನಗಳನ್ನು ನಾವು ಇಂದಿಗೂ ಕಾಣುತ್ತೇವೆ. ದೀಪಾವಳಿಯಲ್ಲಿ ದೀಪಹಚ್ಚಿ ಹಣ್ಣು ಕಾಯಿ ಸೇವೆ ಮಾಡುವುದರ ಮೂಲಕ ಪೂಜೆ ಸಲ್ಲಿಸಿದರೆ ಆರ್ದ್ರ ಮಳೆಯಲ್ಲಿ ಊರಿನವರೆಲ್ಲಾ ಸೇರಿ ಹಬ್ಬವನ್ನು ಆಚರಿಸುತ್ತಾರೆ.

ಈ ಹಬ್ಬದಲ್ಲಿ ಮುಖವಾಡಗಳು, ಮೂರ್ತಿ ಕಳಶವನ್ನು ಪ್ರದರ್ಶನ ಮಾಡುತ್ತಾರೆ. ವರ್ಷಕ್ಕೆ ಒಂದು ಭಾರಿ ನಡೆಯುವ ಹಬ್ಬದಲ್ಲಿ, ಮೊದಲನೇ ದಿನಕ್ಕೆ ಹಬ್ಬವೆಂತಲೂ, ಎರಡನೇ ದಿನಕ್ಕೆ ಜೆಂಕಿ ಎಂತಲೂ ಕರೆಯುತ್ತಾರೆ. ಈ ಪ್ರದೇಶಗಳಲ್ಲಿ ಈ ಹಬ್ಬ ಎಲ್ಲಾ ದೇವರುಗಳ ಬನಗಳಿಗೂ ಎಡೆ ಇಡುವ ದಿನ ತೀರ್ಥಹಳ್ಳಿ ಪ್ರದೇಶಗಳಲ್ಲಿ ಎಡೆಯ ಪದಾರ್ಥವನ್ನು ದೇವಸ್ಥಾನಗಳಲ್ಲಿ ತಯಾರಿಸಿದರೆ, ಇಲ್ಲಿ ಗುಡಿಯ ಪೂಜಾರಿಯ ಮನೆಯಲ್ಲಿ ತಯಾರಿಸಲಾಗುತ್ತದೆ. ಎಡೆಯ ಪದಾರ್ಥಗಳು ಹೆಚ್ಚಿನ ಮಟ್ಟಿಗೆ ಒಂದೇ ರೀತಿಯಾಗಿದ್ದರೂ, ಮನೆಮಂದಿಯೆಲ್ಲಾ ಉಪವಾಸವಿದ್ದು ಪೂಜೆಯ ನಂತರ ಊಟ ಮಾಡುತ್ತಾರೆ. ಮುಂಜಾನೆ ಗ್ರಾಮ ದೇವರ ಗುಡಿಗೆ ಸೇರಿದ ಮೂರ್ತಿಗಳನ್ನು ಸ್ವಚ್ಛಗೊಳಿಸಿ ಗದ್ದುಗೆ ಮೇಲಿರಿಸಿ, ಛತ್ರಿ, ಬಾವುಟ, ನವಿಲುಗರಿ ಮುಂತಾದವುಗಳಿಂದ ಅಲಂಕರಿಸುತ್ತಾರೆ. ಅಡಿಕೆ ಹಿಂಗಾರ, ಹೂವಿನ ಅಲಂಕರಣ ಮಾಡುತ್ತಾರೆ. ಗಂಡಿಗೆ ಅಗ್ನಿದಿಕ್ಕಿನಲ್ಲಿ ಶೂಲದ ಕಂಬವನ್ನು ನೆಟ್ಟು, ಅದರ ಮೂರು ಅರೆಗಳಿಗೆ ಜೀವಂತ ಕೋಳಿಗಳನ್ನು ಪ್ರತ್ಯೇಕವಾಗಿ ಸಿಕ್ಕಿಸಿರುತ್ತಾರೆ. ಈ ಕೋಳಿಗಳನ್ನು ಸಂಜೆ ಶೂಲದಿಂದ ಹೊರ ತೆಗೆದು ಹಸಿಗೆ ಮಾಡಿ ನಂತರ ಅಡುಗೆಯನ್ನು ತಯಾರಿಸಿ ಎಡೆ ಇಟ್ಟು ಊಟ ಮಾಡುತ್ತಾರೆ.

ಜಿಗ್ಗಿ : ಇದು ಹಬ್ಬದ ಎರಡನೇ ದಿನ ಹಬ್ಬದ ಹಿಲಾಡಿ ಎಂತಲೂ ಕರೆಯುತ್ತಾರೆ. ಗುಡಿಯ ಮುಂದೆ ಅಗ್ನಿ ಕುಂಡವನ್ನು ಸಿದ್ಧಪಡಿಸಿ ಏಳು ಜಾತಿಯ ಕಟ್ಟಿಗೆಗಳನ್ನು ಹಾಕಿ ಜೆಂಕಿ ಹಾಕಿರುತ್ತಾರೆ. ಕೆಂಡವಾದ ನಂತರ ಬೀರದೇವರ ಗುಡಿಯಿಂದ ಮೆರವಣಿಗೆ

ಹೊರಡುತ್ತದೆ. ಪೂಜಾರಿಯು ಗುಡಿಯ ದೇವರಿಗೆ ಪೂಜೆ ಸಲ್ಲಿಸಿದ ನಂತರ ಮುಖ ಹಿಡಿದವರು, ಕತ್ತಿ ಹಿಡಿದವರು, ಡೊಳ್ಳು ಹಿಡಿದವರು, ಕೆಂಡವನ್ನು ಹಾಯುತ್ತಾರೆ. ನಂತರ ದೇವರಿಗೆ ಸಂಬಂಧಿಸಿದ ವಸ್ತುಗಳನ್ನು ಸುರಕ್ಷಿತ ಜಾಗಕ್ಕೆ ಸಾಗಿಸುತ್ತಾರೆ. ತೀರ್ಥಹಳ್ಳಿ, ಸಾಗರದ ಕಡೆಗೆ ಈ ಪದ್ಧತಿ ಇದ್ದರೆ ಉತ್ತರ ಕನ್ನಡ ಜಿಲ್ಲೆಯ ಹಲವು ಕಡೆ, ಕುಮಾರರಾಮನ ಆರಾಧನೆ ಪ್ರಚಲಿತದಲ್ಲಿದೆ. ಈ ಭಾಗದಲ್ಲಿ ವಿಶೇಷ ನಿತ್ಯ ಪೂಜೆ, ವರ್ಷಕ್ಕೊಮ್ಮೆ ಕುಮಾರರಾಮನ ಹಬ್ಬ ವೈಭವದಿಂದ ಜರುಗುತ್ತದೆ. ಮೇ ತಿಂಗಳು ಹತ್ತೊಂಭತ್ತನೇ ತಾರೀಖು ಹಬ್ಬ ಪ್ರಾರಂಭವಾಗಿ ಒಟ್ಟು ಮೂರು ತಿಂಗಳು ನಡೆಯುತ್ತದೆ. ಮಲೆನಾಡಿನಲ್ಲಿರುವಂತೆ ಗುಡಿಗಳು ಊರಿನ ಮಧ್ಯದಲ್ಲಿ ಅಥವಾ ಊರಿನ ಪ್ರವೇಶಕ್ಕೆ ಮೊದಲೇ ಇರುತ್ತವೆ. ಗರ್ಭಗುಡಿಯ ಸುತ್ತಲೂ ಗೋಡೆ ನಿರ್ಮಿತವಾಗಿದ್ದು ಪ್ರದಕ್ಷಿಣಾ ಪಥವಿರುತ್ತದೆ. ಮಲೆನಾಡಿನಲ್ಲಿ ಈ ವ್ಯವಸ್ಥೆ ಇರುವುದಿಲ್ಲ. ಒಳಗಡೆ ಒಂದು ಅಡಿ ಎತ್ತರ ಮಣ್ಣು ಇದ್ದು ಗುಂಡುಕಲ್ಲು ಹಾಗೂ ಮರದಿಂದ ಮಾಡಿದ ಮುಖಗಳಿರುತ್ತವೆ. ಕಂಚಿನ ಕುದುರೆಯ ಮೇಲೆ ಕುಳಿತ ಕುಮಾರರಾಮನ ವಿಗ್ರಹವಿದ್ದು ನವಿಲುಗರಿ ಇಟ್ಟಿರುತ್ತಾರೆ. ೨೫೦ ಅಡಿ ದೂರದಲ್ಲಿ ಶೂಲದ ಕಂಬವಿದ್ದು ಒಂದು ಸಿಡಿಗಂಬವಿರುತ್ತದೆ. ದೇವಸ್ಥಾನದ ಹೊರಭಾಗದಲ್ಲಿ ಸ್ವಲ್ಪ ದೂರದಲ್ಲಿ ಕುಮಾರ ರಾಮನ ಪತ್ನಿಯರಾದ ಮಾಳಮಹಾಸತಿ, ನಾಗ ಮಹಾಸತಿ ಹೊನ್ನ ಮಹಾಸತಿ ಕೆಂಚ ಮಹಾಸತಿ ಎಂಬ ನಾಲ್ಕು ಜನಗಳ ಪ್ರತ್ಯೇಕವಾದ ಬರಹಗಳಿವೆ. ಇವು ತೀರ್ಥಹಳ್ಳಿಯ ಪ್ರದೇಶದ ವೃತ್ತ ಕಟ್ಟೆಯನ್ನು ಜ್ಞಾಪಿಸುತ್ತವೆ. ಪ್ರತಿ ಮಂಗಳವಾರ ಶುಕ್ರವಾರಗಳಂದು ವಿಶೇಷ ಪೂಜೆಗಳಿರುವುದರಿಂದ, ಈ ದಿನಗಳಂದು ದೇವರು ಗಣಮಗನ ಮೇಲೆ ಬರುತ್ತದೆ. ಈ ಆಚರಣೆಯು ತೀರ್ಥಹಳ್ಳಿಯ ಕೆಲಭಾಗದಲ್ಲಿ ಕಂಡುಬರುತ್ತದೆ.

ಸೇಡಿ ಪೂಜೆ ಹಬ್ಬ : ವರ್ಷಕ್ಕೆ ಒಂದು ಬಾರಿ ನಡೆಯುವ ಈ ಹಬ್ಬ ಬಂಡಿಹಬ್ಬವೆಂತಲೂ ಕರೆಯುತ್ತಾರೆ. ದೇವರ ಮೂರ್ತಿ ಎದುರು ಸಾವಿರ ಬಾಳೆಹಣ್ಣು ಹಾಕಿ ಪೂಜೆ ಮಾಡುವುದೇ ಸೇಡಿ ಪೂಜೆ ಹಬ್ಬ. ಇದು ಸಾಂಕೇತಿಕ ಉದ್ಘಾಟನೆ ಆಗಿದೆ. ಈ ಹಬ್ಬ ಬಾಗಿಲು ತೆಗೆಯುವ ಆಚರಣೆಯಿಂದ ಬಾಗಿಲು ಹಾಕುವವರೆಗೆ ಮೂರು ದಿನ ನಡೆಯುತ್ತದೆ. ಬಾಗಿಲು ತೆಗೆದು ಉದ್ಘಾಟನೆ ಮಾಡಿದ ನಂತರ ಇದೇ ವೇಳೆಗೆ ದೇವಾಲಯದ ಹೊರಗೆ ಕೋಳಿಗಳ ಬಲಿಯನ್ನು ಅರ್ಪಿಸಲಾಗುತ್ತದೆ. ಮೇ ಹತ್ತೊಂಭತ್ತರ ದಿನಾಂಕದಂದು ಹೂವಿನ ಮಕ್ಕಳನ್ನು ಬಿಡುವುದರಿಂದ ಹಬ್ಬ ಪ್ರಾರಂಭವಾಗುತ್ತದೆ. ಹೂವಿನ ಮಕ್ಕಳು ಎಂದರೆ ಇದೊಂದು ಹರಕೆ ಮಾತ್ರ. ೧೦-೧೫ ವರ್ಷದ ಮಕ್ಕಳು ವರ್ಷಕ್ಕೆ ಒಂದು ಬಾರಿ ಹೂವಿನ ಮಕ್ಕಳಾಗಿ ಸೇವೆ ಸಲ್ಲಿಸುವಂತೆ ಹರಕೆಯನ್ನು ಹೊರುತ್ತಾರೆ. ಈ ದಿನಗಳಂದು ಚಡ್ಡಿಯನ್ನು ಬಿಟ್ಟು ಬೇರೇನು ತೊಡುವುದಿಲ್ಲ. ಕಣಗಿಲ ಹೂವಿನ ಮಾಲೆ ಹಾಕಿಕೊಂಡು ಹೂವಿನ ಚೆಂಡು ಬೆತ್ತದ ಸುರುಳಿಯಾಕಾರದ ಕೋಲು ಹಿಡಿದಿರುತ್ತಾರೆ. ಹರಕೆ ಸಲ್ಲಿಸುತ್ತಾರೆ. ದೇವಾಲಯದ ಹೊರಕ್ಕೆ ಕಳುಹಿಸುತ್ತಾರೆ. ಊರೂರು ಸುತ್ತಿ ಸಂಜೆಯ ಪೂಜೆಯ ವೇಳೆಗೆ ಪುನಃ ಮಕ್ಕಳು ಬಂದಾಗ ಅವರ ಹರಕೆಯು ಮುಗಿಯುತ್ತದೆ. ಇಲ್ಲಿಗೆ ಮೊದಲ ದಿನದ ಕಾರ್ಯ ಮುಗಿಯುತ್ತದೆ. ಎರಡನೆಯ ದಿನ ಹರಕೆ ಹೊತ್ತ ಭಕ್ತರು ಬರುತ್ತಾರೆ. ನೀಲಿ ಅಥವಾ ಕಾಕಿ ಚಡ್ಡಿಯನ್ನು ತೊಟ್ಟು, ಕಣಗಿಲ ಹೂವಿನ ಮಾಲೆಯನ್ನು ಜನಿವಾರದಂತೆ ಹಾಕಿಕೊಂಡು. ಎರಡು ತೋಳುಗಳಿಗೆ ಹೂವಿನ ಚೆಂಡು ಕಟ್ಟಿಕೊಂಡು. ಕೈಗಳಲ್ಲಿ ಜೋಡುಬೆತ್ತ ಅಡಿಕೆ ಹಾಳೆಯಿಂದ ಗಾಳಿ ಬೀಸುತ್ತಾರೆ. ಹೀಗೆ ಅಲಂಕರಿಸಿ ಕೊಂಡವನ್ನು ಅಣಲಗೋಡ ಕಳ್ಳರೆಂದು ಕರೆಯುತ್ತಾರೆ. ಪೂಜೆ ಸಲ್ಲಿಸಿದ ನಂತರ ದೇವಸ್ಥಾನದಿಂದ ಬೀಳ್ಕೊಡುತ್ತಾರೆ. ಊರೂರು ಸುತ್ತುತ್ತ

ಸಿಕ್ಕಿದ್ದನ್ನು ಕದಿಯುತ್ತಾ ಮನೆಗೆ ಹೋದಾಗ ಅಕ್ಕಿ ಛತ್ರವನ್ನು ಕೊಡುವ ಪದ್ಧತಿಯೂ ಇದೆ. ಪ್ರಸ್ತುತ ಅಣಲಗೋಡಿನಲ್ಲಿರುವ ಮಾಳಮಾಸ್ತಿ ಗುತ್ತು, ನಾಗಮಾಸ್ತಿ ಗುತ್ತು, ಹೊನ್ನಮಾಸ್ತಿ ಗುತ್ತು, ಕೆಂಚಮಾಸ್ತಿ ಗುತ್ತು, ಕುದುರೆಕಲ್ಲುಗಳಿಗೆ, ಬಾಗಿಲುಗಳಿಗೆ ಎಡೆ ಇಟ್ಟು ಪೂಜೆ ಸಲ್ಲಿಸಲಾಗುತ್ತದೆ. ಇದು ಎರಡನೆಯ ದಿನದ ಕಾರ್ಯಕ್ರಮ. ಹಾಲುಹಬ್ಬದ ಉತ್ಸವ, ಹಬ್ಬದ ಮೂರನೆಯ ದಿನ ಮೇ ೨೧ರಂದು ನಡೆಯುತ್ತದೆ. ಮೊದಲು ಕಳ್ಳರು ಪೂಜೆಗೆ ಕಡ್ಡಾಯವಾಗಿ ಹಾಜರಿರಬೇಕು. ಜಿಟ್ಟಿ ಕಳ್ಳರಲ್ಲಿ ಒಬ್ಬನು ಕಡಿಮೆಯಾದರೂ ಹಬ್ಬ ನಡೆಯುವಂತಿಲ್ಲ, ಪೂಜೆ ನಡೆಸಿದ ನಂತರ ಪ್ರಸಾದ ಪಡೆದು ನಾ ಮುಂದು ತಾ ಮುಂದು ಎಂದು ಶೂಲದ ಕಂಬಗಳ ಕಡೆಗೆ ಓಡುತ್ತಾರೆ. ಶೂಲದ ಕಂಬಗಳಿಗೆ ಎಣ್ಣೆಯನ್ನು ಸವರಿರುತ್ತಾರೆ. ಐವತ್ತು ಅಡಿ ಉದ್ದದ ಶೂಲದ ಕಂಬಗಳನ್ನು ಸಾಗವಾನಿ ಮರದ ದಿಮ್ಮಿಗಳಿಂದ ಮಾಡಿರುತ್ತಾರೆ. ಯಾರು, ಶೂಲದ ಕಂಬವನ್ನು ಹತ್ತಿ ಮೊದಲು ಹೊಳೆಯನ್ನು ನೋಡುತ್ತಾರೋ ಅವರಿಗೆ ಹೊಳೆಯ ಮಧ್ಯದಲ್ಲಿ ಕಳಶವು ಕಾಣುತ್ತದೆ ಎಂದು ಹೇಳುತ್ತಾರೆ. ಈ ಹೊಳೆಯಲ್ಲಿ ಕಾಣುವ ಕಳಶ ಕುಮಾರ ರಾಮನ ಕಳಶವೆಂದು ನಂಬುತ್ತಾರೆ. ಶೂಲದ ಮರವನ್ನ ಕಳ್ಳರು ಏರಿದ ನಂತರ ಹೆಣ್ಣು ಮಕ್ಕಳ ಸಮೂಹ ಅಲ್ಲಿ ಆರತಿ ಮಾಡುತ್ತಾರೆ. ಶೂಲದ ಕಂಬದ ಪಕ್ಕದಲ್ಲಿದ್ದ ಸಿಡಿ ಕಂಬಕ್ಕೆ ಬಂದು ಸೊಂಟಕ್ಕೆ ಬಟ್ಟೆ ಸುತ್ತಿ ಕಬ್ಬಿಣದ ಕೊಕ್ಕೆ ಸಿಕ್ಕಿಸಿಕೊಂಡು ಸಿಡಿ ಆಡುತ್ತಾರೆ. ಇಂತಹ ಪದ್ಧತಿ.... ಮೂರ್ತಿಶಿಲ್ಪದಲ್ಲಿ ಕಾಣಬಹುದು. ಈ ತರಹದ ಸಿಡಿಗಳು ಶಿಲ್ಪದಲ್ಲಿದ್ದು, ಉದಾಹರಣೆಗೆ ಶಿವಮೊಗ್ಗ, ಬೇಲೂರು, ಬುಕ್ಕಸಾಗರದ ವೀರಭದ್ರ ದೇವಾಲಯದಲ್ಲಿ ಕಾಣಬಹುದು. ದೇವಾಲಯದ ಬಾಗಿಲನ್ನು ಸಾಂಕೇತಿಕವಾಗಿ ಹಾಕುವುದರ ಮೂಲಕ ಈ ಹಬ್ಬವನ್ನು ಮುಗಿಸುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಕೂಗತೆ, ಸುತ್ತಲಿನ ಹಳ್ಳಿಗಳು ಬಾಸು ಮಾಡಸೇತಿಗೇ, ಕಣಗಿಲ ಗ್ರಾಮಗಳು ಸೇರಿ ಬಂಡಿ ಹಬ್ಬವನ್ನು ಆಚರಿಸುತ್ತಾರೆ. ೧೨ ದಿನ ನಡೆಯುವ ಹಬ್ಬದಲ್ಲಿ, ಇಲ್ಲಿ ಮುಖ್ಯವಾಗಿ ೫ ಮುಖಗಳು ಇರುತ್ತವೆ. ಪ್ರಮುಖ ಉತ್ಸವಕ್ಕೆ ಪಂಚವಾದ್ಯ, ಡೊಳ್ಳು, ಜಾಗಟೆ, ನಾದ, ದೀವಟಿಗೆ ಪತಾಕೆಗಳನ್ನು ಮೆರವಣಿಗೆಯಲ್ಲಿ ತರುವುದು. ಹಗರಣ ಕಟ್ಟೆ, ಕೆಂಡ ಆಯುವುದು, ಹುಲಿ ಚಪ್ಪರ, ತುಲಾಭಾರ ಮುಂತಾದ ಆಚರಣೆಗಳು ಇದ್ದು ಊರಿಂದ ಊರಿಗೆ ಸಂಪ್ರದಾಯಗಳಲ್ಲಿ ವ್ಯತ್ಯಾಸವಿರುತ್ತದೆ. ಈ ಉತ್ಸವದಲ್ಲಿ ಐದು ಕಲಶಗಳ ಮೆರವಣಿಗೆ ವಿಶೇಷವಾಗಿರುತ್ತದೆ. ಈ ದೇವರುಗಳ ಹಿರಿಯ ಅಣ್ಣ ಬೊಮ್ಮಯ ದೇವರು, ಮೊದಲ ತಮ್ಮ ಮಾಣಿಬೀರ, ಜೂರಬೀರ, ರಾಕ್ಷಣ ಬೀರ, ಬೀರದೇವ ಇವರೆಲ್ಲರ ಕೊನೆಯ ತಂಗಿ ರೇವತಿ ಕುಗ್ರೆ, ಬೆಟ್ಟದ ಮೇಲೆ ಬೊಮ್ಮಯ್ಯನ ನಿವಾಸವಿದೆ.

ಒಟ್ಟಾರೆ ಕರ್ನಾಟಕದ ಹಲವಾರು ಭಾಗಗಳಲ್ಲಿ ಕುಮಾರ ರಾಮನ ಹಬ್ಬಗಳು ಆಚರಣೆ ತೆರ ತೆರನವು. ಕರ್ನಾಟಕದಲ್ಲಿ ವಿವಿಧ ಸ್ಥಳಗಳಲ್ಲಿ ಕುಮಾರ ರಾಮನ ಪಂಥಕ್ಕೆ ಸಂಬಂಧಿಸಿದ ಆಚರಣೆಯು ಇದು ಕಿರುನೋಟ ಚಿತ್ರಣ ಮಾತ್ರ. ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಅದರಲ್ಲೂ ಹೆಚ್ಚಾಗಿ ಕುಮ್ಮಟದ ಆನೆಗೊಂದಿ, ದೊರವಡಿ, ಹಾನೆಯ, ಹೊಸಮಲೆದುರ್ಗ ಇವು ಕೇಂದ್ರ ಸ್ಥಳಗಳಾಗಿದ್ದರೂ ಈ ಸ್ಥಳಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಮುಕ್ಕುಂಪೆ, ಜಬ್ಬಲಗುಡ್ಡ, ಕಂಪಿಲಿ, ಗಂಗಾವತಿ, ಇಂದರಗಿ, ಮಲ್ಲಾಪುರ, ಹಂಪಸದುರ್ಗ, ರಾಮದುರ್ಗ, ಕೊಪ್ಪಳ, ತೀರ್ಥಹಳ್ಳಿ ಸಾಗರ, ಸೊರಬ, ಅಂಕೋಲ, ಹಳದೀಪುರ,

ಅಣಲಗೋಳ, ನಿಲೋಗಲ್ಲು, ಹುಲಿಗಿ, ದೊಡ್ಡ ಪಾಲನಹಳ್ಳಿ, ದಕ್ಷಿಣ ಕನ್ನಡ ಮುಂತಾದ ಪ್ರದೇಶಗಳಲ್ಲಿ ಈ ಹಬ್ಬದ ಆಚರಣೆ ಈಗಲೂ ನಡೆಯುತ್ತಲಿದೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಹೆಸರಿನಿಂದ ಈ ಹಬ್ಬವನ್ನು ಹೆಸರಿಸುತ್ತಾರೆ. ಹಬ್ಬದ ಹೆಸರಿನಲ್ಲಿ ವಿವಿಧತೆಗಳಿದ್ದರೂ ಇಲ್ಲಿ ಮೂಲ ಪಂಥ ಕುಮಾರ ರಾಮನದು ಎನ್ನುವುದು ಗಮನಾರ್ಹ ಅಂಶ.

ಕೊಪ್ಪಳ ಜಿಲ್ಲೆಯ ನಿಲೋಗಲ್ ಗ್ರಾಮದಲ್ಲಿ ಕುಮಾರ ರಾಮನಾಥನ ಗುಡಿಯೊಂದಿದೆ. ಇಲ್ಲಿ ವರ್ಷಕ್ಕೊಮ್ಮೆ ನಡೆಯುವ ಉತ್ಸವ ಆಚರಣೆಯಲ್ಲಿ, ಕುಮಾರ ರಾಮನ ಸಾಂಗತ್ಯದ ಜಾನಪದವನ್ನು ಹೇಳಿಸಲಾಗುತ್ತದೆ. ಇದರಿಂದ ಕುಮ್ಮಟದ ನಾಯಕರ ಇತಿಹಾಸವನ್ನು ಜನಸಾಮಾನ್ಯರಿಗೆ ಜಾನಪದ ರೂಪದಲ್ಲಿ ತಿಳಿಸುವ ಒಂದು ಮಹತ್ವದ ಕಾರ್ಯ ಆಗಿದೆ.

ಅಧ್ಯಾಯ - ೩

ವಾಸ್ತುಕಲೆ

ವಾಸ್ತುಕಲೆ

ವಾಸ್ತುಕಲೆ ಅಥವಾ ವಾಸ್ತುಕೃತಿ ಆಂಗ್ಲ ಭಾಷೆಯ 'Architecture'. ಇದು ಪರಿಮಿತಿಯ ಅರ್ಥದಲ್ಲಿ, ಗಾತ್ರದಲ್ಲಿ ಚಿಕ್ಕದು ಅಥವಾ ದೊಡ್ಡದಾಗಿರಬಹುದು. ಕಲ್ಲಿನಿಂದ ಅಥವಾ ಮರಮುಟ್ಟುಗಳಿಂದ ನಿರ್ಮಿತವಾಗಿರಬಹುದು. ಆದರೆ ಇದೊಂದು ವಾಸ್ತುಕೃತಿ (ಶಿವರಾಮ ಕಾರಂತ, ೧೯೭೫ ಪು. ೨೯). ಮನುಷ್ಯನ ಅನುಭವ ಆತನ ಪ್ರತಿಭೆಗೆ ಅನುಗುಣವಾಗಿ, ಸಾಹಿತ್ಯಿಕ ರೂಪವಾಗಿ, ಸಂಗೀತ ಕಲೆಯಾಗಿ, ವಾಸ್ತುಶೈಲಿಯಾಗಿ ವಿವಿಧ ರೂಪಗಳಲ್ಲಿ ಹೊರ ಹೊಮ್ಮುತ್ತವೆ. ಅಂದರೆ ಶಿಲೆ ಮತ್ತು ಕಟ್ಟಿಗೆಗಳಲ್ಲಿ ಶಿಲ್ಪಿ ತನ್ನ ಕಲೆಯನ್ನು ಅಭಿವ್ಯಕ್ತಗೊಳಿಸುತ್ತಾನೆ. ಭಾವೋದ್ರೇಕ ಕಲ್ಪನೆಗಳನ್ನು ಗರಿಗೆದರುವಂತೆ ಮಾಡುವ ಶಕ್ತಿಯನ್ನೊಳಗೊಂಡಿರುವ ವಾಸ್ತುಕಲೆ ತನ್ನದೇ ಆದ ಭವ್ಯ ಇತಿಹಾಸ ಪರಂಪರೆಯನ್ನು ಹೊಂದಿದೆ. ಆರ್ಥಿಕ, ಸಾಹಿತ್ಯಿಕ, ಧರ್ಮ, ಕಲೆ, ವಾಸ್ತುಶೈಲಿಗಳ ವೈವಿಧ್ಯಪೂರ್ಣ ಬೆಳವಣಿಗೆಯೊಂದಿಗೆ ಭಾರತ ಅದರಲ್ಲೂ ಹೆಚ್ಚಾಗಿ ಕರ್ನಾಟಕ ತನ್ನದೇ ಆದ ವೈಶಿಷ್ಟ್ಯಪೂರ್ಣ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಒಟ್ಟಾರೆ 'Architecture' ಎಂಬ ಪದ ಇದಕ್ಕೆ ಒಂದು ಆಕೃತಿ ಇರಬೇಕು. ಆಕೃತಿಯ ಕಟ್ಟಡ ಚೌಕಾಕಾರ ಅಥವಾ ಆಯತಾಕಾರ ಅಥವಾ ವೃತ್ತಾಕಾರವಾಗಿರಬಹುದು. ಬೌದ್ಧ ಸ್ತೂಪಗಳು ವೃತ್ತಾಕಾರಕ್ಕೆ ಉದಾಹರಣೆಯಾದರೆ ಆಯತಾಕಾರಕ್ಕೆ ಹಾಗೂ ಚೌಕಾಕಾರಕ್ಕೆ ಈಗಿನ ದೇವಾಲಯಗಳನ್ನು ಉದಾಹರಿಸಬಹುದು. ಯಾವುದೇ ಒಂದು ನಾಗರಿಕತೆಯ ಬೆಳವಣಿಗೆಗೆ ಅಥವಾ ಐತಿಹಾಸಿಕ ಸ್ಮಾರಕಗಳ ಬೆಳವಣಿಗೆಯಲ್ಲಿ ವಾಸ್ತುಶಿಲ್ಪ ಹಾಗೂ ಇತಿಹಾಸ ಇವೆರಡೂ ಒಂದಕ್ಕೊಂದು ಪೂರಕವಾಗಿರುತ್ತವೆ. ವಾಸ್ತುಶಿಲ್ಪ ಸಮಕಾಲೀನ ಇತಿಹಾಸ ಹಾಗೂ ಸಂಸ್ಕೃತಿಗಳ ಪ್ರತಿಬಿಂಬ (ಹುಲ್ಲಪಳ್ಳಿ ಎಂ.ಎಸ್. ೧೯೯೬ ಪು. ೨). ವಾಸ್ತುಶೈಲಿ ಎಂಬುದು ಆಗಿನ ಜನರ ಜೀವನದ ಚಿತ್ರವನ್ನು ಚಿತ್ರಿಸಿ ಅಂದಿನ ಪರಂಪರೆಯನ್ನು ಎತ್ತಿ ತೋರಿಸುತ್ತವೆ. 'ವಾಸ್ತುಶಿಲ್ಪ' ಒಂದು ದೃಷ್ಟಿಯಿಂದ ಕಟ್ಟಡಗಳ ನಿರ್ಮಾಣದ ತಂತ್ರಕಲೆ. ಕಟ್ಟಡ ಶಾಸ್ತ್ರವನ್ನು ಸಂಸ್ಕೃತದಲ್ಲಿ 'ವಾಸ್ತುಶಾಸ್ತ್ರ'ವೆಂದು ಕರೆಯುತ್ತಾರೆ.

'ಧಾರ್ಮಿಕ ಭಾವನೆ' ದೇವಾಲಯಗಳ ಉಗಮಕ್ಕೆ ಮೂಲ ಕಾರಣ. ಗುಡಿಯನ್ನು ಕಟ್ಟಿಸಬೇಕೆಂಬ ಭಾವನೆ ಧಾರ್ಮಿಕ ಸಂಪ್ರದಾಯ ಮೂಡಿದಂತೆ ಅದಕ್ಕೊಂದು ಕಟ್ಟಡ ಇರಬೇಕೆಂಬ ಕಲ್ಪನೆಯೂ ಮೂಡಿರಬೇಕು. ಈ ಎಲ್ಲಾ ವಿವರಣೆಗಳನ್ನು ಹೇಳುವ ವಿಧಿವಿಧಾನವೇ ವಾಸ್ತುವಿದ್ಯೆ.

ಮಾನವನು ತನ್ನ ಸ್ವಂತದ ವಾಸಕ್ಕೆ ಕಟ್ಟಿಸಿದ ಕಟ್ಟಡ ಗೃಹ ವಾಸ್ತುಕಲೆ. ಆದರೆ ದೇವರಿಗಾಗಿ ಕಟ್ಟಿಸಿದ್ದು ದೇವಾಲಯ ವಾಸ್ತುಶಿಲ್ಪವಾಯಿತು. ಇದು ಧಾರ್ಮಿಕ ವಾಸ್ತುಶಿಲ್ಪವೂ ಹೌದು. ಆತ್ಮನಿಗೆ ಶರೀರದಂತೆ ಮನೆಯ ಹಾಗೆ ಪ್ರಕೃತಿ ಆಲಯವೇ

ಆಚ್ಛಾರ್ಪಿತ ಭಾವನೆಯು ಬೆಳೆಯಿತು. ಆದ್ದರಿಂದಲೇ ದೇವಾಲಯದ ಕೆಲವು ಭಾಗಗಳಿಗೆ ಮಾನವ ಶರೀರದ ಭಾಗಗಳನ್ನು ಹೋಲಿಸಲಾಗಿದೆ. "ದೇಹೋ ದೇವಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ ಅಂದರೆ ದೇಹವೇ ದೇಗುಲ. ದೇಹದೊಳಗಿರುವ ಜೀವವೇ ದೇಗುಲದೊಳಗಿರುವ ದೇವರು" ಎಂಬುದಾಗಿ ದೇವಾಲಯವನ್ನು ಮಾನವನ ಶರೀರದ ಭಾಗಗಳಿಗೆ ಹೋಲಿಸಲಾಗಿದೆ(ರಾಮಚಂದ್ರರಾವ್ ಎಸ್.ಕೆ., ೧೯೮೦ ಪು. ೯೦-೯೧). ಗೃಹಸ್ಥಾನದಲ್ಲಿ ಮನುಷ್ಯನು ಮಾಡುವ ಪೂಜೆ ಆತ್ಮಾರ್ಥ ವೆಂದೆನಿಸಿದರೆ ದೇವಾಲಯದಲ್ಲಿ ಮಾಡುವ ಪೂಜೆ ಪರಾರ್ಥ ಅಥವಾ ಲೋಕ ಕಲ್ಯಾಣಕ್ಕೆ ಅಂದರೆ ಸಮಾಜದ ಒಳಿತಿಗಾಗಿ ಎಂದರ್ಥ. ಧಾರ್ಮಿಕ ಮತಗಳಿಗನುಗುಣವಾಗಿ ಪೂಜಾಸ್ಥಾನಗಳು, ವಾಸ್ತುಕಲೆಗಳು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟವು. ಇವುಗಳೇ ಚೈತ್ಯ, ದೇವಾಲಯ ಮತ್ತು ಕಟ್ಟಡಗಳು. ಪ್ರಾರಂಭಿಕ ಹಂತದಲ್ಲಿ ದೇವಾಲಯಗಳನ್ನು ಮರ, ಇಟ್ಟಿಗೆ ಮತ್ತು ಗಾರೆಗಳಿಂದ ಕಟ್ಟಲಾಗುತ್ತಿತ್ತು. ಕಲ್ಲಿನ ಕಟ್ಟಡದ ರಚನೆ ಕ್ರಿ.ಶ. ೬ನೇ ಶತಮಾನದಿಂದ ರೂಢಿಗೆ ಬಂದಿತು. ಭೌಗೋಳಿಕ ಅಂಶಗಳಾದ ಪರಿಸರ, ವಾಯುಗುಣ ಮೊದಲಾದ ಗುಣಗಳನ್ನು ಅಳವಡಿಸಿಕೊಂಡು ಪ್ರಾದೇಶಿಕ ಪ್ರಭೇದಗಳಾಗಿ ಬೆಳೆದಿರುವುದು ಇನ್ನೊಂದು ವಿಶೇಷತೆ. ಈ ರೀತಿಯಾಗಿ ವಿಕಾಸಗೊಂಡ ಪ್ರಭೇದಗಳನ್ನು 'ವಾಸ್ತುಶೈಲಿ' ಅಥವಾ 'ವಾಸ್ತುಕೃತಿ' ಎಂದು ಕರೆಯಲಾಗಿದೆ. ಇಂತಹ ವಾಸ್ತುಶೈಲಿ ಅಥವಾ ವಾಸ್ತು ಲಕ್ಷಣಗಳು ಗೃಹ್ಯ ಸೂತ್ರ, ಸಂಖ್ಯಾ ಸೂತ್ರ, ಸಂಹಿತೆಗಳಲ್ಲಿ ಮತ್ಸ್ಯ, ಸ್ಕಾಂದ್ಯ, ಅಗ್ನಿ ಮತ್ತು ವಿಷ್ಣು ಪುರಾಣಗಳು ಹಾಗೂ ಧರ್ಮಶಾಸ್ತ್ರಗಳು ಉಲ್ಲೇಖಿಸುತ್ತವೆ. ದೇವಾಲಯಗಳನ್ನು ಹಾಗೂ ಅವುಗಳ ವೈಶಿಷ್ಟ್ಯತೆಗಳಿಗನುಗುಣವಾಗಿ ದ್ರಾವಿಡ, ನಾಗರ, ವೇಸರ ಮತ್ತು ಭೂಮಿಜ ಎಂದು ವರ್ಗೀಕರಿಸಲಾಯಿತು. ಐಹೊಳೆಯಲ್ಲಿ ಈ ಎಲ್ಲಾ ದೇವಾಲಯಗಳ ಶೈಲಿಯನ್ನು ಒಂದೆಡೆ ಕಾಣಲ್ಪಡುವುದರಿಂದ ಇದು "ದೇವಾಲಯಗಳ ತೊಟ್ಟಿಲು" ಎಂದು ಕರೆಯಲಾಗಿದೆ. ಒಟ್ಟಾರೆ ಇವು ಮುಖ್ಯ ವಾಸ್ತುಶೈಲಿಗಳು ಮಾತ್ರ. ಪ್ರಸ್ತುತ: ನನ್ನ ಅಧ್ಯಯನ ಕುಮ್ಮಟದ ನಾಯಕರ ಕಾಲಕ್ಕೆ ಸೀಮಿತವಾಗಿರುವುದರಿಂದ ಕುಮ್ಮಟದ ನಾಯಕರ ಕಾಲದಲ್ಲಿನ ವಾಸ್ತುಶೈಲಿಯನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಲೌಕಿಕ ವಾಸ್ತುಶೈಲಿ ಅ. ಕೋಟೆ ಕೊತ್ತಲಗಳು, ಆ. ಅರಮನೆ ವಾಸ್ತುಕಲೆ

೨. ದೇವಾಲಯಗಳ ವಾಸ್ತುಶೈಲಿ

೩. ಸ್ವಾಭಾವಿಕ ಗುಹಮಂದಿರ

ಪ್ರಾಚೀನ ಮತ್ತು ಮಧ್ಯಕಾಲೀನ ಜನರು (ರಾಜ್ಯಗಳು ಅಥವಾ ಸಾಮ್ರಾಜ್ಯಗಳು ಉದಯವಾಗುವುದಕ್ಕೆ ಮುನ್ನ) ತಾವು ಸಂಪಾದಿಸಿದ ಸಂಪತ್ತನ್ನು ದರೋಡೆಕೋರರಿಂದಲೂ ಮತ್ತು ಕಾಡು ಪ್ರಾಣಿಗಳಿಂದಲೂ ಸಂರಕ್ಷಿಸಿಕೊಳ್ಳಲು ಊರಿನ (ವಾಸ ಸ್ಥಳದ) ಸುತ್ತಲೂ ಎತ್ತರವಾದ ಗೋಡೆಯನ್ನು ನಿರ್ಮಿಸಿಕೊಂಡು ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿದ್ದರು. ಹಲವಾರು ಊರುಗಳು ಒಟ್ಟುಗೂಡಿ ರಾಜ್ಯ ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯವನ್ನು ಸಂರಕ್ಷಿಸಿಕೊಳ್ಳಲು, ರಾಜಧಾನಿಯಲ್ಲೂ, ಗಡಿಪ್ರದೇಶಗಳಲ್ಲೂ ಬಲವಾದ ಕೋಟೆಯನ್ನು ಕಟ್ಟಿಸುತ್ತಿದ್ದರು. ಕೋಟೆಯು ಅತ್ಯಂತ ಪ್ರಮುಖ ಸುರಕ್ಷತೆಯ ಸಾಧನವಾಗಿ ಮಾರ್ಪಾಡಾಯಿತು. ಕೋಟೆ ಅಥವಾ ದುರ್ಗವು ಅತ್ಯವಶ್ಯಕವಾದ ಸಪ್ತಾಂಗಗಳಲ್ಲಿ ಒಂದು. ಇದು ಪ್ರಾಚೀನ ಗ್ರಂಥವಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಉಲ್ಲೇಖಿತವಾಗಿದೆ (ಆಲ್ಟೇಕರ ಎ.ಎಸ್. ೧೯೩೪, ಪು. ೧೯).

ಕೋಟೆ ಇಲ್ಲದ ರಾಜನನ್ನು ಬಿರುಗಾಳಿಗೆ ಸಿಕ್ಕಿದ ಮೋಡಕ್ಕೆ ಸಮಾನವೆಂತಲೂ, ವಿಷರಹಿತವಾದ ಹಾವಿನಂತೆಯೂ, ಮದರಹಿತವಾದ ಆನೆಯಂತೆ ಸುಲಭವಾಗಿ ಸ್ವಾಧೀನ ಪಡಿಸಿಕೊಳ್ಳಬಹುದು. ಒಬ್ಬ ಬಿಲ್ಲುಗಾರನು ಕೋಟೆ ಗೋಡೆಯ ಹಿಂದೆ ನಿಂತು ನೂರಾರು ವೈರಿ ಪಡೆಗಳೊಂದಿಗೂ (೧೦) ಹತ್ತು ಜನ ಬಿಲ್ಲುಗಾರರು ಸಾವಿರಾರು ವೈರಿಗಳನ್ನು ಸಮರ್ಪಕವಾಗಿ ತಡೆಯಬಹುದೆಂದು. ಕೋಟೆಯ ಮಹತ್ವವನ್ನು ತಿಳಿಸುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ಕೋಟೆಗಳನ್ನು ಕಟ್ಟುವಾಗ ಆಯಕಟ್ಟಿನ ಸ್ಥಳಗಳ ಆಯ್ಕೆಗೆ ಪ್ರಾಶಸ್ತ್ಯ ನೀಡಲಾಯಿತು. ಕೋಟೆಯ ರಕ್ಷಣೆಗಾಗಿ ಕೊತ್ತಲಗಳು, ಭದ್ರವಾದ ಬಾಗಿಲು, ಹೆಬ್ಬಾಗಿಲು, ದಿಡ್ಡಿ, ಅಗುಸೆಗಳಂತಹ ಅತ್ಯಂತ ದೊಡ್ಡವಾದ್ದರಿಂದ ಅತೀ ಚಿಕ್ಕದಾದ ಗುಪ್ತದ್ವಾರಗಳು. ಹೊರಭಾಗದಲ್ಲಿನ ಕಂದಕಗಳು ಅಗುಳಿಗಳ ನಿರ್ಮಾಣವಾಯಿತು (ಚನ್ನಬಸಪ್ಪ ಎಸ್ ಪಾಟೀಲ್, ೧೯೯೯, ಪು. ೭).

ಶತ್ರು ಸೈನಿಕರು ಸುಲಭವಾಗಿ ಹತ್ತಿ ಬರದಂತೆ ಕೋಟೆಗಳನ್ನು ಕಡಿದಾದ ಬೆಟ್ಟಗಳ ಮೇಲೆ, ದಟ್ಟ ಕಾಡಿನ ಮಧ್ಯಭಾಗದಲ್ಲೂ, ನದಿಗಳ ದಂಡೆಯ ಮೇಲೆ, ಮರಳು ಗಾಡಿನಲ್ಲೂ ಕಟ್ಟಲಾಗಿದೆ. ಇಂತಹ ವಿವಿಧ ಪ್ರಕಾರಗಳ ಕೋಟೆಗಳ ಬಗ್ಗೆ ಉದಾ: ಔದಕದುರ್ಗ, ಗಿರಿದುರ್ಗ, ವನದುರ್ಗ, ಪಂಕದುರ್ಗ ಮೊದಲಾದ ವಿವಿಧ ಪ್ರಕಾರಗಳ ಕೋಟೆಗಳ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಮಾನಸಾರ, ಪಂಚತಂತ್ರ, ಮಾನಸೋಲ್ಲಾಸ ಮುಂತಾದ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಕೋಟೆಗಳ ವಿವಿಧತೆಯಲ್ಲದೆ, ಕೋಟೆಯನ್ನು ಕಟ್ಟುವ ಸ್ಥಳದ ಆಯ್ಕೆ, ಸಾಮಗ್ರಿ, ಸಂರಕ್ಷಣಾ ವಿಧಾನ ಇನ್ನೂ ಮುಂತಾದ ಅಂಶಗಳು ಈ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ (ಚನ್ನಬಸಪ್ಪ ಎಸ್ ಪಾಟೀಲ್, ೧೯೯೯, ಪು. ೧-೧೦).

ಪ್ರಸ್ತುತ ಕುಮ್ಮಟದ ನಾಯಕರ ಕಾಲದ ಕೋಟೆಗಳ ವೈಶಿಷ್ಟ್ಯತೆಯ ಪ್ರಸ್ತಾವನೆಯನ್ನು ಮಾತ್ರ ಇಲ್ಲಿ ಮಾಡಲಾಗಿದೆ. ಹಾನೇಯ ವರೋವದಿ (ದರೋಜಿ) ಹೊಸಮಲೆ ದುರ್ಗ, ಕುಮ್ಮಟ ದುರ್ಗ, ಆನೆಗೊಂದಿ ಮತ್ತು ಪಂಪಾಪುರದ ಕೋಟೆಗಳು ಹೆಚ್ಚಿನ ಮಹತ್ವದ್ದಾಗಿವೆ. ಹೆಚ್ಚಿನವು ಗಿರಿದುರ್ಗಗಳಾದರೂ, ಇವು ಮಿಶ್ರ ದುರ್ಗಗಳಾಗಿರುವವು. ಹಾನೇಯ, ವರೋವದಿ, ಹೊಸಮಲೆ ದುರ್ಗಗಳು, ಗಿರಿದುರ್ಗಗಳಾದರೆ, ಕುಮ್ಮಟದ ಕೋಟೆ, ಆನೆಗೊಂದಿ ಮತ್ತು ಪಂಪಾಪುರದ ಕೋಟೆಗಳು ಮಿಶ್ರದುರ್ಗಗಳಾಗಿವೆ.

ಸೈನಿಕ ವಾಸ್ತುಕಲೆ : ಸೈನಿಕ ವಾಸ್ತುಕಲೆಗೆ ಸಂಬಂಧಿಸಿದಂತೆ ಇಲ್ಲಿನ ಕೋಟೆ ಕೊತ್ತಲಗಳು, ಆನೆ ಲಾಯ, ಕುದುರೆ ಲಾಯ, ಕುದುರೆ ಕಲ್ಲುಗಳು, ಶಸ್ತ್ರಾಗಾರಗಳು ಒಳಗೊಳ್ಳುತ್ತವೆ. ಕೋಟೆಯನ್ನು ಕಟ್ಟುವ ಉದ್ದೇಶ ವೈರಿಗಳಿಂದ ಅಥವಾ ಕಾಡು ಪ್ರಾಣಿಗಳಿಂದ ಸಂರಕ್ಷಿಸುವುದಕ್ಕಾಗಿ, ಸಂರಕ್ಷಣೆಗಾಗಿ ರಾಜಧಾನಿಯಲ್ಲಿ ಮತ್ತು ಗಡಿ ಪ್ರದೇಶದಲ್ಲಿ ಬಲವಾದ ಕೋಟೆಗಳನ್ನು ಕಟ್ಟಿಸಿದರು. ಕೋಟೆ ಎಂಬುದು ಸಪ್ತಾಂಗಗಳಲ್ಲಿ ಒಂದಾಯಿತು. ಕೋಟೆಗೆ ಸಂಸ್ಕೃತ ಶಬ್ದ ``ದುರ್ಗ''. ಸಪ್ತಾಂಗಗಳಲ್ಲಿ ದುರ್ಗ ಎಂಬುದಾಗಿ ರಾಜನೀತಿ ಹೇಳುತ್ತದೆ (ಶ್ರೀನಿವಾಸ ರಿತ್ತಿ: ೨೦೦೦, ಪು.೬೧). ಕೋಟೆಯನ್ನು ಕಡಿದಾದ ಬೆಟ್ಟದ ಮೇಲೆ, ಕಾಡಿನ ಮಧ್ಯದಲ್ಲಿ ಕಟ್ಟಲಾಗುತ್ತದೆ (ಚನ್ನಬಸಪ್ಪ ಎಸ್ ಪಾಟೀಲ್, ೧೯೯೯, ಪು. ೧). ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ವೈರಿ ಪಡೆಯನ್ನು ತಡೆಯಲು ಕೋಟೆಗಳನ್ನು ಕಟ್ಟಬೇಕೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿದೆ. ಕೋಟೆಗಳ ಕುರಿತು ಮನುಸ್ಮೃತಿ.

ಶುಕ್ರನೀತಿ ಸಾರ, ಮಾನಸಾರಗಳೂ ಉಲ್ಲೇಖಿಸುತ್ತವೆ. ಶಾಸನಗಳೂ ಈ ಮಾತನ್ನು ಪುಷ್ಟೀಕರಿಸುತ್ತವೆ. ಒಟ್ಟಾರೆ ಲೌಕಿಕ ವಾಸ್ತುಶೈಲಿಯಲ್ಲಿ, ರಾಜ್ಯದ ಆಡಳಿತದಲ್ಲಿ, ಕೋಟೆಯ ಪಾತ್ರ ಅತಿ ಮಹತ್ವದ್ದು. ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸೀಮಿತವಾದುದರಿಂದ ಕುಮ್ಮಟದುರ್ಗ, ಹಾನೇಯ, ದೊರವಡಿ, ಹೊಸಮಲೆದುರ್ಗ, ಆನೆಗೊಂದಿ, ಕೋಟೆಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

ಕುಮ್ಮಟದ ಕೋಟೆ

ಪ್ರಸ್ತುತ ಕುಮ್ಮಟದ ಕೋಟೆ ಹಳೇ ಕುಮ್ಮಟದಲ್ಲಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕು ಗಡಿಭಾಗಗಳಲ್ಲಿ ಈ ಕೋಟೆ ಇದೆ. ಗಂಗಾವತಿ ಮತ್ತು ಕೊಪ್ಪಳ ರಸ್ತೆಯಲ್ಲಿರುವ, ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳ ಮೇರೆಗಳು ಸಂಧಿಸುವಲ್ಲಿರುವ, 'ಕುಮ್ಮಟದುರ್ಗ' ಎರಡನೆಯ ರಾಜಧಾನಿ (ಪಾಟೀಲ್ ಸಿ.ಎಸ್. ೧೯೯೯, ಪು.೬೧). ಕುಮ್ಮಟ ದುರ್ಗವೆಂಬ ಶಬ್ದ ''ದುರ್ಗಾ'' ಎಂಬ ಪದಕ್ಕೆ ''ಕೋಟೆ'' ಎಂದರ್ಥ. ಕುಮ್ಮಟದ ಕೋಟೆ ಎಂದರ್ಥ. ಯುದ್ಧ ತಂತ್ರದ ದೃಷ್ಟಿಯಲ್ಲಿ ಇದು ಮಹತ್ವದ ಸ್ಥಳ. ಕಂಪಿಲರಾಯನು ತನ್ನ ಸೈನ್ಯವನ್ನು ತೆಗೆದುಕೊಂಡು ಕುಮ್ಮಟಕ್ಕೆ ಸ್ಥಳಾಂತರಗೊಂಡು ಇಲ್ಲಿ ಯುದ್ಧ ಮಾಡಿದನು. ಕಂಪಿಲರಾಯ ಮತ್ತು ಸುಲ್ತಾನರ ಸೈನ್ಯದ ನಡುವೆ ನಡೆದ ಯುದ್ಧದ ಸ್ಥಳವಿದು. ಈ ಹಿನ್ನೆಲೆಯ ದೃಷ್ಟಿಯಿಂದ ಈ ಕೋಟೆ ಅತೀ ಮಹತ್ವದ್ದು.

ಸಾಹಿತ್ತಿಕ ಆಕರಗಳಾದ ಚೆನ್ನಬಸವ ಪುರಾಣ, ಕೈಫಿಯತ್ತುಗಳ ಪ್ರಕಾರ ಕುಮಾರರಾಮನು ಕೋಟೆಯನ್ನು ಕಟ್ಟಿಸಿದನು, ಅಲ್ಲದೆ ಈ ಕೋಟೆಯ ಮುಖ್ಯಸ್ಥನಾಗಿದ್ದನೆಂದು, ಇದೊಂದು ಮೀಸಲು ದುರ್ಗವೆಂದು ಉಲ್ಲೇಖಿಸಲ್ಪಟ್ಟಿವೆ. ವಿದೇಶಿ ಯಾತ್ರಿಕರಾದ ಇಬನ್‌ಬತೂತ, ಬರ್ನಿ, ಫೆರ್ನಾವೊ ನ್ಯೂನಿಜ್ ಅವರು ತಮ್ಮ ಪ್ರವಾಸಿ ಕಥನದಲ್ಲಿ ದಾಖಲಿಸಿದ್ದಾರೆ. ಕುಮ್ಮಟದುರ್ಗದ ಬಗ್ಗೆ ಮೊದಲು ಮಾಹಿತಿ ನೀಡಿದ ಪ್ರವಾಸಿ ನ್ಯೂನಿಜ್. ದೆಹಲಿ ಸುಲ್ತಾನನ ಸೈನ್ಯ ಆನೆಗೊಂದಿಯನ್ನು ಮುತ್ತಿಗೆ ಹಾಕಿದಾಗ ರಾಜನು ವೀರಾವೇಶದಿಂದ ಇವರನ್ನು ಪ್ರತಿಭಟಿಸಿದನು. ಕಡೆಗೆ ಮಹಮ್ಮದೀಯರ ಕೈ ಮೇಲಾಗಿ, ದಿಗ್ವಿಜಯ ಸಾಧಿಸಲು ಕ್ರಿಸಮಟ ಎಂಬ ಕೋಟೆಯಲ್ಲಿ ಆಶ್ರಯ ಪಡೆದನು. 'ಕ್ರಿಸಮಟ' ಎಂಬುದು ಈಗಿನ ಕುಮ್ಮಟದ ಕೋಟೆ. ಈ ಕೋಟೆಯನ್ನು ಹೆಚ್ಚು ದಿನ ಸಂರಕ್ಷಿಸಿಕೊಳ್ಳಲು ಸಾಧ್ಯವಾಗದಿದ್ದಾಗ ಕೆಲವರನ್ನು ಬೇರೆಡೆಗೆ ಸ್ಥಳಾಂತರಿಸಿ ವೀರಾವೇಶದಿಂದ ಕಾದಾಡಿ ರಾಮನಾಥನು ಪ್ರಾಣತ್ಯಾಗ ಮಾಡಿದನೆಂದಿದೆ(ವರದರಾಜರಾವ್, ೧೯೮೫ ಪು.೧). 'ಕ್ರಿಸಮಟ' ಕೋಟೆ ಯಾವುದೆಂಬುದರ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಹೆಚ್ಚಿನ ಮಟ್ಟಿಗೆ ಕುಮ್ಮಟ ದುರ್ಗವೇ ಇರಬೇಕು. ಲಭ್ಯವಾದ ಸಾಹಿತ್ತಿಕ ಆಧಾರಗಳು ಚೆನ್ನಬಸವ ಪುರಾಣ, ಕೈಫಿಯತ್ತುಗಳು ಕುಮ್ಮಟ ದುರ್ಗವನ್ನು ಕಟ್ಟಿಸಿದವನು ಕುಮಾರ ರಾಮನೆಂದಿವೆ. ಆದರೆ ಶಾಸನಗಳ ಆಧಾರವನ್ನು ಪರಿಶೀಲಿಸಿದರೆ ಕುಮಾರ ರಾಮನಿಗೂ ಪೂರ್ವದಲ್ಲೇ ಕುಮ್ಮಟದ ಕೋಟೆ ಇತ್ತೆಂಬುದು ಸ್ಪಷ್ಟವಾಗುತ್ತದೆ. (ARIE. 1957-58. B. No.342) ಬಹುಶಃ ಈ ಕೋಟೆಯನ್ನು ಜೀರ್ಣೋದ್ಧಾರಗೊಳಿಸಿರಬೇಕು. ಕೋಟೆಯ ಕೆಲವು ಭಾಗಗಳನ್ನು ಕಟ್ಟಿರಲೂಬಹುದು. ಮೂಲತಃ ಕುಮ್ಮಟದುರ್ಗ ಗುಡ್ಡಗಾಡುಗಳಿಂದಾವೃತವಾಗಿದೆ. ತಳಭಾಗದಿಂದ

ನೋಡಿದರೆ ಕೋಟೆ. ಪ್ರಾಕೃತಿಕ ದತ್ತವಾದ ಬೆಟ್ಟ, ಬಂಡೆಗಲ್ಲುಗಳನ್ನು ಬಳಸಿಕೊಂಡು ಪರ್ವತದ ಮೇಲಿನವರೆಗೂ ಬೆಳೆದಿದೆ. ಕುಮ್ಮಟದುರ್ಗ ಪ್ರಮುಖವಾದ ಗುಡ್ಡವೆಂದರೆ, ಕುಮಾರ ರಾಮನ ಗುಡ್ಡ ಮತ್ತು ಮಾವಿಗ ಹಂಪಯ್ಯನ ಗುಡ್ಡ. ಇವೆಲ್ಲವುಗಳ ಜೊತೆಗೆ ಬೇರೆ ಬೇರೆ ಗುಡ್ಡಗಳನ್ನು ಸೇರಿಸಿ ಒಟ್ಟು ಆರು ಸುತ್ತು ಕೋಟೆಗಳು ದುರ್ಗದ ಎಲ್ಲೆಡೆ ಪಸರಿಸಿವೆ. ಕುಮಾರ ರಾಮನ ಬೆಟ್ಟ ಸಮುದ್ರಮಟ್ಟದಿಂದ ೬೯೫ ಮೀಟರ್ ಎತ್ತರದಲ್ಲಿದೆ. ಕುಮಾರ ರಾಮನ ಗುಡ್ಡದ ಪಶ್ಚಿಮ ಮತ್ತು ನೈರುತ್ಯ ದಿಕ್ಕುಗಳಲ್ಲಿ ಹಾಗೂ ನೆಲ ಮಟ್ಟದಲ್ಲಿ ಕೋಟೆಯ ಎರಡು ಸಾಲುಗಳು ಕೋಟೆ ಗೋಡೆ ಗುಡ್ಡದ ಮೇಲಕ್ಕೆ ಬೆಳೆದಿವೆ. ಈ ಕೋಟೆಗಳಲ್ಲಿ "L" ಮತ್ತು "Z" ಆಕಾರದ ಬಾಗಿಲುಗಳಿವೆ. ಅನೇಕ ಚೌಕಾಕಾರದ ಕೊತ್ತಲಗಳು ಇಲ್ಲಿವೆ. ಇಲ್ಲಿ ವೀರಶಿಲ್ಪ ಒಂದಿದೆ. ಈ ವೀರಗಲ್ಲು ವೀರನೊಬ್ಬನು ಕುದುರೆಯ ಮೇಲೆ ಕುಳಿತಿರುವುದರಿಂದ ಈ ಶಿಲ್ಪವನ್ನು ಕುಮಾರ ರಾಮನ ಶಿಲ್ಪವೆಂತಲೂ ಹೆಸರಿಸುತ್ತಾರೆ. ಕುಮಾರ ರಾಮನ ಗುಡ್ಡದ ಆಗ್ನೇಯಕ್ಕೆ ಸುತ್ತುವರಿದ ಗುಡ್ಡಗಳು ಇವೆ. ಹತ್ತಲು ನುಣುಪಾದ ಗುಡ್ಡಗಳನ್ನು ಸ್ವಾಭಾವಿಕ ಕೋಟೆಗಳಂತೆ ಬಳಸಲಾಗಿದೆ.

ಮಾವಿಗ ಹಂಪಯ್ಯನ ಬೆಟ್ಟದಲ್ಲಿ ಬಂಡೆಗಳೇ ಸುರಕ್ಷ ಕವಚಗಳಾಗಿವೆ. ರಾಮಸ್ವಾಮಿ(ಕುಮಾರ ರಾಮನ) ಬೆಟ್ಟದ ಪೂರ್ವಕ್ಕೆ ಬಂಡೆಗಳ ರಾಶಿ ಇದ್ದು, ಈ ಪ್ರಾಕೃತಿಕ ದತ್ತವಾದ ಬಂಡೆಗಳ ರಾಶಿಯೇ ರಕ್ಷಾಕವಚದಂತಿದೆ. ಈ ಬಂಡೆಗಳಡಿಯಲ್ಲಿ ಜೇನು ಗೂಡುಗಳು ಹೇರಳವಾಗಿರುವುದರಿಂದ ಇದನ್ನು ಜೇನುಕಲ್ಲು ಗುಡ್ಡವೆಂತಲೂ ಕರೆಯುತ್ತಾರೆ. ಕುಮಾರ ರಾಮನ ಗುಡ್ಡದ ನೈರುತ್ಯ ದಿಕ್ಕಿನಲ್ಲಿ ಕೆರೆಯೊಂದಿದ್ದು, ಈ ಕೆರೆಗೆ ತಾಗಿಕೊಂಡು ಮೂರು ಹಂತದ ಕೋಟೆ ಇದೆ. ಕುಮಾರ ರಾಮನ ಗುಡ್ಡದ ನೈರುತ್ಯಕ್ಕಿರುವ ಗುಡ್ಡ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ಮತ್ತೆರಡು ಕೋಟೆಗಳಿವೆ. ಈ ಕೋಟೆಯ ಭೂಮಧ್ಯದಲ್ಲಿ ಆರಂಭವಾಗಿ ಗುಡ್ಡದಲ್ಲಿ ಮುಕ್ತಾಯವಾಗಿರುತ್ತದೆ. ಮೇಲೆ ಹೇಳಿದ ಕೋಟೆಗಳಲ್ಲದೆ, ಅನೇಕ ಪುಟ್ಟ ಪುಟ್ಟ ಕೋಟೆಗಳು. ಕುಮ್ಮಟದುರ್ಗವನ್ನು ಪಸರಿಸಿಕೊಂಡಿವೆ. ಈ ಕೋಟೆಗಳು ಎರಡು ಕಟ್ಟೆಗಳನ್ನು ಜೋಡಿಸಿ ರಕ್ಷಾ ಕವಚಗಳಂತಿವೆ. ಇದಕ್ಕೆ ಸೇರಿರುವ ಬುರುಜುಗಳು ಎತ್ತರವಾಗಿದ್ದು ವೃತ್ತಾಕಾರದಲ್ಲಿವೆ.

ಬೆಟ್ಟಗಳನ್ನು ಸೇರಿಸುವ ಕೋಟೆಗಳು

೧. ಮಾವಿಗ ಹಂಪಯ್ಯನ ಗುಡ್ಡ ಮತ್ತು ಕುಮಾರ ರಾಮನ ಗುಡ್ಡ.

೨. ಮಾವಿಗ ಹಂಪಯ್ಯನ ಗುಡ್ಡ ಮತ್ತು ಹನುಮಂತ ದೇವರ ಗುಡ್ಡ.

೩. ಕುಮಾರ ರಾಮನ ಗುಡ್ಡ ಮತ್ತು ಜೊಲ್ಲನ ಗುಡ್ಡ.

೪. ಜೊಲ್ಲನ ಗುಡ್ಡ ಮತ್ತು ಕಾಟಪ್ಪನ ಗುಡ್ಡ.

೫. ಕಾಟಪ್ಪನ ಗುಡ್ಡ ಮತ್ತು ಕುಮಾರ ರಾಮನ ಗುಡ್ಡಗಳನ್ನು ಕೋಟೆಗಳು ಬಂಧಿಸುತ್ತವೆ (ಪುರುಷೋತ್ತಮ ಬಿಳಿಮಲೆ. ೧೯೯೬. ಪು. ೧೩, ೬೨).

ಕುದುರೆ ಕಲ್ಲು

ಭಾರತೀಯ ಯುದ್ಧ ತಂತ್ರದಲ್ಲಿ ಕುದುರೆ ಕಲ್ಲುಗಳು ವೈಶಿಷ್ಟ್ಯಪೂರ್ಣ ಸ್ಥಾನವನ್ನು ಪಡೆದಿವೆ. ದೊಡ್ಡ ಗುಂಡುಕಲ್ಲನ್ನು ಮಧ್ಯಭಾಗದಲ್ಲಿ ಸೀಳಿ ಎರಡು ಅರ್ಧ ಗೋಲಾಕೃತಿಯ ತುಂಡುಗಳಾಗಿ ಮಾಡಿ ನೆಲದ ಮೇಲೆ ಸಾಲು ಸಾಲಾಗಿ ಸಾವಿರಾರು ಸಂಖ್ಯೆಯಲ್ಲಿ ಕುದುರೆಗಳ ಚಲನೆಗೆ ಅಡ್ಡಿಯುಂಟು ಮಾಡಲು ಇಟ್ಟ ಕಲ್ಲುಗಳೇ ಕುದುರೆ ಕಲ್ಲುಗಳು (ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪು. ೭೪). ಕುಮ್ಮಟ ದುರ್ಗದಲ್ಲಿ ಕಡಿಮೆ ಎಂದರೂ ನಾಲ್ಕು ಸ್ಥಳಗಳಲ್ಲಿ ಇಂತಹ ಕುದುರೆ ಕಲ್ಲುಗಳು ಇವೆ. ದೊಡ್ಡ ದೊಡ್ಡ ಗುಡ್ಡಗಳನ್ನು ಸುತ್ತುವರಿದು ಕಣಿವೆಗಳನ್ನು ಹುಡುಕಿಕೊಂಡು ಅವುಗಳ ಮೂಲಕ ಒಳಹೋಗಲು ಪ್ರಯತ್ನಿಸಿದರೆ ಮೊದಲ ಹಂತದಲ್ಲಿ ಸಿಗುವುದೇ ಕುದುರೆ ಕಲ್ಲುಗಳು. ಕುದುರೆ ಮೇಲೆ ಬಂದ ವಿರೋಧಿ ಸೈನಿಕರ ಕುದುರೆಯ ಚಲನೆಯನ್ನು ಈ ಕುದುರೆ ಕಲ್ಲುಗಳು ತಡೆಯುತ್ತಿದ್ದವು. ಕಲ್ಲುಗಳನ್ನು ಓರೆಕೋರೆಯಾಗಿ ನೆಟ್ಟಿರುವುದರಿಂದ ಕುದುರೆಯ ನಡಿಗೆಗೆ ಆಯ ಸಿಕ್ಕುತ್ತಿರಲಿಲ್ಲ. ವೈರಿಗಳ ಕುದುರೆಗಳು ಈ ಕಲ್ಲುಗಳಿಗೆ ಮುಗ್ಗರಿಸಿ ಬಿದ್ದಾಗ ಸೈನಿಕರ ಕೈಯಲ್ಲಿ ಸುಲಭವಾಗಿ ಹತ ರಾಗುತ್ತಿದ್ದರು. ಅಬ್ದುಲ್ ರಜಾಕ್ ಮತ್ತು ಪೋರ್ಚುಗೀಸ್ ಪ್ರವಾಸಿ ಡೊಮಿಂಗೊ ಪಯಸ್ ಈ ಕುದುರೆ ಕಲ್ಲುಗಳನ್ನು ಕುರಿತು ದಾಖಲಿಸಿದ್ದಾರೆ. ಅಬ್ದುಲ್ ರಜಾಕ್‌ನ ಪ್ರವಾಸಿ ಕಥನದಲ್ಲಿ ``The city of Bizanagar ..approach the citedal`` (Sewell. 1962 P. 86) ಪೋರ್ಚುಗೀಸ್ ಪ್ರವಾಸಿ ಡೊಮಿಂಗೊ ಪಯಸ್ ಕುದುರೆ ಕಲ್ಲಿನ ಬಗ್ಗೆ ದಾಖಲಿಸುವ ವಿವರ ಹೀಗಿದೆ:

``Certain pointed stones of great hight are fixed in the ground as high as mans breast. they are in breadth a lanceshaft and a half with the some distance between them and great wall. This wall rises in all the low ground till it reaches some hill or rocky land``(Sewell, 1962, P. 245).

ಒಟ್ಟಾರೆ ವೈರಿಪಡೆಯನ್ನು ನಾಶಪಡಿಸುವ ತಂತ್ರದಲ್ಲಿ ಕುದುರೆ ಕಲ್ಲುಗಳು ಬಹಳ ಮಹತ್ವದ ಪಾತ್ರವನ್ನು ವಹಿಸಿವೆ. ಇಂತಹ ಕುದುರೆ ಕಲ್ಲುಗಳು ಹೆಚ್ಚಿನ ಮಟ್ಟಿಗೆ ಈಗೆಲ್ಲೂ ತೋರುತ್ತಿಲ್ಲ. ಒಟ್ಟಾರೆ ವೈರಿಗಳನ್ನು ಸದೆ ಬಡಿಯಲು ಕೋಟೆಯ ಹೊರಗಡೆ ಕುದುರೆ ಕಲ್ಲುಗಳನ್ನಿಟ್ಟು, ನವೀನ ತಂತ್ರವನ್ನು ಕುಮ್ಮಟದ ನಾಯಕರು ಅನುಸರಿಸಿದ್ದರೆಂಬುದು ಸ್ಪಷ್ಟವಾಗಿದೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪು.೬೪).

ಶಸ್ತ್ರಾಗಾರ

ಅರಮನೆಯ ಹತ್ತಿರವಿರುವ ಶಸ್ತ್ರಾಗಾರ ಇದರ ವಿಸ್ತೀರ್ಣ ೧೧.೮ ಮೀಟರ್ ಎತ್ತರ ೩.೦೦ ಮೀ. ಇದಕ್ಕೆ ಯಾವುದೇ ಬಾಗಿಲುಗಳಿಲ್ಲ. ಗೋಡೆಯನ್ನೇರಿ ಒಳಕ್ಕೆ ಇಳಿಯಬೇಕು. ಮಣ್ಣು, ಕಲ್ಲು ಬಳಸಿ ಈ ಕಟ್ಟಡವನ್ನು ಕಟ್ಟಲಾಗಿದೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪು.೬೫).

ಆನೆಯ ಲಾಯ

ರಾಮಸ್ವಾಮಿ ಗುಡಿಯ ನೈರುತ್ಯ ದಿಕ್ಕಿನಲ್ಲಿ ನೆಲ ಮಟ್ಟದಿಂದ ಸ್ವಲ್ಪ ಮೇಲ್ಭಾಗದಲ್ಲಿ ಆನೆ ಲಾಯವಿದೆ. ಇದನ್ನು ಆನೆಯಪಾಗ ಎಂತಲೂ ಕರೆಯುತ್ತಾರೆ. ಇದರ ಆಕಾರ ಆಯತಾಕಾರ, ಎತ್ತರ ೩.೬೦ ಮೀಟರ್ ಒಳ ಬದಿಯ ಗೋಡೆಯ ಕಲ್ಲುಗಳು ನಯಗೊಳಿಸಲ್ಪಟ್ಟಿವೆ. ಪಶ್ಚಿಮಕ್ಕೆ ದೊಡ್ಡದಾದ ಬಾಗಿಲಿದ್ದು, ಅಗಲ ೧.೪೦ ಮೀಟರ್, ಲಾಯದ ಮೇಲ್ಭಾಗ ತೆರೆದುಕೊಂಡಿದೆ. ೫೫ ಮೀಟರ್ ಉದ್ದ ಒಳಭಾಗದಲ್ಲಿ ಇದೆ. ಆನೆಗಳನ್ನು ಇಡಲು ಸಾಧ್ಯವಾಗುವಂತೆ ಬಲಿಷ್ಠವಾದ ರಚನೆ ಈ ಕಟ್ಟಡದ್ದಾಗಿದೆ. ಆನೆಯ ಲಾಯದ ಆಚೆ ಈ ರೀತಿಯ ಅನೇಕ ಕಟ್ಟಡದ ಅವಶೇಷಗಳಿವೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪು. ೧೬). ಈ ಕಟ್ಟಡಗಳು ಕಣಜಗಳಾಗಿರುವ ಸಾಧ್ಯತೆಗಳಿವೆ.

ಹೊಸಮಲೆ ದುರ್ಗ

'ಹೊಸಮಲೆ ದುರ್ಗ' ಇದನ್ನು 'ರಾಮಗಢ'ವೆಂತಲೂ ಕರೆಯುತ್ತಾರೆ. ಕಂಪಿಲರಾಯನು ಸಂಡೂರು ಪ್ರಾಂತಕ್ಕೆ ಸೇರಿದ ಹೊಸಮಲೆಯಲ್ಲಿ ಕೋಟೆಯೊಂದನ್ನು ಕಟ್ಟಿಸಿದ್ದಾನೆ. ರಾಮನಾಥ ಚರಿತ ಹಾಗೂ ಮೆಕೆಂಜಿ ಕೈಫಿಯತ್ತುಗಳಲ್ಲಿ ಈ ಕುರಿತಂತೆ ಉಲ್ಲೇಖಗಳಿವೆ(ದೇವೀರಪ್ಪ ಹೆಚ್., ೧೯೫೯, ಪು. ೫೬-೭೭, ಕಲಬುರ್ಗಿ ಎಂ.ಎಂ., ೧೯೯೪, ಪು.೪೮೩, ೪೮೪). ಈ ಕೋಟೆಯನ್ನು ಕಟ್ಟಿದ ಕುರಿತು ವಿವಾದಾಸ್ಪದ ಹೇಳಿಕೆ ಇದ್ದರೂ, ಇಲ್ಲಿ ದುರ್ಗವಿತ್ತೆಂಬುದಂತು ನಿಜ. ಕೋಟೆ ಈಗ ಶಿಥಿಲವಾಗಿದೆ. ಜನರು 'ರತ್ನಾಜಿಯ ಮಡಿಲು' ಎಂದು ಬಯಲು ಪ್ರದೇಶವನ್ನು ತೋರಿಸುತ್ತಾರೆ. ಸಮುದ್ರ ಮಟ್ಟದಿಂದ ೯೯೧ ಮೀಟರ್ ಎತ್ತರದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಹೊರಗೆ ಕಡಿದಾದ ಬೆಟ್ಟವಿದೆ. ಕೋಟೆಯನ್ನು ದೊಡ್ಡ ಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ಈ ಕೋಟೆಗೆ ನಾಲ್ಕು ಬಾಗಿಲುಗಳಿವೆ. ರಾಮಸ್ವಾಮಿ ದೇವಾಲಯದ ಆಗ್ನೇಯಕ್ಕಿರುವುದೇ ಅತಿ ದೊಡ್ಡ ಬಾಗಿಲು ಇದು 'L' ಆಕಾರದಲ್ಲಿದೆ. ಈ ದೇವಾಲಯದ ಪೂರ್ವಕ್ಕೆ ಕವಣೆಕಲ್ಲು ಬಾಗಿಲಿದೆ. ಕೋಟೆಯೊಳಗೆ ಬಾಗಿಲಿನ ಸಮೀಪ ಕವಣೆ ಕಲ್ಲುಗಳ ರಾಶಿಯೇ ಇದೆ. ಈ ಕಲ್ಲುಗಳನ್ನು ಕವಣೆಯಿಂದ ವೈರಿಗಳ ಮೇಲೆ ಎಸೆಯಲಾಗುತ್ತಿತ್ತು. ದೇವಾಲಯದ ಉತ್ತರಕ್ಕೆ ೧.೧೦ ಮೀಟರ್ ಅಗಲವಾದ ಚಿಕ್ಕ ಬಾಗಿಲಿದೆ. ಇದೇ ದೇವಾಲಯ ದಕ್ಷಿಣಕ್ಕೆ ಇನ್ನೊಂದು ಬಾಗಿಲಿದೆ. ಈ ಬಾಗಿಲುಗಳು ಈಗ ಶಿಥಿಲವಾಗಿವೆ. (ಚನ್ನಬಸಪ್ಪ ಎಸ್. ಪಾಟೀಲ, ೧೯೯೬, ಪು. ೬೮).

ಮುಮ್ಮಡಿ ಸಿಂಗೆಯ ನಾಯಕ, ಆತನ ಮಗ ಕಂಪಿಲರಾಯ ದೊರವದಿಯಿಂದ ಆಳುತ್ತಿದ್ದರು. ದೊರವದಿ ಸಂಡೂರು ತಾಲ್ಲೂಕಿನಲ್ಲಿದೆ. ಕಂಪಿಲರಾಯನು ಹೊಸಮಲೆ ದುರ್ಗವನ್ನು ಕಟ್ಟಿಸಿ ಅಲ್ಲಿಂದ ಆಳುತ್ತಿದ್ದನು. ಕಂಪಿಲರಾಯ ಮತ್ತು ಕುಮಾರ ರಾಮನಾಥರು ಮುಸ್ಲಿಂ ಸೈನಿಕರೊಡನೆ ಹೋರಾಡುತ್ತಾ ಮಡಿದಾಗ ಹೊಸಮಲೆ ದುರ್ಗದ ಪತನವಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ಇದು ಸೈನ್ಯದ ತಂಗುದಾಣವಾಗಿತ್ತು. ಹೀಗೆ ಹೊಸಮಲೆ ದುರ್ಗವು ಕಂಪಿಲ ರಾಯನಿಂದ ಹಿಡಿದು ಬ್ರಿಟಿಷರ ಕಾಲದವರೆಗೂ ಮಹತ್ವದ ಪಾತ್ರವನ್ನು ವಹಿಸಿದೆ.

ಒಟ್ಟಾರೆ ಹೊಸಮಲೆ ದುರ್ಗ ಕಂಪಿಲರಾಯನ ಒಂದು ಮೀಸಲು ದುರ್ಗ. ಸಾಹಿತ್ಯಿಕ ಆಧಾರಗಳು ಹಾಗೂ ಶಾಸನಗಳ ಆಧಾರಗಳು ಹೊಸಮಲೆ ದುರ್ಗದ ಕೋಟೆಯ ಕುರಿತು ಉಲ್ಲೇಖಿಸುತ್ತವೆ. ಚೆನ್ನರಾಯನ ಸಾಂಗತ್ಯದಲ್ಲಿ, ಪಾಂಚಾಳ ಗಂಗನ ಕುಮಾರ ರಾಮನ ಸಾಂಗತ್ಯದಲ್ಲಿ, ಹೊಸಮಲೆದುರ್ಗದ ಕುರಿತು ಪ್ರತ್ಯೇಕ ಅಧ್ಯಾಯದಲ್ಲಿ ವರ್ಣನೆ ಮಾಡಲಾಗಿದೆ. ದಕ್ಷಿಣ ಭಾಗದಲ್ಲಿನ ಮೂರಾನೆಯ ಸಂಧಿಯಲ್ಲಿ ಕೋಟೆಯನ್ನು ಕಟ್ಟಿಸಿದ್ದರ ಉಲ್ಲೇಖವಿದೆ. ವೀರ ಕಂಪಿಲದೇವನು ಬೇಟೆಗಾಗಿ ಹೋದಾಗ ಮೊಲವು ನಾಯಿಯ ಮೇಲೆ ತಿರುಗಿ ಬಿದ್ದಾಗ, ಈ ಭೂಮಿಯಲ್ಲಿನ ಮಹತ್ವದ ಮೌಲ್ಯವನ್ನರಿತು. ಕೋಟೆಯನ್ನು ಕಟ್ಟಿಸಿದ್ದ ಬಗ್ಗೆ ವಿವರವಾಗಿ ದಾಖಲಿಸಲಾಗಿದೆ. ಮಹಾಗಿರಿ ದುರ್ಗ ಎಂದು ನಂಜುಂಡ ಕವಿಯು ಕುಮಾರ ರಾಮನಾಥ ಚರಿತದಲ್ಲಿ, ಹೊಸಮಲೆ ವರ್ಣನೆ ಸಂಧಿಯಲ್ಲಿ ಉಲ್ಲೇಖಿಸಿದ್ದಾನೆ (ದೇವೀರಪ್ಪ ಹೆಚ್., ೧೯೫೫, ಪು. ೫೮, ೭೧, ೭೩.). ಕೋಟೆಯ ಒಳಗಿನ ಕಂಪಿಲನ ಅರಮನೆ ಮತ್ತು ವಾಸ್ತು ವಿವರಣೆಯನ್ನು ಇಲ್ಲಿ ದಾಖಲಿಸಲಾಗಿದೆ.

ಶಾಸನಗಳು ಕುಮ್ಮಟ ನಾಯಕರ ಕೋಟೆಗಳನ್ನು ಕುರಿತು ಪೂರಕ ಮಾಹಿತಿಯನ್ನು ನೀಡುತ್ತವೆ. ಕಂಪಿಲರಾಯ ಮತ್ತು ಮುಮ್ಮಡಿ ಸಿಂಗೆಯ ನಾಯಕ, ಕೋಟೆಯನ್ನು ಕಟ್ಟಿ, ಹೊಯ್ಸಳರೊಂದಿಗೆ ಯುದ್ಧಗಳನ್ನು ಮಾಡಿದರೆಂದಿದೆ. ಇದಕ್ಕೆ ವೀರಗಲ್ಲು ಶಾಸನ ಪೂರಕವಾಗಿ ಮಾಹಿತಿಯನ್ನು ನೀಡಿದೆ (ARIE, 1943, B. 75, P. 44, VPR, 1988 -91, P.240). ಇದೇ ಸ್ಥಳದ ಇನ್ನೊಂದು ಶಾಸನ ಹೊಸಮಲೆ ದುರ್ಗದಲ್ಲಿರುವ ಶಿಥಿಲಾವಸ್ಥೆಯಲ್ಲಿರುವ ಕೋಟೆಯನ್ನು ಉಲ್ಲೇಖಿಸಿದೆ (ARIE, 1943-44. B.No.76. VPR, 1988-91, PP.240-41). ಈ ಪ್ರದೇಶದಲ್ಲಿನ ತಾಯಮ್ಮನ ಕೊಳ್ಳ, ಅಯ್ಯನಕೊಳ್ಳ ಪ್ರಮುಖವಾಗಿದ್ದು, ತಾಯಮ್ಮನ ಕೊಳ್ಳದಲ್ಲಿ ಇಂದಿಗೂ ನೀರಿನ ಆಸರೆ ಇರುತ್ತದೆ.

ಹಾನೇಯ

ಕುಮ್ಮಟ ನಾಯಕರ ಕಾಲದ ರಾಜಧಾನಿಗಳಲ್ಲಿ ಹಾನೇಯವೂ ಒಂದು. ಬ್ರಹ್ಮಗಿರಿ ಬೆಟ್ಟದ ಪಶ್ಚಿಮ ಭಾಗದಲ್ಲಿರುವ ಹಾನೇಯ ಪೇಟೆಯಲ್ಲಿರುವ ಕೋಟೆಯ ಅವಶೇಷಗಳು ವೈಶಿಷ್ಟ್ಯಪೂರ್ಣ (MAR, 1930, PP. 23-32) ಇಲ್ಲಿಯ ಕೋಟೆ ಮೊದಲು ಇರುಂಗೊಳ ಚೋಳನ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೧೨೭೮ರ ಶಾಸನವೊಂದು(EC XI. No.20) ಕುಮ್ಮಟದ ಮಂತ್ರಿ ಬೀಚನು ಹಾನೇಯ ಮತ್ತು ನಿಡುಗಲ್ಲು ಕೋಟೆಗಳನ್ನು ಕಟ್ಟಿಸಿದನೆಂದಿದೆ. ಕ್ರಿ.ಶ. ೧೨೧೫ರ ಶಾಸನ (EC XI. Mol. No.12) ಹೊಯ್ಸಳ ವೀರಬಲ್ಲಾಳ ದೇವರು ಹಾನೇಯದ ಕೋಟೆಯನ್ನು ಜಯಿಸಿದ್ದನ್ನು ದಾಖಲಿಸಿದೆ. ಹಾನೇಯ ಕೋಟೆಗೆ 'ವಿಜಯಗಿರಿ' ಎಂಬ ಹೆಸರೂ ಇದೆ. ಹಾನೇಯದ ಕೋಟೆ ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ ಬೆಟ್ಟವು ಅತ್ಯಂತ ಕಡಿದಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಬೆಟ್ಟವು ಇಳಿಜಾರಾಗಿದ್ದು, ಆಯಕಟ್ಟಿನ ಜಾಗದಲ್ಲಿ ಅರ್ಧ ವೃತ್ತಾಕಾರದ ಕೋಟೆ ಇದೆ. ಕೋಟೆ ಗೋಡೆಗೆ ತಾಗಿದಂತೆ ೧೦ ಕೊತ್ತಳಗಳಿವೆ. ಇದನ್ನು ದಪ್ಪನೆಯ ಗ್ರಾನೈಟ್ ಕಲ್ಲುಗಳಿಂದ ನಿರ್ಮಿಸಲಾಗಿದೆ.

ಬೆಟ್ಟದ ಮೇಲೆ ಹುಲಿಕುಂಟೆ, ಜೋರೆ ಕುಂಟೆ, ಪಲ್ಲಕ್ಕಿ ಚಿಲುಮೆ, ಪೂರ್ವಭಾಗದಲ್ಲಿ ನೀರಿನ ಚಿಲುಮೆಗಳು ನೀರನ್ನು ಪೂರೈಸುವ ತಾಣಗಳಾಗಿವೆ. ಕೋಟೆಯಲ್ಲಿ ದೊಡ್ಡದಾದ ಅರಮನೆಯ ಅಧಿಷ್ಠಾನವಿದ್ದು, ಸೈನಿಕ ಶಿಬಿರದ ಸಮೀಪವೇ ಕೋಟೆಯ

ದ್ವಾರವಿದೆ. ಬಂಡೆಯ ಮೇಲೆ ಸೈನಿಕ ಶಿಲ್ಪಗಳು ಇದ್ದು, ಖಡ್ಗವನ್ನು ಹಿಡಿದು ೧೫ ಜನ ಸೈನಿಕರು ಮತ್ತು ತಮಟೆ ಬಾರಿಸುವ ವ್ಯಕ್ತಿಯ ಚಿತ್ರಣ ನಿಜಕ್ಕೂ ಸುಂದರ. ತಮಟೆಯನ್ನು ನುಡಿಸುವುದು ಯುದ್ಧಕಾಲದಲ್ಲಿ ಬಹುಶಃ ದಿಗ್ವಿಜಯವನ್ನು ಸಾಧಿಸಿ ಬಂದಿರಬೇಕು.

ಹುಲಿಕುಂಟೆ ಸಮೀಪದಲ್ಲಿ ಪ್ರಾಕೃತಿಕ ಕಲ್ಲಾಸರೆ ಇದ್ದು, ೨೦೦ ಅಡಿ ಉದ್ದ ೫ ಅಡಿ ಅಗಲ ೩ ಅಡಿ ಎತ್ತರವಿರುವ ಈ ಕಲ್ಲಾಸರೆಯಲ್ಲಿ ಏಳು ಊರುಗಳ ಪಡೆಯ (ಸೈನಿಕರು) ಆಶ್ರಯ ಪಡೆಯುತ್ತಿದ್ದರೆಂಬ ಪ್ರತೀತಿ ಇದೆ. ಇದನ್ನು ಏಳೂರ ಪಡೆ ಎಂದು ಕರೆಯುವರು. ಹಾನೇಯದ ಬೆಟ್ಟ ಅತ್ಯಂತ ಕಡಿದಾಗಿದೆ. ಈ ಬೆಟ್ಟ, ಕೋಟೆ, ಅರಮನೆ ಮತ್ತು ಸೈನಿಕ ನೆಲೆಗಳನ್ನೊಳಗೊಂಡಿದೆ. ಇಲ್ಲಿರುವ ಜಟಿಂಗ ರಾಮೇಶ್ವರನ ಅನುಗ್ರಹದಿಂದ ಕುಮಾರ ರಾಮನ ಜನನವಾಯಿತೆಂದು ಕುಮಾರ ರಾಮನ ಸಾಂಗತ್ಯಗಳು ಉಲ್ಲೇಖಿಸುತ್ತವೆ. ಒಟ್ಟಾರೆ ಕುಮ್ಮಟ ನಾಯಕರ ಕಾಲಕ್ಕೆ ಸೇರಿದ ಈ ಕೋಟೆಯ ಕುರಿತು ಶಾಸನಗಳು ಪೂರಕ ಮಾಹಿತಿಯನ್ನು ನೀಡಿವೆ.

ದೊರವದಿ ಕೋಟೆ

'ದೊರವದಿ' ಎಂಬುದು ೧೨ನೇ ಶತಮಾನದಲ್ಲಿದ್ದ ಒಂದು ನಾಡು. ದೊರವದಿ-೭೦(ಎಪ್ಪತ್ತು)ರ ರಾಜಧಾನಿಯಾಗಿದ್ದು, ದೊರವದಿ ಕಾಲಾಂತರದಲ್ಲಿ ದರೋಜಿಯಾಗಿದೆ. ಈ ಗ್ರಾಮ ಬಳ್ಳಾರಿ ಜಿಲ್ಲೆಯ, ಸಂಡೂರು ತಾಲೂಕಿನಲ್ಲಿದೆ. ಬಳ್ಳಾರಿಯಿಂದ ೩೨ ಕಿ.ಮಿ. ಕಂಪಿಲಿಯಿಂದ ೨೦ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೧೦೪ರ ಶಾಸನ ದೊರವದಿಯ ಕೋಟೆಯನ್ನು ಉಲ್ಲೇಖಿಸುತ್ತದೆ (ಚನ್ನಬಸಪ್ಪ ಎಸ್. ಪಾಟೀಲ, ೧೯೯೬, ಪು. ೨೪೩). ಬಲ್ಲಕುಂದೆ ಮಹಾನಾಡಿನಲ್ಲಿ ದೊರವದಿ ಒಂದು ಉಪನಾಡಾಗಿತ್ತು. ದೊರವದಿ ಬೆಟ್ಟದ ಮೇಲಿನ ಕೋಟೆ ಇದ್ದ ಪ್ರದೇಶವನ್ನು ಹಳೇ ದರೋಜಿ ಎಂದು ಕರೆಯುತ್ತಿದ್ದರು. ಈ ಬೆಟ್ಟದ ಸಾಲಿನಲ್ಲಿ ಮೂರು ಬೆಟ್ಟಗಳಿವೆ. ಉತ್ತರ ದಕ್ಷಿಣದಲ್ಲಿನ ಮಧ್ಯದ ಬೆಟ್ಟ, ಉತ್ತರ ಮತ್ತು ಮಧ್ಯದ ಬೆಟ್ಟದ ಮೇಲೆ ಕೋಟೆ ವಿಸ್ತರಿಸಿದೆ. ಬೆಟ್ಟಗಳ ಮೇಲೆ ಹತ್ತಲು ಬೆಟ್ಟಗಳ ಮಧ್ಯದಲ್ಲಿ ಕಿರಿದಾದ ಕೊಳ್ಳದಲ್ಲಿ ಮೆಟ್ಟಿಲುಗಳಿವೆ. ವಾಯುವ್ಯ ಮತ್ತು ಆಗ್ನೇಯಕ್ಕೆ ಎರಡು ಕೋಟೆ ಗೋಡೆಗಳನ್ನು, ಎರಡು ಬೆಟ್ಟಗಳ ನಡುವೆ ಕಟ್ಟಲಾಗಿದೆ. ಕೋಟೆಗಳಲ್ಲಿ ತೆರೆದ ದ್ವಾರವಿದೆ. ವೃತ್ತಾಕಾರದ ಕೊತ್ತಲಗಳಿವೆ. ಕಟ್ಟಡದ ಅವಶೇಷಗಳು, ಒಂದು ನೀರಿನ ದೋಣಿ ಇಲ್ಲಿದೆ. ಮಧ್ಯದ ಬೆಟ್ಟದ ಸುತ್ತಲೂ ಎರಡು ಕೋಟೆ ಗೋಡೆಗಳಿವೆ. ಇಲ್ಲಿ ಚಿಕ್ಕ ಕಲ್ಲುಗಳಿಂದ ಕಟ್ಟಿದ ವೃತ್ತಾಕಾರದ ಕೊತ್ತಳಗಳಿವೆ. ಈ ಬೆಟ್ಟದ ಉತ್ತರಕ್ಕಿರುವ ಕೋಟೆ ಗೋಡೆಯನ್ನು ದೊಡ್ಡ ಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ದೊರವದಿ ಕೋಟೆಯ ಕುರಿತು ಹಲವಾರು ಶಾಸನಗಳು ಮತ್ತು ಕೈಫಿಯತ್ತುಗಳು ಕ್ರಿ.ಶ. ೧೧೦೪ರ ಕಾಲದ ಶಾಸನ, ದೊರವದಿ ಕೋಟೆಯ 'ರಾಮೇಶ್ವರ ದೇವರು' ಎಂದು ದಾಖಲಿಸಿದೆ. ದೊರವದಿಯ ಕೈಫಿಯತ್ತಿನಲ್ಲಿ ಕೋಟೆ, ಕೆರೆ ಮತ್ತು ದೇವಾಲಯ ಹಾಗೂ ಕಂಪಿಲರಾಯ, ನೇಮಿಖಾನ್‌ರ ನಡುವೆ ನಡೆದ ಯುದ್ಧಗಳ ಕುರಿತಾಗಿ ದಾಖಲೆಗಳಿವೆ (ಕಲಬುರ್ಗಿ ಎಂ.ಎಂ. ೧೯೯೪, ಪುಟ. ೫೦೮-೫೧೯). ವಿಜಯನಗರ ಅರಸರ ಕಾಲದಲ್ಲಿ ದೊರವದಿ 'ಸೋಮಲಾಪುರ ಸೀಮೆ' ಎಂದು ಶಾಸನಗಳಲ್ಲಿ ದಾಖಲಿಸಲಾಗಿದೆ (ARIE. 1922, B. No 727).

ಆನೆಗೊಂದಿ

ಪ್ರಸ್ತುತ ಆನೆಗೊಂದಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿಗೆ ಒಳಪಡುತ್ತದೆ. ಗಂಗಾವತಿಯಿಂದ ನೈರುತ್ಯಕ್ಕೆ ೧೧ ಕಿ.ಮೀ. ಅಂತರದಲ್ಲಿ ತುಂಗಭದ್ರ ನದಿಯ ಎಡದಂಡೆಯಲ್ಲಿದೆ. ಆನೆಗೊಂದಿ ರಾಮಾಯಣ ಕಾಲದಲ್ಲಿ ಕಿಷ್ಕಿಂಧ ಪಟ್ಟಣವಾಗಿತ್ತೆಂಬ ಪ್ರತೀತಿಯು ಇದೆ. ಆಂಜನೇಯನ ಜನ್ಮಸ್ಥಳವಾದ ಅಂಜನಾದ್ರಿ ಪರ್ವತವು ಇಲ್ಲಿದೆ (ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪು. ೭೫). ಕ್ರಿ.ಶ. ೧೫೨೭ರ ಶಾಸನವೊಂದು ಕಿಷ್ಕಿಂಧ ಎಂಬ ಪದವನ್ನು ಉಲ್ಲೇಖಿಸುತ್ತದೆ (ಮಂಜುನಾಥಯ್ಯ ಟಿ.ಎಂ., ೨೦೦೧, ಸಂ. ೬, ಪು. ೧೨೮, ಸಂ. ೨).

ಆನೆಗೊಂದಿ ಕೋಟೆಯ ವಿಶೇಷತೆ ಎಂದರೆ ೧೩ನೇ ಶತಮಾನದಿಂದ ಹಿಡಿದು, ೧೮ನೇ ಶತಮಾನದವರೆಗೂ ವಿವಿಧ ಶೈಲಿಯ ಕೋಟೆ ಗೋಡೆಯನ್ನು ಕಾಣಬಹುದು. ಆರು ಆಕಾರದ ದಪ್ಪ ಕಲ್ಲುಗಳಿಂದ ಒಂದು ಮತ್ತೊಂದಕ್ಕೆ ಸಂಧಿ ಜಪವ ಹಾಗೆ ಕಲ್ಲುಗಳು ಜೆಣೆಯಾಕಾರದಲ್ಲಿವೆ. ಆನೆಗೊಂದಿ ಉತ್ತರ ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಬೆಟ್ಟದಿಂದಲೂ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ನದಿಯಿಂದ ಸುತ್ತುವರೆದಿದೆ. ಇದೊಂದು ನೈಸರ್ಗಿಕವಾದ ಸುರಕ್ಷ ತಾಣವಾಗಿರುವುದರಿಂದ, ಇಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಕೋಟೆಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ೧. ಊರ ಸುತ್ತಲಿನ ಕೋಟೆ, ೨. ಬೆಟ್ಟದ ಮೇಲಿನ ಉತ್ತರದ ಕೋಟೆ, ೩. ಬೆಟ್ಟದ ಮೇಲಿನ ದಕ್ಷಿಣದ ಕೋಟೆ.

ಊರ ಸುತ್ತಲಿನ ಕೋಟೆ : ಗಂಗಾವತಿ ಕಡೆಯಿಂದ ಈಶಾನ್ಯ ದಿಕ್ಕಿನಿಂದ ಬಂದರೆ ಕಡೆಬಾಗಿಲು, ಸುಂಕದ ಬಾಗಿಲು ದಾಟಿದಾಗ ಹೊನ್ನಗಸೆ ಬರುತ್ತದೆ. ಉತ್ತರದ ಬಾಗಿಲಿಗೆ ಅರವಂಟಿಗೆ ಇತ್ತು, ಹೊನ್ನಗಸೆಯ ಪಶ್ಚಿಮಕ್ಕೆ ಒಂದು ಬಾಗಿಲಿದೆ. ಉತ್ತರಾಭಿಮುಖವಾಗಿರುವ ಹೊನ್ನಗಸೆ ಶಿಥಿಲಾವಸ್ಥೆಯಲ್ಲಿದೆ. ಈ ಬಾಗಿಲ ಚೌಕಟ್ಟುಗಳನ್ನು ಹೂ ಬಳ್ಳಿಗಳ ಕೆತ್ತನೆಯಿಂದ ಅಲಂಕರಿಸಲಾಗಿದೆ. ಪ್ರವೇಶ ದ್ವಾರದಲ್ಲಿ ಎರಡು ಕಟ್ಟೆಗಳಿದ್ದು ಪಾರ್ಶ್ವದ ಪ್ರತಿಕಟ್ಟೆಯ ಮೇಲೆ ಎಂಟು (೮) ಸ್ತಂಭಗಳಿವೆ (ಸುಜಾತ ಮಲ್ಲನಗೌಡ, ೨೦೦೦, ಪು. ೩೭೯) ಬಾಗಿಲ ಚೌಕಟ್ಟನ್ನು ವಿವಿಧ ಪಟ್ಟಿಕೆಗಳಿಂದ ಅಲಂಕರಿಸಲಾಗಿದೆ. ಬಾಗಿಲಿನ ಮೇಲೆ ನಂತರದ ಕಾಲದಲ್ಲಿ ಕಟ್ಟಿದ ಮೊದಲ ಮಹಡಿ ಇದೆ. ಮುಂಭಾಗದಲ್ಲಿ ಕಮಾನುಗಳು, ಕೆಲವು ಬಂದೂಕು ಕಿಂಡಿಗಳಿವೆ. ಎರಡು ಬೆಟ್ಟಗಳ ಮೇಲೆ ಬೆಟ್ಟದ ಮೇಲಿರುವ ಈ ಕೋಟೆಗೆ ಹೋಗಲು ದಕ್ಷಿಣದಿಂದ ಮೆಟ್ಟಿಲುಗಳ ದಾರಿಯಿದೆ (ಸುಜಾತ ಮಲ್ಲನಗೌಡ, ೨೦೦೦, ಪು.೨೭೯). ಈ ದಾರಿಯಲ್ಲಿ ಎರಡೆರಡು ಬಾಗಿಲುಗಳಿವೆ. ಪ್ರವೇಶದಲ್ಲಿ ಎರಡು ಕಟ್ಟೆಗಳು, ಎರಡು ಆಯತಾಕಾರದ ಕಟ್ಟಡ, ವೃತ್ತಾಕಾರದ ಕೊಳಗಳು, ಕಾವಲುಗಾರರ ಗೋಪುರಗಳೂ ಇವೆ. ಕಾಲಮಾನದ ದೃಷ್ಟಿಯಿಂದ ಇದು ವಿಜಯನಗರೋತ್ತರ ಕಾಲದ್ದಾದರೂ ಪ್ರಾರಂಭಿಕ ಹಂತದ ಪ್ರಭಾವವನ್ನು ಇಲ್ಲಿ ನಾವು ಕಾಣಬಹುದು.

ಬೆಟ್ಟದ ಮೇಲಿನ ದಕ್ಷಿಣ ಕೋಟೆ : ಈ ಕೋಟೆಯನ್ನು ಮೇಲಿನ ಕೋಟೆ, ಮಧ್ಯದ ಕೋಟೆ ಮತ್ತು ಕೆಳಗಿನ ಕೋಟೆ ಎಂದು ವಿಭಾಗಿಸಬಹುದು. ಪ್ರತಿ ಕೋಟೆಯಲ್ಲಿ ಬಹು ವಿಶಾಲವಾಗಿರುವುದೊಂದು ವಿಶೇಷತೆ. ಮೇಲಿನ ಕೋಟೆಗೆ ಮೂರು ಬಾಗಿಲುಗಳಿವೆ. ಬಾಗಿಲನ್ನು ಚಿಕ್ಕ ಕಲ್ಲುಗಳಿಂದ ಕಟ್ಟಲಾಗಿದೆ. ಬಾಗಿಲ ಪಕ್ಕದಲ್ಲಿ ಆಯತಾಕಾರದ ಕೊತ್ತಳಗಳು ಇವೆ. ಕೊತ್ತಳಗಳ

ಗೋಡೆಯಲ್ಲಿ ಬಂದೂಕು ಕಿಂಡಿಗಳಿವೆ. ಕೋಟೆಯೊಳಗೆ ವಿಶಾಲವಾದ ಕಟ್ಟಡಗಳು, ಆರು ಕಣಜಗಳಿವೆ. ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿದ ಮೂರು ವೃತ್ತಾಕಾರದ ಕಣಜಗಳು, ಮೂರು ಆಯತಾಕಾರದ ಕಣಜಗಳಿವೆ. ಅವುಗಳ ಬಾಗಿಲುಗಳು ಎತ್ತರದಲ್ಲಿವೆ. ಎತ್ತರವಾದ ಸ್ಥಳದಲ್ಲಿ ವೃತ್ತಾಕಾರದ ಕಾವಲು ಗೋಪುರವಿದೆ. ಮಧ್ಯದ ಕೋಟೆಗೆ ಈಶಾನ್ಯದಿಂದ ಎರಡು ಬಾಗಿಲುಗಳಿದ್ದು ಬಾಗಿಲುಗಳ ದ್ವಾರಗಳಲ್ಲಿ ಕಟ್ಟೆಗಳು ನಿರ್ಮಿತವಾಗಿವೆ. ಹೊರ ಬಾಗಿಲಿಗೆ ಮಾತ್ರ ಬಾಗಿಲ ಚೌಕಟ್ಟಿದೆ. ಕೊತ್ತಳದ ಗೋಡೆಯಲ್ಲಿ ಬಂದೂಕು ಕಿಂಡಿಗಳಿವೆ. ನಾಲ್ಕು ನೀರಿನ ಕೊಳಗಳು, ನಾಲ್ಕು ವೃತ್ತಾಕಾರದ ಕಣಜಗಳು ವಿಶಾಲವಾದ ಪ್ರದೇಶಗಳಲ್ಲಿವೆ. ಕಟ್ಟಡದ ಮಾಳಿಗೆಗೆ ಹೋಗಲು ಮೆಟ್ಟಿಲುಗಳೂ ಇವೆ. ಕೆಳಕೋಟೆಯು ಚಿಕ್ಕದಾಗಿದ್ದು ದಕ್ಷಿಣ ದಿಕ್ಕಿಗೆ ಬಾಗಿಲುಗಳಿವೆ. ಪ್ರತಿ ಕಟ್ಟೆಯಲ್ಲಿಯೂ ಎರಡೆರಡು ಸ್ತಂಭಗಳಿವೆ. ಈ ಕೋಟೆಯನ್ನು ನದಿ ಕಡೆಯಿಂದ ಬರುವ ಜನರ ಚಲನವಲನಗಳನ್ನು ನೋಡುವ ಉದ್ದೇಶದಿಂದ ಇದನ್ನು ಕಟ್ಟಿರಬೇಕು.

ಅರಮನೆ ವಾಸ್ತುಶಿಲ್ಪ

ಕೋಟೆ ಕೊತ್ತಳಗಳಂತೆ ಅರಮನೆಯ ವಾಸ್ತುಕಲೆಯು ಲೌಕಿಕ ವಾಸ್ತುಕಲೆ. ಇದಕ್ಕೆ ತನ್ನದೇ ಆದಂತ ವಾಸ್ತು ವೈಶಿಷ್ಟ್ಯತೆ ಇದೆ. ``ರಾಜಾ ಪ್ರತ್ಯಕ್ಷ ದೇವತಃ'' ರಾಜನು ಪ್ರತ್ಯಕ್ಷ ದೇವರೇ ಆದಂತೆ ರಾಜನ ಜವಾಬ್ದಾರಿ ಪ್ರಜೆಗಳ ಸಂರಕ್ಷಣೆ. ಈ ಪ್ರಜೆಗಳ ಸಮಸ್ತ ಜವಾಬ್ದಾರಿ ಅರಮನೆಗಳ ಮೂಲಕವೇ ನಡೆಯುತ್ತಿತ್ತು. ಅರಮನೆಯ ವಾಸ್ತುಕಲೆಗೆ ಸಂಬಂಧಿಸಿದಂತೆ ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲಕ್ಕೆ ಸೀಮಿತವಾಗಿರುವುದರಿಂದ ಕುಮ್ಮಟ ನಾಯಕರ ಕಾಲದಲ್ಲಿನ ಈ ವಾಸ್ತು ವೈಶಿಷ್ಟ್ಯತೆಯನ್ನು ಇಲ್ಲಿ ಸೆರೆ ಹಿಡಿಯಲಾಗಿದೆ. ಕುಮ್ಮಟದಲ್ಲಿ ಸಭಾಂಗಣದ ಪೂರ್ವಕ್ಕೆ ಎರಡು ಅರಮನೆ ಅವಶೇಷಗಳಿವೆ. ಆದರೆ ಅರಮನೆಯ ಅಧಿಷ್ಠಾನ (ಪಂಚಾಂಗ)ದ ಕಲ್ಲುಗಳು ಮಾತ್ರ ಈಗ ಕಾಣಿಸುತ್ತಲಿವೆ. ಒಂದು ಅರಮನೆ ಅಧಿಷ್ಠಾನದ ಮುಂಭಾಗ ಚಾಚಿಕೊಂಡಿದೆ. ಇದು ನ್ಯಾಯದ ಕಟ್ಟೆ ಎಂಬ ಪ್ರತೀತಿಯೂ ಇದೆ. ನ್ಯಾಯದ ಕಟ್ಟೆ ಮಧ್ಯ ಭಾಗದಲ್ಲಿ ಎತ್ತರಕ್ಕೆ ಏರಿದಂತೆ ಮೆಟ್ಟಿಲುಗಳಿವೆ. ಇಂತಹ ಇನ್ನೊಂದು ಅರಮನೆ ಅಧಿಷ್ಠಾನಕ್ಕೆ ಇಂತಹ ವಿಸ್ತರಣೆ ಇಲ್ಲ. ಇಂತಹ ತಳವಿನ್ಯಾಸಗಳು ಹಂಪೆಯಲ್ಲಿ ಹೇರಳವಾಗಿವೆ. ಬಹುಶಃ ಈ ತಳವಿನ್ಯಾಸಗಳು ಮುಖ್ಯ ದಳಪತಿಗಳ ಆವಾಸ ಸ್ಥಾನವಾಗಿರಬೇಕು. ಕಾಟಪ್ಪನ ಗುಡ್ಡ, ಜೋಳ್ದನ ಗುಡ್ಡದ ನಡುವೆ ವಿಸ್ತಾರವಾದ ಅಧಿಷ್ಠಾನವೊಂದಿದೆ. ದುರ್ಗದ ಬೆಟ್ಟದ ಮೇಲೆ ಕೆಲ ಅವಶೇಷಗಳಿವೆ. ಕಾಟಪ್ಪನ ಕಟ್ಟೆಯನ್ನು ಕುಮಾರ ರಾಮನ ಅರಮನೆ, ಬೈಚಪ್ಪನ ಅರಮನೆ ಎಂತಲೂ ಕರೆಯುತ್ತಾರೆ. ಚಿತ್ರದುರ್ಗದಲ್ಲಿನ ಸಂಪಿಗೆ ಸಿದ್ದೇಶ್ವರ ದೇವಾಲಯದ ಹತ್ತಿರ ಇರುವ ಅರಮನೆ ಅಧಿಷ್ಠಾನಗಳು ಈ ಮಾದರಿಯಲ್ಲಿ ಗೋಚರವಾಗುತ್ತವೆ. ಹೊಸಮಲೆ ದುರ್ಗ ಮತ್ತು ದೊರವದಿಯಲ್ಲಿನ ಅಧಿಷ್ಠಾನಗಳು ಪೂರ್ಣವಾಗಿ ಪಾಳು ಬಿದ್ದಿವೆ.

ಅರಮನೆ ವೈಶಿಷ್ಟ್ಯಕ್ಕೆ ಸಂಬಂಧಿಸಿದಂತೆ ಉಪಾನ, ಜಗತಿ. ಪದ್ಮದಳ. ಯುಕ್ತಿ ಕುಮುದ, ಸರಳವಾದ ಕಂಠ. ಪದ್ಮದಳ ಯುಕ್ತ ಕಪೋತಗಳಿಂದ ಕೂಡಿದ್ದು ಆಯತಾಕಾರ, ಚೌಕಾಕಾರವಾಗಿದ್ದು ಪೂರ್ವ ಮತ್ತು ಉತ್ತರಾಭಿ ಮುಖವಾಗಿದ್ದು ಪ್ರವೇಶದಲ್ಲಿ ಕೈಪಿಡಿಗಳಿವೆ. ಗ್ರಾನೈಟ್ ಶಿಲೆಯನ್ನು ಅಧಿಷ್ಠಾನಕ್ಕೆ ಬಳಸಲಾಗಿದೆ.

ಕುಮ್ಮಟ ದುರ್ಗದಲ್ಲಿರುವ ಅರಮನೆಯಂತೆ ಹಂಪೆಯಲ್ಲಿಯೂ ಇಂತಹ ಅರಮನೆ ಅಧಿಷ್ಠಾನಗಳು ಸಿಕ್ಕಿವೆ ಎಂಬುದನ್ನು ಈ ಮೇಲೆ ಪ್ರಸ್ತಾಪಿಸಲಾಗಿದೆ (VPR,1987-88, P.205). ಇಲ್ಲಿನ ರಾಜ ಭವನದ ಅಧಿಷ್ಠಾನ ೧೦೦(ನೂರು) ಸ್ತಂಭಗಳುಳ್ಳದ್ದು. ಬಹುಶಃ ಈ ಅಧಿಷ್ಠಾನ ಕುಮ್ಮಟದ ನಾಯಕರ ಕಾಲದ್ದಿರಬೇಕು. ಏಕೆಂದರೆ ಇದು ಕುಮ್ಮಟದುರ್ಗದಲ್ಲಿನ ಅರಮನೆಯ ಅಧಿಷ್ಠಾನವನ್ನೇ ಹೋಲುತ್ತವೆ. ಉತ್ತರ, ಪೂರ್ವ ಮತ್ತು ಪಶ್ಚಿಮದಲ್ಲಿ ಏರಿ ಹೋಗಲು ಪ್ರವೇಶಕ್ಕಾಗಿ ಸೋಪಾನಗಳನ್ನು ನಿರ್ಮಿಸಲಾಗಿದೆ. ಈ ಸೋಪಾನ ಉದ್ದ ಮತ್ತು ದಪ್ಪನೆಯ ಕಲ್ಲುಗಳನ್ನು ಹೊಂದಿದೆ. ಮೇಲೆ ಒಂದು ಚಿಕ್ಕ ಕೊಠಡಿಯುಳ್ಳ ವಿಶಾಲವಾದ ಜಾಗವನ್ನು ಹೊಂದಿದೆ. ಕೆಳಭಾಗದಲ್ಲಿ ಆಯತಾಕಾರದ ತೊಟ್ಟಿಯನ್ನು ಸೋಪಾನಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಸಾಲು ಅರಮನೆಗಳ ಅಧಿಷ್ಠಾನಗಳು ಈ ಅರಮನೆಯ ದಕ್ಷಿಣಕ್ಕಿರುವುದು ಇನ್ನೊಂದು ವಿಶೇಷತೆ.

ಕುಮಾರ ರಾಮನ ಗುಡ್ಡದ ತುದಿಯಲ್ಲಿ ಪಾಳು ಬಿದ್ದ ಸುಂದರ ಸಭಾಂಗಣ ಒಂದಿದೆ (ಪುರುಷೋತ್ತಮ ಬಿಳಿಮಲೆ. ೧೯೯೯, ಪು.೧೫). ಉದ್ದಗಲ ೫೧x೨೮ ಮೀಟರುಗಳು, ಉತ್ತರ, ದಕ್ಷಿಣಾಭಿಮುಖವಾಗಿದೆ. ಹೊರವಲಯದ ನಾಲ್ಕು ಮೂಲೆಗಳಲ್ಲಿ ಎತ್ತರವಾದ ಒಂದೊಂದು ಮೂಲೆಗಳಿವೆ. ಈ ಸಭಾಂಗಣಕ್ಕೆ ಪೂರ್ವದಿಂದ ಪ್ರವೇಶ ಮಾಡಲು ಬಾಗಿಲೊಂದಿದೆ. ಈಗ ಇದು ಶಿಥಿಲವಾಗಿದೆ. ಸಭಾಂಗಣದ ಸುತ್ತ ಕಂದಕವಿದೆ. ಸಭಾಂಗಣದ ಒಳಗಡೆ ಸುಣ್ಣದ ಗಾರೆಯ ಗೋಡೆಯಿದೆ. ಕಂಪಿಲ ದೇವ ಮತ್ತು ಕುಮಾರ ರಾಮನ ಕಾಲದ ನಂತರದ ಕಾಲದಲ್ಲಿ ಈ ಭಾಗ ಮುಸ್ಲಿಂರ ಆಳ್ವಿಕೆಗೆ ಒಳಪಟ್ಟು, ತನ್ನದೇ ಆದ ಬೆಳವಣಿಗೆಯನ್ನು ಕಂಡಿದೆ (Channabasappa S.Patil, 1991, P: 205, VPR. 1987-88, P: 205)

ದೇವಾಲಯ ವಾಸ್ತುಶಿಲ್ಪ

``ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು`` ಎಂದು ಕುವೆಂಪುರವರು ಶಿಲೆಯು ಕಲೆಯಾದ ಪರಿಯನ್ನು ವ್ಯಕ್ತಪಡಿಸಿದ ನುಡಿಗಳು ಭಾವೋದ್ರೇಕವಾದ ಕಲ್ಪನೆಗಳನ್ನು ಗರಿಗೆದರುವಂತೆ ಮಾಡುವ ಶಕ್ತಿ ವಾಸ್ತುಕಲೆಗೆ ಇದೆ. ವಾಸ್ತುಕಲೆ ತನ್ನದೇ ಆದ ವೈಶಿಷ್ಟ್ಯ ಪರಂಪರೆಯನ್ನು ಹೊಂದಿದೆ. ವಾಸ್ತುಶಿಲ್ಪ ಅಥವಾ ವಾಸ್ತುಕಲೆ ಹಾಗೂ ಇತಿಹಾಸ ಇವೆರಡೂ ಒಂದಕ್ಕೊಂದು ಪೂರಕವಾಗಿವೆ. ಇತಿಹಾಸ ಮತ್ತು ಸಂಸ್ಕೃತಿಗಳ ಪ್ರತಿಬಿಂಬ. ಸಮಕಾಲೀನ ಜನರ ಧಾರ್ಮಿಕ, ಸಾಮಾಜಿಕ, ರಾಜಕೀಯ ಜೀವನದ ಚಿತ್ರಣವನ್ನು ಸಂಸ್ಕೃತಿಯ ಪರಂಪರೆಯನ್ನು ತೋರಿಸುವ ಶಕ್ತಿ ಈ ವಾಸ್ತು ಶಿಲ್ಪಕ್ಕಿದೆ. ವಾಸ್ತು ಶಿಲ್ಪವೆಂಬುದು ಕಟ್ಟಡ ನಿರ್ಮಾಣದ ತಂತ್ರಕಲೆ. ಸಂಸ್ಕೃತದಲ್ಲಿ ಕಟ್ಟಡ ಶಾಸ್ತ್ರವನ್ನು 'ವಾಸ್ತುಶಾಸ್ತ್ರ'ವೆಂದು ಕರೆದಿದ್ದಾರೆ. ಸಂಸ್ಕೃತಿಯ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳಲ್ಲಿ ವಾಸ್ತುಶೈಲಿಯೂ ಒಂದು.

ವಾಸ್ತುಶಿಲ್ಪವೆಂದರೆ ತಾಂತ್ರಿಕ ಪರಿಣತಿಯನ್ನು ಹೊಂದಿದ, ಭಾವ ಸಂಬಂಧಗಳನ್ನು ಬೆಸೆಯಲ್ಪಟ್ಟ ಸಾಂಸ್ಕೃತಿಕ ವಾಸ್ತು ರಚನೆಗಳು ಹಾಗೂ ವಿವರಗಳು ಪ್ರಧಾನವೆನಿಸುತ್ತವೆ. ಇಲ್ಲಿ ಸಾಂಸ್ಕೃತಿಕ ಅಧ್ಯಯನ ಪ್ರಧಾನವಾದುದರಿಂದ ದೇವಾಲಯ ವಾಸ್ತುವನ್ನು ಸಾಂಸ್ಕೃತಿಕವಾಸ್ತುವೆಂತಲೂ ಹೆಸರಿಸಬಹುದು. ಮಾನವನು ತನ್ನ ಸ್ವಂತಕ್ಕೆ ಕಟ್ಟಿದ ಗೃಹ ಮನೆಯಾದರೆ. ದೇವಾಲಯಕ್ಕಾಗಿ ಕಟ್ಟಿದ್ದು ದೇವಾಲಯ ವಾಸ್ತುವಾಯಿತು. ಆತ್ಮನಿಗೆ ಶರೀರದಂತೆ, ಮನೆಯು ಹಾಗೆ ಪ್ರಕೃತಿ ಆಲಯವೆಂಬ

ಆಧ್ಯಾತ್ಮಿಕ ಭಾವನೆ ಬೆಳೆಯಿತು (ರಾಮಚಂದ್ರರಾವ್ ಎಸ್.ಕೆ., ೧೯೮೦, ಪು. ೧೯). ಗೃಹಸ್ಥಾನದಲ್ಲಿ ಮಾನವನು ಮಾಡುವ ಪೂಜೆ ಆತ್ಮಾರ್ಥವೆನಿಸಿದರೆ, ದೇವಾಲಯದಲ್ಲಿ ಮಾಡುವ ಪೂಜೆ ಸಮಾಜದ ಒಳಿತಿಗಾಗಿ, ಲೋಕ ಕಲ್ಯಾಣಕ್ಕಾಗಿ, ಆಯಾ ಧಾರ್ಮಿಕ ಮತಗಳಿಗನು ಗುಣವಾಗಿ ಪೂಜಾಸ್ಥಾನಗಳು ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟವು. ಚೈತ್ಯ, ದೇವಾಲಯ ಮತ್ತು ಬಸದಿಗಳು ದೇವಾಲಯದ ಕಟ್ಟಡಗಳಾಗಲಿ ಅಥವಾ ಇತರೇ ಕಟ್ಟಡಗಳಾಗಲಿ ಇವು ಭೌಗೋಳಿಕ ಪರಿಸರ, ವಾಯುಗುಣ, ಮೊದಲಾದ ಅಂಶಗಳನ್ನು ಅಳವಡಿಸಿಕೊಂಡು ಸ್ಥಾನಿಕ ಪ್ರಭೇದಗಳಾಗಿ ಬೆಳೆದು ಪ್ರಾದೇಶಿಕ, ಧಾರ್ಮಿಕ, ಪ್ರಾಕೃತಿಕ ಅಂತಃ ಸತ್ವಗಳ ಪ್ರಭಾವವನ್ನು ಅವಲಂಬಿಸಿದವು. ಇಂತಹ ವಾಸ್ತುಶೈಲಿಗಳು, ಗೃಹ್ಯ ಸೂತ್ರ, ಸುಲಭ ಸೂತ್ರಗಳಲ್ಲಿವೆ. ಮತ್ಸ್ಯಪುರಾಣ, ಸ್ಕಂದ ಪುರಾಣ, ಅಗ್ನಿ ಪುರಾಣ ಮತ್ತು ವಿಷ್ಣು ಧರ್ಮೋತ್ತರ ಪುರಾಣಗಳಲ್ಲಿ ಉಲ್ಲೇಖಿತವಾಗಿವೆ. ಆಗಮಸೂತ್ರ, ಅಪರಾಜಿತ ಪ್ರಚ್ಛ, ರೂಪಮಂತ ಸಮರಾಂಗಣ, ವಿಶ್ವಕರ್ಮ ಪ್ರಕಾಶದಲ್ಲಿ, ಔತ್ತರೇಯ ವಾಸ್ತು ಪದ್ಧತಿ ಉಲ್ಲೇಖವಾಗಿದೆ. ಮಯಮತ, ಕಾಶ್ಯಪ ಶಿಲ್ಪ, ಮಾನಸಾರ, ಶಿಲ್ಪರತ್ನ, ಧರಿತ್ರ ಸಮುಚ್ಛಯಗಳು ದಾಕ್ಷಿಣಾತ್ಯ ವಾಸ್ತುಶಿಲ್ಪ ಪರಂಪರೆಯನ್ನು ಸಾರಿ ಹೇಳುತ್ತವೆ. ಒಟ್ಟಾರೆ ಶೈಲಿ ಎಂಬುದು ದೇವಾಲಯಕ್ಕೆ, ವಾಸ್ತು ಕಟ್ಟಡಕ್ಕೆ ಸಂಬಂಧಿಸಿದ್ದು. ದೇವಾಲಯವೆಂಬುದು ಇದು ದೇವರ ಆಲಯ ಅಂದರೆ ದೇವರಿದ್ದ ಕಟ್ಟಡ ಶಿಲ್ಪ ಸಾಹಿತ್ಯದಲ್ಲಿ ದ್ರಾವಿಡ, ನಾಗರ, ವೇಸರ ಶೈಲಿಗಳೆಂದು ಪ್ರಮುಖವಾಗಿ ವರ್ಗೀಕರಿಸಲಾಗಿದೆ (ಗುರುರಾಜ ರಾವ್ ಬಿ.ಕೆ., ೧೯೯೪, ಪು. ೪೫). ಅಷ್ಟಕೋನಗಳುಳ್ಳ ಶಿಖರವನ್ನು ದ್ರಾವಿಡ ಶೈಲಿಯೆಂದು, ಆಯತಾಕಾರದ ಕಟ್ಟಡಗಳು ನಾಗರಶೈಲಿ ಎಂದು ಗಜಪೃಷ್ಠ ಅಥವಾ ವೃತ್ತಾಕಾರವನ್ನು ವೇಸರ ಶೈಲಿ ಎಂದು ಕರೆಯುತ್ತಾರೆ. ಕಟ್ಟಡಗಳಲ್ಲಿ ಮೂಲಭೂತ ಪ್ರತ್ಯೇಕ ಲಕ್ಷಣಗಳು ಕಂಡಾಗ ಸಾಂಪ್ರದಾಯಿಕ ಶೈಲಿಗಳನ್ನು ಹಿಡಿದು ಗುರುತಿಸಲಾಗುತ್ತದೆ. ಒಟ್ಟಾರೆ ದೇವಾಲಯಗಳನ್ನು ವಾಸ್ತುಶೈಲಿಯಿಂದ ಗುರುತಿಸುವ ಪದ್ಧತಿಯು ಬಗ್ಗೆ ಕೆಲವೊಮ್ಮೆ ಪ್ರಾದೇಶಿಕ ಶೈಲಿಯೂ ಸಮ್ಮಿಳಿತವಾಗಿರುವುದು ಕಂಡುಬರುತ್ತವೆ. ದೇವಾಲಯದ ನಿರ್ಮಾಣ ಸಂಸ್ಕೃತಿಯ ಅವಿಬಾಜ್ಯ ಅಂಗವೆಂದೆನಿಸಿದೆ. ದೇವಾಲಯದ ನಿರ್ಮಾಣ ಇಡೀ ಸಮಾಜದ ಧಾರ್ಮಿಕ ಭಕ್ತಿಯ ಪ್ರತೀಕವೆನಿಸಿದೆ. ಹಿಂದುಗಳು ದೇವಾಲಯವೆಂದು ಕರೆದರೆ, ಜೈನರು ಬಸದಿ ಎಂದು ಬೌದ್ಧರು ಚೈತ್ಯವೆಂದು ಹೆಸರಿಸುತ್ತಾರೆ. ಪ್ರಸ್ತುತ ಅಧ್ಯಯನ ಕುಮ್ಮಟದ ನಾಯಕರ ಕಾಲದ ವಾಸ್ತು ವಿಚಾರಕ್ಕೆ ಸೀಮಿತವಾದುದರಿಂದ ಈ ಒಂದು ಹಿನ್ನೆಲೆಯನ್ನು ಆಧರಿಸಿ ಕುಮ್ಮಟದ ನಾಯಕರ ಕಾಲದಲ್ಲಿನ ದೇವಾಲಯಗಳ ವಾಸ್ತುಶೈಲಿಯನ್ನು ಇಲ್ಲಿ ಪ್ರಸ್ತಾವನೆ ಮಾಡಲಾಗಿದೆ.

ಶೈವ ಪಂಥ ದೇವಾಲಯಗಳು

ಹೆಸರು	: ತ್ರಿಶಂಕೇಶ್ವರ ದೇವಾಲಯ
ಸ್ಥಳ	: ಬ್ರಹ್ಮಗಿರಿ ಬೆಟ್ಟದ ಮೇಲೆ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್
ಮುಖ	: ಪೂರ್ವ

ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: MAR, 1930, P. 25

ಗರ್ಭಗೃಹ ಅಂತರಾಳ ಹಾಗೂ ತೆರೆದ ನವರಂಗವಿದೆ. ನವರಂಗದ ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಷೋಡಶಾಸ್ತ್ರ, ಚಕ್ರಪೋದಿಗೆ ಘಂಟಾಪೋದಿಗೆಗಳನ್ನು ಒಳಗೊಂಡಿದೆ. ನವರಂಗದ ಛತ್ತಿನಲ್ಲಿ ಕಮಲವಿದೆ. ನೆಲದ ಮೇಲೆ ಚಂದ್ರಶಿಲೆ ಇದೆ. ಗಣೇಶನ ಶಿಲ್ಪವೊಂದು ನವರಂಗದಲ್ಲಿ ಇದೆ. ಅಂತರಾಳದಲ್ಲಿ ನಂದಿಯ ಶಿಲ್ಪವಿದೆ. ಅಂತರಾಳದ ದ್ವಾರಗಳಲ್ಲಿ ಶೈವ ದ್ವಾರ ಪಾಲಕರ ಶಿಲ್ಪಗಳಿವೆ. ದ್ವಾರವು ವಿವಿಧ ಶಾಖೆಗಳಿಂದ ಕೂಡಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದ ದ್ವಾರದಲ್ಲಿ ಶೈವ ದ್ವಾರ ಪಾಲಕರ ಶಿಲ್ಪಗಳಿವೆ. ದ್ವಾರದಲ್ಲಿ ಸ್ತಂಭಾಕೃತಿಗಳ ಅಲಂಕರಣವಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದಲ್ಲಿ ಕಪ್ಪು ಬಳಪದ ಪೀಠದ ಮೇಲೆ ಶಿವಲಿಂಗವಿದೆ. ಮೇಲ್ಛಾವಣಿಯಲ್ಲಿ ಕಮಲವಿದೆ.

ದೇವಾಲಯ ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಅಧಿಷ್ಠಾನವು ಉಪಾನ, ಜಗತಿ, ಕುಮುದ ಮುಂದೆ ಚಾಚಿರುವ ಕಂಠ ಹಾಗೂ ಕಪೋತವನ್ನು ಹೊಂದಿದೆ. ಭಿತ್ತಿಯೂ ಸರಳವಾಗಿದೆ, ಕದಂಬ ನಾಗರ ಶಿಖರವಿದ್ದು ಆರು ತಳಗಳನ್ನೊಳಗೊಂಡಿದೆ. ಶಿಖರದ ಮೇಲೆ ಸ್ತೂಪಿಯ ನಾಲ್ಕು ಮುಖಗಳಲ್ಲಿ ಫಲಕಗಳಿವೆ. ಶಿಖರ ಮುಂಭಾಗದಲ್ಲಿ ಶುಖನಾಸಿ ಇದೆ. ಈ ದೇವಾಲಯವನ್ನು ೧೩/೧೪ನೇ ಶತಮಾನದಲ್ಲಿ ನಿರ್ಮಿಸಲಾಗಿದೆ.

ಹೆಸರು	: ಅಕ್ಕ ತಂಗಿಯರ ದೇವಾಲಯ
ಸ್ಥಳ	: ಪೇಟೆ ಹೊಲ, ಹಾನೇಯ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: MAR, 1930, PP. 30-31.

ಬ್ರಹ್ಮಗಿರಿ ಬೆಟ್ಟದ ಪಶ್ಚಿಮ ದಿಕ್ಕಿನಲ್ಲಿರುವ ಹಾನೇಯದ ಪೇಟೆ ಹೊಲದಲ್ಲಿರುವ ಎರಡು ದೇವಾಲಯಗಳನ್ನು ಅಕ್ಕತಂಗಿಯರ ಗುಡಿಗಳೆಂದು ಕರೆಯಲಾಗುತ್ತದೆ. ಕದಂಬನಾಗರ ಶೈಲಿಯ ದೇವಾಲಯಗಳ ಶಿಖರಗಳಲ್ಲಿ ಆರು ತಳಗಳು ಇವೆ. ಪ್ರತಿತಳಗಳು ದಳಗಳಿಂದ ಅಲಂಕರಣಗೊಂಡಿವೆ. ಪ್ರತಿ ತಳಗಳ ಮಧ್ಯದಲ್ಲಿ ಕಂಠಭಾಗವಿದೆ. ಶಿಖರದ ಮೇಲೆ ಚತುರಾಶ್ರ ಸ್ತೂಪಿ ಇದ್ದು ಪ್ರತಿಮುಖದಲ್ಲಿ ಫಲಕಗಳಿವೆ. ಶುಖನಾಸಿಯು ಜೀರ್ಣವಾಗಿದೆ. ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಇದು ಹಂಪೆಯ ಹೇಮಕೂಟದಲ್ಲಿರುವ ಕಂಪಿಲರಾಯನ ದೇವಾಲಯ ಅಧಿಷ್ಠಾನದ ಮಾದರಿಯಲ್ಲಿದೆ. ಗರ್ಭಗೃಹ ಅಂತರಾಳ ಮತ್ತು ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗೃಹದ ದ್ವಾರದಲ್ಲಿ ಶೈವ ದ್ವಾರ ಪಾಲಕರ ಶಿಲ್ಪಗಳಿವೆ. ದ್ವಾರವು ವಿವಿಧ ಶಾಖೆಗಳಿಂದ ಕೂಡಿದ್ದು ಲತಾ ಪುಷ್ಪದ ಅಲಂಕರಣವಿದೆ ಹಾಗೂ ಸ್ತಂಭಾಕೃತಿಗಳು ಇವೆ. ದ್ವಾರದ ಲಲಾಟದಲ್ಲಿ

ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹ ಚೌಕಾಕಾರವಾಗಿದೆ. ಗರ್ಭಗೃಹದ ಭಿತ್ತಿಯಲ್ಲಿ ಮುಂದೆ ಶಿಲಾಪಟ್ಟಿಕೆ ಇದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಪದ್ಮವಿದೆ.

ಮುಖ ಮಂಟಪದಲ್ಲಿ ಹದಿನಾರು ಸ್ತಂಭಗಳಿವೆ. ಈ ಸ್ತಂಭಗಳು ಚತುರಾಶ್ರ, ಅಷ್ಟಚತುರಾಶ್ರಗಳಿಂದ ಕೂಡಿದ್ದು, ಸ್ತಂಭಗಳ ಮೇಲಿನ ಭಾಗವು ಅರ್ಧಘಟಾಕಾರದಲ್ಲಿದೆ ಅದರ ಮೇಲೆ ಚಕ್ರಬೋದಿಗೆ ಹಾಗೂ ಚತುರ್ಮುಖ ಬೋದಿಗೆಗಳಿಂದ ನಿರ್ಮಿತವಾಗಿದೆ. ದೇವಾಲಯದ ಮುಖಮಂಟಪದ ದಕ್ಷಿಣ ಭಾಗದಲ್ಲಿ ಕಕ್ಷಾಸನವಿದೆ.

ಹೆಸರು	: ಜಟಂಗ ರಾಮೇಶ್ವರ ದೇವಾಲಯ ಸಮುಚ್ಚಯ
ಸ್ಥಳ	: ಬೆಟ್ಟದ ಮೇಲೆ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: MAR, 1930, PP. 27-28.

ಜಟಂಗ ರಾಮೇಶ್ವರದಲ್ಲಿ ಹಿರೇ ಜಟಂಗ ರಾಮೇಶ್ವರ ಮತ್ತು ಚಿಕ್ಕ ಜಟಂಗ ರಾಮೇಶ್ವರ ಎಂಬ ಎರಡು ಸ್ಥಳಗಳಿವೆ. ಹಿರೇ ಜಟಂಗ ರಾಮೇಶ್ವರದ ದೇವಾಲಯವು ಕದಂಬ ನಾಗರ ಶೈಲಿಯಲ್ಲಿದೆ. ಗರ್ಭಗೃಹ ಅಂತರಾಳ ನವರಂಗ ಮತ್ತು ಮುಖಮಂಟಪವಿದೆ. ಈ ದೇವಾಲಯದ ಮುಖಮಂಟಪದಲ್ಲಿ ಹದಿನಾರು ಸ್ತಂಭಗಳಿವೆ. ಸ್ತಂಭಗಳು ಚತುರಾಶ್ರ ಅಷ್ಟಾಶ್ರ ಮತ್ತು ಚತುರಾಶ್ರ ಕೋನಾಕೃತಿ ಒಳಗೊಂಡಿದ್ದು ಅರ್ಧ ಘಂಟಾಕಾರ ಚಕ್ರಬೋದಿಗೆ ಹಾಗೂ ಘಂಟಾ ಬೋದಿಗೆಗಳಿಂದ ಕೂಡಿವೆ. ನವರಂಗ ಗರ್ಭಗೃಹದ ಮೇಲ್ಛಾವಣಿಯಲ್ಲಿ ಪದ್ಮಗಳಿವೆ. ನವರಂಗದ ನೆಲಭಾಗದಲ್ಲಿ ಚಂದ್ರಶಿಲೆ ಇದೆ. ನವರಂಗ ಮತ್ತು ಗರ್ಭಗೃಹದ ದ್ವಾರದಲ್ಲಿ ಶೈವದ್ವಾರ ಪಾಲಕರ ಶಿಲ್ಪಗಳಿವೆ. ದ್ವಾರ ವಿವಿಧ ಶಾಖೆಗಳಿಂದ ಕೂಡಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದಲ್ಲಿ ಚತುರಾಶ್ರ ಪೀಠದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಭಿತ್ತಿಯಲ್ಲಿ ಸ್ವಲ್ಪ ಮುಂದೆ ಬಂದಿರುವ ಶಿಲಾ ಪಟ್ಟಿಕೆಗಳಿವೆ. ಈ ದೇವಾಲಯದ ಸುತ್ತಲೂ ಪ್ರಾಕಾರವಿದೆ. ಪ್ರಾಕಾರದಲ್ಲಿ ಹಾಗೂ ಹೊರಭಾಗದಲ್ಲಿ ಅನೇಕ ಚಿಕ್ಕ ದೇವಾಲಯಗಳು ಇರುವುವು. ಈ ದೇವಾಲಯಗಳಿಗೆ ಗರ್ಭಗೃಹಗಳು ಮಾತ್ರವಿದ್ದು ಕದಂಬನಾಗರ ಶಿಖರಗಳಿವೆ.

ಜಟಂಗ ರಾಮೇಶ್ವರ ದೇವಾಲಯದ ಶಿಖರ ಕದಂಬನಾಗರ ಶೈಲಿಯಲ್ಲಿದ್ದು ಆರು ತಳಗಳಿಂದ ಕೂಡಿದೆ. ಶಿಖರದ ಮೇಲೆ ಸ್ತೂಪಿ ಇದೆ. ಶಿಖರದ ಮುಂದೆ ಶುಕನಾಸಿ ಇದೆ. ದೇವಾಲಯದಲ್ಲಿ ಗಣಪತಿ, ಚಾಮುಂಡಿ ಮತ್ತು ಮಹಿಷ ಮರ್ದಿನಿಯರ ಶಿಲ್ಪಗಳಿವೆ. ದೇವಾಲಯದ ಮುಂದೆ ಸುಮಾರು ೪೦ ಅಡಿಗಳಷ್ಟು ಎತ್ತರದ ದೀಪಸ್ತಂಭವಿದೆ.

ಹೆಸರು	: ಭೈರವ ದೇವಾಲಯ
ಸ್ಥಳ	: ಜಟಂಗ ರಾಮೇಶ್ವರ ದೇವಾಲಯದ ಆವರಣ, ಸಿದ್ದಾಪುರ, ಮೊಳಕಾಲ್ಮೂರು ತಾಲೂಕು ಚಿತ್ರದುರ್ಗ ಜಿಲ್ಲೆ.

ಶಿಲಾವಸ್ತು : ಗ್ರಾನೈಟ್

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : MAR, 1930, P. 29

ಒಂದಂಕಣದ ದೊಡ್ಡ ಮಂಟಪದಲ್ಲಿ ಭೈರವ ಮೂರ್ತಿ ಇದೆ. ಈ ಮಂಟಪವನ್ನು ಭೈರವ ದೇವರ ಗುಡಿ ಎಂದು ಕರೆಯಲಾಗಿದೆ.

ಹೆಸರು : ಅರ್ಕೇಶ್ವರ ಗುಡಿ

ಸ್ಥಳ : ಜಟಂಗ ರಾಮೇಶ್ವರ ದೇವಾಲಯದ ಆವರಣ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.

ಶಿಲಾವಸ್ತು : ಗ್ರಾನೈಟ್ ಶಿಲೆ

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : MAR, 1930, P. 29

ಚಿಕ್ಕದಾದ ಗುಡಿಗೆ ಇಟ್ಟಿಗೆ ಗಾರೆಯಿಂದ ಕದಂಬನಾಗರ ಶೈಲಿಯ ಶಿಖರವನ್ನು ರಚಿಸಲಾಗಿದೆ. ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ, ದ್ವಾರಗಳು ಸರಳವಾಗಿವೆ. ಗರ್ಭಗೃಹದಲ್ಲಿ ಅಷ್ಟಾಶ್ರ ಪೀಠದ ಮೇಲೆ ಶಿವಲಿಂಗವಿದೆ.

ಹೆಸರು : ಜಂಬುಕೇಶ್ವರ ದೇವಾಲಯ

ಸ್ಥಳ : ಜಟಂಗ ರಾಮೇಶ್ವರ ದೇವಾಲಯದ ಆವರಣ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.

ಶಿಲಾವಸ್ತು : ಗ್ರಾನೈಟ್

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : MAR, 1930, P. 29

ಚಿಕ್ಕದಾದ ಮಂಟಪದಲ್ಲಿ ಶಿವಲಿಂಗವಿದೆ. ಇದನ್ನು ಜಂಬುಕೇಶ್ವರ ಗುಡಿ ಎಂದು ಕರೆಯಲಾಗಿದೆ. ಈ ಗುಡಿಯಲ್ಲಿ ಸಪ್ತ ಮಾತೃಕೆಯರ ಶಿಲ್ಪವೂ ಇದೆ. ಈ ಶಿಲ್ಪ ಪಟ್ಟಿಕೆಯು ಭಾಗಶಃ ಭಗ್ನವಾಗಿದೆ.

ಹೆಸರು : ವೀರಭದ್ರ ದೇವಾಲಯ

ಸ್ಥಳ : ಜಟಂಗ ರಾಮೇಶ್ವರ ದೇವಾಲಯದ ಆವರಣ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.

ಶಿಲಾವಸ್ತು : ಗ್ರಾನೈಟ್

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : MAR, 1930, P. 28

ವೀರಭದ್ರ ದೇವಾಲಯಕ್ಕೆ ಗರ್ಭಗೃಹ ಮತ್ತು ಅರ್ಧಮಂಟಪವಿದೆ. ಗರ್ಭಗೃಹದ ಮೇಲೆ ಕದಂಬನಾಗರ ಶಿಖರ ಮತ್ತು ಶಿಖರದ ಮುಂದೆ ಶುಖನಾಸಿ ಇದೆ. ಗರ್ಭಗೃಹದ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದಲ್ಲಿ ಸುಮಾರು ಐದು ಅಡಿಗಳಷ್ಟು ಎತ್ತರದ ವೀರಭದ್ರ ಶಿಲ್ಪವಿದೆ.

ಹೆಸರು : ಪಂಪಾಪತಿ ದೇವಾಲಯ

ಸ್ಥಳ : ಜಟಿಂಗ ರಾಮೇಶ್ವರ ದೇವಾಲಯದ ಆವರಣ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.

ಶಿಲಾವಸ್ತು : ಗ್ರಾನೈಟ್

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : MAR, 1930, P. 28

ದೇವಾಲಯಕ್ಕೆ ಕದಂಬನಾಗರ ಶೈಲಿಯ ಶಿಖರವಿದ್ದು, ಗರ್ಭಗೃಹ ಮಾತ್ರವಿದೆ. ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಈ ದೇವಾಲಯವನ್ನು ಪಂಪಾಪತಿ ಗುಡಿ ಎಂದು ಕರೆಯುತ್ತಾರೆ.

ಹೆಸರು : ರಾಮೇಶ್ವರ ದೇವಾಲಯ

ಸ್ಥಳ : ದೊರವದಿ ಕೋಟೆಯಲ್ಲಿರುವ ದರೋಜಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ

ಶಿಲಾವಸ್ತು : ಗ್ರಾನೈಟ್ ಶಿಲೆ

ಮುಖ : ಉತ್ತರ

ಕಾಲ : ಕ್ರಿ.ಶ. ೧೨ನೇಶತಮಾನ

ಉಲ್ಲೇಖ : VPR, 1988-91, PP. 245-46

ರಾಮೇಶ್ವರ ದೇವಾಲಯ ಗರ್ಭಗೃಹ ಮತ್ತು ಮುಖ ಮಂಟಪಗಳನ್ನು ಹೊಂದಿದ್ದು, ಗರ್ಭಗೃಹದ ಮುಂದೆ ಅರ್ಧಮಂಟಪವಿದೆ. ದೇವಾಲಯದ ಸುತ್ತಲೂ ಅಧಿಷ್ಠಾನವಿದ್ದು ಅಧಿಷ್ಠಾನವು ಉಪಾನ, ಜಗತಿ, ಕುಮುದ, ತ್ರಿಪಟ್ಟ ಕುಮುದ ಮತ್ತು ಕಪೋತದ ಭಾಗಗಳನ್ನು ಹೊಂದಿದೆ. ದೇವಾಲಯದ ಗರ್ಭಗೃಹ ಮತ್ತು ಅರ್ಧಮಂಟಪ ಭಿತ್ತಿಯು ಕೂಡ್ಯ ಸ್ತಂಭಗಳಿಂದ

ಅಲಂಕರಣಗೊಂಡಿದೆ. ಗರ್ಭಗೃಹದ ಮೇಲಿರುವ ಶಿಖರದ ಅರ್ಧಭಾಗವು ನಶಿಸಿದೆ. ಉಳಿದ ಭಾಗವು ಕದಂಬನಾಗರ ಶೈಲಿಯಲ್ಲಿದ್ದು ಸರಳವಾಗಿದೆ. ಗರ್ಭಗೃಹದ ಪಶ್ಚಿಮದಿಕ್ಕಿನ ಅಧಿಷ್ಠಾನದಲ್ಲಿ ಪ್ರಣಾಳವಿದೆ. ಮುಖ ಮಂಟಪದ ಭಾಗದಲ್ಲಿ ಸರಳವಾದ ಅಧಿಷ್ಠಾನ ಭಿತ್ತಿ ಸೇರ್ಪಡೆಯಾಗಿದೆ.

ಈ ದೇವಾಲಯವನ್ನು ಕ್ರಿ.ಶ. ೧೧೦೫ರಲ್ಲಿ ಮಹಾ ಮಂಡಳೇಶ್ವರ ಕಾಚರಸನು ದೊರವಡಿ ಕೋಟೆಯ ರಾಮೇಶ್ವರ ದೇವರಿಗೆ ಭೂಮಿದಾನವನ್ನು ಮಾಡಿ ಜೀರ್ಣೋದ್ಧಾರ ಮಾಡಿರುವನೆಂದು ಈ ದೇವಾಲಯದ ಸ್ತಂಭದ ಮೇಲಿರುವ ಶಾಸನ ಉಲ್ಲೇಖಿಸುತ್ತದೆ.

ದೇವಾಲಯದ ಮುಖ ಮಂಟಪದಲ್ಲಿ ಮುಂದೆ ನಾಲ್ಕು ಸ್ತಂಭಗಳಿವೆ. ಈ ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಕೋನಾಕೃತಿಯಲ್ಲಿವೆ. ಮೇಲೆ ಚೌಕಬೋದಿಗೆ ಹಾಗೂ ಚತುರ್ಮುಖ ಬೋದಿಗೆಯನ್ನೊಳಗೊಂಡಿದೆ. ಹಿಂದಿನ ನಾಲ್ಕು ಸ್ತಂಭಗಳು ದೇವಾಲಯದ ಭಿತ್ತಿಯಲ್ಲಿ ಸೇರಲ್ಪಟ್ಟಿವೆ. ಅರ್ಧಮಂಟಪದ ಛತ್ತಿನಲ್ಲಿ ದ್ವಿವೃತ್ತ ಕಮಲವಿದೆ. ಗರ್ಭಗೃಹದ ದ್ವಾರವು ಸರಳವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹ ಚೌಕಾಕಾರವಾಗಿದೆ. ಮಧ್ಯದಲ್ಲಿ ಚತುರಾಶ್ರ ಪೀಠದ ಮೇಲೆ ಚಿಕ್ಕದಾದ ಲಿಂಗವಿದೆ. ಪೀಠವು ಮೂರು ಹಂತಗಳಲ್ಲಿದ್ದು, ಮೇಲಿನ ಭಾಗದಲ್ಲಿ ಪ್ರನಾಳವಿದೆ. ಮೇಲ್ಛಾವಣಿಯಲ್ಲಿ ಪದ್ಮವಿದೆ.

ಮುಖಮಂಟಪದ ಸ್ತಂಭಗಳು ಹಾಗೂ ಮೂಲದೇವಾಲಯದ ಸ್ತಂಭದ ಆಕಾರಗಳಲ್ಲಿ ವ್ಯತ್ಯಾಸವಿದೆ. ದೇವಾಲಯದ ಮುಂದೆ ಈಶಾನ್ಯ ದಿಕ್ಕಿನಲ್ಲಿ ಸ್ವಾಭಾವಿಕ ನೀರಿನ ಕೊಳವಿದೆ. ಕೊಳದಲ್ಲಿ ಬಂಡೆಯ ಮೇಲೆ ವೀರಭದ್ರದೇವರ ರೇಖಾ ಚಿತ್ರವಿದೆ. ದೇವಾಲಯದ ಮಂದೆ ಬಂಡೆಯ ಮೇಲೆ ಕಮಲ ಪುಷ್ಪದ ರೇಖಾ ಚಿತ್ರಣವಿದೆ. ದೇವಾಲಯದ ಹಿಂದೆ ಬಂಡೆಯ ಮೇಲೆ ಎರಡು ಕಡೆ ಪಾದಗಳ ಶಿಲ್ಪಗಳಿವೆ. ಒಂದು ಜೊತೆ ಪಾದಗಳು ರೇಖಾಚಿತ್ರದಲ್ಲಿದ್ದು ವೃತ್ತದಲ್ಲಿ ನಿರ್ಮಿಸಲಾಗಿದೆ. ಇನ್ನೊಂದೆಡೆ ಪಾದಗಳನ್ನು ಪೂರ್ಣವಾಗಿ ನಿರ್ಮಿಸಲಾಗಿದೆ.

ಹೆಸರು	: ಸೋಮೇಶ್ವರ ದೇವಾಲಯ
ಸ್ಥಳ	: ಕೆರೆಯ ಬಳಿ, ಕಂಪಲಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೨ನೇ ಶತಮಾನ

ಸೋಮೇಶ್ವರ ದೇವಾಲಯ ಗರ್ಭಗೃಹ ಅಂತರಾಳ ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಅಧಿಷ್ಠಾನದ ಉಪಾನ, ಜಗತಿ, ಕುಮುದ ಭಾಗಗಳು ನೆಲದಲ್ಲಿ ಮುಚ್ಚಿವೆ. ದೇವಾಲಯದ ಭಿತ್ತಿಯು ಕೂಡ್ಯ ಸ್ತಂಭಗಳಿಂದ ಅಲಂಕೃತ

ಗೊಂಡಿದೆ. ಗರ್ಭಗೃಹದ ಮೇಲೆ ದ್ರಾವಿಡ ವಿಮಾನ ಶಿಖರವಿದೆ. ಶಿಖರವು ದ್ವಿ ತಳಗಳಿಂದ ಕೂಡಿದೆ. ಶಿಖರವನ್ನು ಇಟ್ಟಿಗೆ ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಶಿಖರ ಮತ್ತು ಸ್ತೂಪಿಯ ಮಧ್ಯದಲ್ಲಿ ಫಲಕವಿದೆ. ಮೇಲ್ಭಾಗದಲ್ಲಿ ಚತುರಾಶ್ರ ಸ್ತೂಪಿ ಇದ್ದು ಮುಂಭಾಗಗಳಲ್ಲಿ ಫಲಕಗಳಿವೆ. ಸ್ತೂಪಿಯ ಮೂಲೆಗಳಲ್ಲಿ ಲತಾಪುಷ್ಪಗಳ ಅಲಂಕರಣವಿದೆ. ಶಿಖರದಲ್ಲಿ ಕೋಷ್ಠಗಳಿದ್ದು, ಕೋಷ್ಠಗಳಲ್ಲಿ ಗಾರೆ ಶಿಲ್ಪಗಳಿವೆ. ಶಿಲ್ಪಗಳು ಈಗ ಬಹಳಷ್ಟು ಭಗ್ನಗೊಂಡಿವೆ.

ಮುಖ ಮಂಟಪ ಮತ್ತು ನವರಂಗದಲ್ಲಿ ವಿವಿಧ ಆಕಾರದ ಸ್ತಂಭಗಳಿವೆ. ಬಹುಶಃ ವಿವಿಧ ಕಾಲಮಾನದಲ್ಲಿ ದೇವಾಲಯವು ಜೀರ್ಣೋದ್ಧಾರವಾಗಿದೆ. ಗರ್ಭಗೃಹದಲ್ಲಿ ಸೋಮೇಶ್ವರ ದೇವರ ಶಿಲ್ಪವಿದೆ. ಮೂಲಶಿಲ್ಪವು ಭಗ್ನಗೊಂಡಿದ್ದು ನೂತನ ಶಿಲ್ಪವನ್ನು ಸ್ಥಾಪಿಸಲಾಗಿದೆ. ಮೂಲ ಶಿಲ್ಪವನ್ನು ಅಂತರಾಳದಲ್ಲಿ ಇಡಲಾಗಿದೆ. ನವರಂಗದಲ್ಲಿ ವೀರಗಲ್ಲು ಕುಮಾರರಾಮನ ಮುಖ, ಕುಮಾರರಾಮನ ಶಿಲ್ಪವಿರುವ ಸ್ತಂಭ ಮತ್ತು ಅನಂತಶಯನ ಶಿಲ್ಪಗಳಿವೆ. ನವರಂಗದ ಛತ್ತು ಅಷ್ಟಾವರಣದಲ್ಲಿದ್ದು ಸಪಾಟಾಗಿದೆ. ಜೀರ್ಣೋದ್ಧಾರ ಸಮಯದಲ್ಲಿ ಮೂಲ ವಸ್ತುಗಳನ್ನು ಬದಲಾಯಿಸಿರಬಹುದು.

ಹೆಸರು	: ಶಿವಾಲಯ (ಪಂಚಲಿಂಗೇಶ್ವರ)
ಸ್ಥಳ	: ವಿರೂಪಾಕ್ಷ ದೇವಾಲಯದ ಪಶ್ಚಿಮಕ್ಕೆ ನದಿ ತೀರದಲ್ಲಿ, ಹಂಪೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩ನೇ ಶತಮಾನ

ದೇವಾಲಯದ ಅಧಿಷ್ಠಾನ ಉಪಾನ, ಜಗತಿ, ಕುಮುದ, ಮಸೂರ ಕುಮುದ ಕಂಠ, ದಳಯುಕ್ತ ಕಪೋತ (ಮೇಲ್ಭಾಗದಲ್ಲಿ) ಗಳನ್ನೊಳಗೊಂಡಿದ್ದು, ನವರಂಗ ಮತ್ತು ಸಭಾಮಂಟಪದ ಅಧಿಷ್ಠಾನವು ಸರಳವಾಗಿದೆ. ಭಿತ್ತಿಯೂ ಸರಳವಾಗಿದ್ದು ಅಂತರಾಳದ ಭಿತ್ತಿಯು ಗರ್ಭಗೃಹದ ಭಿತ್ತಿಗಿಂತ ಸ್ವಲ್ಪ ಕಿರಿದಾಗಿದೆ. ಭಿತ್ತಿಯ ಮೇಲೆ ಮುಂದೆ ಬಾಗಿರುವ ಪ್ರಸ್ತರವಿದೆ. ಫಾಂಸನ ಶೈಲಿಯ ಶಿಖರವು ಶಿಥಿಲವಾಗಿದ್ದು ಆರು ತಳಗಳಿಂದ ಕೂಡಿದೆ. ಪ್ರತಿಯೊಂದು ತಳಕ್ಕೂ ಕಂಠಗಳಿವೆ. ತಳಗಳು ದಳಯುಕ್ತ ಕಪೋತಗಳ ಮಾದರಿಯಲ್ಲಿವೆ.

ನವರಂಗವು ಹದಿನಾರು ಸ್ತಂಭಗಳಿಂದ ಕೂಡಿದ್ದು, ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ಸ್ತಂಭಗಳು ಚತುರಾಶ್ರ ಪೀಠದ ಮೇಲೆ ಇದ್ದು, ಚತುರಾಶ್ರ, ಅಷ್ಟಾಶ್ರ ಕೋನಗಳಿಂದ ಕೂಡಿದೆ. ಮೇಲೆ ಅರ್ಧ ಘಟಾಕೃತಿ, ಅದರ ಮೇಲೆ ಚಕ್ರ ಬೋದಿಗೆ, ಪುಷ್ಪ ಬೋದಿಗೆಗಳಿಂದ ಕೂಡಿವೆ. ಉಳಿದ ಹನ್ನೆರಡು ಸ್ತಂಭಗಳು ಸರಳವಾಗಿವೆ. ಸ್ತಂಭಗಳು ಚತುರಾಶ್ರವಾಗಿದ್ದು ಪೀಠದ ಮೇಲೆ ಸ್ಥಾಪಿತವಾಗಿವೆ. ನವರಂಗದ ಸುತ್ತಲೂ ಕಕ್ಷಾಸನವಿದೆ. ಈ ಹನ್ನೆರಡು ಸ್ತಂಭಗಳು ಕಕ್ಷಾಸನದಲ್ಲಿ ಸೇರಿಕೊಂಡಿವೆ. ನವರಂಗದ ಬಲಭಾಗದಲ್ಲಿ (ಅಂತರಾಳದ ಮುಂಭಾಗದಲ್ಲಿ) ಪ್ರಸ್ತುತ ಭಗ್ನವಾಗಿರುವ ಪೀಠದ ಭಾಗಗಳನ್ನು ಇರಿಸಲಾಗಿದ್ದು

ಪೀಠದಲ್ಲಿ ಐದು ವೃತ್ತಾಕಾರದ ರಂಧ್ರಗಳಿವೆ. ನವರಂಗದ ಛತ್ತಿನಲ್ಲಿ ಅಷ್ಟಾಶ್ರ ಕೋನದ ಮಧ್ಯದಲ್ಲಿ ಏಕವೃತ್ತ ಕಮಲದ ಶಿಲ್ಪವಿದೆ.

ಅಂತರಾಳದ ದ್ವಾರವು ಸರಳವಾದ ಪಂಚ ಶಾಖೆಗಳಿಂದ ಕೂಡಿದ್ದು ಲಲಾಟದವರೆಗೂ ಶಾಖೆಗಳು ಮುಂದುವರಿದಿವೆ. ಲಲಾಟ ಚೌಕಾಕಾರವಾಗಿದ್ದು ಮೂಲ ರೂಪದಲ್ಲಿರುವುದು ವಿಶೇಷತೆ. ಅಂತರಾಳದ ಒಳಭಾಗವು ಸರಳವಾಗಿದ್ದು ಛತ್ತಿನಲ್ಲಿ ತ್ರಿವೃತ್ತ ಕಮಲದ ಶಿಲ್ಪವಿದೆ. ಗರ್ಭಗೃಹದ ದ್ವಾರವು ಸರಳವಾದ ಐದು ಶಾಖೆಗಳಿಂದ ಕೂಡಿದ್ದು ಲಲಾಟದವರೆಗೂ ಮುಂದುವರಿದಿದೆ. ಚೌಕಾಕಾರದ ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಗಜಲಕ್ಷ್ಮಿಯ ಶಿಲ್ಪವಿದೆ. ಬದಿಯಲ್ಲಿ ಎರಡು ಆನೆಗಳು ಹಿಂದಿನ ಕಾಲುಗಳ ಮೇಲೆ ನಿಂತು ಲಕ್ಷ್ಮಿಯ ಮೇಲ್ಭಾಗದಲ್ಲಿ ಬಾಗಿ ಕುಂಬಗಳನ್ನು ಹಿಡಿದು ನೀರನ್ನು ಎರೆಯುತ್ತಿವೆ. ಗರ್ಭಗೃಹದ ಒಳಭಾಗದಲ್ಲಿ ಹೊಸದಾಗಿ ಕಟ್ಟಲಾದ ಕಟ್ಟೆ ಇದ್ದು ಅದರ ಮೇಲೆ ಗಣೇಶನ ಶಿಲ್ಪ ಇದೆ. ಛತ್ತಿನಲ್ಲಿ ತ್ರಿವೃತ್ತ ಕಮಲವಿದೆ.

ಸಭಾಮಂಟಪ ನವರಂಗದ ಮುಂಭಾಗದಲ್ಲಿದ್ದು ಪೂರ್ವಪಶ್ಚಿಮವಾಗಿ 9 x 5 ಉತ್ತರ ದಕ್ಷಿಣವಾಗಿ ೪೫ (ನಲವತ್ತೈದು) ಸ್ತಂಭಗಳಿಂದ ನಿರ್ಮಿಸಲಾಗಿದ್ದು ಮಧ್ಯದಲ್ಲಿ ತಗ್ಗಾಗಿದೆ. ತಗ್ಗಾಗಿರುವ ಸ್ಥಳವು ಆಯತಾಕಾರದಲ್ಲಿದ್ದು ಸುತ್ತಲೂ ಒಳಭಾಗದಲ್ಲಿ ಅಧಿಷ್ಠಾನವಿದ್ದು ಕುಮುದ, ಕಂಠ, ಕಪೋತಗಳಿವೆ. ಈ ಸಭಾಮಂಟಪದ ಪೂರ್ವಭಾಗದಲ್ಲಿ ನಂದಿ ಮೂರ್ತಿ ಶಿಲ್ಪವಿದೆ. ಒಟ್ಟಾರೆ ಸಭಾಮಂಟಪವು ೩೨ (ಮುವತ್ತೆರಡು) ಅಂಕಣಗಳಿಂದ ಕೂಡಿದೆ. ಸಭಾಮಂಟಪವನ್ನು ದೇವಾಲಯ ನಿರ್ಮಾಣವಾದ ನಂತರ ಸೇರ್ಪಡೆ ಮಾಡಲಾಗಿದೆ. ಕಾರಣ ದೇವಾಲಯ ನವರಂಗದ ಮುಂದಿನ ಮೇಲ್ಭಾಗದಲ್ಲಿ ಛಜ್ಜವಿದ್ದು, ಅದರ ಮುಂದೆ ಸಭಾಮಂಟಪವನ್ನು ನಿರ್ಮಿಸಲಾಗಿದೆ. ಈ ರೀತಿಯನ್ನು ಹೋಲುವ ಸಭಾಮಂಟಪವಿರುವ ದೇವಾಲಯವು ಗದಗ ಜಿಲ್ಲೆಯ ಮುಳಗುಂದದಲ್ಲಿನ ಸಿದ್ದೇಶ್ವರ ದೇವಾಲಯದಲ್ಲಿದೆ.

ಈ ದೇವಾಲಯವು ಪಂಚಲಿಂಗ ದೇವಾಲಯವಾಗಿದೆ. ಏಕೆಂದರೆ ನವರಂಗದಲ್ಲಿರುವ ಭಗ್ನವಾಗಿರುವ ಪೀಠದಲ್ಲಿ ಐದು ವೃತ್ತಾಕಾರದ ರಂಧ್ರಗಳಿವೆ ದೇವಾಲಯದ ಶಿಖರ, ಗರ್ಭಗೃಹ, ಅಂತರಾಳದ ಭಾಗಗಳು ಅತ್ಯಂತ ಸೂಕ್ಷ್ಮವಾಗಿ ಮತ್ತು ನಯವಾಗಿ ನಿರ್ಮಿತವಾಗಿದೆ.

ಹೆಸರು	: ಪಾತಾಳೇಶ್ವರ ದೇವಾಲಯ
ಸ್ಥಳ	: ವಿರೂಪಾಕ್ಷ ದೇವಾಲಯ ದಕ್ಷಿಣ ದಿಕ್ಕಿನ ಮಂಟಪದಲ್ಲಿ ಹಂಪಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಈಶಾನ್ಯ ದಿಕ್ಕು
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ

ಪಾತಾಳೇಶ್ವರನೆಂದು ಕರೆಯುವ ಈ ದೇವಾಲಯವು ನೆಲಮಟ್ಟದಿಂದ ಸುಮಾರು ೮-೧೦ ಅಡಿಗಳಷ್ಟು ಕೆಳಭಾಗದಲ್ಲಿದೆ. ವಿರೂಪಾಕ್ಷ ದೇವಾಲಯದ ಅಡುಗೆ ಶಾಲೆಯ ಬಳಿಯಲ್ಲಿರುವ ಈ ದೇವಾಲಯಕ್ಕೆ ಕೆಳಗೆ ಇಳಿದು ಹೋಗಲು ಸೋಪಾನಗಳಿವೆ ಮೇಲ್ಭಾಗದಲ್ಲಿ ಮಾರ್ಗಕ್ಕೆ ಎದುರಾಗಿ ನಂದಿಯ ಶಿಲ್ಪವಿದೆ. ದೇವಾಲಯದ ಗರ್ಭಗೃಹದ ಮೇಲ್ಭಾಗವ ಮೂರು ಅಡಿಗಳಷ್ಟು ನೆಲದಿಂದ ಮೇಲೆ ಇದೆ. ಸೋಪಾನದಿಂದ ಕೆಳಗೆ ಇಳಿದು ಹೋದಾಗ ಗರ್ಭಗೃಹಕ್ಕೆ ತಲುಪುವುದು ಗರ್ಭಗೃಹವು ಚೌಕಾಕಾರವಾಗಿದೆ. ಸರಳವಾದ ನಾಲ್ಕು ಸ್ತಂಭಗಳು ನಾಲ್ಕು ಮೂಲೆಗಳಲ್ಲಿನ ಭಿತ್ತಿಯಲ್ಲಿ ಸೇರಿಸಲ್ಪಟ್ಟಿವೆ. ಭಿತ್ತಿಯಲ್ಲಿ ಮುಂಚಾಚಿರುವ ಶಿಲಾಪಟ್ಟಿಕೆಗಳು ದಕ್ಷಿಣ ಮತ್ತು ಪೂರ್ವಭಾಗದಲ್ಲಿವೆ. ಈ ಪಟ್ಟಿಕೆಗಳು ಕಪೋತಾಕಾರವಾಗಿದ್ದು ಪದ್ಮದಳಗಳ ಅಲಂಕರಣವಿದೆ. ಒಳಮಾಳಿಗೆಯು ಸರಳವಾಗಿದೆ. ಗರ್ಭಗೃಹದಲ್ಲಿ ಚತುರಾಶ್ರ ಪೀಠದ ಮೇಲೆ ಲಿಂಗವಿದೆ. ಪೀಠದ ಪ್ರನಾಳವು ಎಡ ಮುಖವಾಗಿದೆ.

ಹೆಸರು	: ಪಂಪಾಪತಿ ದೇವಾಲಯ
ಸ್ಥಳ	: ಚಿಕ್ಕಬೆಟ್ಟದ ಮೇಲೆ ಅಂಜನಾದ್ರಿ ಬೆಟ್ಟದ ಈಶಾನ್ಯಕ್ಕೆ ಚಿಕ್ಕರಾಂಪುರ, (ಆನೆಗೊಂದಿ ಪಶ್ಚಿಮಕ್ಕೆ) ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ

ಪಂಪಾಪತಿ ದೇವಾಲಯ ಕದಂಬನಾಗರ (ಫಾಂಸನ) ಶೈಲಿಯಲ್ಲಿದೆ. ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಒಳಗೊಂಡಿದೆ. ಆದರೆ ದೇವಾಲಯದ ದ್ವಾರವು ಉತ್ತರ ದಿಕ್ಕಿಗೆ ಇರುವುದು. ದೇವಾಲಯದ ಅಧಿಷ್ಠಾನವು ಸರಳವಾಗಿದ್ದು, ಕುಮುದ ಕಂಠ, ಕಪೋತದ ಭಾಗಗಳಿವೆ, ಸರಳವಾದ ಭಿತ್ತಿ ಇದೆ. ಭಿತ್ತಿಯ ಮೇಲ್ಭಾಗ ಹಾಗೂ ಛಜ್ಜದ ಕೆಳಭಾಗದಲ್ಲಿ ಚೌಕಾಕಾರದ ಮತ್ತು ಚೌಕೋನಗಳ ಆಕಾರದಲ್ಲಿ ಜಾಲಂಧ್ರಗಳು ದಕ್ಷಿಣ ಮತ್ತು ಪೂರ್ವಭಾಗದ ಭಿತ್ತಿಗಳಿವೆ. ಶಿಖರವು ಫಾಂಸನ ಶೈಲಿಯಲ್ಲಿದ್ದು ವಿವಿಧ ತಳಗಳಿಂದ ನಿರ್ಮಾಣವಾಗಿದ್ದು ಪ್ರತಿ ತಳದಲ್ಲೂ ಪದ್ಮದಳಗಳ ಅಲಂಕಾರವಿದೆ. ಶಿಖರದ ಮೇಲ್ಭಾಗದಲ್ಲಿ ಚತುರಾಶ್ರ ಸ್ತೂಪಿ ಇದೆ. ದ್ವಾರವು ಉತ್ತರ ದಿಕ್ಕಿಗೆ ಇದ್ದು ದ್ವಾರದ ಮುಂದೆ ಎರಡು ಚತುರಾಶ್ರ ಸ್ತಂಬಗಳಿಂದ ನಿರ್ಮಾಣ ಮಾಡಿದ ಮುಖ ಮಂಟಪವಿದೆ. ದ್ವಾರದಲ್ಲಿ ಶೈವ ದ್ವಾರಪಾಲಕರಿರುವರು. ದ್ವಾರಪಾಲಕರು ತ್ರಿಶೂಲ, ಡಮರು, ಗದೆ ಹಾಗೂ ಅಭಯ ಹಸ್ತಗಳನ್ನು ಹೊಂದಿರುವರು. ದ್ವಾರದ ಮೇಲೆ ಛಜ್ಜವಿದೆ. ಛಜ್ಜದ ಮೇಲೆ ಪದ್ಮದಳಗಳಿವೆ. ಮುಂಭಾಗದಲ್ಲಿ ಕಕ್ಷಾಸನವಿದೆ. ದ್ವಾರ ಎರಡು ಶಾಖೆಗಳಿಂದ ಕೂಡಿದ್ದು ಲಲಾಟದಲ್ಲಿ ಕಮಲವಿದೆ.

ನವರಂಗವು ಹದಿನಾರು ಸ್ತಂಭಗಳಿಂದ ನಿರ್ಮಾಣವಾಗಿದೆ. ಮಧ್ಯದಲ್ಲಿ ನಾಲ್ಕು ಸ್ತಂಭಗಳು ಇವೆ. ಹನ್ನೆರಡು ಸ್ತಂಭಗಳು ಭಿತ್ತಿಯಲ್ಲಿ ಸೇರಿಕೊಂಡಿದೆ. ಅವುಗಳು ಚತುರಾಶ್ರ ಕೋನಗಳಲ್ಲಿದ್ದು ಸರಳವಾಗಿವೆ. ನವರಂಗ ಮಧ್ಯದ ನಾಲ್ಕು ಸ್ತಂಭಗಳು

ಚತುರಾಶ್ರ, ಅಷ್ಟಾಶ್ರ, ಷೋಡಶಾಶ್ರ ಕೋನಗಳಲ್ಲಿದ್ದು ಮೇಲ್ಭಾಗವು ಅರ್ಧ ಘಟಾಕಾರ, ಅದರ ಮೇಲೆ ಚಕ್ರ ಪೋಟಿಗೆ, ಘಂಟಾ ಪೋದಿಗೆ ಮತ್ತು ಚತುರ್ಮುಖ ಬೋದಿಗೆಗಳಿವೆ. ನವರಂಗದ ಒಳಮಾಳಿಗೆಯಲ್ಲಿ ಅಷ್ಟಕೋನಗಳ (ಅಷ್ಟಾವರಣ) ಮಧ್ಯದಲ್ಲಿ ತ್ರಿವೃತ್ತ ಪದ್ಮವಿದೆ. ನವರಂಗದ ಭಿತ್ತಿಗೆ ಹೊಂದಿಕೊಂಡಂತೆ ಒಳಭಾಗದ ಸುತ್ತಲೂ ಸರಳ ಕಕ್ಷಾಸನವಿದೆ. ಅಂತರಾಳದ ದ್ವಾರವು ಸರಳವಾಗಿದ್ದು ದ್ವಿಶಾಖೆಗಳಿಂದ ಕೂಡಿದ್ದು ಲಲಾಟದಲ್ಲಿ ಚೌಕಾಕಾರವಿದೆ. ಅಂತರಾಳವು ಚೌಕಾಕಾರವಾಗಿದೆ. ಒಳಮಾಳಿಗೆಯಲ್ಲಿ ಅಷ್ಟಾವರಣದಲ್ಲಿರುವ ತ್ರಿಪಟ್ಟ ಪದ್ಮವಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಪಶ್ಚಿಮ ಮತ್ತು ಉತ್ತರ ಭಾಗದ ಭಿತ್ತಿಗಳಲ್ಲಿ ಮುಂಚಾಚಿರುವ ಪಟ್ಟಿಕೆಗಳು ಇವೆ. ಈ ಪಟ್ಟಿಕೆಗಳು ಕಪೋತದ ಆಕಾರದಲ್ಲಿದ್ದು ಪದ್ಮಗಳಗಳಿಂದ ಅಲಂಕರಣಗೊಂಡಿದೆ. ಈ ಪಟ್ಟಿಕೆಗಳು ಪೂಜಾ ಸಾಮಗ್ರಿಗಳನ್ನು ಇರಿಸಲು ಉಪಯುಕ್ತವಾಗಿವೆ. ಗರ್ಭಗೃಹದ ಒಳಮಾಳಿಗೆಯಲ್ಲಿ ಅಷ್ಟಾವರಣದಲ್ಲಿ ತ್ರಿವೃತ ಪದ್ಮವಿದೆ.

ಅಂತರಾಳದಲ್ಲಿ ಗಣೇಶ ಹಾಗೂ ಆಂಜನೇಯನ ಚಿಕ್ಕ ಶಿಲ್ಪಗಳಿರುವವು. ನವರಂಗದ ಕಕ್ಷಾಸನದ ಮೇಲೆ ದಕ್ಷಿಣ ಬದಿಯಲ್ಲಿ ಕುದುರೆಯ ಮೇಲೆ ಕುಳಿತ ಖಡ್ಗದಾರಿ ವ್ಯಕ್ತಿಯ ಶಿಲ್ಪವಿದೆ. (ಕುಮಾರ ರಾಮನಿರಬಹುದೆ?) ಸ್ವಲ್ಪ ದೂರದಲ್ಲಿ ಎರಡು ನಂದಿಯ ಶಿಲ್ಪಗಳು ಮತ್ತು ಒಂದು ಚತುರಾಶ್ರ ಪೀಠವು ಇದ್ದು ಭಗ್ನವಾಗಿವೆ. ಈ ದೇವಾಲಯವು ೧೩-೧೪ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ದೇವಾಲಯದ ವಾಸ್ತು ಲಕ್ಷಣಗಳಿಂದ ತಿಳಿಯಬಹುದಾಗಿದೆ.

ಹೆಸರು	: ಮೂಲ ವಿರೂಪಾಕ್ಷ ದೇವಾಲಯ
ಸ್ಥಳ	: ಹೇಮಕೂಟ ಪರ್ವತದ ಮೇಲೆ, ಹಂಪಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: VPR, 1987-88, PP. 123-24

ಪ್ರಾಕೃತಿಕ ಗ್ರಾನೈಟ್ ಶಿಲೆಯ ಮೇಲೆ ನಿರ್ಮಿತವಾಗಿದ್ದು ಅಧಿಷ್ಠಾನ ಸರಳವಾದ ಎರಡು ಸ್ತರಗಳುಳ್ಳದ್ದಾಗಿದ್ದು ಅದರ ಮೇಲ್ಭಾಗದಲ್ಲಿ (ಕಪೋತವಿರುವ ಭಾಗವು) ದಂತಾಲಂಕರಣ ಅಥವಾ ಪದ್ಮದಳಾಲಂಕೃತವಾಗಿದೆ. ಭಿತ್ತಿಯು ಸರಳವಾಗಿದೆ. ಮೇಲ್ಭಾಗವು ಮಡಚಿಕೊಂಡಂತಿದೆ. ಕಪೋತವು ಕೆಳಮುಖವಾಗಿದ್ದು ಸ್ವಲ್ಪ ಭಾಗವು ಮೇಲ್ಮುಖವಾಗಿದೆ. ಶಿಖರವು ನಾಲ್ಕು ತಳಗಳಿಂದೊಡಗೂಡಿದ ಫಾಂಸನ ಶೈಲಿಯಲ್ಲಿದ್ದು ಪ್ರತಿ ತಳಭಾಗವು ಕಂಠವನ್ನೊಳಗೊಂಡಿದೆ. ಕಂಠದ ಮೇಲ್ಭಾಗವು ಕಪೋತವನ್ನೊಳಗೊಂಡಿದೆ. ಪದ್ಮದಳಗಳ ಅಲಂಕಾರವಿದೆ. ಶಿಖರದ ಮೇಲ್ಭಾಗದಲ್ಲಿ ಕಂಠ ಮತ್ತು ಚತುರಾಶ್ರ (ಪದ್ಮಾಕೃತಿಯ) ಸ್ತೂಪಿ ಇದೆ. ನವರಂಗದ ಛಜ್ಜ ಕಂಠ ಮತ್ತು ಕಪೋತಗಳಿಂದ ಸುರುಳಿಯಾಕಾರವಾಗಿದೆ. ಶಿಖರದ ಮುಂಭಾಗದಲ್ಲಿ ಅರ್ಧಗೋಳಾಕೃತಿಯ ಮುಂಚಾಚಿದ ಶುಕನಾಸಿಯು ಕಂಠ, ಪದ್ಮ ಮತ್ತು ಕಂಠ ಮುಂದಿನ ಭಾಗವು ಪುಷ್ಪಾಲಂಕರಣವಾಗಿದ್ದು

ಕೀರ್ತಿ ಮುಖದ ಭಾಗವು ಶಿಥಿಲವಾಗಿದೆ. ದೇವಾಲಯದ ಒಳ ಭಾಗ ಗರ್ಭಗೃಹ ಅಂತರಾಳ ನವರಂಗವನ್ನು ಒಳಗೊಂಡಿದೆ. ನವರಂಗವು ಹದಿನಾರು ಸ್ತಂಭಗಳಿಂದ ಕೂಡಿದ್ದು ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ಉಳಿದಂತೆ ನಾಲ್ಕು ಸ್ತಂಭಗಳು ಭಿತ್ತಿಯಲ್ಲಿ ಸೇರ್ಪಡೆಯಾಗಿ ಕೂಡ್ಯ ಸ್ತಂಭಗಳಾಗಿವೆ. ಸ್ತಂಭಗಳು ಚತುರಾಶ್ರ, ಅಷ್ಟಾಶ್ರ ಮತ್ತು ಚತುರಾಶ್ರ, ಕೋನಾಕೃತವಾಗಿದ್ದು ಅರ್ಧಘಟಾಕೃತಿ ಮೇಲ್ಭಾಗದಲ್ಲಿದೆ. ಅದರ ಮೇಲೆ ಚಕ್ರಬೋದಿಗೆ ಘಂಟಾಬೋದಿಗೆ, ಚತುರ್ಮುಖ ಬೋದಿಗೆಗಳಿಂದಲೂ ಸ್ತಂಭದ ಮೂಲವು ಸರಳವಾಗಿದ್ದು ಚತುರಾಶ್ರವಾಗಿದೆ. (ಚೌಕಾಕಾರ) ಛತ್ತಿನಲ್ಲಿ ದ್ವಿವೃತ್ತ ಕಮಲವಿದ್ದು ಮೂಲೆಗಳಲ್ಲಿ ಲತಾ ಪುಷ್ಪಗಳ ಅಲಂಕರಣವಿದೆ. ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ದೇವಕೋಷ್ಠಗಳಿವೆ. ದೇವಕೋಷ್ಠಗಳ ಕೆಳಭಾಗದಲ್ಲಿ ಪದ್ಮವಿದೆ. ಪದ್ಮದ ಮೇಲೆ ಕೋಷ್ಠವಿರುವಂತೆ ಕಾಣುತ್ತದೆ. ಮೇಲ್ಭಾಗದಲ್ಲಿ ಪದ್ಮದಳಯುಕ್ತ ಕಪೋತವಿದೆ. ಮೂರು ಕಡೆ ಪ್ರವೇಶಕ್ಕೆ ಅನುಕೂಲವಿದೆ. ಅಂತರಾಳದ ದ್ವಾರವು ಐದು ಶಾಖೆಗಳಿಂದ ಕೂಡಿದೆ. ಎರಡೂ ಬದಿಯಲ್ಲಿ ಪೂರ್ಣಕುಂಬಗಳಾಕೃತಿಯೂ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅಂತರಾಳದ ಛತ್ತಿನಲ್ಲಿ ದ್ವಿವೃತ್ತ ಕಮಲವಿದೆ. ಮಧ್ಯದಲ್ಲಿ ಚಿಕ್ಕದಾದ ನಂದಿ ವಿಗ್ರಹವಿದೆ. ಗರ್ಭಗೃಹದ ದ್ವಾರವು ಮೂರು ಶಾಖೆಗಳಿಂದ ಕೂಡಿದ್ದು ಲಲಾಟದವರೆಗೂ ಮುಂದುವರೆದಿದ್ದು ಬದಿಯಲ್ಲಿ ಪೂರ್ಣ ಕುಂಬಗಳಿವೆ. ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ಲಿಂಗವು ವೃತ್ತ ಪೀಠದಲ್ಲಿ ಸ್ಥಾಪಿತವಾಗಿದೆ. ಛತ್ತಿನಲ್ಲಿ ತ್ರಿವೃತ್ತ ಕಮಲವಿದೆ. ಗರ್ಭಗೃಹದ ಉತ್ತರ ಮತ್ತು ಪಶ್ಚಿಮ ಭಾಗದ ಭಿತ್ತಿಯಲ್ಲಿ ಮುಂದೆ ಚಾಚಿರುವ ಕಪೋತಾಕಾರದ ಕಲ್ಲು ಚಪ್ಪಡಿಗಳಿವೆ. ಪ್ರಸ್ತುತ ಪೂಜಾ ಸಾಮಗ್ರಿಯನ್ನಿಡಲು ಉಪಯುಕ್ತವಾಗಿವೆ. ದೇವಾಲಯದ ಮುಂದೆ ಬಂಡೆಯಲ್ಲಿ ಪ್ರಾಕೃತಿಕ ನೀರಿನ ಕೊಳವಿದೆ.

ಹೆಸರು	: ಕಾಟಪ್ಪನ ಗುಡಿ
ಸ್ಥಳ	: ಆನೆಯ ಪಾಗದ ಬಳಿ ಕುಮಾರ ರಾಮನ ಗುಡ್ಡದ ದಕ್ಷಿಣಕ್ಕೆ ಕುಮ್ಮಟದುರ್ಗ, ಕೊಪ್ಪಳ ತಾಲೂಕು, ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: VPR, 1987-88, P. 209

ಕುಮಾರ ರಾಮನ ಅಣ್ಣನ ಹೆಸರಿನಲ್ಲಿ ಈ ದೇವಾಲಯವನ್ನು ಕಟ್ಟಲಾಗಿದೆ. ದೇವಾಲಯದ ಭಿತ್ತಿಯ ಕಲ್ಲುಗಳನ್ನು ನಯಗೊಳಿಸಲಾಗಿದೆ. ಇದೇ ರೀತಿ ಹೋಲುವ ದೇವಾಲಯ ಕಾಕುಬಾಳು (ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ) ಗ್ರಾಮದಲ್ಲಿದೆ. ದೇವಾಲಯ ಮತ್ತು ಕಾಟಪ್ಪನ ಶಿಲ್ಪವಿದೆ. ಕುಮ್ಮಟದಲ್ಲಿರುವ ಈ ದೇವಾಲಯವನ್ನು ಸ್ಥಳೀಯರು ಕಾಟಪ್ಪನ ಗುಡಿ ಎಂದು ಕರೆಯುತ್ತಾರೆ.

ಹೆಸರು	: ವೀರಭದ್ರ ದೇವಾಲಯ
ಸ್ಥಳ	: ಗಣ್ಯ ವ್ಯಕ್ತಿಗಳ ಅರಮನೆ ಆವರಣ, ಕಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ದಕ್ಷಿಣ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: 1) VPR, 1983-84, P. 4
	2) VPR, 1983-84, PP. 133-35
	3) VPR, 1983-84, P. 61

ದೇವಾಲಯದ ಅಧಿಷ್ಠಾನದ ಹೆಚ್ಚಿನ ಭಾಗ ಶಿಥಿಲವಾಗಿದ್ದು ಮುಂದಿನ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿದೆ. ಅಧಿಷ್ಠಾನ ಕಂಠ ಮತ್ತು ಕಪೋತವನ್ನೊಳಗೊಂಡಿದೆ. ಕಪೋತ ಪದ್ಮದಳಯುಕ್ತವಾಗಿದೆ. ಅಂತರಾಳ ಮತ್ತು ಗರ್ಭಗೃಹಕ್ಕೆ ಪ್ರತ್ಯೇಕ ಅಧಿಷ್ಠಾನವಿದೆ. ಅಧಿಷ್ಠಾನ ಸರಳವಾಗಿದ್ದು ಜಗತಿ, ಕಂಠ ಮತ್ತು ಕಪೋತದ ಭಾಗಗಳಿವೆ. ಗರ್ಭಗೃಹದ ಹೊರತಾಗಿ ದೇವಾಲಯ ವಿಶಾಲವಾಗಿದೆ. ಗರ್ಭಗೃಹದ ಭಿತ್ತಿಯು ಉದ್ದನೆಯ ಕಲ್ಲು ಚಪ್ಪಡಿಗಳಿಂದ ನಿರ್ಮಾಣವಾಗಿದ್ದು ಸರಳವಾಗಿ ಮೂಲ ರೂಪತೆಯಲ್ಲಿರುವುದೇ ಈ ದೇವಾಲಯದ ವೈಶಿಷ್ಟ್ಯಗಳಲ್ಲೊಂದಾಗಿದೆ. ಗರ್ಭಗೃಹದ ಹಿಂಭಾಗದ ಬಂಡೆಯ ಮೇಲೆ ನಾಲ್ಕು ಕಂಬಗಳಿರುವ ಮಂಟಪವಿದ್ದು ಈ ಮಂಟಪದ ಮೇಲೆ ದ್ರಾವಿಡ ವಿಮಾನ ಶಿಖರವನ್ನು ನಿರ್ಮಾಣ ಮಾಡಿದ್ದು ಇದು ವಿಜಯನಗರ ಕಾಲದ್ದಾಗಿದೆ. ಈ ಶಿಖರದ ಬಹುತೇಕ ಭಾಗವು ಶಿಥಿಲವಾಗಿದ್ದು ಸುಟ್ಟ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದೆ. ಮುಖಮಂಟಪವು ಬಿದ್ದುಹೋಗಿದ್ದು ಶಿಥಿಲವಾಗಿದೆ. ನವರಂಗವು ಹದಿನಾರು ಸ್ತಂಭಗಳಿಂದಾವೃತವಾಗಿದೆ. ಪೀಠಗಳು ಚತುರಾಶ್ರವಾಗಿದೆ. ನವರಂಗದ ಮಧ್ಯಭಾಗವು ಸ್ವಲ್ಪ ಎತ್ತರವಾಗಿದೆ. ಗರ್ಭಗೃಹದ ಮುಂದೆ ಚಿಕ್ಕದಾದ ಒಂದು ಅಂಕಣದಷ್ಟು ಜಾಗವಿದ್ದು ಬಾಗಿಲುಗಳು ಹಾಳಾಗಿವೆ. ಅಂತರಾಳವು ಕಲ್ಲಿನ ಚಪ್ಪಡಿಗಳಿಂದ ನಿರ್ಮಿತವಾಗಿದ್ದು ಮೇಲ್ಭಾಗವು ಜೀರ್ಣವಾಗಿದೆ. ಗರ್ಭಗೃಹವು ಹಿಂಭಾಗದಲ್ಲಿರುವ ಬಂಡೆಗೆ ಹೊಂದಿಕೊಂಡಂತೆ ನಿರ್ಮಿತವಾಗಿದೆ. ಈ ಬಂಡೆಯ ಮೇಲೆ ವೀರಭದ್ರ ದೇವರ ಶಿಲ್ಪವನ್ನು ನಿರ್ಮಿಸಲಾಗಿದೆ. ಗರ್ಭಗೃಹವು ಅಲಂಕಾರತೆಗೆ ಪ್ರಾಧಾನ್ಯತೆ ನೀಡಿಲ್ಲ. ಈ ದೇವಾಲಯದ ಬಳಿಯಿರುವ ಶಾಸನವೊಂದು ಇದು ''ವಿರೂಪಾಕ್ಷ ಹತ್ತಿ.. ಮಠ''ವೆಂದು ಉಲ್ಲೇಖಿಸುತ್ತದೆ.

ಹೆಸರು	: ವೀರಭದ್ರ ದೇವಾಲಯ
ಸ್ಥಳ	: ಭೀಮನ ಬಾಗಿಲ ಈಶಾನ್ಯ ದಿಕ್ಕಿಗೆ ಗುಡ್ಡದ ಮೇಲೆ ಕಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ

ಮುಖ : ಉತ್ತರ

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : 1)Vijayanagara Inventory Vol-I, 1990, P. 221

2) VPR, 1984-87, 1983-84, P. 54. ಕವಿಶಾಸಂ. ೩ ನಂ. ೩೫೨-೩೫೫.

ದೇವಾಲಯವು ಗುಡ್ಡ ಬಂಡೆಯ ಮೇಲೆ ನಿರ್ಮಿತವಾಗಿದ್ದು ಅಧಿಷ್ಠಾನದ ಭಾಗವು ಮಣ್ಣಿನಲ್ಲಿ ಮುಚ್ಚಿದೆ. ಮುಖ ಮಂಟಪವು ಶಿಥಿಲವಾಗಿದ್ದು, ಪಶ್ಚಿಮದ ಭಾಗದಿಂದ ಮುಖ ಮಂಟಪದ ಮುಂದೆ ಸೋಪಾನಗಳಿವೆ.

ಪ್ರಸ್ತುತ ನವರಂಗದ ದ್ವಾರವು ಬಿದ್ದು ಹೋಗಿದ್ದು, ಗಜಲಕ್ಷ್ಮಿ ಶಿಲ್ಪ ಕೆಳಭಾಗದಲ್ಲಿ ಬಿದ್ದಿದೆ. ನವರಂಗವು ನಾಲ್ಕು ಸ್ತಂಭಗಳಿಂದ ನಿರ್ಮಾಣವಾಗಿದ್ದು ನವರಂಗದ ಮಧ್ಯದಲ್ಲಿ ಮಲಗಿರುವ ನಂದಿ ಶಿಲ್ಪವಿದೆ. ನವರಂಗದ ನೈರುತ್ಯ ಮೂಲೆಯಲ್ಲಿ ಭಿತ್ತಿಗೆ ಸೇರಿಕೊಂಡಂತೆ ಕಟ್ಟೆಯನ್ನು ನಿರ್ಮಿಸಲಾಗಿದೆ. ನವರಂಗದ ಸ್ತಂಭಗಳು ಚತುರಾಶ್ರ-ಅಷ್ಟಾಶ್ರ-ಚತುರಾಶ್ರ ಮೇಲಿನ ಭಾಗವು ಪುಷ್ಪದ ಮೊಗ್ಗಿನಾಕೃತಿಯಲ್ಲಿದ್ದು ಮಧ್ಯದಲ್ಲಿ ದಳದ ಶಿಲ್ಪವು ಚಿತ್ರಿತವಾಗಿದೆ. ಸ್ತಂಭದ ಮೇಲೆ ಚತುರಾಶ್ರ ಬೋದಿಗೆಯು ಅದರ ಮೇಲೆ ಚತುರ್ಮುಖ ಬೋದಿಗೆಯು ಇದ್ದು ಮೇಲೆ ತೊಲೆಗಳಿಂದ ಛತ್ತಿನ ನಿರ್ಮಾಣವಾಗಿದೆ. ನವರಂಗದ ಛತ್ತಿನಲ್ಲಿ ಅಷ್ಟಕೋನಾಕಾರವಿದ್ದು ಮಧ್ಯದಲ್ಲಿ ಕಮಲದ ಶಿಲ್ಪವಿಲ್ಲದೇ ಸರಳವಾಗಿರುವುದು ಇದರ ವೈಶಿಷ್ಟ್ಯತೆ.

ನವರಂಗದಲ್ಲಿ ಮಲಗಿರುವ ನಂದಿ ಶಿಲ್ಪವಿದೆ. ಗರ್ಭಗೃಹ ದಕ್ಷಿಣ ದಿಕ್ಕಿನಲ್ಲಿರುವ ಗುಂಡಿಗೆ ಹೊಂದಿಕೊಂಡಿದೆ. ಗರ್ಭಗೃಹವನ್ನು ಚೌಕಾಕಾರದಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹದ ಗುಂಡಿನ ಮೇಲೆ ವೀರಭದ್ರನ ಶಿಲ್ಪ ಹಾಗು ವೀರಭದ್ರನ ಬದಿಯಲ್ಲಿ ಭಕ್ತನ ಸಂಸಾರದ ಶಿಲ್ಪಗಳಿವೆ.

ಪಶ್ಚಿಮ ದಿಕ್ಕಿನಲ್ಲಿ ನವರಂಗ. ವಾಯುವ್ಯ ಮೂಲೆಯಲ್ಲಿ ಚಿಕ್ಕದಾದ ಶಿಖರವಿದ್ದು ಪಶ್ಚಿಮ ದಿಕ್ಕಿನ ಹೊರಭಾಗದಲ್ಲಿ ದೇವಾಲಯಕ್ಕೆ ಹೆಚ್ಚುವರಿಯಾಗಿ ಸ್ತಂಭಗಳಿರುವ ಮಂಟಪವನ್ನು ನಿರ್ಮಿಸಿದ್ದು ಇದರಲ್ಲಿ ಒಂದು ಸ್ತಂಭದ ಮೇಲೆ ನಂದಿ ಶಿಲ್ಪವಿರುವುದು ವಾಯುವ್ಯ ದಿಕ್ಕಿನಲ್ಲಿನ ಗುಂಡಿನ ಮೇಲೆ ಗಣೇಶನ ಶಿಲ್ಪವಿದ್ದು ದಕ್ಷಿಣಾಭಿಮುಖವಾಗಿ ಇದರ ಎದುರಿನಲ್ಲಿ ದೀಪಸ್ತಂಭವನ್ನು ಸ್ಥಾಪಿಸಲಾಗಿದೆ.

ದೇವಾಲಯದ ಆಗ್ನೇಯ ದಿಕ್ಕಿನಲ್ಲಿ ಎರಡು ಹಂತದಲ್ಲಿ ದೇವಾಲಯದ ಪೂರ್ವ ಭಾಗದ ಭಿತ್ತಿಗೂ ಮತ್ತು ಗರ್ಭಗೃಹದ ಗುಂಡಿಗೆ ಹೊಂದಿಕೊಂಡತೆ ಹನ್ನೆರಡು ಅಂಕಣಗಳುಳ್ಳ ಮಂಟಪವನ್ನು ನಿರ್ಮಿಸಲಾಗಿದೆ. ಇದು ದೇವಾಲಯದ ನಂತರ ಕಾಲದಲ್ಲಿ ನಿರ್ಮಿಸಿರಬಹುದು. ಪಶ್ಚಿಮ ಭಾಗದ ಮಂಟಪದ ಸ್ತಂಭಗಳನ್ನು ನಯಗೊಳಿಸಿದ್ದು ದೇವಾಲಯದ ನವರಂಗದಲ್ಲಿರುವ ಸಂಭ್ತಗಳ ವಿನ್ಯಾಸವನ್ನು ಹೋಲುತ್ತವ. ದೇವಾಲಯದ ಮುಖ ಮಂಟಪದ ಭಾಗದಲ್ಲಿನ ಜಗತಿಯಲ್ಲಿ ಗವಿಯಾಕಾರದ ಸ್ಥಳವಿದ್ದು ಕೆಳಭಾಗಕ್ಕೆ ಇಳಿದು ಹೋಗಲು ಕಟಾಂಜನ ಹಾಗೂ ಚಿಕ್ಕದಾದ ದ್ವಾರವೂ ಇದೆ. ದೇವಾಲಯದ ಮುಂದೆ ಪಶ್ಚಿಮ ದಿಕ್ಕಿನಲ್ಲಿ ಬಾವಿಯೊಂದು ಇದ್ದು ಅದರ ಪಕ್ಕದಲ್ಲಿನ ಗುಂಡಿನ ಮೇಲೆ ಸೂರ್ಯ ಚಂದ್ರ ಮತ್ತು ಸಿಂ

ಎಂಬ ಅಕ್ಷರಗಳಿವೆ. ಈ ದೇವಾಲಯದ ಪೂರ್ವ ದಿಕ್ಕಿನಲ್ಲಿ 'ಶಿವಯೋಗಿ ದೇವರ ಗವಿ' ಎಂಬ ಶಾಸನವು ಮತ್ತು ಆಗ್ನೇಯ ದಿಕ್ಕಿಗೆ ಸ್ವಲ್ಪ ಮೇಲ್ಭಾಗದಲ್ಲಿ ಗುಂಡಿಗೆ ಇರುವ ಶಾಸನವು 'ರೇವಣ ಸಿದ್ಧನ ಪಾದ' ಮತ್ತು ಭೈರವ ದೇವರ ಸ್ಥಾಪಿಸಿರುವುದನ್ನು ಉಲ್ಲೇಖಿಸಿದೆ.

ಹೆಸರು	: ಮೈಲಾರ ದೇವರ ದೇವಾಲಯ
ಸ್ಥಳ	: ಹಜಾರ ರಾಮಚಂದ್ರ ದೇವಾಲಯದ ಪೂರ್ವ ದಿಕ್ಕಿನ ಪ್ರವೇಶ ದ್ವಾರದ ಬಳಿ, ಕಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಉತ್ತರಾಭಿಮುಖ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: Vijayanagara Preleminary Report, 1984, PP. 70-71

ದೇವಾಲಯದ ಅಧಿಷ್ಠಾನದಲ್ಲಿ ಜಗತಿ, ಕುಮುದ, ಕಂಠ ಹಾಗೂ ಕಪೋತಗಳು ಸರಳವಾಗಿವೆ. ಈ ಅಧಿಷ್ಠಾನದ ಕೆಳಗೆ ಇನ್ನೊಂದು ಅಧಿಷ್ಠಾನವಿದೆ. ಭಿತ್ತಿಯು ಸರಳವಾಗಿದ್ದು ಮಧ್ಯದಲ್ಲಿ ಸರಳವಾದ ತೋರಣ(ಪ್ರಸ್ತರ)ವಿದೆ. ಮೇಲಿನ ಭಾಗದಲ್ಲಿ ಕಪೋತದ ಭಾಗವಿದ್ದು, ಇದರಲ್ಲಿ ಕೂಡುಗಳೂ ಇದ್ದು ಸರಳವಾಗಿದೆ. ಮುಖಮಂಟಪ ಬಿದ್ದು ಹೋಗಿದ್ದು ಸ್ತಂಭಗಳು ಸ್ಥಳದಲ್ಲಿಯೇ ಇವೆ. ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಚತುರಾಶ್ರ ಕೋನಗಳಿಂದ ಕೂಡಿದೆ. ಮೇಲಿನ ಭಾಗ ಕಳಶದಂತೆ ಇದ್ದು ಎಲೆಗಳಿಂದ ಕೂಡಿದ್ದು ಮೇಲಿನ ಬೋದಿಗೆಯು ತ್ರಿಪಟ್ಟಿ ಕುಮುದಾಕಾರದಲ್ಲಿದೆ. ಇನ್ನೂ ಎರಡು ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಷೋಡಾಶ್ರ ಕೋನಗಳಿಂದ ಕೂಡಿದ್ದು ಮೇಲೆ ಅರ್ಧ ಘಟಾಕೃತಿಯಲ್ಲಿದೆ. ಮುಖ ಮಂಟಪದ ಎರಡೂ ಬದಿಯಲ್ಲಿ ಪ್ರದಕ್ಷಿಣಾ ಪಥದ ದ್ವಾರದ ಜಾಗಗಳಿವೆ. ಅಂತರಾಳವು ಚಿಕ್ಕದಾಗಿದ್ದು ಆಯತಾಕಾರದಲ್ಲಿದ್ದು ಎತ್ತರವಾಗಿದ್ದ ನಾಲ್ಕು ಸ್ತಂಭಗಳಿಂದ ನಿರ್ಮಾಣವಾಗಿದ್ದು ಸರಳವಾಗಿದೆ. ಗರ್ಭಗೃಹದ ದ್ವಾರವು ಮೂರು ಶಾಖೆಗಳಿಂದ ಕೂಡಿದೆ. ದ್ವಾರದ ಕೆಳ ಭಾಗದಲ್ಲಿ ಮಕರಗಳಿವೆ. ಹೂ ಬಳ್ಳಿಗಳಿಂದ ಅಲಂಕೃತಗೊಂಡಿದೆ. ಲಲಾಟದಲ್ಲಿ ಕುಳಿತಿರುವ ದೇವಿಯ ಶಿಲ್ಪವಿದೆ. ಮೇಲ್ಭಾಗದಲ್ಲಿ ನೃತ್ಯ ಶಿಲ್ಪದ ಪಟ್ಟಿಕೆಯನ್ನು ಅಳವಡಿಸಿದೆ. ಗರ್ಭಗೃಹದ ದ್ವಾರದ ಹೊರ ಬದಿಯಲ್ಲಿ ಮತ್ತೊಂದು ದ್ವಾರದ ಮೇಲೆ ಹೂ ಬಳ್ಳಿಗಳಿಂದ ಅಲಂಕೃತವಾಗಿದ್ದು ಕೆಳಭಾಗದಲ್ಲಿ ದ್ವಾರ ಪಾಲಕರಿರುವ ಜಾಗದಲ್ಲಿ ಭೂತ ಭೈರವನ ಶಿಲ್ಪ, ಎಡಬದಿಯಲ್ಲಿ ಮಹಿಷ ಮರ್ದಿನಿಯ ಶಿಲ್ಪವಿದೆ. ಗರ್ಭಗೃಹದ ಒಳಭಾಗವು ಸರಳವಾಗಿದ್ದು ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ಮುಂಚಾಚಿರುವ ಶಿಲಾ ಪಟ್ಟಿಕೆ ಇವೆ. ಛತ್ತಿನಲ್ಲಿ ಅಷ್ಟಕೋನಗಳ ಮಧ್ಯದಲ್ಲಿ ದ್ವಿವೃತ್ತ ಕಮಲವಿದೆ. ಗರ್ಭಗೃಹದಲ್ಲಿ ಭಗ್ನಗೊಂಡಿರುವ ಮೈಲಾರ ದೇವರ ಶಿಲ್ಪವಿದೆ.

ಹೆಸರು : ಕಿನ್ನರೇಶ್ವರ ದೇವಾಲಯ

ಸ್ಥಳ : ಬುಕ್ಕಸಾಗರದ ಕಣಿವೆಯ ಬಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಶಿಲಾವಸ್ತು : ಗ್ರಾನೈಟ್ ಶಿಲೆ

ಮುಖ : ಪೂರ್ವ

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ

ಉಲ್ಲೇಖ : ಕಲಬುರ್ಗಿ ಎಂ.ಎಂ., ೧೯೯೯, 'ಹರಿಹರನ ರಗಳೆಗಳು' ಪಂಪಾಕ್ಷೇತ್ರದ ರಗಳೆ ಪು. ೫೧೯

ದೇವಾಲಯದ ಅಧಿಷ್ಠಾನ ನೆಲದಲ್ಲಿ ಮುಚ್ಚಿ ಹೋಗಿದೆ. ದಳಯುಕ್ತ ಕಪೋತಗಳು ಮುಖಮಂಟಪದ ಅಧಿಷ್ಠಾನದಲ್ಲಿವೆ. ಭಿತ್ತಿಯೂ ಸರಳವಾಗಿದೆ. ಭಿತ್ತಿಯ ಮಧ್ಯದಲ್ಲಿ ಪ್ರಸ್ತರ (ತೋರಣ) ಪಟ್ಟಿಯು ದೇವಾಲಯವನ್ನು ಸುತ್ತುವರಿದಿದೆ. ಉತ್ತರ ದಿಕ್ಕಿನ ಗರ್ಭಗೃಹದ ಭಿತ್ತಿಯಲ್ಲಿ ವಿಧೂಷಕ, ಹಂಸ ಮತ್ತು ಕಮಲಗಳ ಶಿಲ್ಪಗಳಿವೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತವಿದ್ದು ಸರಳವಾದ ಕೂಡುಗಳಿವೆ. ದೇವಾಲಯದ ಮೇಲ್ಭಾಗವು (ಶಿಖರ) ಬಿದ್ದು ಹೋಗಿದ್ದು ಜೀರ್ಣೋದ್ಧಾರ ಮಾಡಲಾಗಿದೆ. ಮುಖ ಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು ಮಧ್ಯದಲ್ಲಿನ ಎರಡು ಸ್ತಂಭಗಳು ಪೀಠದ ಮೇಲೆ ಸ್ಥಾಪಿತವಾಗಿದೆ. ಉಳಿದೆರಡು ಸ್ತಂಭಗಳು ಗೋಡೆಗಳಲ್ಲಿ ಸೇರ್ಪಡೆಯಾಗಿವೆ. ಮಧ್ಯದ ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಷೋಡಶಾಶ್ರ ಮತ್ತು ಚತುರಾಶ್ರ ಆಕಾರದಲ್ಲಿದೆ. ಸ್ತಂಭದ ಮೇಲಿನ ಭಾಗವು ಅರ್ಧಘಟಾಕೃತಿ ಚಕ್ರಬೋದಿಗೆ ಚತುರ್ಮುಖ ಬೋದಿಗೆಗಳನ್ನು ಒಳಗೊಂಡಿವೆ. ಸ್ತಂಭಗಳು ಶಿಲ್ಪಗಳ ಅಲಂಕರಣತೆ ಇದ್ದರೂ ಈಗ ಇದು ಶಿಥಿಲವಾಗಿದೆ. ನವರಂಗವು ಹದಿನಾರು ಸ್ತಂಭಗಳಿಂದ ನಿರ್ಮಿತವಾಗಿದೆ. ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು ಉಳಿದ ಹನ್ನೆರಡು ಸ್ತಂಭಗಳು ಒಳಭಾಗದ ಭಿತ್ತಿಯಲ್ಲಿ ಸೇರಿಕೊಂಡಿದೆ. ಸ್ತಂಭಗಳು ಚತುರಾಶ್ರ ಪೀಠದ ಮೇಲೆ ಸ್ಥಾಪಿತವಾಗಿದೆ. ಚತುರಾಶ್ರ, ಅಷ್ಟಾಶ್ರ ಮತ್ತು ಚತುರಾಶ್ರ ಕೋನಗಳಲ್ಲಿವೆ. ಮೇಲ್ಭಾಗದಲ್ಲಿ ಎರಡು ಪಟ್ಟಿಗಳಿವೆ. ಅದರ ಮೇಲೆ ಚತುರಾಶ್ರ ಬೋದಿಗೆಗಳಿವೆ. ನವರಂಗದ ಭಿತ್ತಿ ಸರಳವಾಗಿದ್ದು ಸ್ತಂಭಗಳ ಮಧ್ಯದ ನೆಲದ ಭಾಗ ಅರ್ಧ ಅಡಿಯಷ್ಟು ಎತ್ತರವಾಗಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದ ಮುಂದಿನ ಅಂತರಾಳವು ಸರಳವಾಗಿದ್ದು ಮಧ್ಯದಲ್ಲಿ ನಂದಿಯ ವಿಗ್ರಹವಿದೆ. ಅಂತರಾಳದ ಬಾಗಿಲು ಸಾಪಾಟಾಗಿದ್ದು ಮೂಲ ರೂಪದಲ್ಲಿದೆ. ಗರ್ಭಗೃಹದ ದ್ವಾರವು ಸಪಾಟಾಗಿದ್ದು ಗೃಹದ ಒಳಗೆ ಚಿಕ್ಕದಾಗಿರುವ ಶಿವಲಿಂಗ ಸ್ಥಾಪಿತವಾಗಿದೆ. ಗರ್ಭಗೃಹದ ವಾಯುವ್ಯ ಮೂಲೆಯಲ್ಲಿ ಗಣೇಶನ ಮೂರ್ತಿಯನ್ನು ಇರಿಸಲಾಗಿದ್ದು ಛತ್ತನ್ನು ಹೊಸದಾಗಿ ನಿರ್ಮಿಸಲಾಗಿದೆ. ಪಶ್ಚಿಮ ದಿಕ್ಕಿನ ಭಿತ್ತಿಯಲ್ಲಿ ಕಲ್ಲಿನ ಚಪ್ಪಡಿಯೂ ಮುಂದೆ ಬಂದಿದ್ದು ಪೂಜಾ ಸಾಮಗ್ರಿಗಳನ್ನು ಇರಿಸುವುದಕ್ಕಾಗಿ ನಿರ್ಮಿಸಲಾಗಿದೆ. ಮುಖ್ಯ ಗರ್ಭಗೃಹದ ಉತ್ತರ ದಿಕ್ಕಿನಲ್ಲಿ ಚಿಕ್ಕದಾದ ಗರ್ಭಗೃಹವಿದೆ. ಒಳಗೆ ದೇವಿಯ ಶಿಲ್ಪವು ಸ್ಥಾಪಿತವಾಗಿದೆ. ನವರಂಗಕ್ಕೆ ಹೊಂದಿಕೊಂಡಂತೆ ಉತ್ತರ ದಿಕ್ಕಿನಲ್ಲಿ ಇನ್ನೊಂದು ಗರ್ಭಗೃಹವಿದೆ. ಗರ್ಭಗೃಹದ ಮುಂದೆ ಅಂತರಾಳವಿದೆ. ಅಂತರಾಳದ ದ್ವಾರದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅಂತರಾಳದ ಛಾವಣಿ ಸರಳವಾಗಿದೆ. ಗರ್ಭಗೃಹದ ದ್ವಾರದಲ್ಲಿ ಶೈವ

ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಭೈರವಮೂರ್ತಿ ಶಿಲ್ಪವನ್ನು ಸ್ಥಾಪಿಸಲಾಗಿದೆ. ಉತ್ತರ ಮತ್ತು ಪಶ್ಚಿಮ ದಿಕ್ಕಿನ ಭಿತ್ತಿಯಲ್ಲಿ ಮುಂದೆ ಚಾಚಿರುವ ಕಲ್ಲಿನ ಚಪ್ಪಡಿಗಳಿವೆ. ಇವು ಕಪೋತದ ಮಾದರಿಯಲ್ಲಿದ್ದು ಪದ್ಮದಳಗಳನ್ನು ಹೊಂದಿವೆ. ಅವುಗಳು ಹಂಪೆಯ ಹೇಮಕೂಟ ಪರ್ವತದಲ್ಲಿನ ತ್ರಿಕೂಟ ದೇವಾಲಯಗಳ ಗರ್ಭಗೃಹವನ್ನು ಹೋಲುತ್ತವೆ. ಗರ್ಭಗೃಹದ ಛತ್ತು ಅಷ್ಟಾಶ್ರ ಕೋನದಲ್ಲಿದೆ. ಮಧ್ಯದಲ್ಲಿ ಕಮಲವಿದೆ.

ಕಿನ್ನರೇಶ್ವರ ದೇವಾಲಯದ ಮುಂದಿನ ಬೆಟ್ಟದ ಮೇಲೆ ಚಿಕ್ಕದಾದ ಬಿದ್ದು ಹೋಗಿರುವ ದೇವಾಲಯವಿದೆ. ಈ ದೇವಾಲಯಕ್ಕೆ ನಾಲ್ಕು ಶಿಲಾ ಸ್ತಂಭಗಳಿವೆ. ಛತ್ತಿನ ಶಿಲೆಯು ಈಗ ಬಿದ್ದಿದೆ. ಈ ಶಿಲೆಯಲ್ಲಿ ಪದ್ಮವಿದೆ. ದೇವಾಲಯದ ಭಿತ್ತಿಗಳನ್ನು ಸೈಜು ಕಲ್ಲುಗಳಿಂದ ನಿರ್ಮಿಸಿದ್ದು ಈಗ ಇದು ಶಿಥಿಲವಾಗಿದೆ.

ಹೆಸರು	: ಕಂಪಿಲರಾಯ ದೇವಾಲಯ
ಸ್ಥಳ	: ಹೇಮಕೂಟ ಹಂಪಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೪ನೇ ಶತಮಾನದ ಮೊದಲ ಭಾಗ
ಉಲ್ಲೇಖ	: VPR, 1987-88, PP. 137, 39, 41

ಅಧಿಷ್ಠಾನವು ಉಪಾನ ಜಗತಿ ತ್ರಿಪಟ್ಟ ಕುಮದ ಕಂಠ (ಒಳಬಾಗಿದೆ) ಮತ್ತು ಪದ್ಮದಳಗಳಿಂದ ಕೂಡಿದೆ. ಭಿತ್ತಿಯು ಸ್ತಂಭಾಕೃತಿಗಳಿಂದಲೂ ಮತ್ತು ಭಿತ್ತಿಯ ಮಧ್ಯಭಾಗದಲ್ಲಿನ ಪ್ರಸ್ತರ (ತೋರಣ) ದೇವಾಲಯವನ್ನು ಸುತ್ತುವರಿದಿದ್ದು ಪುಷ್ಪಾಲಂಕೃತಗೊಂಡಿದೆ. ಕಪೋತವು ಭಿತ್ತಿಯಿಂದ ಸ್ವಲ್ಪವೇ ಮುಂದೆ ಬಾಗಿದ್ದು ಮತ್ತು ಒಳಭಾಗಕ್ಕೆ ಬಾಗಿರುತ್ತದೆ. ಕಪೋತದಲ್ಲಿನ ಕೂಡು ಕೀರ್ತಿಮುಖಗಳು ಮುಂದೆ ಬಂದಿವೆ. ಪ್ರಸ್ತರವು ಗರ್ಭಗೃಹದ ಸುತ್ತಲೂ ಇದ್ದು ಸ್ವಲ್ಪ ಮುಂದೆ ಬಂದಿರುವ ಪದ್ಮಹಾರ ಕೂಟ, ಪಂಜರ ಮತ್ತು ಶಾಲಗಳನ್ನು ಒಳಗೊಂಡಿದೆ. ಹಾರಕೂಟ ಶಾಲಗಳು ಸರಳವಾಗಿವೆ. ಕೂಟ ಶಿಖರಗಳು ಚೌಕಾಕಾರವಾಗಿ ದೇವಕೋಷ್ಠಗಳು ಹೆಚ್ಚು ಅಗಲವಾಗಿದ್ದು ದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಲು ರಚಿತವಾಗಿವೆ. ಹಾರವು ಗರ್ಭಗೃಹಗಳ ಸುತ್ತಲೂ ಇದೆ. ತಳವು ಭಿತ್ತಿಯ ಮೇಲ್ಭಾಗದಲ್ಲಿ ಮುಂದೆ ಚಾಚಿದೆ. ಮೇಲಿನ ತಳವು ಸ್ವಲ್ಪ ಎತ್ತರವಾಗಿದ್ದು ಪದ್ಮ ಚೌಕಾಕಾರವಾಗಿರುವ ಗ್ರೀವ ಮತ್ತು ಚೌಕಾಕಾರ ಶಿಖರಸ್ತೂಪಿ ಇದ್ದು ಮೇಲಿನ ಕಳಸವು ಬಿದ್ದು ಹೋಗಿದೆ.

ಮುಖಮಂಟಪ ಎರಡು ಸಾಲುಗಳುಳ್ಳ ನಾಲ್ಕು ಶಿಲಾ ಸ್ತಂಭಗಳಿಂದ ಕೂಡಿದ್ದು ಪ್ರತಿ ಸ್ತಂಭವು ಚತುರಾಶ್ರವಾಗಿದ್ದು ಮಧ್ಯದಲ್ಲಿ ಅಷ್ಟಾಶ್ರ ಷೋಡಷಾಶ್ರ ಅಷ್ಟಾಶ್ರ ಆಕೃತಿಯಲ್ಲಿ ಇದ್ದು ಅದರ ಮೇಲಿನ ಭಾಗವು ಅರ್ಧಘಟಾಕಾರದಲ್ಲಿವೆ. ಶಿಲಾ ಸ್ತಂಭಗಳ ಮೇಲಿನ ಭಾಗವು ವೃತ್ತ, ಬೋದಿಗೆ, ಚೌಕ ಬೋದಿಗೆ ಮತ್ತು ಪದ್ಮ ಬೋದಿಗೆಗಳಿಂದ ಕೂಡಿದ್ದು ಪದ್ಮ

ಬೋದಿಗೆಗಳು ಪದ್ಮದಳಗಳ ಚಿತ್ರಗಳಿಂದಾವೃತವಾಗಿವೆ. ಅಲ್ಲದೆ ಹೆಚ್ಚುವರಿ ನಾಲ್ಕು ಶಿಲಾಸ್ತಂಭಗಳನ್ನು ಮೂಲ ಸ್ತಂಭಗಳ ಬದಿಯಲ್ಲಿ ಇರಿಸಲಾಗಿದೆ. ಕಕ್ಷಾಸನವು ಇದ್ದು ಒರಗು ದಿಂಬುಗಳಿಂದ ಕೂಡಿದೆ.

ನವರಂಗ : ನವರಂಗದ ಬಾಗಿಲು ವಿವಿಧ ಶಾಖೆಗಳಿಂದಲೂ ಹೂ ಬಳ್ಳಿಗಳಿಂದಲೂ ಅಲಂಕೃತವಾಗಿದ್ದು ಮತ್ತೊಂದು ಶಾಖೆಯು ಸಹ ಪದ್ಮದಳಗಳಿಂದ ಕೂಡಿದೆ. ಬಾಗಿಲಿನ ಚೌಕಟ್ಟಿನ ಮೇಲಿನ ಮಧ್ಯದಲ್ಲಿ ಆನೆಗಳು ಕಮಲವನ್ನು ಎತ್ತಿ ಹಿಡಿದಿರುವ ಚಿತ್ರಣವಿದೆ. ಎಡ ಬದಿಯಲ್ಲಿ ನೃತ್ಯ ಗಣೇಶ, ಬಲಭಾಗದಲ್ಲಿ ನೃತ್ಯ ಸರಸ್ವತಿಯರ ಚಿತ್ರಗಳಿವೆ. ಬಾಗಿಲಿನ ಎರಡು ಬದಿಗಳಲ್ಲಿ ನಿಂತಿರುವ ಶೈವದ್ವಾರಪಾಲಕರಿದ್ದು ತ್ರಿಶೂಲ, ಗದೆ ಮತ್ತು ವರದ ಮುದ್ರೆಗಳಿದ್ದು ಒಂದು ಕಾಲು ಗದೆಯ ಮೇಲೆ ಇದೆ. ನವರಂಗದಲ್ಲಿ ಜಾಲಂಧರಗಳಿವೆ ಜಾಲಂಧರಗಳನ್ನು ಪೂರ್ವ ಮತ್ತು ದಕ್ಷಿಣದ ಗೋಡೆಯಲ್ಲಿ ನಿರ್ಮಿಸಲಾಗಿದ್ದು ಅಲಂಕೃತವಾಗಿವೆ. ಮತ್ತೊಂದು ಉತ್ತರದ ದಿಕ್ಕಿನ ಗೋಡೆಯಲ್ಲಿದೆ ನವರಂಗದಲ್ಲಿ ನಾಲ್ಕು ಸ್ತಂಭಗಳಿದ್ದು ಸ್ತಂಭಗಳು ಸ್ವಲ್ಪವೇ ಎತ್ತರವಾದ ಮದ್ಯದಲ್ಲಿನ ನೆಲಗದ್ದಿನ ಕಲ್ಲು ಹಾಸಿನ ಮೇಲೆ ನಿಂತಿವೆ. ಸ್ತಂಭಗಳು ಪೀಠದ ಮೇಲೆ ನಿಂತಿದ್ದು ಚತುರಾಶ್ರ ಅಷ್ಟಾಶ್ರ ಷೋಡಶ್ರ ಅಷ್ಟಾಶ್ರ ಆಕಾರದಲ್ಲಿದೆ. ಸ್ತಂಭದ ಮೇಲ್ಭಾಗವು ಅರ್ಧಘಟಾಕೃತಿಯಲ್ಲಿದ್ದು ಅದರ ಮೇಲೆ ವೃತ್ತ ಬೋದಿಗೆ ಚತುರಾಶ್ರ ಬೋದಿಗೆ ಮತ್ತು ಪದ್ಮ ಬೋದಿಗೆಗಳು ಅದರ ಮೇಲೆ ಶಿಲಾ ತೊಲೆಗಳಿಂದಲೂ ಹೂ ಬಳ್ಳಿಗಳ ಚಿತ್ರಗಳು ಸಿಂಹದ ಚಿತ್ರವು ಸ್ತಂಭದ ಮೇಲೆ ಚಿತ್ರಿತವಾಗಿವೆ. ಮೇಲ್ಛಾವಣಿಯಲ್ಲಿ ಆಳವಾಗಿ ಕೊರೆದ ಕಮಲದ ಶಿಲ್ಪವು ಮುಂಭಾಗಿರುವ ಕಮಲದ ಮೊಗ್ಗು ಮೂಲೆಗಳಲ್ಲಿ ಹೂ ಬಳ್ಳಿಗಳ ಅಲಂಕೃತವಾಗಿರುವ ಕೀರ್ತಿಮುಖಗಳಿಂದಲೂ ಸಾಲಂಕೃತವಾಗಿದೆ. ಈ ಗರ್ಭಗೃಹಕ್ಕೆ ಅಂತರಾಳವಿದ್ದು ಅಂತರಾಳದ ದ್ವಾರವು ಸರಳವಾದ ಆರು ಶಾಖೆಗಳನ್ನೊಳಗೊಂಡಿದ್ದು ಮಕರ ತೋರಣವು ಮಧ್ಯದಲ್ಲಿ ಗಜಲಕ್ಷ್ಮಿಯ ಶಿಲ್ಪವು ಇದೆ. ಮೇಲ್ಛಾವಣಿಯು ಸಾದಾರಣ ಕಮಲದ ಚಿತ್ರದಿಂದೂಡಗೂಡಿದೆ. ಗರ್ಭಗೃಹದ ದ್ವಾರ ಮೂರು ಶಾಖೆಗಳನ್ನೊಳಗೊಂಡಿದ್ದು ಲಲಾಟದಲ್ಲಿ ಗಣೇಶನ ಚಿತ್ರವೂ ಅಪೂರ್ಣವಾದ ಮೂಷಿಕವಿದೆ. ಪಕ್ಕದಲ್ಲಿ ಎರಡು ಪುಷ್ಪಗಳಿಂದ ಅಲಂಕರಣಗೊಂಡಿದ್ದು ಮೇಲ್ಭಾಗದಲ್ಲಿ ಉತ್ತಮವಾಗಿ ಚಿತ್ರಿತವಾಗಿರುವ ಕಮಲವಿದೆ. ಗರ್ಭಗೃಹದ ದಕ್ಷಿಣ ದಿಕ್ಕಿನ ಗೋಡೆಯಲ್ಲಿ ಕಲ್ಲಿನ ಹಲಗೆಯು ಸ್ವಲ್ಪ ಮುಂದೆ ಚಾಚಿದೆ. ಮೇಲ್ಛಾವಣಿಯು ಅಷ್ಟಕೋನಾಕೃತಿಯಲ್ಲಿದ್ದು ಮಧ್ಯದಲ್ಲಿ ಕಮಲವಿದೆ. ದಕ್ಷಿಣ ದಿಕ್ಕಿನ ಗರ್ಭಗುಡಿಯ ಅಂತರಾಳವು ಪಶ್ಚಿಮ ದಿಕ್ಕಿನ ಬಾಗಿಲನ್ನು ಹೋಲುತ್ತಿದ್ದು ಸ್ತ್ರೀ ದ್ವಾರಪಾಲಕರಿದ್ದು ಕೈಯಲ್ಲಿ ಚೌರಿಯನ್ನು ಹಿಡಿದಿದ್ದಾರೆ. ಬಾಗಿಲು ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು ಬದಿಯಲ್ಲಿ ಹೂ ಬಳ್ಳಿಗಳಿಂದ ಅಲಂಕೃತವಾಗಿದೆ. ಚೌಕಗಳಲ್ಲಿ ಪುಷ್ಪಗಳು ಮತ್ತು ಹಂಸಗಳ ಚಿತ್ರಗಳನ್ನು ಒಳಗೊಂಡಿದ್ದು ಕೆಳಭಾಗದ ತೊಲೆಯಲ್ಲಿ ವೃತ್ತಾಕಾರದಲ್ಲಿ ಕಮಲ ಚಿತ್ರಗಳು ಮಧ್ಯದಲ್ಲಿ ಮೊಗ್ಗುಗಳು ಎರಡು ಬದಿಯಲ್ಲಿ ಚಿತ್ರಿತವಾಗಿವೆ. ಇದರ ಮುಂದೆ ನಿಂತಿರುವ ಭಂಗಿಯಲ್ಲಿ ಎರಡು ಸಿಂಹಗಳು ಹಿಂಗಾಲುಗಳ ಮೇಲೆ ನಿಂತಿದ್ದು ಹಿಂದೆ ನೋಡುತ್ತಿರುವ ಚಿತ್ರಣ ನಿಜಕ್ಕೂ ವೈಶಿಷ್ಟಪೂರ್ಣ. ಸಿಂಹಗಳ ಹಿಂಭಾಗದಲ್ಲಿ ಯಕ್ಷರು ತಮ್ಮೆರಡು ಕೈಗಳನ್ನು ಎತ್ತಿ ಭಾರವನ್ನು ಹೊತ್ತಿದ್ದಾರೆನ್ನುವ ಭಂಗಿಯಲ್ಲಿವೆ. ಅಂತರಾಳದ ಮೇಲ್ಛಾವಣಿಯಲ್ಲಿ ಕಮಲದ ಶಿಲ್ಪವಿದೆ. ಗರ್ಭಗೃಹ ಬಾಗಿಲು ಪಶ್ಚಿಮ ದಿಕ್ಕಿನ ಗರ್ಭಗೃಹದ ಬಾಗಿಲನ್ನು ಹೋಲುತ್ತದೆ. ಲಲಾಟದಲ್ಲಿ ಗಣೇಶನ ಶಿಲ್ಪವಿದ್ದು ಇಕ್ಕೆಲಗಳಲ್ಲಿ ಪುಷ್ಪಗಳ ಶಿಲ್ಪಗಳಿವೆ. ಗರ್ಭಗೃಹದ ಪಶ್ಚಿಮ

ದಿಕ್ಕಿನ ಗೋಡೆಯಲ್ಲಿ ಕಲ್ಲಿನ ಹಲಗೆಯು ಮುಂಚಾಚಿದ್ದು ಪೂಜಾ ಸಾಮಗ್ರಿಗಳನ್ನಿಡಲು ನಿರ್ಮಿತವಾಗಿದೆ. ಗರ್ಭಗೃಹದ ಮೇಲ್ಛಾವಣಿಯು ಅಷ್ಟಕೋನಗಳಿಂದ ರಚಿತವಾಗಿದ್ದು ಮಧ್ಯದಲ್ಲಿ ಚಿಕ್ಕದಾದ ಕಮಲದ ಶಿಲ್ಪವಿದೆ ಮತ್ತು ಮೂರ್ತಿಗಳು ಕೀರ್ತಿಮುಖಿಗಳಿಂದ ಅಲಂಕೃತಗೊಂಡಿದೆ. ಉತ್ತರ ದಿಕ್ಕಿನ ಗರ್ಭಗೃಹದ ಅಂತರಾಳದ ದ್ವಾರವು ಪಶ್ಚಿಮ ದಿಕ್ಕಿನ ಅಂತರಾಳದ ದ್ವಾರದಂತದೇ ಇದ್ದು ದ್ವಾರದ ನೆಲದಲ್ಲಿ ಹೂಬಳ್ಳಿಗಳ ಕೆತ್ತನೆಯಿಂದ (ಚಂದ್ರಶಿಲೆ) ಕೂಡಿದೆ. ದ್ವಾರದ ಬಲಬದಿಯಲ್ಲಿ ನಿಂತಿರುವ ಮನುಷ್ಯನ ಶಿಲ್ಪವಿದ್ದು ಶಂಖವನ್ನು ಊದುತ್ತಿದ್ದಾನೆ. ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದು ಎರಡು ಬದಿಯಲ್ಲಿ ಕುಳಿತಿರುವ ಸಿಂಹಗಳ ಶಿಲ್ಪಗಳ ಕೆತ್ತನೆ ಇದೆ. ಇದರ ಮೇಲಿನ ತಲೆಯ ಕೆಳಭಾಗದಲ್ಲಿ ಚೌಕದಲ್ಲಿರುವ ವೃತ್ತ ಕಮಲದ ಚಿತ್ರಣವು ಇದರ ಮುಂದೆ ಕುಳಿತಿರುವ ಮನುಷ್ಯನು ಶಂಖವನ್ನು ಊದುತ್ತಿದ್ದಾನೆ. ಮಧ್ಯದಲ್ಲಿರುವ ಮನುಷ್ಯನು ನಡೆಯುತ್ತಿರುವ ಭಂಗಿಯಲ್ಲಿದ್ದು ಇವನು ಸಹ ಶಂಖವನ್ನು ಊದುತ್ತಿದ್ದಾನೆ. ಅಂತರಾಳವು ಚೌಕಾಕಾರವಾಗಿದ್ದು, ಮೇಲ್ಛಾವಣಿಯಲ್ಲಿ ಕಮಲದ ಶಿಲ್ಪವಿದ್ದು ಮೂರ್ತಿಗಳು ಲತಾಪುಷ್ಪಗಳ ಚಿತ್ರಗಳಿಂದ ಕೂಡಿದೆ.

ಗರ್ಭಗೃಹವು ಚೌಕಾಕಾರವಾಗಿದ್ದು ಪಶ್ಚಿಮದ ಭಿತ್ತಿಯಲ್ಲಿ ಕಲ್ಲಿನ ಹಲಗೆಯು ಮುಂದೆ ಬಂದಿದೆ. ಛತ್ತಿನಲ್ಲಿ ದ್ವಿವೃತ್ತ ಕಮಲವು ಅರಳಿದಂತೆ ಚಿತ್ರಿತವಾಗಿದ್ದು ಮೂಲೆಗಳಲ್ಲಿ ಕೀರ್ತಿಮುಖಗಳಿವೆ. ವಾಸ್ತುಶೈಲಿಯ ದೃಷ್ಟಿಯಿಂದ ಈ ದೇವಾಲಯವು ೧೪ನೇ ಶತಮಾನದ ದ್ವಿತಿಯಾರ್ಧ ಕಾಲದಲ್ಲಿ ನಿರ್ಮಾಣವಾಗಿದೆ. ಈ ಮೂರು ತ್ರಿಕೂಟ ದೇವಾಲಯಗಳನ್ನು ಕಂಪಿಲರಾಯನು ತನ್ನ ತಂದೆ, ತಾಯಿ ಮತ್ತು ತನ್ನ ಮೂಲ ಪುರಷನ ಹೆಸರಿನಲ್ಲಿ ಕಟ್ಟಿಸಿರುವ ದೇವಾಲಯಗಳಾಗಿವೆ. ಪ್ರತಿಯೊಂದು ದೇವಾಲಯವು ಶಿವಾಲಯವಾಗಿದೆ.

ಹೆಸರು	: ಕಂಪಿಲರಾಯ ದೇವಾಲಯ - ೧
ಸ್ಥಳ	: ಹೇಮಕೂಟ ಪರ್ವತ, ಹಂಪೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಉತ್ತರ
ಕಾಲ	: ಕ್ರಿ.ಶ. ೧೪ನೇ ಶತಮಾನದ ಮೊದಲ ಭಾಗ
ಉಲ್ಲೇಖ	: VPR, 1987-88, PP. 127-130

ದೇವಾಲಯ ತ್ರಿಕೂಟ ಕದಂಬ ನಾಗರ ಶೈಲಿ (ಫಾಂಸನ ಶೈಲಿ) ಪಿರಮಿಡ್ ಆಕೃತಿಯಲ್ಲಿದೆ. ನವರಂಗದಲ್ಲಿನ ಹೆಚ್ಚುವರಿ ಸ್ತಂಭದ ಮೇಲೆ ಶಾಸನವಿದೆ. ಕಂಪಿಲರಾಯನು ತನ್ನ ತಾಯಿ ಮಾರಾನಾಯಕಿಯ ತಂದೆ ಮುಮ್ಮಡಿ ಸಿಂಗೆಯ ನಾಯಕಿ ಮತ್ತು ತಾತ ಪೇರುಮೆಯನಾಯಕ ಈ ಮೂವರ ಹೆಸರಿನಲ್ಲಿ ಶಿವಾಲಯವನ್ನು ನಿರ್ಮಿಸಿದನು.

ದೇವಾಲಯದ ಅಧಿಷ್ಠಾನವು ಉಪಾನ, ಜಗತಿ, ಪದ್ಮ, ಕುಮುದ, ಕಪೋತ ಮತ್ತು ಹಿಂದೆ ಬಾಗಿದ ಪದ್ಮದಳಗಳಿಂದಲೂ ದಂತ ಪಟ್ಟಿಕೆಯನ್ನೊಳಗೊಂಡಿದೆ. ದೇವಾಲಯದ ಭಿತ್ತಿಯ ಮಧ್ಯಭಾಗದಲ್ಲಿನ ಚಿತ್ರ ಪಟ್ಟಿಕೆಯು (ಪ್ರಸ್ತರ ಅಥವಾ ತೋರಣ)

ಇದ್ದು, ಪೂರ್ವ ಮತ್ತು ಪಶ್ಚಿಮ ದಿಕ್ಕಿನ ಗರ್ಭಗೃಹದ ಭಾಗದ ಪಟ್ಟಿಕೆಯು ಪುಷ್ಪಾಲಂಕೃತವಾಗಿದ್ದು ಪ್ರತಿಯೊಂದು ಪುಷ್ಪವನ್ನು ಚೌಕದಲ್ಲಿ ಕೆತ್ತಲಾಗಿದೆ. ಹಾಗು ಪ್ರತಿ ಚೌಕವು ಸ್ತಂಭಾಕೃತಿಗಳಿಂದ ಕೂಡಿದೆ. ದಕ್ಷಿಣ ಗರ್ಭಗೃಹದ ಭಿತ್ತಿಯಲ್ಲಿನ ಪಟ್ಟಿಕೆಯು ಕೀರ್ತಿಮುಖ, ಮನುಷ್ಯನ ಚಿತ್ರಗಳು, ಹೂ ಬಳ್ಳಿಗಳ ಸುರಳಿಯಲ್ಲಿ ಚಿತ್ರಿತವಾಗಿದೆ. ಕಪೋತವು ಹಿಮ್ಮುಖವಾಗಿ ಬಾಗಿದ್ದು ಮುಖಮಂಟಪದ ಕಪೋತವು ಮುಂಭಾಗದ ಎರಡು ಶಿಲಾ ಸ್ತಂಭಗಳ ಮೇಲೆ ನಿಂತಿದೆ. ಮೂರು ಶಿಖರಗಳು ಕದಂಬ ನಾಗರ ಶೈಲಿಯಲ್ಲಿದ್ದು ಮೇಲೆ ಚೌಕಾಕಾರದ ಪದ್ಮದ ಅಂಚುಗಳು ಮುಂದೆ ಚಾಚಿಕೊಂಡಿವೆ. ಚೌಕಾಕಾರದ ಗ್ರೀವ ಮತ್ತು ಶಿಖರಗಳಿವೆ. ಪಶ್ಚಿಮ ಭಾಗದ ಗರ್ಭಗೃಹದ ಶಿಖರದ ಮೇಲೆ ಚತುರಾಶ್ರ ಸ್ತೂಪಿ ಇದ್ದು, ಉಳಿದೆರಡು ಶಿಖರಗಳ ಮೇಲಿನ ಸ್ತೂಪಿಗಳು ಬಿದ್ದುಹೋಗಿವೆ. ಪ್ರತಿಯೊಂದು ಶಿಖರದ ಮುಂಭಾಗದಲ್ಲಿ ಸುಕನಾಸಿಯು ಇದೆ. ಇದು ಕೂಡು ಮತ್ತು ಕೀರ್ತಿ ಮುಖಗಳಿಂದ ಅಲಂಕೃತವಾಗಿವೆ. ಪ್ರತಿಯೊಂದು ಶಿಖರದ ತಳಗಳಲ್ಲಿ ಶಿಲ್ಪ ಚಿತ್ರಗಳಿರುವ ಫಲಕಗಳಿವೆ. ಇಲ್ಲಿ ಗಣೇಶ, ನೃತ್ಯಶಿವ, ಭೈರವ, ವಿಷ್ಣು, ನರಸಿಂಹ ಮತ್ತು ಸೂರ್ಯನ ಶಿಲ್ಪ ಮೂರ್ತಿಗಳಿವೆ. ಬ್ರಹ್ಮ ಮತ್ತು ಕುಳಿತಿರುವ ಶಿವನ ಶಿಲ್ಪ ಚಿತ್ರಗಳು ಪಶ್ಚಿಮ ಭಾಗದ ಗರ್ಭಗೃಹದ ಶಿಖರದಲ್ಲಿದೆ.

ಮುಖಮಂಟಪವು ನಾಲ್ಕು ಶಿಲಾ ಸ್ತಂಭಗಳಿಂದ ಕೂಡಿದ್ದು ಸ್ತಂಭದ ಕೆಳಭಾಗ ಚತುರಾಶ್ರ, ಮೇಲ್ಭಾಗವು ಷೋಡಶ್ರ ಕೋನಗಳಿಂದಲೂ, ಒಳಭಾಗವು ಸ್ವಲ್ಪ ತಗ್ಗಾಗಿರುವ ನೆರಿಗೆಗಳಿಂದಲೂ ಮತ್ತು ಎಲೆಯಾಕಾರದ ಚಿತ್ರಗಳಿಂದ ಅಲಂಕೃತವಾಗಿದೆ. ಮುಖ ಮಂಟಪದ ಮುಂಭಾಗದಲ್ಲಿ ಕಕ್ಷಾಸನವು ಮೂರು ಬದಿಗಳಲ್ಲಿಯೂ ಇದೆ. ನವರಂಗವು ಹದಿನಾರು ಸ್ತಂಭಗಳಿಂದ ಆವೃತವಾಗಿದೆ. ಮಧ್ಯದಲ್ಲಿ ನಾಲ್ಕು ಸ್ತಂಭಗಳಿದ್ದು ಸ್ವಲ್ಪವೇ ಎತ್ತರವಾಗಿರುವ ಅಧಿಷ್ಠಾನದ ಮೇಲಿವೆ. ಅಧಿಷ್ಠಾನವು ಪಟ್ಟಿಕೆಗಳಿಂದ ಅಲಂಕೃತವಾಗಿದೆ. ನವರಂಗದ ಸ್ತಂಭಗಳು ಚತುರಾಶ್ರ, ಅಷ್ಟಾಶ್ರ ಷೋಡಶ್ರ ಅಷ್ಟಾಶ್ರ ಮತ್ತು ಷೋಡಶ್ರ ಅದರ ಮೇಲಿನ ಭಾಗವು ಅರ್ಧಘಟಾಕೃತಿ, ಚಕ್ರಬೋದಿಗೆ, ಘಂಟಾಬೋದಿಗೆಯನ್ನು ಒಳಗೊಂಡಿವೆ. ಆರು ದೇವಕೋಷ್ಠಗಳು ಅಂತರಾಳದ ಗೋಡೆಯಲ್ಲಿ ನಿರ್ಮಿಸಲಾಗಿವೆ. ಪದ್ಮಾಧಿಷ್ಠಾನದ ಮೇಲೆ ಸ್ತಂಭಾಕೃತಿಗಳಿಂದಲೂ ಕಳಿಂಗ, ದ್ರಾವಿಡ ಮತ್ತು ನಾಗರ ಶೈಲಿಯ ಶಿಖರಗಳಿವೆ. ನವರಂಗದ ಛತ್ತಿನಲ್ಲಿ ತ್ರಿವೃತ್ತಕಮಲವಿದೆ. ನವರಂಗದ ಆಗ್ನೇಯ ಭಾಗದಲ್ಲಿ ಹೆಚ್ಚುವರಿ ಸ್ತಂಭವನ್ನು ನಿಲ್ಲಿಸಲಾಗಿದ್ದು ಈ ಕಂಬದ ಮೇಲೆ ವೀರಕಂಪಿಲರಾಯನ ಶಾಸನವಿದೆ. ಇದು ಶಿವಾಲಯವನ್ನು ನಿರ್ಮಾಣ ಮಾಡಿದ್ದನ್ನು ಉಲ್ಲೇಖಿಸಿದೆ.

ಗರ್ಭಗೃಹದ ದ್ವಾರದ ಕೆಳಭಾಗದಲ್ಲಿ ಪೂರ್ಣ ಕುಂಭದ ಚಿತ್ರಗಳಿವೆ. ಕಪೋತವು ಶಾಖೆಗಳಿಂದ ಆಧಾರವಾಗಿದ್ದು ಲಲಾಟವು ಸಪಾಟಾಗಿದೆ. ಇದು ಮೂಲರೂಪದಲ್ಲಿರುವುದೇ ವಿಶೇಷ. ಕಪೋತದಲ್ಲಿ ಮೂರು ಶಿಖರಗಳ ಚಿತ್ರಗಳಿದ್ದು ಮಧ್ಯದಲ್ಲಿ ದ್ರಾವಿಡ ಶೈಲಿಯೂ ಬದಿಯಲ್ಲಿ ನಾಗರ ಶೈಲಿಯ ಶಿಖರಗಳಿವೆ. ಅಂತರಾಳದ ಛತ್ತಿನಲ್ಲಿ ತ್ರಿವೃತ್ತ ಕಮಲವಿದೆ. ಮತ್ತು ಗರ್ಭಗೃಹದ ಛತ್ತಿನಲ್ಲಿಯೂ ತ್ರಿವೃತ್ತ ಕಮಲವಿದೆ. ಗರ್ಭಗೃಹದ ಛತ್ತು ಮೂರು ಅಂತರ್ ವೃತ್ತಗಳ ಪಟ್ಟಿಕೆಯಿಂದ ಕೂಡಿದೆ. ಪೂರ್ವ ಮತ್ತು ಪಶ್ಚಿಮ ಗರ್ಭಗೃಹದ ಅಂತರಾಳಗಳು ಸಹ ಮೇಲಿನ ಗರ್ಭಗೃಹದಂತೆಯೇ ಇವೆ. ದೇವಾಲಯದ ಅಧಿಷ್ಠಾನದ ಕೆಳಭಾಗದಲ್ಲಿರುವ ನೆಲಗಟ್ಟಿನಲ್ಲಿ ಸೋಪಾನಗಳಿದ್ದು ಸೋಪಾನದ ಎರಡೂ ಬದಿಯಲ್ಲಿ ಅಧಿಷ್ಠಾನದ ಪಟ್ಟಿಕೆಗಳಿದು

ಮೇಲ್ಭಾಗದ ಪದ್ಮದಳಯುಕ್ತ ಕಪೋತವಾಗಿದೆ. ಈ ರೀತಿಯ ನೆಲಗಟ್ಟಿನ ಅಧಿಷ್ಠಾನದ ಪಟ್ಟಿಕೆಗಳು ತ್ರಿಕೂಟ ದೇವಾಲಯ ನಂ. ೨ ಮತ್ತು ದ್ವಿಕೂಟ ದೇವಾಲಯಗಳಲ್ಲೂ ಕಾಣಬಹುದು.

ಪೂರ್ವಭಾಗದ ಗರ್ಭಗೃಹವು ದಕ್ಷಿಣ ಭಾಗದ ಗರ್ಭಗೃಹದಂತೆಯೆ ನವರಂಗವೂ ಇದ್ದು ಗರ್ಭಗೃಹದ ಭಿತ್ತಿಯ ಮಧ್ಯದಲ್ಲಿ ಮುಂಚಾಚಿರುವ ಶಿಲಾ ಪಟ್ಟಿಕೆ ಪೂರ್ವ ಮತ್ತು ಉತ್ತರ ಭಾಗದಲ್ಲಿವೆ. ಪಶ್ಚಿಮ ಭಾಗದ ಗರ್ಭ ದಕ್ಷಿಣ ಭಾಗದ ಗರ್ಭಗೃಹವ ಹೋಲಿಕೆ ಇದ್ದು ಭಿತ್ತಿಯ ಮಧ್ಯದಲ್ಲಿ ಶಿಲಾ ಪಟ್ಟಿಕೆಗಳು ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಮುಂಚಾಚಿವೆ.

ಹೆಸರು	: ಕಂಪಿಲರಾಯ ದೇವಾಲಯ - ೨
ಸ್ಥಳ	: ಹೇಮಕೂಟ ಹಂಪೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್
ಮುಖ	: ಉತ್ತರ
ಕಾಲ	: ಕ್ರಿ.ಶ. ೧೪ನೇ ಶತಮಾನದ ಮೊದಲ ಭಾಗ
ಉಲ್ಲೇಖ	: VPR, 1987-88, PP. 130-31

ದೇವಾಲಯವು ಉತ್ತರಾಭಿಮುಖವಾಗಿದ್ದು ಮೂರು ಗರ್ಭಗೃಹಗಳು, ಪ್ರತಿಯೊಂದಕ್ಕೂ ಅಂತರಾಳ ಮತ್ತು ಒಂದೇ ನವರಂಗವಿದ್ದು, ಮುಖ ಮಂಟಪವಿದೆ. ದೇವಾಲಯದ ಅಧಿಷ್ಠಾನ ಉಪಾನ, ಪದ್ಮ ಕುಮುದ ಮತ್ತು ಕಪೋತವು ಪದ್ಮದಳ ಪಟ್ಟಿಕೆ (ದಂತ ಪಟ್ಟಿಕೆ)ಗಳಿಂದ ಅಲಂಕೃತಗೊಂಡಿದೆ. ದೇವಾಲಯದ ಭಿತ್ತಿಯು ಸರಳವಾಗಿದ್ದು ಮಧ್ಯಭಾಗದಲ್ಲಿ ತೋರಣದ ಪಟ್ಟಿಕೆ(ಪ್ರಸ್ತರ)ಯು ಭಿತ್ತಿಯನ್ನು ಸುತ್ತುವರಿದಿದೆ. ಕಪೋತವು ದೇವಾಲಯದ ಭಿತ್ತಿಯ ಮೇಲ್ಭಾಗದಲ್ಲಿ ಇದ್ದು ಕೋನಾಕೃತಿಯಲ್ಲಿ ಅಧೋಮುಖವಾಗಿ ಬಾಗಿದೆ. ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನೊಳಗೊಂಡಿದೆ. ಅದರ ಮೇಲೆ ದಳ ಪಟ್ಟಿಕೆಯಿಂದ (ದಂತ ಪಟ್ಟಿಕೆ) ಕೂಡಿದ್ದು ಮೇಲೆ ಛಜ್ಜವೂ ಇದೆ. ಶಿಖರಗಳು ಫಾಂಸನ ಶೈಲಿಯಲ್ಲಿದ್ದು ಎಂಟು ತಳಗಳಿಂದ ಕೂಡಿವೆ. ಶಿಖರದ ಮೂರು ಭಾಗಗಳಲ್ಲಿಯು ಕೂಡು ಚಿತ್ರಗಳನ್ನೊಳಗೊಂಡಿದ್ದು ಈ ಕೂಡುಗಳಲ್ಲಿ (ಫಲಕ) ಗಣೇಶ, ಶಿವ, ಕಾಳಿ, ವಿಷ್ಣು, ನರಸಿಂಹ, ಸೂರ್ಯ, ಯಕ್ಷರು ತೇಲುತ್ತಿರುವ ಗಂಧರ್ವರುಗಳ ಶಿಲ್ಪ ಚಿತ್ರಗಳಿವೆ. ಪ್ರತಿಯೊಂದು ಫಲಕವು ತೋರಣ ಮತ್ತು ಕೀರ್ತಿಮುಖಗಳಿಂದ ಅಲಂಕೃತವಾಗಿವೆ. ಪ್ರತಿಯೊಂದು ತಳಗಳು ಕಂಠ ಪದ್ಮಗಳಿಂದಾಗಿದ್ದು ಪ್ರತಿಯೊಂದು ತಳ ಕಂಠದಿಂದ ಬೇರ್ಪಟ್ಟಿದೆ. ಶಿಖರಗಳು ಚತುರ್ರಾಶ್ರವಾಗಿದೆ. ಎಲ್ಲಾ ಮೂರು ಗರ್ಭಗೃಹಗಳ ಮೇಲ್ಭಾಗದಲ್ಲಿ ಚತುರಾಶ್ರ ಸ್ತೂಪಿಗಳು ಇರುತ್ತವೆ. ಮೂರು ಗರ್ಭಗೃಹಗಳ ಶಿಖರದ ಮುಂಭಾಗದಲ್ಲಿ ಸುಖನಾಸಿಗಳಿದ್ದು ಕಂಠ, ಕಪೋತ ಎರಡು ಹಂತದ ಪದ್ಮವಿದೆ. ಅರ್ಧಭಾಗಿರುವ ಮೇಲ್ಛಾವಣಿಯ ಮುಂಭಾಗದಲ್ಲಿ ಕೀರ್ತಿ ಮುಖಗಳಿವೆ.

ಮುಖ ಮಂಟಪವು ನಾಲ್ಕು ಶಿಲಾ ಸ್ತಂಭಗಳ ಮೇಲೆ ನಿಂತಿದ್ದು ಸ್ತಂಭಗಳು ಚತುರಾಶ್ರ ಮತ್ತು ಷೋಡಶಾಶ್ರಗಳ ನೆರಿಗೆಗಳಿಂದ ಕೂಡಿದ್ದು ಪುಷ್ಪದ ಶಲಾಕೆಯಂತೆ ಕಾಣುತ್ತವೆ. ಕಂಬಗಳಿಗೆ ಹೊಂದಿಕೊಂಡಂತೆ ಕಕ್ಷಾಸನವಿದ್ದು ಪದ್ಮ, ಕಂಠ, ಪದ್ಮಗಳುಳ್ಳ

ಅಧಿಷ್ಠಾನಗಳಿಂದ ಕೂಡಿದೆ. ನವರಂಗವು ಹದಿನಾರು ಸ್ತಂಭಗಳಿಂದ ಕೂಡಿದ್ದು ಮಧ್ಯದ ಕೆಳಭಾಗವು ಚತುರಾಶ್ರ ಆಕಾರವಾಗಿದ್ದು ಸ್ವಲ್ಪ ಎತ್ತರವಾಗಿದೆ. ನವರಂಗದ ಮಧ್ಯದ ನಾಲ್ಕು ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಷೋಡಶ್ರ ಕೋನಗಳಾಗಿದ್ದು ಮೇಲ್ಭಾಗವು ಅರ್ಧ ಘಟಾಕಾರ ಚಕ್ರ ಬೋದಿಗೆ, ಘಂಟಾಬೋದಿಗೆ, ಚತುರ್ಮುಖ ಬೋದಿಗೆಗಳಿಂದ ಕೂಡಿವೆ. ಭಿತ್ತಿಯಲ್ಲಿ ಆರು ದೇವ ಕೋಷ್ಠಗಳಿವೆ. ನವರಂಗದ ಛತ್ತಿನಲ್ಲಿ ಅಷ್ಟಾವರಣದ ಮಧ್ಯೆ ಕಮಲದ ಶಿಲ್ಪ ಚಿತ್ರವಿದೆ. ಅಂತರಾಳದ ದ್ವಾರವು ಆರು ಶಾಖೆಗಳಿಂದ ಕೂಡಿದ್ದು ಬಾಗಿಲಿನ ಮೇಲೆ 'S' ಆಕಾರದ ಛಜ್ಜವಿದೆ. ಗರ್ಭಗೃಹಗಳು ಚೌಕಾಕಾರವಾಗಿದ್ದು ಗರ್ಭಗೃಹದ ಬಾಗಿಲು ಆರು ಶಾಖೆಗಳಿಂದ ಕೂಡಿವೆ. ಮೇಲೆ ಲಲಾಟವಿದ್ದುದು ಚಿತ್ರಿತವಾಗಿಲ್ಲ. ಗರ್ಭಗೃಹದ ದಕ್ಷಿಣ ಮತ್ತು ಪೂರ್ವದಿಕ್ಕಿನಲ್ಲಿ ಎರಡು ಶಿಲಾ ಪಟ್ಟಿಕೆಗಳು ಭಿತ್ತಿಯಿಂದ ಮುಂದೆ ಚಾಚಲ್ಪಟ್ಟಿದೆ. ಮೇಲ್ಛಾವಣಿಯಲ್ಲಿ ಕಮಲವಿದ್ದು ಅಷ್ಟಕೋನ ಪಟ್ಟಿಕೆಗಳಿಂದ ಕೂಡಿದೆ. ಕಮಲದ ದಳಗಳು ಸರಳವಾಗಿವೆ. ಕಳಸದ ಭಾಗಗಳು ಮತ್ತು ಶುಕನಾಸಿಕದ ಭಾಗಗಳು ಭಾಗಶಃ ಶಿಥಿಲವಾಗಿವೆ.

ದೇವ ಕುಂಜರಿಯ 'ಹಂಪಿ ಗೈಡ್' ಪುಸ್ತಕದಲ್ಲಿ ಈ ದೇವಾಲಯಗಳನ್ನು ಹೇಮಕೂಟದ ಜೈನ ದೇವಾಲಯಗಳೆಂದು ಹೆಸರಿಸಿದ್ದಾರೆ. ಆದರೆ ಇವು ಶಾಸನೋಕ್ತವಾಗಿ ಶಿವಾಲಯಗಳಾಗಿವೆ. (VPR, 1983-88, PP. 207-209)

ಹೆಸರು	: ಈಶ್ವರ ದೇವಾಲಯ
ಸ್ಥಳ	: ಚಿಕ್ಕ ಬೆಟ್ಟದ ಮೇಲೆ ಸಿಂಗೆನಾಯಕನಹಳ್ಳಿ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್
ಮುಖ	: ಪೂರ್ವ
ಕಾಲ	: ೧೩-೧೪ನೇ ಶತಮಾನ

ದೇವಾಲಯ ಬಹಳಷ್ಟು ಜೀರ್ಣವಾಗಿದ್ದು, ಪ್ರಸ್ತುತ ಎಂಟು ಸ್ತಂಭಗಳ ಮಂಟಪ ಮಾತ್ರವಿದೆ. ಗರ್ಭಗೃಹ ಅಂತರಾಳಗಳು ಪೂರ್ಣವಾಗಿ ನಶಿಸಿವೆ. ಈ ಮಂಟಪವು ಮೂರು ಅಂಕಣಗಳನ್ನೊಳಗೊಂಡಿದೆ. ಮದ್ಯದ ಅಂಕಣದಲ್ಲಿ ವೃತ್ತ ಪೀಠದಲ್ಲಿರುವ ಶಿವಲಿಂಗವಿದೆ. ಶಿವಲಿಂಗದ ಬಲಭಾಗದ ಮಂಟಪದಲ್ಲಿ ಗಣೇಶನ ಶಿಲ್ಪವಿದೆ. ಶಿವಲಿಂಗದ ಪೀಠವು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಲಿಂಗಮಾತ್ರ ಕಪ್ಪು ಶಿಲೆಯದಾಗಿದೆ.

ಹೆಸರು	: ವೀರಭದ್ರ ದೇವಾಲಯ
ಸಿಕ್ಕ ಸ್ಥಳ	: ಸಿಂಗೆ ನಾಯಕನಹಳ್ಳಿ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ತುಂಡು ಕಲ್ಲುಗಳು
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: VPR: 1988-89, PP. 20-21

ಆಂಜನೇಯ ದೇವಾಲಯದ ಪಶ್ಚಿಮದಲ್ಲಿ ಗುಂಡಿನ ಬಳಿ ಚಿಕ್ಕದಾಗಿರುವ ವೀರಭದ್ರ ದೇವಾಲಯವನ್ನು ಚಿಕ್ಕ ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಒಳಭಾಗವು ಪಶ್ಚಿಮ ದಿಕ್ಕಿನಲ್ಲಿರುವ ಗುಂಡನ್ನು ಒಳಗೊಂಡಿದೆ. ಈ ದೇವಾಲಯಕ್ಕೆ ಚಿಕ್ಕದಾದ ಬಾಗಿಲು ಇದೆ. ಗುಂಡಿನ ಮೇಲೆ ವೀರಭದ್ರ ಕುಳಿತಿರುವ ದಕ್ಷ ಬ್ರಹ್ಮ ಹಾಗು ನಿಂತಿರುವ ನಂದಿಯ ಶಿಲ್ಪಗಳನ್ನು ನಿರ್ಮಿಸಲಾಗಿದೆ.

ಈಶ್ವರ ದೇವಾಲಯ, ಆಂಜನೇಯ ದೇವಾಲಯ, ವೀರಭದ್ರ ದೇವಾಲಯ ಹಾಗು ಬಾಪಿ ಇರುವ ದೊಡ್ಡ ಆವರಣವು ಗ್ರಾನೈಟ್ ಶಿಲೆಯ ಚಿಕ್ಕಗುಡ್ಡದ ಭಾಗ. ಈ ಆವರಣದಲ್ಲಿ ಬಾವಿಯೊಂದಿದೆ. ಇವೆಲ್ಲವುಗಳಿಗೂ ಒಂದು ಕೋಟೆಯ ಗೋಡೆಯ ಆವರಣವಿದೆ. ಇಲ್ಲಿ ವಿಜಯನಗರದ ಕೃಷ್ಣದೇವರಾಯನ ಶಾಸನವಿದೆ. ಸಿಂಗನಾಯಕನಹಳ್ಳಿ ಗ್ರಾಮವನ್ನು ವಿರೂಪಾಕ್ಷದೇವರಿಗೆ ದಾನವಾಗಿ ನೀಡಿದ ಉಲ್ಲೇಖವಿದೆ.

ಹೆಸರು	: ಮಲ್ಲಿಕಾರ್ಜುನ ದೇವಾಲಯ
ಸ್ಥಳ	: ಮಾದಿಗ ಹಂಪಯ್ಯನ ಗುಡ್ಡ, ಹಳೇ ಕುಮ್ಮಟ,ಕೊಪ್ಪಳ ತಾಲೂಕು ಮತ್ತು ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೪ನೇ ಶತಮಾನದ ಮೊದಲ ಭಾಗ
ಉಲ್ಲೇಖ	: VPR, 1987-88, PP. 207-209

ದೇವಾಲಯದ ಅಧಿಷ್ಠಾನವು ಉಪಾನ, ಪದ್ಮ, ಕುಮುದ ಕಪೋತಗಳನ್ನೊಳಗೊಂಡಿದೆ. ಸಭಾಮಂಟಪದ ಅಧಿಷ್ಠಾನದಲ್ಲಿ ಕಪೋತ ಇರದೇ ಭಿತ್ತಿಯು ಸರಳವಾಗಿದೆ. ಗರ್ಭಗೃಹ ಅಂತರಾಳದ ಭಿತ್ತಿಯ ಮಧ್ಯಭಾಗದಲ್ಲಿ ಪ್ರಸ್ತರವಿದೆ. ಭಿತ್ತಿಯ ಮೇಲಿನ ಛಜ್ಜವು ವಿರುದ್ಧ ಮುಖದ ಸುರುಳಿಯಾಕಾರದಲ್ಲಿರುವುದು ವಿಶೇಷತೆ. ಕಳಿಂಗ ಅಥವಾ ಫಾಂಸನ ಶೈಲಿಯ ಶಿಖರ ಹತ್ತು ತಳಗಳಿಂದ ಕೂಡಿದ್ದು ಪಿರಾಮಿಡ್ಡಿನ ಆಕೃತಿಯಲ್ಲಿದೆ. ಪ್ರತಿ ತಳದಲ್ಲಿ ಕಪೋತವಿದ್ದು ಕಪೋತದ ಮೇಲ್ಭಾಗವು ಪದ್ಮದಳ ಪಟ್ಟಿಕೆ (ದಂತ ಪಟ್ಟಿಕೆ)ಯ ಅಲಂಕರಣಗಳಿಂದ ಆವೃತವಾಗಿದೆ. ಪ್ರತಿ ತಳದ ಮಧ್ಯದಲ್ಲಿ ಫಲಕಗಳಿವೆ. ಶಿಖರದ ಮೇಲೆ ಚತುರಾಶ್ರ ಸ್ತೂಪಿ ಇದೆ. ಸ್ತೂಪಿಯ ನಾಲ್ಕು ಮುಖಗಳಲ್ಲಿ ಫಲಕಗಳಿವೆ. ಸ್ತೂಪಿಯು ದದ್ದ-ಕಂಠ ಮತ್ತು ಶಿಖರಗಳನ್ನೊಳ ಗೊಂಡಿದೆ. ಶಿಖರದ ಮುಂದೆ ಶುಕನಾಸಿ ಇದೆ. ಶುಕನಾಸಿಯು ಸರಳವಾಗಿದೆ. ಚಿತ್ರಗಳು ಇರದೇ ಮೂಲ ರೂಪದಲ್ಲಿರುವುದು ವಿಶೇಷತೆಗಳಲ್ಲೊಂದು.

ಗರ್ಭಗೃಹದಲ್ಲಿ ವೃತ್ತ ಪೀಠದ ಮೇಲೆ ಲಿಂಗವಿದ್ದು ಇಂದಿಗೂ ಪೂಜೆಗೊಳ್ಳುತ್ತಲಿದೆ. ಗರ್ಭಗೃಹ ಮತ್ತು ಅಂತರಾಳದ ಛತ್ತಿನಲ್ಲಿ ವಿವೃತ್ತ ಕಮಲಗಳಿವೆ. ಗರ್ಭಗೃಹ ಮತ್ತು ಅಂತರಾಳದ ಬಾಗಿಲುಗಳು ಸರಳವಾಗಿದ್ದು ಮೂರು ಸರಳ ಶಾಖೆಗಳನ್ನು ಒಳಗೊಂಡಿವೆ. ಲಲಾಟವು ಚೌಕಾಕಾರವಾಗಿದ್ದು ಕಮಲದ ಚಿತ್ರವಿದೆ. ಸಭಾ ಮಂಟಪವು ನಾಲ್ಕು ಶಿಲಾ ಸ್ತಂಭಗಳಿಂದ ಕೂಡಿದ್ದು

ಉಳಿದ ಸ್ತಂಭಗಳು ಕಕ್ಷಾಸನದಲ್ಲಿ ಸೇರ್ಪಡೆಯಾಗಿವೆ. ಸ್ತಂಭಗಳು ಚತುರಾಶ್ರ ಪೀಠದ ಮೇಲೆ ಸ್ಥಾಪಿತವಾಗಿದ್ದು ಚತುರಾಶ್ರ, ಅಷ್ಟಾಶ್ರ, ಷೋಡಶಾಶ್ರ ಕೋನಗಳಿಂದ ಕೂಡಿದ್ದು ಅದರ ಮೇಲೆ ಅರ್ಧ ಘಟಾಕಾರ, ಚಕ್ರ ಬೋದಿಗೆ (ಫಲಕ ಬೋದಿಗೆ) ಘಂಟಾ ಬೋದಿಗೆಯೂ ಲತಾ ಪುಷ್ಪಗಳಿಂದ ಅಲಂಕೃತಗೊಂಡಿದೆ. ಛತ್ತಿನ ಚೌಕದಲ್ಲಿ ದ್ವಿವೃತ್ತ ಕಮಲವಿದೆ. ಸಭಾ ಮಂಟಪದ ಸುತ್ತಲೂ ಕಕ್ಷಾಸನವಿದ್ದು ಅಧಿಷ್ಠಾನದ ಮೇಲ್ಭಾಗವು ಪದ್ಮದಿಂದ ಕೂಡಿದೆ. ಅಂತರಾಳದ ದ್ವಾರದ ಎರಡೂ ಬದಿಯಲ್ಲಿ ದೇವಕೋಷ್ಠಗಳಿವೆ. ದೇವಕೋಷ್ಠದ ಕೆಳಭಾಗದಲ್ಲಿ ಪದ್ಮವಿದ್ದು ಮೇಲ್ಭಾಗವು ಕಪೋತದಿಂದ ಕೂಡಿದೆ. ಕಪೋತದ ಮೇಲೆ ಪದ್ಮದಳಗಳಿವೆ. ಎರಡೂ ಬದಿಯಲ್ಲಿ ಕೂಡ್ಯ ಸ್ತಂಭಗಳಿವೆ. ಸಭಾ ಮಂಟಪದ ಮಧ್ಯದಲ್ಲಿ ಭಗ್ನವಾದ ನಂದಿ ಶಿಲ್ಪವಿದೆ. ನಂದಿ ವಿಗ್ರಹ ಗರ್ಭಗೃಹದಲ್ಲಿನ ಶಿವಲಿಂಗದ ಎದುರಿಗಿದೆ. ಈ ದೇವಾಲಯ ಹಂಪೆಯ ಹೇಮಕೂಟದ ಮೇಲಿರುವ ತ್ರಿಕೂಟ ದೇವಾಲಯದ ಮಾದರಿಯಲ್ಲಿದೆ.

ಹೆಸರು	: ಕಾಟಪ್ಪನ ಗುಡಿ
ಸ್ಥಳ	: ಕಾಕುಬಾಳು ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಗುಡ್ಡದ ಕೆಳಗೆ ಕಾಕುಬಾಳು, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರ್ಯಾನೈಟ್ ಶಿಲೆ
ಮುಖ	: ಉತ್ತರ
ಕಾಲ	: ಕ್ರಿ.ಶ. ೧೪ನೇ ಶತಮಾನ

ಕುಮಾರ ರಾಮನಾಥನ ಅಣ್ಣ ಕಾಟಪ್ಪ(ಣ್ಣ)ನ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿದ್ದು ಹೆಚ್ಚಿನ ಭಾಗ ಜೀರ್ಣವಾಗಿದೆ. ನಾಲ್ಕು ಸ್ತಂಭಗಳುಳ್ಳ ಒಂದು ಅಂಕಣವಿದೆ. ದೇವಾಲಯದ ಒಳ ಭಾಗದಲ್ಲಿ ಕುದುರೆಯ ಮೇಲೆ ಕುಳಿತ ಕಾಟಣ್ಣನ ಶಿಲ್ಪವಿದೆ. ದೇವಾಲಯದ ಮೇಲ್ಭಾಗವು ಬಿದ್ದು ಹೋಗಿದೆ. ದೇವಾಲಯದ ಮುಂಭಾಗದಲ್ಲಿ ಪಾದಗಳ ಶಿಲ್ಪವಿದೆ. ವಿಜಯನಗರ ಕಾಲದಲ್ಲಿ ಕುಮಾರ ರಾಮನಾಥನ ದೇವಾಲಯಗಳನ್ನು ಕಟ್ಟಿ ಒಂದು ಆರಾಧ್ಯ ದೈವವೆಂದು ಆರಾಧಿಸುತ್ತಿರುವುದು ವಿಶೇಷವಾದರೆ, ಅವನ ಅಣ್ಣ ಕಾಟಣ್ಣನ ಹೆಸರಿನಲ್ಲೂ ದೇವಾಲಯ ನಿರ್ಮಿಸಿ ಪೂಜೆ ಮತ್ತು ರಥೋತ್ಸವಗಳನ್ನು ಆಚರಿಸಿರುವುದು ಇನ್ನೂ ಹೆಚ್ಚು ವೈಶಿಷ್ಟಪೂರ್ಣವಾಗಿದೆ. ಕುಮಾರ ರಾಮನಾಥನ ಹೆಸರಿನಲ್ಲಿ ನಿರ್ಮಿಸಿದ ದೇವಾಲಯಗಳ ರೀತಿಯಲ್ಲಿ ಕಾಟಪ್ಪನ ದೇವಾಲಯವನ್ನು ನಿರ್ಮಿಸಲಾಗಿದೆ. ಹೊಸಮಲೆ ದುರ್ಗ ಹಾಗು ಕುಮ್ಮಟ ದುರ್ಗದಲ್ಲಿರುವ ಕುಮಾರ ರಾಮನ ದೇವಾಲಯಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಹೆಸರು	: ದ್ವಿಕೂಟ ದೇವಾಲಯ
ಸಿಕ್ಕ ಸ್ಥಳ	: ಹೇಮಕೂಟ ಪರ್ವತ ಹಂಪೆ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರ್ಯಾನೈಟ್ ಶಿಲೆ

ಮುಖ : ಪೂರ್ವ

ಕಾಲ : ಕ್ರಿ.ಶ. ೧೪ನೇ ಶತಮಾನದ ಮೊದಲ ಭಾಗ

ಉಲ್ಲೇಖ : VPR, 1987-88, PP. 131-135

ದೇವಾಲಯದ ಅಧಿಷ್ಠಾನ ಉಪಾನ, ಪದ್ಮ, ದಳಯುಕ್ತ ಕುಮುದ, ಸರಳವಾದ ಕಂಠ, ಕಪೋತದ ಮೇಲಿನ ಭಾಗವು ಪದ್ಮದಳ ಪಟ್ಟಿಕೆಗಳಿಂದ ಅಲಂಕೃತವಾಗಿದೆ. ಅಧಿಷ್ಠಾನದ ಕೆಳಗಿನ ನೆಲವನ್ನು ಕಲ್ಲು ಚಪ್ಪಡಿಗಳಿಂದ ಸಮತಟ್ಟಾಗಿ ಮಾಡಿ, ಅದರ ಮೇಲಿನ ಭಾಗವನ್ನು ಅಧಿಷ್ಠಾನದ ರೀತಿಯಲ್ಲಿ ಮಾರ್ಪಡಿಸಲಾಗಿದೆ. ದಳಯುಕ್ತ ಕುಮುದ, ಕಂಠ ದಳಯುಕ್ತ ಕಪೋತವಿದೆ. ಈ ಅಧಿಷ್ಠಾನದ ಮೇಲೆ ದೇವಾಲಯದ ಅಧಿಷ್ಠಾನ ನಿರ್ಮಾಣಗೊಂಡಿದೆ. ಅಧಿಷ್ಠಾನದ ಮೇಲೆ ಭಿತ್ತಿಯು ನಿರ್ಮಾಣವಾಗಿದೆ. ಭಿತ್ತಿಯ ಮಧ್ಯ ಸ್ವಲ್ಪ ಮುಂದೆ ಬಂದಿರುವ ಪ್ರಸ್ತರ(ತೋರಣ)ಪಟ್ಟಿ, ದೇವಾಲಯವನ್ನು ಸುತ್ತುವರಿದಿದೆ. ಪ್ರಸ್ತರದ ಪಟ್ಟಿಯಲ್ಲಿ ಚೌಕಾಕಾರಗಳಿದ್ದು ಚೌಕಗಳ ಮಧ್ಯದಲ್ಲಿ ಪುಷ್ಪಗಳಿಂದ ಅಲಂಕೃತಗೊಂಡಿದೆ. ಭಿತ್ತಿಯಲ್ಲಿ ಕೂಡ್ಯ ಸ್ತಂಭಗಳಿವೆ. ಅವುಗಳ ಮಧ್ಯದಲ್ಲಿ ಪುಷ್ಪಗಳ ಚಿತ್ರಗಳಿವೆ. ಅಂತರಾಳದ ಹೊರಭಾಗದ ಭಿತ್ತಿಯ ಮೇಲೆ ಶಿವಲಿಂಗವಿದ್ದು ಪೂಜೆಯಲ್ಲಿ ನಿರತನಾದ ವ್ಯಾಘ್ರಪಾದನು ಮಂಗಳಾರತಿಯನ್ನು ಮಾಡುತ್ತಿದ್ದಂತಿದೆ. ನವರಂಗದ ದಕ್ಷಿಣ ದಿಕ್ಕಿನ ದ್ವಾರಗಳಲ್ಲಿ ಆನೆಗಳ ಶಿಲ್ಪಗಳಿವೆ. ಉತ್ತರ ದಿಕ್ಕಿನ ದ್ವಾರದ ಬದಿಯಲ್ಲಿ ಅಧಿಷ್ಠಾನ ಪಟ್ಟಿಕೆಗಳು ಭಿತ್ತಿಯ ಅರ್ಧಭಾಗದವರಿಗೂ ಇರುತ್ತವೆ. ಭಿತ್ತಿಯ ಮೇಲೆ ಬಾಗಿದ ಪಟ್ಟಿಕೆಯಿಂದ ಅಂತ್ಯಗೊಂಡು ಸಜ್ಜವು ಸರಳವಾಗಿದ್ದು ಮೂಲ ರೂಪದಲ್ಲಿರುವುದೇ ವಿಶೇಷತೆ. ನವರಂಗ ಮತ್ತು ಮುಖ ಮಂಟಪಗಳಲ್ಲಿ ದೊಡ್ಡದಾದ ಕಪೋತವಿದ್ದು ಮುಂದೆ ಚಾಚಿಕೊಂಡಿವೆ. ಸಜ್ಜದ ಮೇಲಿನಿಂದಲೇ ಶಿಖರದ ಸ್ತರಗಳು ಪ್ರಾರಂಭಗೊಂಡಿದೆ. ನವರಂಗದ ಮುಖಮಂಟಪದ ಮೇಲೆ (Parapet way) ಕುಂಬೆಯ ಗೋಡೆಯು ಇದ್ದು ಅಧಿಷ್ಠಾನದ ಕಂಠ ಮತ್ತು ಕಪೋತಗಳ ಆಕಾರದಲ್ಲಿದೆ. ದಕ್ಷಿಣ ದಿಕ್ಕಿನ ಮುಖಮಂಟಪದ ಮುಂಭಾಗದಲ್ಲಿ ಎರಡು ಶಿಲಾಸ್ತಂಭಗಳನ್ನು ಹೊಂದಿದ್ದು ಕಕ್ಷಾಸನಗಳಿಂದ ಆವೃತವಾಗಿದೆ. ಕಕ್ಷಾಸನಗಳು ಹೊರಗೂ ದಿಂಬುಗಳಂತೆ ಹಿಂಬಾಗಿವೆ. ಸ್ತಂಭಗಳು ಕಕ್ಷಾಸನದಲ್ಲಿ ಸೇರ್ಪಡೆಯಾಗಿವೆ. ಸ್ತಂಭಗಳ ಕೆಳಭಾಗವು ಚತುರ್ರಾಶ್ರವಾಗಿದ್ದು ವಿವಿಧ ನೆರಗಳಿಂದಲೂ ಅದರ ಮೇಲೆ ಅರ್ಧ ಘಟಾಕೃತಿಯು ಚಕ್ರಬೋದಿಗೆ ಚೌಕಬೋದಿಗೆಗಳಿಂದ ನಿರ್ಮಾಣವಾಗಿದ್ದು ಮೇಲ್ಛಾವಣಿ ಸರಳವಾಗಿದೆ. ಪೂರ್ವದಿಕ್ಕಿನ ಮುಖ ಮಂಟಪವು ಸಹ ದಕ್ಷಿಣ ದಿಕ್ಕಿನ ದ್ವಾರದ ಮುಖ ಮಂಟಪದಂತೆಯೇ ಇದ್ದು ಸ್ತಂಭಗಳು ವಿವಿಧ ನೆರಿಗೆಗಳಿಂದ ಚಿತ್ರಿತವಾಗಿದೆ. ನವರಂಗದ ದಕ್ಷಿಣ ದಿಕ್ಕಿನ ದ್ವಾರವು ಐದು ಶಾಖೆಗಳಿಂದ ಕೂಡಿದ್ದು ಸರಳವಾದ ಲತಾ ಪುಷ್ಪಗಳು ಲಲಾಟದವರೆಗೂ ಮುಂದುವರೆದಿವೆ. ಲಲಾಟವು ಚೌಕಾಕಾರವಾಗಿದ್ದು ಸರಳವಾಗಿದೆ. ಕೆಳಭಾಗದ ಎರಡೂ ದ್ವಾರದ ಬದಿಗಳಲ್ಲಿ ಶೈವ ದ್ವಾರಪಾಲಕರಿದ್ದು ದ್ವಾರದ ಕಡೆ ಮುಖ ಮಾಡಿ ನಿಂತಿರುವರು. ಪೂರ್ವದಿಕ್ಕಿನ ದ್ವಾರವು ನಾಲ್ಕು ಶಾಖೆಗಳಿಂದ ಕೂಡಿದ್ದು ಲಲಾಟವು ಅಲಂಕಾರತೆ ಇಲ್ಲದೆ ಮೂಲ ರೂಪದಲ್ಲಿದೆ.

ಉತ್ತರ ದಿಕ್ಕಿನ ನವರಂಗದ ದ್ವಾರವು ಐದು ಶಾಖೆಗಳಿಂದ ಕೂಡಿದ್ದು ಶೈವ ದ್ವಾರ ಪಾಲಕರಿದ್ದು ಲಲಾಟದಲ್ಲಿ ಗಣೇಶನ ಶಿಲ್ಪವಿದೆ. ನವರಂಗ ಹದಿನಾರು ಸ್ತಂಭಗಳಿಂದ ಕೂಡಿದ್ದು ಹನ್ನೆರಡು ಸ್ತಂಭಗಳು ನವರಂಗದ ಗೋಡೆಯಲ್ಲಿ ಕೂಡ್ಯ ಸ್ತಂಭಗಳಾಗಿ

ಚೌಕಾಕಾರವಾಗಿದೆ. ಮಧ್ಯದಲ್ಲಿನ ನಾಲ್ಕು ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು ಚತುರಾಶ್ರ ಪೀಠದ ಮೇಲೆ ಸ್ಥಾಪಿತವಾಗಿದೆ. ಪೀಠಗಳು ಅಧಿಷ್ಠಾನದ ಪಟ್ಟಿಕೆಗಳ ಆಕಾರದಲ್ಲಿ ಚಿತ್ರಿತವಾಗಿದ್ದು ಮೇಲ್ಭಾಗದಲ್ಲಿ ದಳಯುಕ್ತ ಕಪೋತದಂತೆ ನಿರ್ಮಿತವಾಗಿವೆ. ಸ್ತಂಭಗಳು ಚತುರಾಶ್ರ ಅಷ್ಟಾಶ್ರ ಷೋಡಶಾಶ್ರ, ಅಷ್ಟಾಶ್ರ ಮತ್ತು ಷೋಡಶಾಶ್ರ, ಅಷ್ಟ, ಚತುರಾಶ್ರಗಳಾಕೃತಿಯಲ್ಲಿದ್ದು ಮೇಲ್ಭಾಗ ಅರ್ಧ ಘಟಾಕೃತಿಯಲ್ಲಿದ್ದು ಅದರ ಮೇಲೆ ಕಂಠವಿರುವುದು ವೈಶಿಷ್ಟ್ಯತೆಗಳಲ್ಲೊಂದಾಗಿದೆ. ಮೇಲ್ಭಾಗದಲ್ಲಿ ಚಕ್ರಬೋದಿಗೆಯು ಅದರ ಮೇಲೆ ಘಂಟಾಬೋದಿಗೆ, ಚತುರ್ಮುಖ ಬೋದಿಗೆಗಳು ಇವೆ. ಅರ್ಧ ಘಟಾಕೃತಿಯಲ್ಲಿ ಕೀರ್ತಿ ಮುಖಗಳಿವೆ. ಸ್ತಂಭಗಳ ಮಧ್ಯ ಭಾಗದಲ್ಲಿರುವ ಅಷ್ಟಾಶ್ರ ಪಟ್ಟಿಕೆಯು ಲತಾ ಪುಷ್ಪಗಳಿಂದ ಅಲಂಕರಣಗೊಂಡಿವೆ. ಸ್ತಂಭಗಳ ಚತುರಾಶ್ರ ಭಾಗದಲ್ಲಿ ಮತ್ಸ್ಯೇಂದ್ರನಾಥ, ಐದು ತಲೆಗಳಿರುವ ಹಂಸ ಪಕ್ಷಿ, ಬೇಡಕನ್ಯೆಯ ಕಾಲಿನಿಂದ ಮುಳ್ಳನ್ನು ತೆಗೆಯುವ ಮನುಷ್ಯ, ತಂತು ವಾದ್ಯವನ್ನು ಹಿಡಿದು ನರ್ತಿಸುವವನು, ಮಕರ, ಹುಲಿಯ ಮೇಲೆ ಆಸೀನಳಾದ ಮಹಿಷಮರ್ದಿನಿ, ಪಕ್ಷಿ ಮತ್ತು ಮಾನವ ದೇಹದ ಕನ್ಯೆ, ಲಕ್ಷ್ಮಿ, ಸರಸ್ವತಿ ಪಗಡೆ ಆಡುತ್ತಿರುವವರು, ಕೊಳಲು ನುಡಿಸುತ್ತಿರುವವರು, ನೃತ್ಯಗಾರ್ತಿ, ವಾದ್ಯಗಳನ್ನು ನುಡಿಸುತ್ತಿರುವ ಸ್ತ್ರೀ ಮತ್ತು ಗಂಡಸಿನ ಚಿತ್ರಗಳು, ಗಣೇಶ ಮತ್ತು ಹಂಸಗಳ ಶಿಲ್ಪಗಳಿವೆ. ಭಿತ್ತಿನಲ್ಲಿ ಅಷ್ಟಾವರಣದಲ್ಲಿರುವ ಪದ್ಮದ ಶಿಲ್ಪವಿದೆ. ನವರಂಗದ ಸುತ್ತಲೂ ಕಕ್ಷಾಸನವು ಸರಳವಾದ ಎರಡು ಅಧಿಷ್ಠಾನದ ಪಟ್ಟಿಕೆಗಳನ್ನು ಹೊಂದಿರುವುದು. ಅಂತರಾಳದ ದ್ವಾರವು ಆರು ಶಾಖೆಗಳಿಂದ ಕೂಡಿದ್ದು ಲತೆಗಳಿರುವ ಎರಡು ಶಾಖೆಗಳು ದಳಗಳಿರುವ ಮೂರು ಶಾಖೆಗಳು ಒಂದು ಶಾಖೆಯು ಸರಳವಾಗಿದ್ದು ಮೇಲಿನ ಲಲಾಟದವರೆಗೂ ಮುಂದುವರೆದಿವೆ. ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಲಕ್ಷ್ಮಿಯ ಶಿಲ್ಪವಿದೆ. ಅಂತರಾಳ ಚೌಕಾಕಾರವಾಗಿದ್ದು ಮಧ್ಯದಲ್ಲಿ ನಂದಿ ಶಿಲ್ಪವಿದೆ. ಗರ್ಭಗೃಹದ ದ್ವಾರವು ಆರು ಶಾಖೆಗಳಿಂದ ಕೂಡಿದ್ದು ಸರಳವಾಗಿರುವುದೇ ವಿಶೇಷತೆ. ಕೆಳಭಾಗದಲ್ಲಿ ಪೂರ್ಣಕುಂಭಗಳಿವೆ. ಗರ್ಭಗೃಹವು ಚೌಕಾಕಾರವಾಗಿದ್ದು ಪಶ್ಚಿಮ ಮತ್ತು ಉತ್ತರ ಭಿತ್ತಿಗಳಲ್ಲಿ ಕಲ್ಲಿನ ಹಲಗೆಗಳು ಮುಂದೆ ಚಾಚಿದ್ದು ಭಿತ್ತಿನಲ್ಲಿ ವಿಕಸಿತ ಕಮಲವು ಅಷ್ಟಾವರಣದ ಮಧ್ಯದಲ್ಲಿದೆ.

ಉತ್ತರ ದಿಕ್ಕಿನ (ಭಾಗದ) ದೇವಾಲಯದ ನವರಂಗದ ದ್ವಾರವು ಪೂರ್ವಕ್ಕೆ ಮತ್ತು ಪಶ್ಚಿಮ ದಿಕ್ಕಿನಲ್ಲಿ ಎರಡು ಗರ್ಭಗೃಹಗಳ ಮಧ್ಯದಲ್ಲಿ ಚಿಕ್ಕದಾದ ದ್ವಾರವಿದೆ. ನವರಂಗವು ಹನ್ನೆರಡು ಶಿಲಾಸ್ತಂಭಗಳಿಂದ ಕೂಡಿದ್ದು ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ನವರಂಗದ ಮಧ್ಯಭಾಗವು ನೆಲಮಟ್ಟದಿಂದ ಸ್ವಲ್ಪವೇ ಎತ್ತರವಾಗಿದೆ. ಉತ್ತರ ಭಾಗದ ಭಿತ್ತಿಗೆ ಹೊಂದಿಕೊಂಡಂತೆ ಕಕ್ಷಾಸನವಿದ್ದು ಉತ್ತರ ಮತ್ತು ಪೂರ್ವದಿಕ್ಕಿನ ಭಿತ್ತಿಗಳಲ್ಲಿ ಐದು ಜಾಲಂಧರಗಳಿವೆ. ಚತುರಾಶ್ರ, ಅಷ್ಟಾಶ್ರ ಷೋಡಶ್ರ ಕೋನಗಳ ಸ್ತಂಭಗಳಿದ್ದು ಅವುಗಳ ಮೇಲ್ಭಾಗವು ಅರ್ಧ ಘಟಾಕೃತಿ, ಚಕ್ರಬೋದಿಗೆ, ಘಂಟಾ ಬೋದಿಗೆಯನ್ನೊಳಗೊಂಡಿದೆ. ಅದರ ಮೇಲೆ ಚತುರಾಶ್ರ ಬೋದಿಗೆಗಳಿವೆ. ಸ್ತಂಭಗಳ ಮೇಲೆ ಮತ್ಸ್ಯೇಂದ್ರನಾಥ ಬೇಟೆಗಾರ ಕನ್ಯೆ, ಹಂಸ, ನವಿಲು, ನಕ್ಷತ್ರ, ಕೊಳಲನ್ನು ನುಡಿಸುವ ಮನುಷ್ಯ (ವೇಣುವಾದಕ) ನೃತ್ಯಸ್ತ್ರೀ, ಮೂರು ಮುಖದ ಜಿಂಕೆ ಇರುವ ವೃತ್ತ (ಚಂದ್ರ) ಮಕರ, ಪುರುಷ, ನೃತ್ಯಗಾರ ಇಬ್ಬರು ಮನುಷ್ಯರಿರುವ ವೃತ್ತ ಚಿತ್ರ, ಗಂಟು ಚಿತ್ರಗಳಿರುವ ಲತಾ ಪುಷ್ಪಗಳ ಶಿಲ್ಪಗಳಿವೆ. ನವರಂಗದ ದ್ವಾರವು ಸರಳವಾದ ಶಾಖೆಗಳು ಲಲಾಟದಲ್ಲಿ ಸೇರ್ಪಡೆಯಾಗಿವೆ. ದೇವಾಲಯದ ಒಳ ಮತ್ತು ಹೊರ ಭಾಗವು ಗಾರೆಯಿಂದ ಮುಚ್ಚಲ್ಪಟ್ಟಿದೆ. ಅಂತರಾಳದ

ದ್ವಾರ ಮೂರು ಶಾಖೆಗಳಿಂದ ಕೂಡಿದ್ದು ಮೇಲ್ಭಾಗವು ಸರಳ ಶಾಖೆಗಳಿಂದ ಕೂಡಿದೆ. ಗರ್ಭಗೃಹದ ದ್ವಾರವು ಸಪಾಟಾಗಿದೆ. ಲಲಾಟವು ಸರಳವಾಗಿದೆ. ದಕ್ಷಿಣ ಭಾಗದ ಗರ್ಭಗೃಹದ ಮಾದರಿಯಲ್ಲಿಯೇ ಇದೆ.

ಹೆಸರು	: ರಾಮಸ್ವಾಮಿ ದೇವಾಲಯ
ಸ್ಥಳ	: ಹೊಸಮಲೆ ದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೪-೧೫ನೇ ಶತಮಾನ
ಉಲ್ಲೇಖ	: VPR, 1988-91, PP. 237-38, 240-41

ಕುಮಾರ ರಾಮನಾಥನ ಹೆಸರಿನಲ್ಲಿ ಕಟ್ಟಿಸಿದ ಸ್ಮರಣಾರ್ಥ ದೇವಾಲಯ. ದೇವಾಲಯ ಗರ್ಭಗೃಹ ಸಭಾಮಂಟಪ ಹಾಗು ದೀಪಸ್ತಂಭವನ್ನು ಹೊಂದಿದೆ. ಗರ್ಭಗೃಹದ ಭಾಗಕ್ಕೆ ಮಾತ್ರ ಅಧಿಷ್ಠಾನವಿದೆ. ಮುಖ ಮಂಟಪದಲ್ಲಿ ಗೋಡೆಯನ್ನು ನೆಲಮಟ್ಟದಿಂದ ಕಟ್ಟಲಾಗಿದೆ. ಭಿತ್ತಿಯನ್ನು ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದ್ದು ಗರ್ಭಗೃಹದ ಮೇಲೆ ಕೂಟ ಶಿಖರವಿದೆ. ಇದು ಆಧುನಿಕವಾಗಿದ್ದು ಗಾರೆ ಮತ್ತು ಇಟ್ಟಿಗೆಗಳಿಂದ ನಿರ್ಮಿತವಾಗಿದೆ.

ಗರ್ಭಗೃಹದಲ್ಲಿ ಭಿತ್ತಿಗೆ ಹತ್ತಿರವಾಗಿ ಕೇಶವಮೂರ್ತಿಯ ಶಿಲ್ಪವಿದೆ. ಮುಂಭಾಗದಲ್ಲಿ ಲಿಂಗವಿದೆ. ಈ ಲಿಂಗವಿರುವ ಸ್ಥಳದಲ್ಲಿ ಕುಮಾರರಾಮನ ತಲೆಯನ್ನು ಸಮಾಧಿ ಮಾಡಲಾಯಿತೆಂದು ಅಲ್ಲಿನ ಸ್ಥಳೀಯರ ವಾಡಿಕೆ. ಗರ್ಭಗೃಹದ ಮುಂದೆ ಮುಖ ಮಂಟಪವಿದ್ದು ಮುಂಭಾಗದಲ್ಲಿ ಎರಡು ಶಿಲಾ ಸ್ತಂಭಗಳಿವೆ. ಸ್ತಂಭಗಳು ಚತುರಾಶ್ರ ಅಷ್ಟಾಶ್ರ ಚತುರಾಶ್ರ ಕೋನಗಳಿಂದ ಕೂಡಿದ್ದಾಗಿವೆ. ಮಂಟಪದ ಮುಂದೆ ಶಿಲಾಶಾಸನವಿದ್ದು ಈ ಗುಡಿಯನ್ನು ಕಟ್ಟಿಸಿದ್ದ ಬಗ್ಗೆ ತಿಳಿಸುತ್ತದೆ. ರಾಮನಾಥನ ಮಗಳು ಗೋಪಾಯಿ, ರಾಮನಾಥನ ಗುಡಿಯನ್ನು ಕಟ್ಟಿಸಿದ್ದು ಪೂರ್ವದ (ರಾಮನಾಥನ ಕಾಲದ) ಛಪ್ಪನ್ನಾಸ ಮಂದಿ ವೀರರಿಗೆ ಸ್ವರ್ಗ ಆಗಬೇಕೆಂದು ಕಟ್ಟಿಸಿದ್ದಳೆಂದಿದೆ. (VPR, 1988-91, PP. 237-38, 240-41) ಒಟ್ಟಾರೆ ಇದು ಕುಮ್ಮಟ ರಾಮನಾಥ ದೇವಾಲಯವನ್ನು ಕಟ್ಟಿಸಿದ ಉಲ್ಲೇಖ ಮತ್ತು ವಂಶಾವಳಿಯನ್ನು ತಿಳಿಸುತ್ತದೆ.

ಹೆಸರು	: ವೀರಭದ್ರ ದೇವಾಲಯ
ಸ್ಥಳ	: ಕೆರೆಯ ಕೋಡಿಯ ಬಳಿ ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೬ನೇ ಶತಮಾನ

ದೊರವದಿ ಕೆರೆಯ ಕೋಡಿಯ ಬಳಿ ಬೆಟ್ಟಕ್ಕೆ ಹೊಂದಿಕೊಂಡಂತೆ ಇರುವ ವೀರಭದ್ರ ದೇವಾಲಯವು ಗರ್ಭಗೃಹ ಮತ್ತು ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಗುಹೆ ಇದ್ದು ಗುಹೆಯ ಬಂಡೆಯ ಮೇಲೆ ವೀರಭದ್ರದೇವರ ಶಿಲ್ಪವಿದೆ. ಗರ್ಭಗೃಹದ ದ್ವಾರ ಸರಳವಾಗಿದೆ. ಲಲಾಟದಲ್ಲಿ ಕಮಲವಿದೆ. ಮುಖ ಮಂಟಪಗಳಲ್ಲಿರುವ ಸ್ತಂಭಗಳು ಚತುರಾಶ್ರ ಮತ್ತು ಅಷ್ಟಾಶ್ರ ಭುಜಗಳನ್ನು ಹೊಂದಿವೆ. ಹೊರಗಿನ ಮಂಟಪದ ಸ್ತಂಭಗಳು ಕೆಳಭಾಗದಲ್ಲಿ ಚತುರಾಶ್ರ ಮೇಲಿನ ಭಾಗದಲ್ಲಿ ಅಷ್ಟಾಶ್ರ ಭುಜಗಳಿದ್ದು, ನೆರಿಗೆಗಳಂತೆ ನಯಗೊಳಿಸಲಾಗಿದೆ. ದೇವಾಲಯದ ಮುಂದೆ ದೀಪಸ್ತಂಭವಿದೆ.

ಗಾಣಪತ್ಯ ದೇವಾಲಯಗಳು

ಹೆಸರು	: ಗಣೇಶ ದೇವಾಲಯ
ಸ್ಥಳ	: ಹಜಾರ ರಾಮಚಂದ್ರ ಬೀದಿ, ಕಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಉತ್ತರ
ಕಾಲ	: ಕ್ರಿ.ಶ. ೧೪ನೇ ಶತಮಾನದ ಆದಿ ಭಾಗ
ಉಲ್ಲೇಖ	: VPR, 1984, P. 70

ಅಧಿಷ್ಠಾನವು ಉಪಾನ, ಜಗತಿ, ಕುಮುದ, ಕಂಠ, ಕಪೋತಗಳನ್ನು ಒಳಗೊಂಡಿದೆ. ಕುಮುದ ಮತ್ತು ಕಪೋತಗಳಲ್ಲಿ ಪದ್ಮದಳಗಳ ಅಲಂಕರಣವಿದೆ. ಶಿಖರದ ಭಾಗವು ಶಿಥಿಲವಾಗಿದೆ. ಮುಖ ಮಂಟಪವು ನಾಲ್ಕು ಉದ್ದನೆಯ ಸ್ತಂಭಗಳಿಂದ ಕೂಡಿದ್ದು ಪಶ್ಚಿಮ ದಿಕ್ಕಿನ ಒಂದು ಸ್ತಂಭವು ಬಿದ್ದು ಹೋಗಿದೆ. ಸ್ತಂಭಗಳು ಚತುರಾಶ್ರ ಮತ್ತು ಅಷ್ಟಾಶ್ರ ಕೋನಗಳಿಂದ ಕೂಡಿದೆ. ಸ್ತಂಭಗಳು ಪೀಠದ ಮೇಲೆ ಸ್ಥಾಪಿತವಾಗಿದ್ದು ಸರಳವಾಗಿರುವ ವೈಶಿಷ್ಟ್ಯತೆ ಇದೆ. ಮುಖ ಮಂಟಪದಲ್ಲಿ ಅರ್ಧ ಭಗ್ನವಾಗಿರುವ ನಾಗಶಿಲ್ಪವಿದೆ. ಅಂತರಾಳವು ಚೌಕಾಕಾರವಾಗಿದೆ. ದ್ವಾರವು ಬಿದ್ದು ಹೋಗಿದೆ. ದ್ವಾರದ ಮೇಲಿನ ಭಾಗವು ಕೆಳಗೆ ಬಿದ್ದಿದೆ. ಲಲಾಟದ ಭಾಗ ಚೌಕಾಕಾರವಾಗಿದೆ. ಗಣೇಶ ವಿಗ್ರಹ ಗರ್ಭಗೃಹದಲ್ಲಿದೆ. ಗರ್ಭಗೃಹದ ಬಾಗಿಲು ಶಿಥಿಲವಾಗಿದೆ. ಗರ್ಭಗೃಹದಲ್ಲಿ ನಾಲ್ಕು ಚೌಕಾಕಾರದ ಸ್ತಂಭಗಳು ನಿಂತಿದ್ದು ಕೆಳಭಾಗವು ಮಣ್ಣಿನಿಂದ ಮುಚ್ಚಿದೆ. ಗರ್ಭಗೃಹದ ಛತ್ತು ಅಷ್ಟಾಶ್ರ ಕೋನಗಳಿಂದ ರಚಿತವಾಗಿದೆ. ಮಧ್ಯದಲ್ಲಿ ಕಮಲದ ಶಿಲ್ಪವಿದೆ. ಈ ದೇವಾಲಯದ ಅಧಿಷ್ಠಾನದ ಶೈಲಿಯು ಕುಮ್ಮಟದಲ್ಲಿನ ಅರಮನೆಗಳ ಅಧಿಷ್ಠಾನ ಮತ್ತು ಹೇಮಕೂಟ ಹಂಪೆಯ ತ್ರಿಕೂಟ ದೇವಾಲಯಗಳ ಅಧಿಷ್ಠಾನದ ಶೈಲಿಯಲ್ಲಿ ನಿರ್ಮಿತವಾಗಿದ್ದರಿಂದ ಈ ದೇವಾಲಯದ ನಿರ್ಮಾಣದ ಕಾಲವನ್ನು ೧೪ನೇ ಶತಮಾನದ ಮೊದಲ ಭಾಗದಲ್ಲಿ ನಿರ್ಮಿಸಿರಬಹುದಾಗಿದೆ.

ಹೆಸರು	: ಗಣೇಶ ದೇವಾಲಯ
ಸ್ಥಳ	: ಅಂಬಿಗರ ಬಾಗಿಲ ಮುಂದೆ ಆನೆಗೊಂದಿ ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪಶ್ಚಿಮ
ಕಾಲ	: ೧೩-೧೪ ನೇ ಶತಮಾನ

ಗಣೇಶ ದೇವಾಲಯ ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ದೇವಾಲಯ ಅಧಿಷ್ಠಾನ ಹಾಗು ಭಿತ್ತಿಯನ್ನೊಳಗೊಂಡಿದೆ. ಮುಖ ಮಂಟಪದಲ್ಲಿ ನಾಲ್ಕು ಸ್ತಂಭಗಳಿವೆ. ಸ್ತಂಭಗಳು ಚತುರಾಶ್ರ ಅಷ್ಟಾಶ್ರ ಮತ್ತು ಚತುರಾಶ್ರ ಕೋನಗಳಲ್ಲಿವೆ. ಮೇಲಿನ ಭಾಗವು ಅರ್ಧಘಟಾಕಾರ, ಚಕ್ರಬೋದಿಗೆ ಹಾಗು ಚತುರ್ಮುಖ ಬೋದಿಗೆಗಳಿವೆ. ದ್ವಾರವು ಮೂರು ಸರಳ ಶಾಖೆಗಳಿಂದ ಕೂಡಿದ್ದು ಲಲಾಟದಲ್ಲಿ ಕಮಲವಿದೆ. ಗರ್ಭಗೃಹದಲ್ಲಿ ಪ್ರಾಕೃತಿಕ ಬಂಡೆಯ ಮೇಲೆ ಗಣೇಶನ ಶಿಲ್ಪವನ್ನು ನಿರ್ಮಿಸಲಾಗಿದೆ. ಗರ್ಭಗೃಹದ ಛತ್ತಿನಲ್ಲಿ ಕಮಲವಿದೆ.

ದೇವಾಲಯ ಶಿಖರವು ಕದಂಬ ನಾಗರ ಶೈಲಿಯಲ್ಲಿದ್ದು ಆರು ಸರಳವಾದ ತಳಗಳಿಂದ ಕೂಡಿದೆ. ಶಿಖರದ ಮೇಲೆ ಚತುರಾಶ್ರ ಸ್ತೂಪಿಯನ್ನೊಳಗೊಂಡಿದೆ. ಶಿಖರದ ಮುಂದೆ ಶುಖನಾಸಿ ಇದೆ. ಶುಖನಾಸಿಯ ಮೇಲಿನ ಭಾಗವು ಶಿಥಿಲವಾಗಿದೆ.

ಶಕ್ತಿ ಪಂಥ ದೇವಾಲಯಗಳು

ಹೆಸರು	: ಭಾಗ್ಯಲಕ್ಷ್ಮಿ ದೇವಾಲಯ
ಸ್ಥಳ	: ಬ್ರಹ್ಮಗಿರಿ ಬೆಟ್ಟದ ಪಶ್ಚಿಮಕ್ಕೆ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: MAR, 1930, P. 27

ದೇವಾಲಯ ಪೂರ್ವಭಿಮುಖವಾಗಿದ್ದು, ಬ್ರಹ್ಮಗಿರಿಯ ತ್ರಿಶಂಕೇಶ್ವರ ದೇವಾಲಯದ ಕೆಳಭಾಗದಲ್ಲಿರುವ ಈ ದೇವಾಲಯವು ಈಗ ಶಿಥಿಲವಾಗಿದೆ. ಈ ದೇವಾಲಯವನ್ನು ಭಾಗ್ಯಲಕ್ಷ್ಮಿ ದೇವಾಲಯವೆಂದು ಕರೆಯುವ ವಾಡಿಕೆ ಇದೆ. ದೇವಾಲಯ ಒಳಭಾಗ ಗರ್ಭಗೃಹ, ಅಂತರಾಳ, ನವರಂಗಗಳಿವೆ. ಸ್ತಂಭಗಳು ಚತುರಾಶ್ರ, ಅಷ್ಟಾಶ್ರ ಮತ್ತು ಷೋಡಶಾಶ್ರ ವಾಗಿದ್ದು ನೆರಿಗೆಗಳಿಂದ ಕೂಡಿದೆ.

ಹೆಸರು	: ತಾಯಮ್ಮನ ಗುಡಿ
ಸಿಕ್ಕ ಸ್ಥಳ	: ಸಿಂಗೆ ನಾಯಕನಹಳ್ಳಿ ತುರ್ತಾ ಕಾಲುವೆಯ ದಕ್ಷಿಣಕ್ಕೆ ಗುಡ್ಡದ ಮೇಲೆ, ಹಂಪೆಯ ಪಶ್ಚಿಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಉತ್ತರ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ

ದೇವಾಲಯದ ಮುಂಬದಿಯಲ್ಲಿ ಉದ್ದನೆಯ ಕಲ್ಲು ದಿಂಡಿನ ಮೇಲೆ ಗರ್ಭಗೃಹದ ಸ್ತಂಭಗಳನ್ನು ಸ್ಥಾಪಿಸಲಾಗಿದೆ. ಹಿಂಬದಿಯ ಸ್ತಂಭಗಳನ್ನು ಪ್ರಾಕೃತಿಕ ಗುಂಡಿನ ಮೇಲೆ ಸ್ಥಾಪಿಸಿದೆ. ಗರ್ಭಗೃಹವು ನಾಲ್ಕು ಸ್ತಂಭಗಳಿಂದ ನಿರ್ಮಾಣವಾಗಿದ್ದು ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಚತುರಾಶ್ರ ಕೋನಗಳಲ್ಲಿದ್ದು ಮೇಲಿನ ಭಾಗ, ಅರ್ಧ ಘಟಾಕೃತಿಯಲ್ಲಿದೆ. ಅದರ ಮೇಲೆ ಸರಳವಾದ ಬೋದಿಗೆಗಳಿವೆ. ಹಿಂಭಾಗದ ಸ್ತಂಭಗಳು ಚತುರಾಶ್ರ ಕೋನದಲ್ಲಿವೆ. ಗರ್ಭಗೃಹದ ದ್ವಾರದಲ್ಲಿ ಎರಡು ಸ್ತಂಭಗಳನ್ನು ನಿಲ್ಲಿಸಿದ್ದು ಅವುಗಳು ಸಹ ಚತುರಾಶ್ರ, ಅಷ್ಟಾಶ್ರ, ಚತುರಾಶ್ರ ಸ್ತಂಭಗಳಿದ್ದು ಅವುಗಳ ಮೇಲ್ಭಾಗದಲ್ಲಿ ಸರಳವಾದ ಕಲ್ಲು ಚಪ್ಪಡಿಯನ್ನು ಹಾಕಲಾಗಿದೆ. ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ತುಂಡು ಕಲ್ಲುಗಳಿಂದ ಭಿತ್ತಿಯನ್ನು ಕಟ್ಟಿದ್ದು ಛತ್ತು ಸಪಾಟಾಗಿದೆ. ದೇವಾಲಯದ ಒಳಭಾಗದ ಗೋಡೆ ಭಿತ್ತಿ ಮತ್ತು ನೆಲಕ್ಕೆ ಸುಣ್ಣದ ಗಾರೆಯನ್ನು ಮಾಡಲಾಗಿದೆ. ಗರ್ಭಗೃಹದಲ್ಲಿ ಪ್ರಾಕೃತಿಕ ಬಂಡೆಯ ಮೇಲೆ ದೇವಿಯ ಮುಖಶಿಲ್ಪವನ್ನು ನಿರ್ಮಿಸಲಾಗಿದೆ.

ಹೆಸರು	: ತಾಯಮ್ಮನ ಗುಡಿಯ ಪಶ್ಚಿಮಕ್ಕಿರುವ ದೇವಾಲಯ
ಸ್ಥಳ	: ಸಿಂಗೆ ನಾಯಕನಹಳ್ಳಿ ತುರ್ತಾಕಾಲುವೆಯ ದಕ್ಷಿಣಕ್ಕೆ, ಗುಡ್ಡದ ಮೇಲೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ

ಬೆಟ್ಟದ ಮೇಲಿರುವ ಈ ದೇವಾಲಯ ಪೂರ್ಣವಾಗಿ ಬಿದ್ದಿದೆ. ಇಲ್ಲಿ ಶಿಥಿಲವಾಗಿರುವ ಶಿಲಾ ಸ್ತಂಭಗಳು, ಅಧಿಷ್ಠಾನದ ಭಾಗಗಳು ಬೋದಿಗೆಗಳನ್ನು ಕಾಣಬಹುದು. ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಚತುರಾಶ್ರವಾಗಿದ್ದು ಮೇಲಿನ ಭಾಗವು ಅರ್ಧಘಟಾಕೃತಿ ಬೋದಿಗೆಯನ್ನೊಳಗೊಂಡಿದೆ. ಈಗ ಇಲ್ಲಿ ಚೌಕಾಕಾರದ ತುಂಡು ಕಲ್ಲಿನಲ್ಲಿ ರಚಿತವಾದ ಭಿತ್ತಿ ಇದೆ.

ಈ ದೇವಾಲಯದ ಅವಶೇಷಗಳ ಹಿಂದಿನ ಬಂಡೆಗಳ ನಡುವೆ ಗುಹೆಯೊಂದಿದ್ದು ಇದನ್ನು ಪುನಃ ವಾಸಕ್ಕಾಗಿ ಉಪಯೋಗಿಸಿರುವರು. ಸುತ್ತಲೂ ತುಂಡುಗಲ್ಲುಗಳಿಂದ ಗೋಡೆಯನ್ನು ಕಟ್ಟಿದ್ದು ಉತ್ತರ ದಿಕ್ಕಿನ ಭಾಗದಲ್ಲಿ ಕಿರಿದಾದ

ದ್ವಾರವಿದೆ. ಸುಣ್ಣದಿಂದ ಬರೆದ ಅಸ್ಪಷ್ಟ ಚಿತ್ರಗಳಿವೆ. ತಮಿಳು ಲಿಪಿಯ ಅಕ್ಷರವನ್ನು ಗುಹೆಯ ಒಳಭಾಗದ ಬಂಡೆಯ ಮೇಲೆ ಬರೆಯಲಾಗಿದೆ.

ಹೆಸರು	: ತಾಯಮ್ಮನ ಗುಹೆಯ ಗುಡ್ಡದ ಕೆಳಗಿನ ದೇವಾಲಯ
ಸ್ಥಳ	: ಸಿರಿಗೆ ನಾಯಕನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ

ಈ ದೇವಾಲಯದ ಮೇಲ್ಭಾಗವು ಮತ್ತು ಅಧಿಷ್ಠಾನದ ಭಾಗಗಳು, ಕಪೋತದ ಭಾಗಗಳು ಹಾಳಾಗಿವೆ. ಮತ್ತು ಇತ್ತೀಚೆಗೆ ಅಧಿಷ್ಠಾನದ ಮುಂದಿನ ಭಾಗದಲ್ಲಿ ಆಳವಾಗಿ ಅಗೆತ ಮಾಡಿರುವುದರಿಂದಲೂ ದೇವಾಲಯ ಸಾಕಷ್ಟು ಹಾಳಾಗಿದೆ. ನಕ್ಷತ್ರ ವಿನ್ಯಾಸದಲ್ಲಿರುವ ಅಧಿಷ್ಠಾನದ ಭಾಗವು ಮೇಲೆ ಕಾಣುತ್ತಿದೆ. ಈ ದೇವಾಲಯವು ಸಹ ತಾಯಮ್ಮನ ದೇವಾಲಯದ ಕಾಲಮಾನದ್ದಾಗಿದೆ.

ಹೆಸರು	: ತಾಯಮ್ಮನ ಗುಡಿ
ಸ್ಥಳ	: ತಾಯಮ್ಮನ ಕೊಳ, ಹೊಸಮಲೆ ದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಚಿಕ್ಕ ಕಲ್ಲು ಮತ್ತು ಮಣ್ಣಿನಿಂದ ಕಟ್ಟಲಾಗಿದೆ
ಮುಖ	: ಉತ್ತರ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: VPR, 1988-91, P. 238

ತಾಯಮ್ಮನ ಕೊಳದ ಬಳಿ ಇರುವ ಈ ಚಿಕ್ಕ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ದೇವಾಲಯದಲ್ಲಿ ಚಿಕ್ಕದಾದ ಲಿಂಗವನ್ನು ಸ್ಥಾಪಿಸಲಾಗಿದೆ. ದೇವಾಲಯದ ಮುಂದೆ ದೀಪಸ್ತಂಭವಿದೆ.

ಹೆಸರು	: ತಾಯಮ್ಮ ದೇವಾಲಯ
ಸ್ಥಳ	: ದೊರವದಿ ಕೋಟೆಯ ಉತ್ತರಕ್ಕೆ ಹಳೇ ಗ್ರಾಮದ ರಸ್ತೆ ಬದಿಯಲ್ಲಿ ದರೋಜಿ. ಸಂಡೂರ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ದಕ್ಷಿಣ
ಕಾಲ	: ಕ್ರಿ.ಶ. ೧೪-೧೫ನೇ ಶತಮಾನ

ದೊರವದಿ ಕೋಟೆಯ ಉತ್ತರಕ್ಕೆ ಹಳೆಗ್ರಾಮದ ರಸ್ತೆ ಬದಿಯಲ್ಲಿ ಎರಡು ದೇವಾಲಯಗಳಿವೆ. ಇದರಲ್ಲಿ ಒಂದನ್ನು ತಾಯಮ್ಮನ ದೇವಾಲಯವೆಂದು ಕರೆಯುತ್ತಾರೆ. ಇದರ ಮೂಲ ಶಿಲ್ಪ ಕುಮ್ಮಟನಾಯಕರ ಕಾಲಕ್ಕೆ ಸೇರಿದೆ. ಈ ದೇವಾಲಯದ ಗೋಡೆಗಳನ್ನು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಒಳಗಿರುವ ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಚತುರಾಶ್ರ ಕೋನಗಳಿಂದಲೂ ಮೇಲಿನ ಭಾಗದಲ್ಲಿ ಅರ್ಧ ಘಟಾಕಾರ, ಚಕ್ರಬೋದಿಗೆ ಚತುರ್ಮುಖ ಬೋದಿಗೆಗಳಿಂದ ಕೂಡಿದೆ. ಈ ದೇವಾಲಯಕ್ಕೆ ಗರ್ಭಗೃಹ ಮತ್ತು ಮುಂದಿನ ಮಂಟಪವಿದೆ. ಪ್ರಸ್ತುತ ಗರ್ಭಗೃಹದಲ್ಲಿ ದೇವರ ಶಿಲ್ಪವಿಲ್ಲ.

ಹೆಸರು	: ತಾಯಮ್ಮ ದೇವಾಲಯ
ಸ್ಥಳ	: ದೊರವದಿ ಕೋಟೆಯ ಉತ್ತರಕ್ಕೆ ಹಳೇ ಗ್ರಾಮದ ರಸ್ತೆ ಬದಿಯಲ್ಲಿ ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ದಕ್ಷಿಣ
ಕಾಲ	: ಕ್ರಿ.ಶ. ೧೪-೧೫ನೇ ಶತಮಾನ

ತಾಯಮ್ಮನ ಗುಡಿಯ ಸಮೀಪದಲ್ಲಿರುವ ಈ ಗುಡಿಯು ತಾಯಮ್ಮನ ಗುಡಿಯನ್ನೇ ಹೋಲುತ್ತದೆ. ಇದರಲ್ಲಿ ಪುರಾತನ ದೇವಾಲಯದ ಸ್ತಂಭಗಳು ಮತ್ತು ಅಧಿಷ್ಠಾನದ ಭಾಗಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ದೇವಾಲಯದ ಮುಂದೆ ಅರ್ಧ ಭಗ್ನವಾಗಿರುವ ದೀಪ ಸ್ತಂಭವಿದೆ. ದೇವಾಲಯಕ್ಕೆ ಗರ್ಭಗೃಹ ಮತ್ತು ಮುಖಮಂಟಪವಿದೆ. ಗರ್ಭಗೃಹದಲ್ಲಿ ಶಿಲ್ಪವಿಲ್ಲ. ದೇವಾಲಯದ ಸ್ತಂಭಗಳು ವಿವಿಧ ಮಾದರಿಯಲ್ಲಿವೆ. ಬಹುಶಃ ಈ ಪ್ರದೇಶದಲ್ಲಿ ಹಿಂದೆ ಅನೇಕ ದೇವಾಲಯಗಳಿದ್ದು ಅವುಗಳು ಜೀರ್ಣವಾದ ನಂತರ ಬೇರೆ ಬೇರೆ ದೇವಾಲಯಗಳ ಸ್ತಂಭಗಳು ಹಾಗೂ ಅಧಿಷ್ಠಾನ ಭಾಗಗಳನ್ನು ಉಪಯೋಗಿಸಿ ಈ ದೇವಾಲಯವನ್ನು ನಿರ್ಮಿಸಲಾಗಿದೆ.

ಹೆಸರು	: ತಾಯಮ್ಮನ ಗುಡಿ
ಸಿಕ್ಕ ಸ್ಥಳ	: ದರೋಜಿ (ಹಳೆ) ಕೋಟೆಯ ಕೆಳಗೆ ಉತ್ತರಕ್ಕೆ. ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್ ತುಂಡು ಕಲ್ಲು ಮಣ್ಣಿನಿಂದ ಕಟ್ಟಲಾಗಿದೆ.
ಮುಖ	: ಉತ್ತರ
ಕಾಲ	: ಪ್ರಸ್ತುತ ಕಟ್ಟಡ ಆಧುನಿಕ
ಉಲ್ಲೇಖ	: ಇತಿಹಾಸ ದರ್ಶನ, ೧೯೯೬, ಸಂ. ೧೧ ಪು. ೬೪

ದೂರವದಿ ಕೋಟೆಯ ಉತ್ತರಕ್ಕೆ ಸಮತಟ್ಟಾದ ನೆಲದಲ್ಲಿರುವ ಬಂಡೆಯಾಸರೆಯಲ್ಲಿ ಆಧುನಿಕವಾಗಿ ಕಟ್ಟಿದ ದೇವಾಲಯವಿದೆ. ಈ ದೇವಾಲಯದ ಒಳಭಾಗದಲ್ಲಿ ತಾಯಮ್ಮನ ಗುಡಿಯಲ್ಲಿ ಕುಮ್ಮಟ ನಾಯಕ ಕಾಲದ ತಾಯಮ್ಮನ ಮುಖದ ಶಿಲ್ಪವಿದೆ. ಈ ಗುಡಿಯನ್ನು ತಾಯಮ್ಮನ ಗುಡಿ ಎಂದು ಕರೆಯುತ್ತಾರೆ. ದೇವಾಲಯ ಗರ್ಭಗೃಹವನ್ನು ಮಾತ್ರ ಹೊಂದಿದೆ. ಹೊರಭಾಗದಲ್ಲಿ ಎರಡು ಭಗ್ನವಾದ ಶಿಲ್ಪಗಳಿವೆ.

ಹೆಸರು	: ಪಟ್ಟಣದ ಎಲ್ಲಮ್ಮ ದೇವಾಲಯದ ಆಗ್ನೇಯಕ್ಕೆ ಹೊಲದಲ್ಲಿರುವ ದೇವಾಲಯ.
ಸ್ಥಳ	: ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇಯ ಶತಮಾನ
ಉಲ್ಲೇಖ	: Vijayanagara Inventory-Vol I, 1990. P. 125

ದೇವಾಲಯ ಎರಡು ಅಧಿಷ್ಠಾನಗಳನ್ನು ಒಳಗೊಂಡಿದ್ದು ಕೆಳಭಾಗದ ಅಧಿಷ್ಠಾನದ ಭಾಗಗಳು ಸರಳವಾಗಿದೆ. ಜಗತಿ, ಕುಮುದ ಸ್ವಲ್ಪ ಹಿಂದೆ ಸರಿದ ಕಂಠ ಮತ್ತು ಕಪೋತಗಳಿವೆ. ಈ ಸರಳ ಅಧಿಷ್ಠಾನದ ಮೇಲೆ ಜಗತಿ ಕುಮುದ ಕಂಠ ಮತ್ತು ಕಪೋತಗಳ ಅಧಿಷ್ಠಾನವಿದೆ. ದೇವಾಲಯ ಭಿತ್ತಿಯು ಸರಳವಾಗಿದ್ದು ಮಧ್ಯದಲ್ಲಿ ಪ್ರಸ್ತರ(ತೋರಣ)ದ ಪಟ್ಟಿಯು ದೇವಾಲಯವನ್ನು ಸುತ್ತುವರಿದಿದೆ. ಭಿತ್ತಿಯ ಮೇಲ್ಭಾಗದಲ್ಲಿ ಸ್ವಲ್ಪ ಮುಂದೆ ಬಂದಿರುವ ಕಪೋತವಿದ್ದು ಕಪೋತದಲ್ಲಿ ಸರಳವಾದ ಫಲಕಗಳಿವೆ.

ಮುಖ ಮಂಟಪ ಚೌಕಾಕಾರವಾಗಿದೆ. ಭಿತ್ತಿಯ ಮುಂಭಾಗದಲ್ಲಿ ಭಿತ್ತಿಗೆ ಹೊಂದಿಕೊಂಡಂತೆ ಕೂಡ್ಯ ಸ್ತಂಭವಿದೆ. ಇದು ಚತುರಾಶ್ರ, ಅಷ್ಟಾಶ್ರ, ಕೋನವುಳ್ಳದ್ದಾಗಿದೆ. ಮೇಲಿನ ಭಾಗ ಘಟಾಕೃತಿಯಾಗಿದೆ. ಎಲೆ ಚಿತ್ರವು ಮಧ್ಯದಲ್ಲಿದೆ. ಮುಖ ಮಂಟಪದ ಉತ್ತರ ದಿಕ್ಕಿನ ಭಾಗವು ಶಿಥಿಲವಾಗಿದೆ.

ಗರ್ಭಗೃಹದ ದ್ವಾರವು ಏಕಶಾಖೆಯಿಂದ ಕೂಡಿದೆ. ಮೇಲ್ಭಾಗದಲ್ಲಿ ಲಲಾಟವು ಸರಳವಾಗಿದೆ. ದ್ವಾರದ ಬದಿ ದಕ್ಷಿಣ ದಿಕ್ಕಿನಲ್ಲಿರುವ ಕಂಬದ ಮೇಲೆ ೧೩-೧೪ನೇ ಶತಮಾನದ ಅಕ್ಷರಗಳಲ್ಲಿ ನೂಸು ಎಂದಿದೆ. ಗರ್ಭಗೃಹ ಚೌಕಾಕಾರವಾಗಿದ್ದು ಸರಳವಾಗಿದೆ. ನೆಲದ ಭಾಗ ಮಣ್ಣಿನಿಂದ ಮುಚ್ಚಿಹೋಗಿದೆ. ಪಶ್ಚಿಮ ದಿಕ್ಕಿನ ಭಿತ್ತಿಯಲ್ಲಿ ಕಪೋತದಾಕೃತಿಯ ಕಲ್ಲು ಚಪ್ಪಡಿಯು ಮುಂಚಾಚಿದೆ. ಛತ್ತಿನಲ್ಲಿ ದ್ವಿವೃತ್ತ ಕಮಲದ ಶಿಲ್ಪವಿದ್ದು ಮಧ್ಯದಲ್ಲಿ ದುಂಡಾಗಿ ಸ್ವಲ್ಪ ದಪ್ಪವಿರುವ ಮೊಗ್ಗು ಇದೆ.

ಹರಿಹರ ಕವಿಯ ರಗಳೆಗಳಲ್ಲಿ ದಾಖಲಿಸಿರುವ ದೇವಾಲಯ. ಹೇಮಕೂಟದ ದೇವಾಲಯಗಳು ಮತ್ತು ರಾಮಚಂದ್ರ ದೇವಾಲಯದ ಮುಂದಿರುವ ದೇವಾಲಯಗಳ ಮಾದರಿಯಲ್ಲಿವೆ. ಈ ದೇವಾಲಯವು ಸಹ ಕುಮ್ಮಟ ನಾಯಕರ ಕಾಲದಲ್ಲಿ ನಿರ್ಮಾಣವಾಗಿದೆ.

ವೈಷ್ಣವ ಪಂಥ ದೇವಾಲಯಗಳು

ಹೆಸರು	: ಕನಕಾಚಲ ದೇವಾಲಯ
ಸ್ಥಳ	: ಹೇಮಗುಡ್ಡ (ಎಮ್ಮೆಗುಡ್ಡ) ಕೊಪ್ಪಳ ತಾಲೂಕು, ಜಿಲ್ಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ
ಉಲ್ಲೇಖ	: ಸುಜಾತ ಮಲ್ಲನಗೌಡ, ೨೦೦೦, ಪು. ೩೭೨

ಕನಕಾಚಲದೇವಾಲಯ ಮುಖ ಮಂಟಪ, ನವರಂಗ, ಅಂತರಾಳ ಮತ್ತು ಗರ್ಭಗೃಹಗಳನ್ನೊಳಗೊಂಡಿದೆ. ಮುಖಮಂಟಪದ ಮುಂದೆ ವಾಹನ ಮಂಟಪವಿದೆ. ದೇವಾಲಯವನ್ನು ಮೂಲತಃ ಎತ್ತರವಾದ ಜಗತಿಯ ಮೇಲೆ ನಿರ್ಮಾಣ ಮಾಡಲಾಗಿದೆ. ಮುಂಭಾಗದಲ್ಲಿ ಪ್ರವೇಶ ಗೋಪುರವಿದ್ದು, ಗೋಪುರದ ಮೇಲಿನ ಭಾಗ ಬಿದ್ದುಹೋಗಿದೆ.

ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಜಗತಿ, ದಳಯುಕ್ತ, ಕುಮುದ, ಮೊನಚಾದ ಕಂಠ ಹಾಗೂ ಕಪೋತಗಳಿವೆ. ಸರಳವಾದ ಭಿತ್ತಿ ಇದ್ದು, ಮಧ್ಯದಲ್ಲಿ ಸರಳವಾದ ಪ್ರಸ್ತರವಿದೆ. 'S' ಆಕಾರದ ಛಜ್ಜದ ಮೇಲೆ ದಳಗಳ ಅಲಂಕರಣವಿದೆ. ಶಿಖರವು ಒಂಬತ್ತು ತಳಗಳಿಂದ ನಿರ್ಮಿತವಾಗಿದೆ. ಪ್ರತಿ ತಳಗಳು ದಳಾಲಂಕೃತವಾಗಿದೆ. ಕಂಠಗಳಿಂದ ಬೇರ್ಪಟ್ಟಿವೆ. ಶಿಖರದ ಪ್ರತಿಯೊಂದು ತಳದ ಮಧ್ಯದಲ್ಲಿ ಫಲಕಗಳಿವೆ. ಫಲಕಗಳು ಮಕರ ಹಾಗೂ ಕಮಲಗಳನ್ನು ಒಳಗೊಂಡಿವೆ. ಶಿಖರದ ಮೇಲೆ ಚತುರಾಶ್ರ ಸ್ತೂಪಿ ಇದೆ.

ದೇವಾಲಯದ ಮುಖಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು, ಪೀಠದ ಮೇಲೆ ಸ್ಥಾಪಿತವಾಗಿದೆ. ಚತುರಾಶ್ರ, ಅಷ್ಟಾಶ್ರ ಕೋನಗಳಲ್ಲಿವೆ. ಮೇಲಿನ ಭಾಗದಲ್ಲಿ ಚಕ್ರ ಬೋದಿಗೆ, ಪುಷ್ಪ ಬೋದಿಗೆ ಹಾಗೂ ಚತುರ್ಮುಖ ಬೋದಿಗೆಗಳಿವೆ.

ನವರಂಗದಲ್ಲಿನ ನಾಲ್ಕು ಸ್ತಂಭಗಳು ಚತುರಾಶ್ರ ಕೋನದಲ್ಲಿವೆ. ನವರಂಗದ ದ್ವಾರದ ಬದಿಗಳಲ್ಲಿ ದೇವಕೋಷ್ಠಗಳಿವೆ. ದೇವಕೋಷ್ಠಗಳ ಮೇಲೆ ಶಿಖರಾಕೃತಿಯ ಶಿಲ್ಪವಿದೆ. ದ್ವಾರವು ಐದು ಶಾಖೆಗಳಿಂದ ಕೂಡಿದ್ದು ಸರಳವಾಗಿದೆ. ನವರಂಗದ ಛತ್ತಿನಲ್ಲಿ ತ್ರಿವೃತ್ತ ಕಮಲವಿದೆ.

ಅಂತರಾಳವು ಚೌಕಾಕಾರವಾಗಿದೆ, ಛತ್ತಿನಲ್ಲಿ ತ್ರಿವೃತ್ತ ಕಮಲವಿರುವುದು. ಗರ್ಭಗೃಹದ ದ್ವಾರದಲ್ಲಿ ಐದು ಸರಳ ಶಾಖೆಗಳಿದ್ದು, ಕೆಳಭಾಗದಲ್ಲಿ ಪೂರ್ಣ ಕುಂಭಗಳಿವೆ. ಗರ್ಭಗೃಹ ಚೌಕಾಕಾರವಾಗಿದೆ. ಉತ್ತರ ಮತ್ತು ಪಶ್ಚಿಮ ಭಾಗದ ಭಿತ್ತಿಗಳಲ್ಲಿ ಮಂಚಾಚಿರುವ ದಳಯುಕ್ತ ಶಿಲಾಪಟ್ಟಿಕೆಗಳಿವೆ. ಮಧ್ಯದಲ್ಲಿ ಭಗ್ನವಾಗಿರುವ ವಿಷ್ಣುವಿನ ಮೂರ್ತಿ ಶಿಲ್ಪವಿದೆ. ಅದನ್ನು ಸಿಂಹ ಪೀಠದ ಮೇಲೆ ಸ್ಥಾಪಿಸಲಾಗಿದೆ.

ಈ ದೇವಾಲಯ ದೆಹಲಿ ಸುಲ್ತಾನರ ದಾಳಿಗೆ ಸಿಕ್ಕಿ ಜೀರ್ಣವಾದ ನಂತರ, ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿ, ಮುಂದಿನ ಗೋಪುರ, ವಾಹನ ಮಂಟಪ ಮತ್ತು ದೇವಾಲಯದ ಮೇಲಿನ ಕೋಷ್ಠಗಳನ್ನು ನಿರ್ಮಿಸಲಾಗಿದೆ. ವಿಷ್ಣುವಿನ ಮೂರ್ತಿಶಿಲ್ಪ ಲಕ್ಷಣಗಳಿಂದ ವಿಜಯನಗರ ಕಾಲದಲ್ಲಿ ಇದನ್ನು ನಿರ್ಮಿಸಲಾಗಿದೆ ಹಾಗೂ ಪೀಠವು ದೇವಾಲಯದ ಕಾಲದಲ್ಲಿ ನಿರ್ಮಿಸಿದ್ದು ಮೂಲತಃ ಇದೊಂದು ಜೈನ ದೇವಾಲಯವಾಗಿರುವ ಸಾಧ್ಯತೆಗಳಿವೆ. ಒಟ್ಟಾರೆ ಇದೊಂದು ಕುಮ್ಮಟ ನಾಯಕರ ಕಾಲದಲ್ಲಿ ನಿರ್ಮಿಸಲಾಗಿದೆ. ಇದು ಹೇಮಕೂಟದಲ್ಲಿರುವ ತ್ರಿಕೂಟ ದೇವಾಲಯಗಳು ಹಾಗೂ ಕುಮ್ಮಟದುರ್ಗದ ಮಲ್ಲಿಕಾರ್ಜುನ ದೇವಾಲಯದ ರಚನೆಯನ್ನು ಹೋಲುತ್ತದೆ.

ಹೆಸರು	: ಜನಾರ್ಧನ ಗುಡಿ
ಸ್ಥಳ	: ಜಟಂಗ ರಾಮೇಶ್ವರ ದೇವಾಲಯದ ಆವರಣ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: MAR, 1930, P. 29

ಒಂದು ಅಂಕಣ ದೇವಾಲಯವು ಫಾಂಸನ(ಕದಂಬನಾಗರ) ಶೈಲಿಯ ಶಿಖರವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಜನಾರ್ಧನ ಮೂರ್ತಿಯ ಶಿಲ್ಪವಿದೆ. ಶಿಲ್ಪಕ್ಕೆ ನಾಲ್ಕು ಕೈಗಳಿವೆ. ಅಭಯ, ಹಸ್ತ, ಚಕ್ರ, ಪದ್ಮ ಮತ್ತು ಗದೆ ಉಳಿದ ಮೂರು ಕೈಗಳಲ್ಲಿ ಹಿಡಿಯಲ್ಪಟ್ಟಿದೆ.

ಹೆಸರು	: ರಾಮಚಂದ್ರೇಶ್ವರ ದೇವಾಲಯ
ಸ್ಥಳ	: ಕೆರೆಯ ಏರಿಯ ಬಳಿ, ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೪ನೇ ಶತಮಾನ
ಉಲ್ಲೇಖ	: MAR, 1930, P. 27

ಈ ದೇವಾಲಯ ಹಾನೇಯ ಪರಿಸರದಲ್ಲಿನ ಸಿದ್ದಾಪುರದ ಬಳಿ ಇರುವ ಕೆರೆಯ ಸಮೀಪದಲ್ಲಿದೆ. ದೇವಾಲಯ ಪೂರ್ವಾಭಿಮುಖವಾಗಿದೆ. ಗರ್ಭಗೃಹ ಮತ್ತು ಮುಖಮಂಟಪವನ್ನು ಮಾತ್ರ ಹೊಂದಿದೆ. ಗರ್ಭಗೃಹದ ದ್ವಾರದ ಕೆಳಭಾಗದಲ್ಲಿ

ಪೂರ್ಣಕುಂಭಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದಲ್ಲಿ ಶಿಲ್ಪವಿರುವುದಿಲ್ಲ, ಗರ್ಭಗೃಹ ಹಾಗೂ ನವರಂಗದ ಮೇಲ್ಛಾವಣಿಯಲ್ಲಿ ಪದ್ಮಗಳಿವೆ.

ಹೆಸರು	: ಆಂಜನೇಯ ದೇವಾಲಯ
ಸ್ಥಳ	: ಚಿಕ್ಕ ಗುಡ್ಡದ ಮೇಲೆ ಸಿಂಗೆ ನಾಯಕನಹಳ್ಳಿ. ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ದಕ್ಷಿಣ
ಕಾಲ	: ೧೩-೧೪ನೇ ಶತಮಾನ

ದೇವಾಲಯ ಗರ್ಭಗೃಹ ಮುಖಮಂಟಪ ಮತ್ತು ಚಿಕ್ಕ ದೀಪ ಸ್ತಂಭಗಳನ್ನು ಹೊಂದಿದೆ. ಅಧಿಷ್ಠಾನ ಗರ್ಭಗೃಹದ ಭಾಗದಲ್ಲಿ ಮಾತ್ರವಿದೆ. ಅಧಿಷ್ಠಾನ ಸರಳವಾಗಿದೆ. ಮುಖಮಂಟಪದ ಭಾಗದಲ್ಲಿ ಅಧಿಷ್ಠಾನವಿಲ್ಲ. ಸರಳವಾದ ಪಟ್ಟಿಕೆಗಳಿಂದ ಕೂಡಿದ ಅಧಿಷ್ಠಾನದಲ್ಲಿ ಕುಮುದ, ಕಂಠ, ಕಪೋತಗಳಿವೆ.

ಗರ್ಭಗೃಹದ ಭಿತ್ತಿಯು ನಶಿಸಿದೆ. ಮುಖಮಂಟಪದ ಭಿತ್ತಿಯನ್ನು ಆಧುನಿಕ ಕಾಲದ್ದಾಗಿದ್ದು ಸೈಜುಕಲ್ಲುಗಳಿಂದ ಕಟ್ಟಲಾಗಿದೆ. ಗರ್ಭಗೃಹ ಚೌಕಾಕಾರವಾಗಿದ್ದು ಸರಳವಾಗಿದೆ. ಭಿತ್ತಿನಲ್ಲಿ ಅಷ್ಟಾವರಣದ ಆಕೃತಿ ಇದ್ದು ಮಧ್ಯದಲ್ಲಿ ಸರಳವಾಗಿದೆ. ಗರ್ಭಗೃಹದ ದ್ವಾರವು ಚಿಕ್ಕದಾಗಿದ್ದು ಎರಡೂ ಬದಿಯಲ್ಲಿ ನಯಗೊಳಿಸಲಾಗಿರುವ ಶಿಲಾಸ್ತಂಭಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪವಿದೆ.

ಮುಖಮಂಟಪವನ್ನು ಹನ್ನೆರಡು ಸ್ತಂಭಗಳಿಂದ ನಿರ್ಮಿಸಿದ್ದು, ಚತುರಾಶ್ರ ಅಷ್ಟಾಶ್ರ ಚತುರಾಶ್ರ ಕೋನಗಳಲ್ಲಿದ್ದು ಬೋದಿಗೆಯನ್ನೊಳಗೊಂಡಿದೆ. ದೇವಾಲಯದ ಮುಂದೆ ಚಿಕ್ಕದಾದ ದೀಪಸ್ತಂಭವಿದೆ. ಕೆಳಭಾಗದಲ್ಲಿ ಪಾದುಕೆಗಳ ಶಿಲ್ಪವಿದೆ.

ಹೆಸರು	: ಪ್ರಸನ್ನ ಆಂಜನೇಯ ದೇವಾಲಯ
ಸ್ಥಳ	: ಮೂಲ ವಿರೂಪಾಕ್ಷ ದೇವಾಲಯದ ಹಿಂಭಾಗ ಹೇಮಕೂಟ, ಹಂಪಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩ನೇ ಶತಮಾನ

ದೇವಾಲಯದ ಹೆಚ್ಚಿನ ಭಾಗವು ಜೀರ್ಣವಾಗಿದ್ದು ಅಧಿಷ್ಠಾನದ ಭಾಗವು ಪ್ರಸ್ತುತ ಶಥಿಲವಾಗಿದೆ. ನಾಲ್ಕು ಕಂಬಗಳಿದ್ದು ಸ್ತಂಭಗಳು ಚತುರಾಶ್ರವಾಗಿದ್ದು ಸರಳವಾಗಿದೆ. ಮೇಲ್ಭಾಗದಲ್ಲಿ ಸಜ್ಜವಿದೆ. ಕದಂಬ ಶಿಖರವಿದ್ದು ಮೇಲೆ ಸ್ತೂಪಿಯನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದೆ. ದೇವಾಲಯದ ಭಿತ್ತಿಗಳನ್ನು ಇತ್ತೀಚೆಗೆ ಸೈಜು ಕಲ್ಲುಗಳಿಂದ ಕಟ್ಟಲಾಗಿದೆ. ದೇವಾಲಯದ ಒಳಮಾಳಿಗೆಯು ಸರಳವಾಗಿದೆ.

ದೇವಾಲಯದಲ್ಲಿ ತ್ರಿಭಂಗದಲ್ಲಿ ನಿಂತಿರುವ ಆಂಜನೇಯನ ಶಿಲ್ಪವಿದೆ, ಶಿಲ್ಪದ ಕೆಳಭಾಗದಲ್ಲಿ ಎರಡೂ ಪಾದಗಳ ಮಧ್ಯದಲ್ಲಿ ರಾವಣನ ಮಗ ಅಕ್ಷಯ ಕುಮಾರನ ಮಡಿದ ದೇಹವಿದ್ದು, ದೇಹದ ಮೇಲೆ ಗಂಧರ್ವನು ಪದ್ಮಾಸನದಲ್ಲಿದ್ದು ಅಂಜಲಿ ಮುದ್ರೆಯಲ್ಲಿ ಕುಳಿತಿದ್ದಾನೆ. ಈ ಶಿಲ್ಪವು ಸಿಂಗೆಯನಾಯಕಹಳ್ಳಿಯಲ್ಲಿನ ಶಿಲ್ಪವನ್ನು ಹೋಲುತ್ತದೆ.

ಹೆಸರು	: ಆಂಜನೇಯ ದೇವಾಲಯ
ಸ್ಥಳ	: ಭೀಮನ ಬಾಗಿಲ ಈಶಾನ್ಯ ದಿಕ್ಕಿಗೆ, ಕಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ದಕ್ಷಿಣ
ಕಾಲ	: ೧೩-೧೪ ನೇ ಶತಮಾನ
ಉಲ್ಲೇಖ	: VI, Vol.-I, 1990, P. 221

ವೀರಭದ್ರ ದೇವಾಲಯದ ಆವರಣಕ್ಕೆ ಹೊಂದಿಕೊಂಡಂತೆ ದಕ್ಷಿಣ ಭಾಗದಲ್ಲಿ, ದಕ್ಷಿಣಾಭಿಮುಖವಾಗಿರುವ ಒಂದು ಅಂಕಣದ ದೇವಾಲಯದಲ್ಲಿ ಆಂಜನೇಯನ ಶಿಲ್ಪವನ್ನು ಗುಂಡಿನ ಮೇಲೆ ನಿರ್ಮಿಸಲಾಗಿದೆ. ಈ ದೇವಾಲಯಕ್ಕೆ ಮುಂದೆ ಎರಡು ಸ್ತಂಭಗಳಿದ್ದು ಹಿಂದಿನ ಭಾಗವನ್ನು ಗುಂಡಿನ ಮೇಲೆ ಛತ್ತನ್ನು ಅಳವಡಿಸಲಾಗಿದೆ. ಸ್ತಂಭಗಳು ವೀರಭದ್ರ ದೇವಾಲಯದ ನವರಂಗದಲ್ಲಿನ ಸ್ತಂಭಗಳ ವಿನ್ಯಾಸವನ್ನು ಹೊಂದಿದ್ದು ಛತ್ತಿನಲ್ಲಿ ತ್ರಿವೃತ್ತ ಕಮಲವಿರುವುದು. ದೇವಾಲಯದ ಮುಂದಿನ ಬಂಡೆಯ ಮೇಲೆ ದೀಪಸ್ತಂಭವಿದೆ.

ಹೆಸರು	: ಹನುಮಂತನ ಗುಡಿ
ಸಿಕ್ಕ ಸ್ಥಳ	: ರಾಮನ ದೊಣೆಯ ಪೂರ್ವಕ್ಕೆ ಕುಮ್ಮಟದುರ್ಗ, ಕೊಪ್ಪಳ ತಾಲೂಕು, ಜಿಲ್ಲೆ
ಶಿಲಾವಸ್ತು	: ಚಿಕ್ಕ ಸೈಜು ಕಲ್ಲುಗಳು
ಮುಖ	: ದಕ್ಷಿಣ
ಕಾಲ	: ಆಧುನಿಕ (ಶಿಲ್ಪ ಕುಮ್ಮಟ ನಾಯಕರ ಕಾಲದ್ದು)
ಉಲ್ಲೇಖ	: VPR, 1987-88, P. 209

ಬಂಡೆಯ ಮೇಲೆ ನಿರ್ಮಿಸಲಾಗಿರುವ. ಈ ದೇವಾಲಯದ ಗೋಡೆಗಳು ಚಿಕ್ಕ ಒರಟು ಕಲ್ಲುಗಳಿಂದ ನಿರ್ಮಿತವಾಗಿದೆ. ಈ ಸ್ಮಾರಕ ದೇವಾಲಯ ಆಯತಾಕಾರದಲ್ಲಿದೆ. ಆಂಜನೇಯನ ಶಿಲ್ಪವನ್ನು ಒಳಭಾಗದಲ್ಲಿ ಸ್ಥಾಪಿಸಲಾಗಿದೆ.

ಹೆಸರು	: ಹನುಮಂತ ದೇವಾಲಯ
ಸ್ಥಳ	: ರಾಮಸ್ವಾಮಿ ದೇವಾಲಯದ ದಕ್ಷಿಣಕ್ಕೆ ಹೊಸಮಲೆದುರ್ಗ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ
ಶಿಲಾವಸ್ತು	: ಚಿಕ್ಕ ಗ್ರಾನೈಟ್ ಕಲ್ಲು
ಮುಖ	: ದಕ್ಷಿಣ
ಕಾಲ	: ೧೩-೧೪ನೇ ಶತಮಾನ
ಉಲ್ಲೇಖ	: VPR, 1988-91, P. 238

ಈ ದೇವಾಲಯದಲ್ಲಿ ಗರ್ಭಗೃಹ ಮಾತ್ರವಿದ್ದು ಚೌಕಾಕಾರವಾಗಿದೆ. ಗರ್ಭಗೃಹದಲ್ಲಿ ಎರಡು ಚಿಕ್ಕ ಹನುಮಂತ ದೇವರ ವಿಗ್ರಹಗಳಿವೆ. ಈ ವಿಗ್ರಹಗಳ ಮುಂದೆ ಶಿವಲಿಂಗವಿದೆ. ಶಿವಲಿಂಗದ ಪೀಠದ ಕೆಳಭಾಗವು ಚೌಕಾಕಾರವಾಗಿದೆ. ಶಿವಲಿಂಗದ ಪೀಠದ ಕೆಳಭಾಗವು ಚೌಕಾಕಾರವಾಗಿದೆ. ಮೇಲಿನ ಭಾಗ ವೃತ್ತಾಕಾರವಾಗಿದೆ. ಪ್ರಣಾಳವಿದೆ. ಪೀಠದಲ್ಲಿ ಚಿಕ್ಕದಾದ ಲಿಂಗವಿದೆ. ಈ ಲಿಂಗವು ಸುಮಾರು ೧೩-೧೪ನೇ ಶತಮಾನ. (ಚನ್ನಬಸಪ್ಪ ಎಸ್.ಪಾಟೀಲ್) ದೇವಾಲಯದ ಮುಂದೆ ದೀಪ ಸ್ತಂಭವಿದೆ. ದೀಪಸ್ತಂಭದ ಮೇಲೆ ಬಿಲ್ಲನ್ನು ಹಿಡಿದುಕೊಂಡಿರುವ ವೀರನೊಬ್ಬನ ಶಿಲ್ಪವಿದೆ.

ಸೂರ್ಯ ಪಂಥ ದೇವಾಲಯ

ಹೆಸರು	: ಸೂರ್ಯ ದೇವಾಲಯ
ಸ್ಥಳ	: ಜಟಂಗ ರಾಮೇಶ್ವರ ದೇವಾಲಯದ ಆವರಣ ಸಿದ್ದಾಪುರ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್ ಶಿಲೆ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: MAR, 1930, P. 29

ಜಟಂಗ ರಾಮೇಶ್ವರ ದೇವಾಲಯದ ಎದುರಿಗೆ ಸೂರ್ಯದೇವಾಲಯವಿದೆ. ದೇವಾಲಯ ಸರಳವಾಗಿದೆ. ದೇವಾಲಯ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಎತ್ತರವಾದ ಚತುರಾಶ್ರ ಪೀಠದ ಮೇಲೆ ಸೂರ್ಯ ಶಿಲ್ಪವಿದ್ದು, ಸೂರ್ಯನ ಎರಡು ಕೈಗಳಲ್ಲಿ ಕಮಲಗಳನ್ನು ಹಿಡಿದು ಸಮಭಂಗದಲ್ಲಿ ನಿಂತಿರುವನು.

ಜಿನಾಲಯಗಳು

ಹೆಸರು	: ಜಿನಾಲಯ
ಸ್ಥಳ	: ಪೇಟೆ ಹೊಲ ಹಾಸೇಯ, ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗ ಜಿಲ್ಲೆ.
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಪೂರ್ವ
ಕಾಲ	: ಕ್ರಿ.ಶ. ೧೩ನೇಶತಮಾನ
ಉಲ್ಲೇಖ	: MAR, 1930, P. 31

ಬ್ರಹ್ಮಗಿರಿ ಬೆಟ್ಟದ ಪಶ್ಚಿಮ ದಿಕ್ಕಿನ ಇಳಿಜಾರಿನಲ್ಲಿರುವ ಕೋಟೆ ಹಾಗೂ ಬಾಗಿಲ ಸಮೀಪ ಜಿನಾಲಯವಿದೆ. ಜಿನಾಲಯ ದಕ್ಷಿಣಾಭಿಮುಖವಾಗಿದೆ. ಜಿನಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಚಿಕ್ಕದಾದ ಮುಖಮಂಟಪವಿದೆ. ಈ ಜಿನಾಲಯವನ್ನು ಗ್ರಾನೈಟ್ ಶಿಲೆಯಲ್ಲಿ ನಿರ್ಮಿಸಲಾಗಿದೆ. ಅಧಿಷ್ಠಾನವು ಉಪಾಸನ, ಜಗತಿ, ಕುಮುದ, ಮೊನಚಾದ ಕಂಠ ಮತ್ತು ಕಪೋತಗಳಿವೆ. ಸರಳವಾದ ಭಿತ್ತಿ ಇದ್ದು ಮೇಲೆ ಕದಂಬನಾಗರ ಶಿಖರ ಮತ್ತು ಶಿಖರದ ಮುಂದೆ ಶುಕನಾಸಿ ಇದೆ. ಶಿಖರವು ಆರು ತಳಗಳಿಂದ ಕೂಡಿದ್ದು, ತಳಗಳು, ದಳಗಳ ಅಲಂಕರಣವನ್ನು ಹೊಂದಿವೆ. ಪ್ರತಿಯೊಂದು ತಳದಿಂದ ಇನ್ನೊಂದು ತಳದ ಮಧ್ಯದಲ್ಲಿ ಕಂಠಭಾಗವಿದೆ. ಶಿಖರದ ಮೇಲೆ ಸ್ತೂಪಿ ಇದೆ. ಗರ್ಭಗೃಹದಲ್ಲಿ ಪೀಠದ ಮೇಲೆ ಕುಳಿತಿರುವ ತೀರ್ಥಂಕರರ ಶಿಲ್ಪವಿದೆ. ಶಿಲ್ಪವು ಮೂರು ಅಡಿಗಳಷ್ಟು ಎತ್ತರವಾಗಿದೆ. ತೀರ್ಥಂಕರರ ಶಿಲ್ಪದ ರುಂಡವು ಭಗ್ನವಾಗಿದೆ. ಕೆಳಭಾಗದಲ್ಲಿ ಪೂರ್ಣಕುಂಭ ಅಥವಾ ಕಲಶಗಳ ಶಿಲ್ಪಗಳಿವೆ. ದ್ವಾರದ ಲಲಾಟದಲ್ಲಿ ಜಿನ ಶಿಲ್ಪಗಳಿವೆ. ಜಿನಾಲಯ ಸ್ತಂಭಗಳು, ಚತುರಾಶ್ರ, ಅಷ್ಟಾಶ್ರ ಮತ್ತು ಚತುರಾಶ್ರ ಕೋನಗಳಿಂದ ಕೂಡಿದ್ದು, ಮೇಲಿನ ಭಾಗವು ಅರ್ಧಗಂಟಾಕೃತಿಯಲ್ಲಿವೆ. ಸ್ತಂಭದ ಮೇಲೆ ಚಕ್ರಪೋದಿಗೆ ಘಂಟಾಬೋದಿಗೆ ಹಾಗೂ ಚತುರ್ಮುಖ ಬೋದಿಗೆಗಳಿವೆ. ಜಿನಾಲಯದ ಮುಖ ಮಂಟಪದಲ್ಲಿ ಕಕ್ಷಾಸನಗಳಿವೆ.

ಹೆಸರು	: ಜೈನ ಬಸದಿ
ಸ್ಥಳ	: ಕುಮಾರ ರಾಮನ ಗುಡ್ಡದ ಮೇಲೆ, ಕುಮ್ಮಟದುರ್ಗ ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ
ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ದಕ್ಷಿಣಾಭಿಮುಖ
ಕಾಲ	: ೧೩ನೇ ಶತಮಾನ
ಉಲ್ಲೇಖ	: VPR, 1987-88, PP. 207-210

ಜೈನಬಸದಿಯು ದಕ್ಷಿಣಾಭಿಮುಖವಾಗಿದೆ. ಒಂದರ ಬದಿ ಮತ್ತೊಂದು ಪೂರ್ವ-ಪಶ್ಚಿಮವಾಗಿ ಮೂರು ಗರ್ಭಗಳು ಇವೆ. ಪ್ರತಿಯೊಂದು ಗರ್ಭಗೃಹಕ್ಕೂ ಪ್ರತ್ಯೇಕ ಅಂತರಾಳಗಳಿದ್ದು, ಇದಕ್ಕೆ ಸಭಾಮಂಟಪವು ಒಂದೇ ಇರುತ್ತದೆ. ಉಳಿದೆರಡು

ಬಸದಿಗಳು ಉತ್ತರ-ದಕ್ಷಿಣ ರೇಖೆಯಲ್ಲಿದ್ದು ಮೊದಲಿನ ಮೂರು ಬಸದಿಗಳು ಪಶ್ಚಿಮ ದಿಕ್ಕಿನ ಭಾಗದಲ್ಲಿ ಹೊಂದಿಕೊಂಡಿವೆ. ಇವುಗಳಿಗೆ ಗರ್ಭಗೃಹ ಮಾತ್ರವಿದ್ದು ಅಂತರಾಳವಿರುವುದಿಲ್ಲ. ಮುಂದೆ ಸಭಾಮಂಟಪವಿದೆ.

ಬಸದಿಯ ಅಧಿಷ್ಠಾನದಲ್ಲಿ ಜಗತಿ, ಪದ್ಮ, ಕುಮುದ, ಕಪೋತಗಳಿವೆ. ಕಪೋತ ದಂತಪಟ್ಟಿಕೆಯ (ಪದ್ಮಗಳ ಪಟ್ಟಿಕೆ)ನ್ನು ಒಳಗೊಂಡಿದ್ದು ಮುಂದೆ ಚಾಚಿದಂತಿದೆ. ಭಿತ್ತಿಯೂ ಸರಳವಾಗಿದೆ. ಪ್ರಸ್ತುತ ಶಿಖರ ಭಾಗವು ಪೂರ್ಣವಾಗಿ ನಶಿಸಿದೆ. ಬಸದಿಯಲ್ಲಿ ದಕ್ಷಿಣಾಭಿಮುಖವಾಗಿರುವ ಮೂರು ಗರ್ಭಗೃಹಗಳಲ್ಲಿ ಮಧ್ಯದಲ್ಲಿ ಗರ್ಭಗೃಹದಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜೈನ ತೀರ್ಥಂಕರ ಪೀಠದ ಮಧ್ಯದಲ್ಲಿ ಕುಳಿತಿರುವ ಸಿಂಹವಿದೆ. ಪೀಠದ ಎರಡೂ ಬದಿಯಲ್ಲಿ ಸಿಂಹಗಳಿದ್ದು ಪೀಠಕ್ಕೆ ಆಧಾರವಾಗಿವೆ. ಅಲ್ಲದೆ ಎರಡೂ ಹಿಂಬದಿಯಲ್ಲಿ ಮಕರಗಳಿವೆ. ತೀರ್ಥಂಕರರ ಎರಡೂ ಬದಿಗಳಲ್ಲಿ (ಇಕ್ಕೆಲಗಳಲ್ಲಿ) ಚಾಮರದಾರಿಗಳಿದ್ದು ಒಂದು ಕೈಯಲ್ಲಿ ಚಾಮರವನ್ನು ಹಿಡಿದಿರುವರು. ತೀರ್ಥಂಕರರ ತಲೆಯ ಹಿಂಬದಿಯಲ್ಲಿ ಪ್ರಭಾವಳಿ ಇದ್ದು ಮೇಲ್ಭಾಗದಲ್ಲಿನ ಮುಕ್ಕೊಡೆಯು ಜೈನ ಪ್ರಭಾವವನ್ನು ತೋರಿಸುತ್ತದೆ.

ನಿಂತಿರುವ ಜೈನ ವಿಗ್ರಹ ಒಂದು ಭಗ್ನವಾಗಿದ್ದು ಮುಂದಿನ ಸಭಾ ಮಂಟಪದಲ್ಲಿರುತ್ತದೆ. ದಕ್ಷಿಣಾಭಿಮುಖವಾಗಿರುವ ಮೂರು ಗರ್ಭಗೃಹಗಳ ದ್ವಾರಗಳು ಮೂರು ಶಾಖೆಗಳಿಂದ ಕೂಡಿದ್ದು ಸರಳವಾಗಿವೆ. ಅಂತರಾಳಗಳ ದ್ವಾರದ ಚೌಕಟ್ಟಿನ ಮೇಲೆ ಮಧ್ಯಭಾಗದಲ್ಲಿ (ಲಲಾಟದಲ್ಲಿ) ಪದ್ಮಾಸನದಲ್ಲಿ ಕುಳಿತಿರುವ ಜೈನ ತೀರ್ಥಂಕರರ ಚಿತ್ರಗಳಿವೆ. ಬಸದಿಯ ಪಶ್ಚಿಮ ಭಾಗದಲ್ಲಿರುವ ಗರ್ಭಗೃಹದ ಚೌಕಟ್ಟಿನ ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಜೈನ ತೀರ್ಥಂಕರರ ಚಿತ್ರವಿದೆ. ಎರಡೂ ಅಂತರಾಳದ ಬಾಗಿಲುಗಳಲ್ಲಿ ಪೂರ್ಣ ಕುಂಭದ ಶಿಲ್ಪಗಳಿವೆ. ಕೆಳಭಾಗದಲ್ಲಿ ಈ ಎಲ್ಲಾ ಐದು ಬಸದಿಯ ಗರ್ಭಗೃಹ ಅಂತರಾಳಗಳಿಗೆ ಒಂದೇ ಸಭಾ ಮಂಟಪ ಅಥವಾ ಮೊಗಸಾಲೆ ಇರುವುದೊಂದು ವಿಶೇಷವಾಗಿದೆ. ಮಧ್ಯದಲ್ಲಿರುವ ಶಿಲಾ ಸ್ತಂಭಗಳು ಚತುರಾಶ್ರ ಪೀಠದ ಮೇಲೆ ಸ್ಥಾಪಿತವಾಗಿದ್ದು ಚತುರಾಶ್ರ, ಅಷ್ಟಾಶ್ರ, ಷೋಡಶಾಸ್ರ ಮತ್ತು ಅಷ್ಟಾಶ್ರ, ಚತುರಾಶ್ರ ಭುಜಗಳಿದ್ದು ಅರ್ಧ ಘಟಾಕೃತಿ, ಚಕ್ರಬೋದಿಗೆ, ಘಂಟಾ ಬೋದಿಗೆ ಮತ್ತು ಚತುರ್ಮುಖ ಬೋದಿಗೆಗಳನ್ನೊಳಗೊಂಡಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇದು ಮಹಾ ಪಂಚ ಪರಮೇಷ್ಠಿಗಳ ಅನುಸಾರವಾಗಿ ನಿರ್ಮಿಸಿರುವ ಬಸದಿಗಳಾಗಿವೆ.

ಶ್ರವಣ ಬೆಳಗೊಳದ ಶಾಸನದ ಉಲ್ಲೇಖದನ್ವಯ ಕುಮ್ಮಟದಲ್ಲಿ ಜೈನಧರ್ಮವು ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಶ್ರವಣ ಬೆಳಗೊಳದಲ್ಲಿರುವ ಕುಮ್ಮಟ ಪಾರ್ಶ್ವನಾಥ ಬಸದಿ ಇದಕ್ಕೊಂದು ಉದಾಹರಣೆಯಾಗಿ, ಕುಮ್ಮಟದ ಪಾರ್ಶ್ವನಾಥ ಬಸದಿಗೆ ಸಿಂಗೇಯನಾಯಕನ ಕೊಮಾರ ಕಂಪಿಲರಾಯನು ದತ್ತಿಗಳನ್ನು ಬಿಟ್ಟನೆಂದು ತಿಳಿದು ಬರುತ್ತದೆ. ಈ ಬಸದಿಯ ನಿರ್ಮಾಣ ಮಾಡಿರುವುದು ಕುಮ್ಮಟದಲ್ಲಿನ ಜೈನಧರ್ಮ ಇತ್ತೆಂಬ ಬಗೆ ಸಾಕ್ಷಿಯಾಗಿದೆ.

ಹೆಸರು : ಸಿಂಹನಂದಾಚಾರ್ಯ್ಯ ಚೈತ್ಯಾಲಯ

ಸ್ಥಳ : ಆನೆಗೊಂದಿ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ

ಶಿಲಾವಸ್ತು : ಗ್ರಾನೈಟ್ ಶಿಲೆ

ಮುಖ : ಪೂರ್ವ

ಕಾಲ : ಕ್ರಿ.ಶ. ೧೩೪೬

ಉಲ್ಲೇಖ : Talwar H.T., 1997, PP. 9-10

ಚೈತ್ಯಾಲಯ ದ್ವಿಕೂಟದಲ್ಲಿದೆ. ಗರ್ಭಗೃಹ, ಅಂತರಾಳ, ಅರ್ಧಮಂಟಪ, ನವರಂಗ ಮುಖ ಮಂಟಪವಿದೆ. ಅಧಿಷ್ಠಾನವು ಸರಳವಾಗಿದ್ದು ಉಪಾನ ಜಗತಿ, ಕುಮುದ ಕಂಠ ಕಪೋತವಿದೆ. ಭಿತ್ತಿ ಸರಳವಾಗಿದೆ. ಪೂರ್ವ ಹಾಗೂ ದಕ್ಷಿಣ ದಿಕ್ಕಿನ ಭಿತ್ತಿಯ ಮೇಲೆ ಆನೆಗಳ ಶಿಲ್ಪವಿದೆ. ಶಿಖರ ಜೀರ್ಣವಾಗಿದೆ. ಚೈತ್ಯಾಲಯಕ್ಕೆ ಉತ್ತರ ದಿಕ್ಕಿನಲ್ಲಿಯೂ ದ್ವಾರವಿದೆ.

ಈ ದ್ವಾರದ ಬದಿಯ ಭಿತ್ತಿಯ ಮೇಲೆ ಶಿಲಾಶಾಸನವಿದೆ. ಕ್ರಿ.ಶ. ೧೩೪೬ರಲ್ಲಿ ಇರುಗಪ್ಪ ದಂಡನಾಯಕನು ತನ್ನ ಗುರು ಸಿಂಹನಂದಾಚಾರ್ಯ ಧರ್ಮಭೂಷಣ ಭಟ್ಟಾರಕರ ಹೆಸರಿನಲ್ಲಿ ಚೈತ್ಯಾಲಯವನ್ನು ಮಣಿಕಟ್ಟು ಬೀದಿಯಲ್ಲಿ ಕಟ್ಟಿಸಿರುವನು. ಈ ಚೈತ್ಯಾಲಯಕ್ಕೆ ತನ್ನ ತಂದೆ ಬೈಚಯ ದಂಡನಾಯಕನು ದಾನಗಳನ್ನು ನೀಡಿರುವನೆಂದು ಶಾಸನದ ಉಲ್ಲೇಖವಿದೆ. (ARIE. 1958-59. B. No. 678, I K. -III No. 23 I.K, 1, No.24 ಕವಿಶಾಸಂ. ೨ ಗಂಗಾವತಿ ಶಾಸನ ನಂ.೨೧) ಚೈತ್ಯಾಲಯದ ಮುಖ ಮಂಟಪ ಎಂಟು ಸ್ತಂಭಗಳಿಂದ ನಿರ್ಮಾಣವಾಗಿದೆ. ಮುಂದಿನ ನಾಲ್ಕು ಸ್ತಂಭಗಳು ಚತುರಾಶ್ರ, ಅಷ್ಟಾಶ್ರ ಮತ್ತು ಷೋಡಶಾಸ್ರ ಕೋನಗಳಿಂದ ಕೂಡಿದೆ. ಮೇಲಿನ ಭಾಗ ಅರ್ಧ ಘಟಾಕಾರ, ಚಕ್ರಬೋದಿಗೆ ಮತ್ತು ಘಂಟಾಬೋದಿಗೆಗಳಿಂದ ಕೂಡಿವೆ. ಹಿಂಭಾಗದ ನಾಲ್ಕು ಸ್ತಂಭಗಳು ಭಿತ್ತಿಯಲ್ಲಿ ಸೇರ್ಪಡೆಯಾಗಿವೆ. ಈ ಸ್ತಂಭಗಳು ಚತುರಾಶ್ರವಾಗಿದ್ದು ಬೋದಿಗೆಯನ್ನು ಹೊಂದಿವೆ. ಸ್ತಂಭಗಳ ಮೇಲೆ ಕೂಡ್ಯ ಸ್ತಂಭಗಳಿವೆ. ಈ ಕೂಡ್ಯ ಸ್ತಂಭಗಳು ಪೂರ್ಣಕುಂಭದ ಮೇಲಿವೆ. ಮುಖ್ಯ ದ್ವಾರದ ಎರಡೂ ಬದಿಯ ಭಿತ್ತಿಯ ಮೇಲೆ ಆನೆಯ ಶಿಲ್ಪಗಳಿವೆ. ಆನೆಗಳು ಬಾಳೆಯ ಗಿಡಗಳನ್ನು ಸೊಂಡಿಲಿನಲ್ಲಿ ಹಿಡಿದಿದ್ದು ಅಲಂಕೃತಗೊಂಡಿವೆ. ಮುಖ ಮಂಟಪದಲ್ಲಿ ಕಕ್ಷಾಸನವಿದೆ. ಚೈತ್ಯಾಲಯದ ಪೂರ್ವ ಮುಖ್ಯ ದ್ವಾರ ಮೂರು ಶಾಖೆಗಳಿಂದ ಕೂಡಿದ್ದು ಹೂಬಳ್ಳಿಗಳ ಅಲಂಕಾರವಿದೆ ಹಾಗೂ ಲಲಾಟವಿದೆ. ಲಲಾಟದ ಪೀಠದ ಮೇಲೆ ಕುಳಿತಿರುವ ಜಿನ ಶಿಲ್ಪವಿದೆ.

ನವರಂಗ ಹದಿನಾರು ಸ್ತಂಭಗಳಿಂದ ನಿರ್ಮಿತವಾಗಿದೆ. ಮಧ್ಯಭಾಗದಲ್ಲಿ ನಾಲ್ಕು ಸ್ತಂಭಗಳಿವೆ. ಸ್ತಂಭಗಳು ಚತುರಾಶ್ರ, ಅಷ್ಟಾಶ್ರ, ಷೋಡಾಶಾಸ್ರ ಕೋನಗಳಲ್ಲಿವೆ. ಮೇಲ್ಭಾಗವು ಅರ್ಧಘಟಾಕೃತಿ, ಚಕ್ರಬೋದಿಗೆ ಘಂಟಾಬೋದಿಗೆ ಹಾಗೂ ಚತುರ್ಮುಖ ಬೋದಿಗೆಗಳಿವೆ. ಸ್ತಂಭದ ಅರ್ಧ ಘಟಾಕಾರದ ಭಾಗದಲ್ಲಿ ದಳಗಳ ಶಿಲ್ಪಗಳಿವೆ. ಈಶಾನ್ಯ ದಿಕ್ಕಿನ ಸ್ತಂಭದಲ್ಲಿ ಮಾತ್ರ ಜಿನ ಶಿಲ್ಪವಿದೆ.

ಅಂತರಾಳದ ಬಾಗಿಲು ಸರಳವಾದ ನಾಲ್ಕು ಶಾಖೆಗಳಿಂದ ಕೂಡಿದೆ. ಲಲಾಟದಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ಜಿನ ಶಿಲ್ಪವಿದೆ. ಅಂತರಾಳ ಸರಳವಾಗಿದ್ದು, ಚೌಕಾಕಾರದಲ್ಲಿದೆ. ಗರ್ಭಗೃಹದ ದ್ವಾರದಲ್ಲಿ ಅಲಂಕಾರತೆ ಇರದೆ ಮೂಲರೂಪದಲ್ಲಿರುವುದು ವಿಶೇಷತೆ. ಗರ್ಭಗೃಹದ ಮೇಲ್ಛಾವಣಿಯ ಮಧ್ಯಭಾಗ ಜೀರ್ಣವಾಗಿದೆ. ಗರ್ಭಗೃಹವು

ಚೌಕಾಕಾರವಾಗಿದೆ. ಮಧ್ಯದಲ್ಲಿ ಸಿಂಹ ಪೀಠವಿದೆ. ಪೀಠಕ್ಕೆ ಪ್ರಣಾಳವಿದೆ. ಪೀಠವನ್ನು ಬಳಪದ ಶಿಲೆಯಲ್ಲಿ ನಿರ್ಮಿಸಲಾಗಿದೆ. ಪೀಠದ ಮುಂಭಾಗದ ಕೆಳ ಭಾಗದಲ್ಲಿ ಅಧಿಷ್ಠಾನದ ಹಂತಗಳಂತೆ ನಿರ್ಮಿಸಲಾಗಿದೆ. ಮೇಲೆ ಸ್ತಂಭಗಳ ಸಾಲುಗಳಿವೆ. ಎರಡೂ ಬದಿಯ ಮಂಟಪಾಕೃತಿಗಳಲ್ಲಿ ಸಿಂಹಗಳಿವೆ. ತುದಿಗಳಲ್ಲಿ ಪುಷ್ಪಗಳಿವೆ. ಪೀಠದ ಮೇಲೆ ಚೌಕಾಕಾರದ ರಂಧ್ರವಿದೆ. ನವರಂಗಕ್ಕೆ ಹೊಂದಿಕೊಂಡಂತೆ ದಕ್ಷಿಣ ದಿಕ್ಕಿನಲ್ಲಿ ಇನ್ನೊಂದು ಗರ್ಭಗೃಹವಿದೆ. ಈ ಗರ್ಭಗೃಹಕ್ಕೆ ಅಂತರಾಳ ಇರುವುದಿಲ್ಲ. ಈ ಗರ್ಭಗೃಹ ಉತ್ತರಾಭಿಮುಖವಾಗಿದೆ. ನವರಂಗದ ಉತ್ತರ ದಿಕ್ಕಿನಲ್ಲಿ ದ್ವಾರವಿದೆ. ಗರ್ಭಗೃಹದ ಬಾಗಿಲು ಸರಳವಾಗಿದೆ. ಗರ್ಭಗೃಹ ಚೌಕಾಕಾರವಾಗಿದ್ದು ಸರಳವಾದ ಭಿತ್ತಿ ಇದೆ. ಉತ್ತರ ದಿಕ್ಕಿನ ದ್ವಾರದ ಮುಂದೆ ಮುಖಮಂಟಪವಿದ್ದು ಈಗ ಶಿಥಿಲವಾಗಿದೆ. ಈ ದ್ವಾರವು ನಾಲ್ಕು ಶಾಖೆಗಳಿಂದ ಕೂಡಿದ್ದು ಹೂಬಳ್ಳಿಗಳ ಅಲಂಕರಣವಿದೆ. ದ್ವಾರದ ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತ ಜಿನ ಶಿಲ್ಪವಿದೆ.

ಹೆಸರು : ಕುಂಥು ಜಿನನಾಥ ಚೈತ್ಯಾಲಯ (ಗಾಣಗಿತ್ತಿ ಜಿನಾಲಯ)

ಸ್ಥಳ : ಕಂಪಲಿ ರಸ್ತೆ ಬದಿ, ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಶಿಲಾವಸ್ತು : ಗ್ರಾನೈಟ್ ಶಿಲೆ

ಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ೧೩೮೬

ಉಲ್ಲೇಖ : 1. ARSIEA, 1889, No. 17. SII I, No. 152 , SII IV, No.246

2. ARSIEA, 1889, No. 18. SSI IV, No. 247

3. George Michel, 1990. Vijayanagara Architectural Inventory PP. 230-31

4. Talwar H.T., 1997, Jain art Architecture at Vijayanagara PP. 10-11

ಜಿನಾಲಯ ಅಧಿಷ್ಠಾನವನ್ನು ಹೊಂದಿದ್ದು, ಉಪಾನ, ಜಗತಿ, ಕುಮುದ. ಕಂಠ ಕಪೋತಗಳಿವೆ. ಸರಳವಾದ ಭಿತ್ತಿ ಇದೆ. ಮೂಲೆಗಳಲ್ಲಿ ಕೂಡ್ಯ ಸ್ತಂಭಗಳಿವೆ. ಷಟ್‌ಸ್ಥಳ ಶಿಖರವಿದೆ. ಕಂಠಭಾಗದಲ್ಲಿ ಕೋಷ್ಠಗಳಿವೆ, ಮೇಲೆ ಚತುರಾಶ್ರ ಸ್ತೂಪಿ ಇದೆ. ಸ್ತೂಪಿಯ ನಾಲ್ಕು ಮುಖಗಳಲ್ಲಿ ಮೂರು ಸೋಪಾನಗಳಿವೆ. ಸ್ತೂಪಿಯ ಮೇಲ್ಭಾಗದಲ್ಲಿ ಪದ್ಮದಳಗಳಿವೆ ಹಾಗೂ ಶಿಖರದ ಪ್ರತಿ ತಳದಲ್ಲೂ ಪದ್ಮದಳಗಳ ಅಲಂಕರಣವಿದೆ. ಶಿಖರದ ಉತ್ತರಭಾಗದಲ್ಲಿ ಚಿಕ್ಕದಾದ ದ್ವಾರವಿದೆ. ಚೈತ್ಯಾಲಯಕ್ಕೆ ಉತ್ತರ ಮತ್ತು ಪೂರ್ವ ದಿಕ್ಕಿನಲ್ಲಿ ದ್ವಾರಗಳಿವೆ ಮತ್ತು ಮುಖ ಮಂಟಪಗಳಿವೆ. ಉತ್ತರ ದಿಕ್ಕಿನ ಮುಖಮಂಟಪ ಪ್ರಮುಖವಾಗಿದ್ದು ಕಕ್ಷಾಸನಗಳಿದ್ದು ವಿಶಾಲವಾಗಿದೆ. ಎಂಟು ಶಿಲಾ ಸ್ತಂಭಗಳಿಂದ ನಿರ್ಮಾಣವಾಗಿದೆ. ಮುಂದಿನ ನಾಲ್ಕು ಸ್ತಂಭಗಳು ಚತುರಾಶ್ರ, ಅಷ್ಟಾಶ್ರ ಮತ್ತು ಷೋಡಶಶ್ರ ಕೋನಗಳಿದ್ದು ಮೇಲೆ ಪುಷ್ಪಾಕಾರ. ಚಕ್ರಬೋದಿಗೆ. ಘಂಟಾಬೋದಿಗೆ

ಮತ್ತು ಚತುರ್ಮುಖ ಬೋದಿಗೆಗಳಿವೆ. ಪೂರ್ಣ ಮೇಲಿನ ಭಾಗದಲ್ಲಿ ದೇವಕೋಷ್ಠಗಳಿವೆ. ಈ ದೇವಕೋಷ್ಠಗಳ ಬದಿಯಲ್ಲಿ ಗಾರೆ ಶಿಲ್ಪಗಳು ಇರುವುದು. ದೇವಕೋಷ್ಠಕದ ಭಾಗವನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಪ್ರವೇಶಕ್ಕೆ ಕೈಪಿಡಿಗಳಿವೆ. ಪೂರ್ವ ದಿಕ್ಕಿನ ದ್ವಾರದ ಮುಖ ಮಂಟಪ ಚಿಕ್ಕದಾಗಿದೆ. ನಾಲ್ಕು ಶಿಲಾಸ್ತಂಭಗಳಿಂದ ನಿರ್ಮಿಸಲಾಗಿದೆ. ಮುಂದಿನ ಎರಡು ಸ್ತಂಭಗಳು ಕೆಳಭಾಗದಲ್ಲಿ ಚತುರಾಶ್ರ ಮೇಲೆ ಅಷ್ಟಾಶ್ರ ಕೋನಗಳಲ್ಲಿವೆ. ಚಕ್ರಬೋದಿಗೆ ಮತ್ತು ಚತುರಾಶ್ರ ಬೋದಿಗೆಗಳಿವೆ. ಸ್ತಂಭಗಳ ಬದಿಯಲ್ಲಿ ಕಕ್ಷಾಸನದ ಭಾಗಗಳನ್ನು ಇರಿಸಿದ ಗುರುತುಗಳಿವೆ. ಉತ್ತರ ದಿಕ್ಕಿನ ಮುಖ್ಯದ್ವಾರವು ವಿವಿಧ ಶಾಖೆಗಳಿಂದ ಕೂಡಿದೆ. ಲತಾ ಪುಷ್ಪ ಮತ್ತು ಕೂಡ್ಯ ಸ್ತಂಭಾಕೃತಿಗಳ ಅಲಂಕರಣವಿದೆ. ದ್ವಾರದ ಲಲಾಟದಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜಿನ ಶಿಲ್ಪವಿದೆ. ಪೂರ್ವದಿಕ್ಕಿನ ದ್ವಾರವು ಸರಳವಾಗಿದೆ. ಉತ್ತರದ್ವಾರದ ಎರಡೂ ಬದಿಯಲ್ಲಿ ಕುಳಿತಿರುವ ಸಿಂಹಗಳ ಶಿಲ್ಪಗಳಿವೆ.

ನವರಂಗದಲ್ಲಿ ಹದಿನಾರು ಸ್ತಂಭಗಳಿವೆ. ಮಧ್ಯದಲ್ಲಿರುವ ನಾಲ್ಕು ಸ್ತಂಭಗಳು ಚತುರಾಶ್ರ ಪೀಠದ ಮೇಲೆ ಸ್ಥಾಪಿತವಾಗಿವೆ. ಚತುರಾಶ್ರ ಮತ್ತು ಅಷ್ಟಾಶ್ರ, ಚತುರಾಶ್ರ ಕೋನಗಳಲ್ಲಿದ್ದು, ಮೇಲ್ಭಾಗವು ಘಟಾಕಾರ, ಚಕ್ರಬೋದಿಗೆ ಘಂಟಾಬೋದಿಗೆ ಮತ್ತು ಚತುರ್ಮುಖ ಬೋದಿಗೆಗಳಿಂದ ಕೂಡಿವೆ. ಭಿತ್ತಿಯಲ್ಲಿ ಕೋಷ್ಠಗಳಿವೆ. ಕೋಷ್ಠಗಳ ಮೇಲ್ಭಾಗದಲ್ಲಿ ಕಪೋತ ಮಾದರಿಯ ಶಿಲಾ ಚಪ್ಪಡಿ ಇದ್ದು ದಳಗಳಿವೆ. ನವರಂಗದ ಭಾವಣಿ ಅಷ್ಟಕೋನಾಕೃತಿಯಲ್ಲಿದೆ. ಮಧ್ಯದಲ್ಲಿ ತ್ರಿವೃತ್ತಾ ಕಮಲವಿದ್ದು, ಕಮಲದ ದಳಗಳಿವೆ. ಪ್ರತಿಕೋನದಲ್ಲಿ ತ್ರಿವೃತ್ತಕಮಲಗಳಿವೆ. ಎರಡನೆಯ ನವರಂಗವು ಈ ಮಾದರಿಯಲ್ಲಿರುವುದು. ಭಾವಣಿಯಲ್ಲಿ ಕಮಲ ಹಾಗೂ ಅರ್ಧ ಮಂಟಪದ ಕಮಲ, ಗರ್ಭಗೃಹದ ಕಮಲಗಳು ಒಂದೇ ಮಾದರಿಯಲ್ಲಿವೆ.

ಪ್ರಸ್ತುತ ಗರ್ಭಗೃಹದಲ್ಲಿ ಪೀಠ ಮಾತ್ರವಿದೆ. ಚೈತ್ಯಾಲಯದ ನವರಂಗಕ್ಕೆ ಹೊಂದಿಕೊಂಡಂತೆ ಇನ್ನೊಂದು ಗರ್ಭಗೃಹವಿದೆ. ಈ ಗರ್ಭಗೃಹ ಪೂರ್ವಾಭಿಮುಖವಾಗಿದೆ. ಗರ್ಭಗೃಹದ ದ್ವಾರವು ಸರಳವಾಗಿದೆ ಹಾಗೂ ಗರ್ಭಗೃಹ ಚೌಕಾಕಾರವಾಗಿದೆ.

ಚೈತ್ಯಾಲಯದ ಹೊರಭಾಗದಲ್ಲಿ ಮಾನಸ್ತಂಭವಿದೆ. ಈ ಮಾನಸ್ತಂಭದಲ್ಲಿ ಶಾಸನವಿದ್ದು ಇರುಗಪ್ಪ ದಂಡನಾಯಕ ಈ ಚೈತ್ಯಾಲಯವನ್ನು ಕ್ರಿ.ಶ. ೧೩೮೭ರಲ್ಲಿ ಕಟ್ಟಿಸಿರುವನೆಂದು ಈತನು ಬೈಚಯ ದಂಡನಾಯಕನ ಮಗನೆಂದು ಬೈಚಯದಂಡನಾಯಕನು ಪರಂಪರಾಗತ ಮಂತ್ರಿ ಪದವಿಯನ್ನು ಅಲಂಕರಿಸಿದವನೆಂದು. ಬೈಚಯ ದಂಡನಾಯಕನ ಲೋಕೋಪಕಾರ ಗುಣಗಳನ್ನು ಈ ಶಾಸನದಲ್ಲಿ ಹೇಳಿದೆ. ಬೈಚಯ ದಂಡನಾಯಕನು ಮುಮ್ಮಡಿ ಸಿಂಗೆಯನಾಯಕ, ಕಂಪಿಲರಾಯ ಮತ್ತು ಕುಮಾರ ರಾಮನಾಥ ಹಾಗೂ ಒಂದನೇ ಹರಿಹರ ಮತ್ತು ಬುಕ್ಕರಾಯರ ಕಾಲದಲ್ಲಿ ಮಂತ್ರಿಯಾಗಿ ಇದ್ದವನು, ಕುಮ್ಮಟದ ನಾಯಕರ ಕಾಲದಲ್ಲಿ ಪ್ರಸಿದ್ಧನೂ ಆಗಿದ್ದನೆಂಬುದು ಗಮನಿಸಬೇಕಾದ ಅಂಶ.

ಕುಮಾರ ಪಂಥ ದೇವಾಲಯಗಳು

ಹೆಸರು : ಕುಮಾರ ರಾಮನ ದೇವಾಲಯ

ಸ್ಥಳ : ಕುಮಾರ ರಾಮನ ಗುಡ್ಡ, ಹಳೇ ಕುಮ್ಮಟ, ಕೊಪ್ಪಳ ತಾಲೂಕು, ಕೊಪ್ಪಳ ಜಿಲ್ಲೆ

ಶಿಲಾವಸ್ತು	: ಗ್ರಾನೈಟ್ ಶಿಲೆ
ಮುಖ	: ಉತ್ತರಾಭಿಮುಖ
ಕಾಲ	: ೧೪-೧೫ನೇ ಶತಮಾನ
ಉಲ್ಲೇಖ	: VPR, 1987-88, P. 209

ದೇವಾಲಯದ ಭಿತ್ತಿ ಸರಳವಾಗಿ ಅಲಂಕಾರತೆಗೆ ಪ್ರಾಧಾನ್ಯತೆ ನೀಡದೆ, ಮೂಲರೂಪದಲ್ಲಿರುವುದು ವಿಶೇಷ ಲಕ್ಷಣಗಳಲ್ಲೊಂದು. ಗರ್ಭಗುಡಿಯ ಹಿಂದಿನ ಭಾಗದ ದೊಡ್ಡ ಗುಂಡಿಗೆ ಹೊಂದಿಕೊಂಡಿದೆ. ಗರ್ಭಗೃಹದ ಭಿತ್ತಿಯ ಮೇಲೆ, ಆನೆಗಳ ಉಬ್ಬು ಶಿಲ್ಪಗಳು, ಮನುಷ್ಯನ ರುಂಡ(ತಲೆ)ಶಿಲ್ಪ ಮತ್ತು ಬಾಲಕೃಷ್ಣನ ಶಿಲ್ಪವಿದೆ. ಸಭಾಮಂಟಪ ಭಿತ್ತಿಯ ಮೇಲ್ಭಾಗದಲ್ಲಿ ಛಜ್ಜವಿದೆ. ಶಿಖರವು ಗರ್ಭಗೃಹಕ್ಕೆ ಹೊಂದಿಕೊಂಡಿರುವ ಹಿಂದಿನ ಗುಂಡಿನ ಮೇಲೆ ನಿರ್ಮಿಸಲಾಗಿದೆ.

ಗರ್ಭಗೃಹವು ಹಿಂದಿನ ಭಾಗದಲ್ಲಿನ ಪ್ರಾಕೃತಿಕ ಬಂಡೆಗೆ ಸೇರಿಕೊಂಡಿದೆ. ಗರ್ಭಗೃಹದಲ್ಲಿ ಪೀಠಾಕಾರದ ಕಟ್ಟೆ ಇದ್ದು, ಅದರ ಮೇಲೆ ಚಿಕ್ಕದಾದ ಗುಂಡು ಕಲ್ಲುಗಳಿದ್ದು ಅವುಗಳನ್ನು ಕುಮಾರ ರಾಮ ಮತ್ತು ಆತನ ಸಹಚರರ ರುಂಡಗಳೆಂದು ಅವುಗಳನ್ನು ಪೂಜಿಸುತ್ತಾರೆಂಬ ಪ್ರತೀತಿ. ಸಭಾಮಂಟಪವು ಹದಿನಾರು ಸ್ತಂಭಗಳಿಂದ ಆವೃತವಾಗಿದ್ದು ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ಉಳಿದಂತೆ ಹನ್ನೆರಡು ಸ್ತಂಭಗಳು ಭಿತ್ತಿಯಲ್ಲಿವೆ. ಛತ್ತಿನಲ್ಲಿ ಕಮಲದ ಶಿಲ್ಪವಿದೆ. ಈ ಸಭಾ ಮಂಟಪಕ್ಕೆ ಉತ್ತರಕ್ಕೂ ಹಾಗೂ ಪೂರ್ವ ಪಶ್ಚಿಮಕ್ಕೂ ದ್ವಾರಗಳಿವೆ. ದ್ವಾರಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಚತುರಾಶ್ರ ಮತ್ತು ಅಷ್ಟಾಶ್ರ ಸ್ತಂಭಗಳ ಮೇಲ್ಭಾಗದಲ್ಲಿ ಪುಷ್ಪ ಬೋದಿಗೆಗಳಿವೆ. ಸ್ತಂಭಗಳ ಮೇಲೆ ಆನೆಗಳು, ಮಾವುತರು, ಕುದುರೆ ರಾವುತರು, ಬೇಟೆಗಾರರು, ನೃತ್ಯಗಾರರು, ಶಂಖ, ಚಕ್ರನಾಮ, ಚಂದ್ರ ಮುಂತಾದ ಶಿಲ್ಪಗಳಿವೆ. ಸಭಾಮಂಟಪದಲ್ಲಿ ಚಿಕ್ಕದಾದ ಶಿಲ್ಪವಿದೆ. ಉತ್ತರಭಾಗದ ದ್ವಾರದ ಬಳಿ ನೆಲದ ಮೇಲೆ ಸ್ತ್ರೀಯೊಬ್ಬಳು ಶಿಲ್ಪವಿದೆ. ಇದು ಅಂಜಲಿ ಮುದ್ರೆಯಲ್ಲಿದೆ. ಎಡಭಾಗದಲ್ಲಿ ಕನ್ನಡಿ ಬಲಬದಿಯಲ್ಲಿ ಕೀರ್ತಿಮುಖ ಮತ್ತು ಗಂಡ ಬೇರುಂಡ ಶಿಲ್ಪಗಳಿವೆ. ಇಲ್ಲಿನ ಚಿತ್ರಣವನ್ನು 'ರತ್ನಾಜಿ' ಎಂದು ಇಂದಿಗೂ ಕರೆಯುವುದು ಲೋಕಾರೂಢಿಯಲ್ಲಿರುವ ಮಾತು. ಈ ದೇವಾಲಯವನ್ನು ಕೋನೇರಿಯ ಮಗಳು ರಾಮನಾಥನ ಗೋಪಾಯಿ ಕಟ್ಟಿಸಿದಳೆಂದು ಉಲ್ಲೇಖವಿದೆ. ಕ್ರಿ.ಶ. ೧೫೨೮ರಲ್ಲಿ ಹೊಸಮಲೆ ರಾಮನಾಥನ ದೇವಾಲಯವನ್ನು ರಾಮನಾಥನ ಗೋಪಾಯಿ ಕಟ್ಟಿಸಿದಳು. (ಕವಿಶಾಸಂ ೨, ಪು.೧೪೫) ಭಿತ್ತಿಯ ಹೊರಭಾಗದಲ್ಲಿ ತಲೆ ಮತ್ತು ಕುದುರೆಯ ಶಿಲ್ಪವಿದ್ದು ಇವುಗಳು ನಂಜುಂಡನ ಕುಮಾರರಾಮನ ಚರಿತದಂತೆ ದೆಹಲಿಯಿಂದ ಕುಮಾರರಾಮನ ತಲೆಯನ್ನು ತರಲಾಯಿತೆಂದು ಮತ್ತು ಕುದುರೆ ಬೊಲ್ಲನದೆಂದು ಅರ್ಥೈಸಬಹುದು.

ದೇವಾಲಯಗಳ ಲಕ್ಷಣಗಳು ಮತ್ತು ವೈಶಿಷ್ಟ್ಯತೆ

ಕುಮ್ಮಟ ನಾಯಕರು ಮೂಲತಃ ಸೇವುಣರ ಮಾಂಡಲೀಕರು. ಆಳ್ವಿಕೆಯಲ್ಲಿ ಹೊಯ್ಸಳ, ಸೇವುಣ ಹಾಗೂ ಚಾಲುಕ್ಯರ ವಾಸ್ತು ವಿನ್ಯಾಸಗಳನ್ನು ಮೂಲವಾಗಿಟ್ಟುಕೊಂಡರೂ ಇದರ ಜೊತೆ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಅಳವಡಿಸಿ

ಕೊಂಡಿರುವುದೊಂದು ಕೊಡುಗೆಯಾಗಿದೆ. ಉದಾಹರಣೆಗಾಗಿ ಹಾನೆಯದಲ್ಲಿನ ದೇವಾಲಯಗಳನ್ನು ಪರಿಶೀಲಿಸಿದರೆ, ದೇವಾಲಯದ ಮೊದಲ ಹಂತದ ಬೆಳವಣಿಗೆಯನ್ನು ಗರ್ಭಗೃಹ, ಚಿಕ್ಕದಾದ ಅಂತರಾಳ ಮತ್ತು ತೆರದ ಮಂಟಪದಲ್ಲಿ ಗುರುತಿಸಬಹುದು. ಅಧಿಷ್ಠಾನದ ಭಾಗ ಹೆಚ್ಚಿನ ಮಟ್ಟಿಗೆ ಉಪಾನ, ಜಗತಿ, ಕುಮುದ, ಕಂಠ, ಕಪೋತವನ್ನೊಳಗೊಂಡಿದೆ. ಅಧಿಷ್ಠಾನದ ಭಾಗವು ಗರ್ಭಗೃಹ ಮತ್ತು ಅಂತರಾಳಕ್ಕೆ ಅಳವಡಿಸಿದಂತೆ ಮುಂದಿನ ಸಭಾಮಂಟಪ ಕಂಡುಬರದೆ ಅಧಿಷ್ಠಾನದ ವಿವಿಧ ಭಾಗಗಳಲ್ಲಿ ವ್ಯತ್ಯಾಸವನ್ನು ನಾವು ಕಾಣಬಹುದು. ಸ್ತಂಭಗಳಿರುವ ತೆರದ ಮಂಟಪ ಇವರ ಇನ್ನೊಂದು ವೈಶಿಷ್ಟ್ಯತೆ. ಹಾನೇಯದ ಅಕ್ಕ ತಂಗಿಯರ ಗುಡಿ, ತ್ರಿಶಂಕೇಶ್ವರ ದೇವಾಲಯ, ಬ್ರಹ್ಮಗಿರಿ ಇದಕ್ಕೆ ಉತ್ತಮ ಉದಾಹರಣೆ (MAR. 1930, PP. 30-32) ಇಲ್ಲಿ ನೊಳಂಬರ ಕಾಲದ ವಾಸ್ತುಶೈಲಿಯೂ ಇದೆ. ಆದರೆ ಭಿತ್ತಿಯಲ್ಲಿ ಪ್ರಸ್ತರ ಇರುವುದಿಲ್ಲ. ಕದಂಬನಾಗರ ಶೈಲಿ ಇದ್ದರೂ ಶಿಖರದ ಪ್ರತಿ ತಳದ ದಳಗಳ ಅಲಂಕರಣ ಅಷ್ಟಾಗಿ ಕಂಡುಬರದೆ ಸರಳ ರೂಪದಲ್ಲಿದೆ. ಇದರ ಮೂಲರೂಪ, ಶಿಖರದ ಮೇಲಿನ ಸ್ತೂಪಿ ಚತುರಾಶ್ರ ಆಕೃತಿಯಲ್ಲಿದ್ದರೂ ಪ್ರಥಮ ಹಂತದಲ್ಲಿ ಶುಕನಾಸಿ ಇದೆ. ಇನ್ನೊಂದು ವೈಶಿಷ್ಟ್ಯತೆ ಗರ್ಭಗೃಹದ ದ್ವಾರದಲ್ಲಿ ಸ್ತಂಭಾಕೃತಿ ಮತ್ತು ಪುಷ್ಪಾಲಂಕರಣ, ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದ್ವಾರದ ಮೇಲ್ಭಾಗ ಅರ್ಧವೃತ್ತಾಕಾರವಾಗಿ ಮುಂಚಾಚಿದೆ. ಹಂಪೆಯ ಹೇಮಕೂಟದಲ್ಲಿರುವ ಕಂಪಿಲರಾಯನ ದೇವಾಲಯಗಳು ಹಾಗೂ ಎಮ್ಮೆಗುಡ್ಡದಲ್ಲಿರುವ ದೇವಾಲಯಗಳಲ್ಲಿ, ಕುಮ್ಮಟದ ಮಲ್ಲಿಕಾರ್ಜುನ ದೇವಾಲಯ, ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯಗಳಲ್ಲಿ ಇನ್ನೂ ಹೆಚ್ಚಿನ ಬದಲಾವಣೆಯನ್ನು ಕಾಣಬಹುದು.

ಒಟ್ಟಾರೆ ಈ ದೇವಾಲಯದ ವಾಸ್ತು ವೈಶಿಷ್ಟ್ಯತೆಯ ಜೊತೆಗೆ ಪ್ರಾಕೃತಿಕ ಗುಹೆಗಳನ್ನು ಗುಹಾಲಯಗಳಾಗಿ ಉಪಯೋಗಿಸಿರುವುದನ್ನು ಒಂದು ವಿಶೇಷತೆ ಎಂದು ಹೇಳಬೇಕು. ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯ ಭಾಗಶಃ ಗುಹಾಲಯವಾಗಿದೆ. ಆನೆಗೊಂದಿಯ ಸಿದ್ಧನಾಥನ ಗುಹೆ, ಸಂಗಾಪುರದ ಮಂಜುನಾಥ ಗುಹೆ, ಹಂಪೆಯ ಪರಿಸರದಲ್ಲಿನ ಗುಹೇಶ್ವರನ ಆಶ್ರಮದ ಗುಹೆ, ಗಣ್ಯವ್ಯಕ್ತಿಗಳ ಅರಮನೆಗಳ ಬಳಿಯಿರುವ ಗುಹೆ, ನಾಗೇನಹಳ್ಳಿಯ ಚನ್ನಬಸವೇಶ್ವರ ಗುಹಾಲಯ ಗುಹಾಲಯ ರಚನೆಗೆ ಮಾದರಿಯಾಗಿವೆ.

ದೇವಾಲಯಗಳಿಗೆ ಸಂಬಂಧಿಸಿದಂತೆ ದ್ವಿಕೂಟ, ತ್ರಿಕೂಟ ದೇವಾಲಯಗಳನ್ನು ಅನುಸರಿಸಿದ ಕುಮ್ಮಟ ನಾಯಕರ ಕಾಲದ ದೇವಾಲಯ ವಾಸ್ತು ಶೈಲಿಗೆ ಮೆರಗೆನ್ನಬೇಕು. ಕುಮ್ಮಟ ಜೈನ ದೇವಾಲಯ, ಹಾನೇಯದ ಜಿನಾಲಯಗಳು, ಕುಮ್ಮಟದ ನಾಯಕರ ಹಾಗೂ ಕುಮ್ಮಟ ನಾಯಕರೋತ್ತರ ಕಾಲದ ಬೆಳವಣಿಗೆಯ ಹಂತವೆಂದು ಹೇಳಬಹುದು. ಈ ಒಂದು ಹಿನ್ನೆಲೆಯಲ್ಲಿ ಕುಮ್ಮಟದ ನಾಯಕರ ಕಾಲದ ದೇವಾಲಯಗಳ ವಾಸ್ತು ವೈಶಿಷ್ಟ್ಯತೆಯ ಲಕ್ಷಣಗಳ ಅಧ್ಯಯನವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಕುಮ್ಮಟ ನಾಯಕರು ದೇವಾಲಯಗಳ ನಿರ್ಮಾಣದಲ್ಲಿ ಪ್ರಾಕೃತಿಕ ಹಾಗೂ ಭೌಗೋಳಿಕ ಲಕ್ಷಣವನ್ನು ಮುಖ್ಯವಾಗಿ ಪರಿಶೀಲಿಸಿದಂತೆ, ಬೆಟ್ಟ -ಗುಡ್ಡಗಳ ಪ್ರದೇಶವನ್ನು ಮುಖ್ಯವಾಗಿ ಆಯ್ಕೆ ಮಾಡಿಕೊಂಡಂತಿದೆ. ಪ್ರಾಕೃತಿಕ ಬಂಡೆಯ ಮೇಲಿನ ದೇವಾಲಯಗಳ ನಿರ್ಮಾಣಕ್ಕೆ ಉತ್ತಮ ಉದಾಹರಣೆಯಾಗಿ ಹಾನೇಯ ಪರಿಸರದ ದೇವಾಲಯಗಳು ಹೇಮಕೂಟದ

ದೇವಾಲಯಗಳು, ಕುಮ್ಮಟ ದುರ್ಗದ ದೇವಾಲಯಗಳು, ದೊರವದಿಯ ದೇವಾಲಯ, ಚಿತ್ರದುರ್ಗದ ಬೆಟ್ಟದಲ್ಲಿನ ದೇವಾಲಯಗಳು ಅಂದು ಹೊಸದಾದ ತಾಂತ್ರಿಕತೆಯನ್ನು ಅಳವಡಿಸಿಕೊಂಡಿದ್ದರೆಂಬುದನ್ನು ಮನದಟ್ಟು ಮಾಡುತ್ತದೆ.

ವಾಸ್ತು ವೈಶಿಷ್ಟ್ಯಗಳು

ಅದಿಷ್ಠಾನ : ಕುಮ್ಮಟ ನಾಯಕರು, ಬಲಿಷ್ಟವಾದ ಜಗತಿಯ ಮೇಲೆ ದೇವಾಲಯದ ಅಧಿಷ್ಠಾನವನ್ನು ನಿರ್ಮಾಣ ಮಾಡಿರುವುದು ಹಂಪೆಯ ಕಂಪಿಲರಾಯನ ದೇವಾಲಯಗಳಲ್ಲಿ ಕಾಣುತ್ತೇವೆ. (VPR, 1987-88, PP. 127-130) ಪ್ರಾಥಮಿಕ ಹಂತದಲ್ಲಿ ಈ ರಚನೆ ಇರದಿದ್ದರೂ ತದ ನಂತರದಲ್ಲಿ ದೇವಾಲಯದಲ್ಲಿ ಇದರ ಬೆಳವಣಿಗೆಯನ್ನು ಕಾಣಬಹುದು. ಉದಾ ಜಟಂಗರಾಮೇಶ್ವರ ದೇವಾಲಯ ಕುಮ್ಮಟದುರ್ಗದ ಮಲ್ಲಿಕಾರ್ಜುನ (ಈಶ್ವರ) ದೇವಾಲಯವನ್ನು ಬೆಟ್ಟದ ಇಳಿಜಾರಿನಲ್ಲಿ ನಿರ್ಮಿಸಿದ್ದು (VPR, 1987-88, PP. 207-208) ಇದರ ಅಧಿಷ್ಠಾನದಲ್ಲಿ ಕುಮುದ ಹಾಗೂ ಕಪೋತಗಳು ಪದ್ಮದಳಯುಕ್ತವಾಗಿರುವ ಬೆಳವಣಿಗೆಯನ್ನು ಕಾಣುತ್ತೇವೆ. ಅಲ್ಲದೆ ಉಳಿದ ದೇವಾಲಯಗಳಂತೆ ತ್ರಿಪಟ್ಟ ಕುಮುದದ ಬದಲಿಗೆ, ಮೊನಚಾದ ಕುಮುದದ ಬೆಳವಣಿಗೆಯನ್ನು ಕಪೋತದ ಮೇಲ್ಭಾಗದಲ್ಲಿ ಪದ್ಮದಳಗಳ ಅಲಂಕರಣವಿದೆ. ಇದು ಅಧಿಷ್ಠಾನದಲ್ಲಿನ ಬೆಳವಣಿಗೆಯ ಕೊನೆಯ ಹಂತವೆಂದು ಹೇಳಬಹುದು.

ಭಿತ್ತಿ: ದೇವಾಲಯದ ಭಿತ್ತಿಯಲ್ಲಿ ಸರಳತೆ ಪ್ರಾರಂಭದ ಹಂತದಲ್ಲಿನ ವೈಶಿಷ್ಟ್ಯ. ನಂತರದ ದೇವಾಲಯದ ಭಿತ್ತಿಯು ದೇವಾಲಯ ಭದ್ರವಾಗಿರಲು ಭಿತ್ತಿಯ ಅರ್ಧಭಾಗದಲ್ಲಿ ಪ್ರಸ್ತರವನ್ನು ಅಳವಡಿಸಲಾಯಿತು. ಇದೊಂದು ತಾಂತ್ರಿಕ ಬೆಳವಣಿಗೆ. ಭಿತ್ತಿಯಲ್ಲಿನ ಎರಡೂ ಕಡೆಯ ಕಲ್ಲುಗಳನ್ನು ವಿಭಜಿಸಿದಂತೆ ಈ ಪ್ರಸ್ತರದ ಚಪ್ಪಡಿ ಕಲ್ಲುಗಳು ಬಿತ್ತಿಯನ್ನು ಭದ್ರಪಡಿಸುವವು. ಕಂಪಿಲ ರಾಯನದೇವಾಲಯದಲ್ಲಿ ಇದನ್ನು ಕಾಣಬಹುದು. ಪ್ರಸ್ತರವು ಕೆಲವೊಮ್ಮೆ ಲತಾ ಪುಷ್ಪಗಳ ಅಲಂಕರಣದಿಂದ ಎದ್ದು ಕಾಣಸುತ್ತವೆ. ದೇವಾಲಯದ ವಾತಾನುಕೂಲಕ್ಕಾಗಿ ಜಾಲಂಧರದ ವ್ಯವಸ್ಥೆಯನ್ನು ಮಾಡಲಾಗಿದೆ. ಇವು ವಿವಿಧ ಮಾದರಿಯಲ್ಲಿವೆ. ಹೇಮಕೂಟದಲ್ಲಿನ ತ್ರಿಕೂಟ ದೇವಾಲಯ, ದ್ವಿಕೂಟ ದೇವಾಲಯ, ಪ್ರಸನ್ನ ವಿರೂಪಾಕ್ಷ ದೇವಾಲಯಗಳು ಹಾಗೂ ಚಿಕ್ಕರಾಂಪುರದ ಪಂಪಾಪತಿ ದೇವಾಲಯ ಇದಕ್ಕೆ ಉತ್ತಮ ಉದಾಹರಣೆ (VPR, 1987-88, P. 139).

ಛಜ್ಜ : ಭಿತ್ತಿಯ ಮೇಲೆ ಶಿಖರದ ಕೆಳಭಾಗದಲ್ಲಿ ಛಜ್ಜದ ನಿರ್ಮಾಣವಿದೆ. ಉದಾಹರಣೆಗಾಗಿ ಹೇಮಕೂಟದ ದೇವಾಲಯಗಳಲ್ಲಿ ''ಉ'' ಆಕಾರದ ಛಜ್ಜದ ಬೆಳವಣಿಗೆಯನ್ನು ಕಾಣುತ್ತೇವೆ.

ಶಿಖರ : ದೇವಾಲಯಗಳ ಶಿಖರಗಳಲ್ಲಿ ಕದಂಬ ನಾಗರ ಮತ್ತು ದ್ರಾವಿಡ ವಿಮಾನ ಶೈಲಿಯನ್ನು ಅನುಸರಿಸಲಾಗಿದೆ. ಆದರೂ ಅವುಗಳು ತಳಗಳ ದಳಪಟ್ಟಿಕೆಯನ್ನು ಹೊಂದಿದ್ದು ತಳದ ಅಂತರದಲ್ಲಿ ಅಂದರೆ ಕಂಠಭಾಗದಲ್ಲಿ ಅಗಲವಾಗಿ ಮಾಡಲ್ಪಟ್ಟಿದೆ. ಪ್ರತಿಯೊಂದು ತಳದ ಮಧ್ಯದಲ್ಲಿ ಹಾಗೂ ಶಿಖರದ ಮೂರು ಭಾಗಗಳಲ್ಲಿ ಫಲಕಗಳಿವೆ. ಈ ಫಲಕಗಳಲ್ಲಿ ದೇವರುಗಳ ಶಿಲ್ಪಗಳು ಇರುವುದೊಂದು ವಿಶೇಷತೆ. ದೇವಾಲಯದ ಅಂತರಾಳದ ದ್ವಾರದಲ್ಲಿ ಕಪೋತದ ಮೇಲ್ಭಾಗದ

ಪಟ್ಟಿಕೆಗಳಲ್ಲಿ ವಿವಿಧ ಮಾದರಿಯ ಶಿಖರಗಳ ಶಿಲ್ಪಗಳನ್ನು ಅಳವಡಿಸಲಾಗಿದೆ. ಇದರಲ್ಲಿ ದ್ರಾವಿಡ ವಿಮಾನ, ರೇಖಾ ನಾಗರ ಶೈಲಿಯ ಶಿಖರಗಳು ಪ್ರತಿಬಿಂಬಿತವಾಗಿದ್ದು, ಕದಂಬ ನಾಗರ ಶೈಲಿಯ ಶಿಖರಗಳನ್ನು ಹಾನೇಯ ದೊರವದಿ, ಕುಮ್ಮಟ ದುರ್ಗ ಚಿತ್ರದುರ್ಗ, ಹಂಪೆಯ ಹೇಮಕೂಟದ ದೇವಾಲಯಗಳಲ್ಲಿ ಕಾಣಬಹುದು. ಶಿಖರದ ಮೇಲೆ ಹೆಚ್ಚಿನ ಮಟ್ಟಿಗೆ ಚತುರಾಕೃತಿಯ ಸ್ತೂಪಿ ಇರುವುದು ಇನ್ನೊಂದು ವಿಶೇಷವೇ. ಕದಂಬನಾಗರ ವಿನ್ಯಾಸವನ್ನು ಕಂಪಿಲರಾಯ ದೇವಾಲಯದ ಅಂತರಾಳದ ದ್ವಾರದ ಮೇಲೆ ಕಾಣಬಹುದು. ದ್ರಾವಿಡ ಶೈಲಿಯ ಶಿಖರ ತ್ರಿಕೂಟಾಚಲ ದೇವಾಲಯಗಳ ಮೇಲೂ ಚತುರಾಶ್ರ ಸ್ತೂಪಿಯನ್ನು ಕಾಣುತ್ತೇವೆ. ಶಿಖರದ ಮುಂಭಾಗದಲ್ಲಿ ಶುಕನಾಸಿ ಇದ್ದು ಮುಂದಿನ ಭಾಗ ಕೂಡುಪಿನ ಚಿತ್ರವನ್ನು ಹೊಂದಿರುತ್ತದೆ. ಕುಮ್ಮಟ ದುರ್ಗದ ಮಲ್ಲಿಕಾರ್ಜುನ (ಈಶ್ವರ) ದೇವಾಲಯ ಶಿಖರದಲ್ಲಿ ಮುಂದಿನ ಶುಕನಾಸಿ ಸರಳವಾಗಿದ್ದು, ಪ್ರಥಮ ಹಂತದ ಹಾನೇಯದ ದೇವಾಲಯಗಳಲ್ಲಿ ಶುಖನಾಸವಿರುವುದಿಲ್ಲ.

ಪ್ರವೇಶ ದ್ವಾರ : ಕುಮ್ಮಟ ನಾಯಕರ ಕಾಲದ ದೇವಾಲಯಗಳ ವಿನ್ಯಾಸದಲ್ಲಿ ತೆರೆದ ಮಂಟಪ ಹಾಗೂ ಸಭಾ ಮಂಟಪ ಒಂದೇ ಆಗಿರುತ್ತದೆ. ಇದಕ್ಕೆ ಹಾನೇಯ, ಬ್ರಹ್ಮಗಿರಿ, ಜಟಿಂಗ ರಾಮೇಶ್ವರ ದೇವಾಲಯಗಳು ಉತ್ತಮ ಉದಾಹರಣೆಯಾಗಿವೆ. ಹಂಪೆಯ ಹೇಮಕೂಟದ ದೇವಾಲಯದ ದ್ವಾರದಲ್ಲಿ ಸ್ತಂಭಗಳ ಆಕಾರ ಮೊದಲು ಚತುರಾಶ್ರ ಮತ್ತು ಷೋಡಶಾಶ್ರ ಕೋನಗಳನ್ನು, ಪಟ್ಟಿಕೆಗಳನ್ನು ಕಾಣುತ್ತೇವೆ. ಕೆಳಭಾಗದಲ್ಲಿ ಚತುರಾಶ್ರವಾಗಿರುತ್ತದೆ. ಪ್ರವೇಶದ್ವಾರ ಚಿಕ್ಕದಾಗಿದ್ದು, ಪ್ರವೇಶ ಮಂಟಪದಲ್ಲಿ ಕಕ್ಷಾಸನವಿರುತ್ತದೆ. ಕುಮ್ಮಟದ ನಾಯಕರ ದೇವಾಲಯಗಳಲ್ಲಿ ಸಭಾಮಂಟಪ ನವರಂಗದೊಳಕ್ಕೆ ಪ್ರವೇಶ ದ್ವಾರವಿದ್ದು ಮೊದಲು ತೆರದ ಮುಖಮಂಟಪದ ಉದಾಹರಣೆ ಹಾನೇಯದ ಪರಿಸರದ ದೇವಾಲಯಗಳು. ಹೀಗಾಗಿ ಕುಮ್ಮಟದ ನಾಯಕರ ಕಾಲದ ಪ್ರಥಮ ಹಂತದ ಬೆಳವಣಿಗೆ ಹಾನೇಯ ಒಂದು ಉತ್ತಮ ಉದಾಹರಣೆ. ಕೊನೆಯ ಹಂತದ ಬೆಳವಣಿಗೆ ಹೇಮಕೂಟದ ಕಂಪಿಲರಾಯನ ದೇವಾಲಯಗಳನ್ನು ಉದಾಹರಿಸಬಹುದು. ಒಟ್ಟಾರೆ ಸ್ತಂಭಗಳ ವಿನ್ಯಾಸ ಕಕ್ಷಾಸನ ಹಾಗೂ ಸೋಪಾನಗಳು ಬೆಳವಣಿಗೆಯ ಹಂತದಲ್ಲಿ ಪ್ರವೇಶ ದ್ವಾರದ ರಚನಾ ವಿನ್ಯಾಸದಲ್ಲಿ ಕಾಣಬಹುದು.

ನವರಂಗ ಅಥವಾ ಸಭಾಮಂಟಪ

ಹಾನೇಯದ ಪರಿಸರದ ದೇವಾಲಯಗಳಲ್ಲಿ ಪ್ರತ್ಯೇಕವಾದ ನವರಂಗವಿರದೆ ಮುಖ ಮಂಟಪವನ್ನೇ ನವರಂಗವಾಗಿ ಬಳಸಿರುವುದು ವಿಶೇಷ ವೈಶಿಷ್ಟ್ಯಗಳಲ್ಲೊಂದು (MAR, 1930, P.30) ಇಲ್ಲಿನ ನವರಂಗ ಚೌಕಾಕಾರವಾಗಿದೆ. ಕುಮ್ಮಟದುರ್ಗದ ಮಲ್ಲಿಕಾರ್ಜುನ ದೇವಾಲಯದಲ್ಲಿನ ನವರಂಗ, ಇಲ್ಲಿ ತೆರದ ಮಂಟಪ ಇದ್ದು, ಒಂಭತ್ತು ಅಂಕಣಗಳಿಂದ ಕೂಡಿದೆ. ಇಲ್ಲಿ ಹದಿನಾರು ಸ್ತಂಭಗಳಿದ್ದು ಹನ್ನೆರಡು ಸ್ತಂಭಗಳು ಭಿತ್ತಿಯಲ್ಲಿ ಸೇರಿ ಕುಡ್ಯ ಸ್ತಂಭಗಳಾಗಿವೆ. ಮಧ್ಯದಲ್ಲಿ ನಾಲ್ಕು ಸ್ತಂಭಗಳಿದ್ದು ಸಭಾಮಂಟಪದ ದಕ್ಷಿಣ ಮತ್ತು ಪೂರ್ವಕ್ಕೆ ಕಕ್ಷಾಸನಗಳಿವೆ. ನವರಂಗ ಅಥವಾ ಸಭಾಮಂಟಪದಲ್ಲಿ ವೃತ್ತಾಕಾರದಲ್ಲಿರುವ ಶಿಲೆಯ ಬೆಳವಣಿಗೆಯನ್ನು ಕಂಪಿಲರಾಯನ ಕಾಲದಲ್ಲಿ ಕಾಣುತ್ತೇವೆ. ಇದಕ್ಕೆ ಉದಾಹರಣೆ ಹೇಮಕೂಟದ ತ್ರಿಕೂಟ ದೇವಾಲಯ ಹಾಗೂ ಪ್ರಸನ್ನ ವಿರೂಪಾಕ್ಷ ದೇವಾಲಯ.

ದೇವಕೋಷ್ಠಗಳು

ಹೆಚ್ಚಿನ ಮಟ್ಟಿಗೆ ಚಾಲುಕ್ಯ-ಹೊಯ್ಸಳರ ಕಾಲದ ದೇವಾಲಯಗಳ ಹೊರಭಿತ್ತಿಗಳಲ್ಲಿ ದೇವಕೋಷ್ಠಗಳು ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಆದರೆ ಕುಮ್ಮಟ ನಾಯಕರ ಕಾಲದಲ್ಲಿ ವಾಸ್ತು ಶೈಲಿಯಲ್ಲಿ ದೇವಕೋಷ್ಠಗಳನ್ನು ದೇವಾಲಯದ ಒಳಭಾಗದಲ್ಲಿ ನಿರ್ಮಿಸಿರುವುದು ವೈಶಿಷ್ಟ್ಯ ಪೂರ್ಣವಾಗಿದೆ. ಕುಮ್ಮಟದ ನಾಯಕರ ದೇವಾಲಯಗಳ ದೇವಕೋಷ್ಠಗಳ ಕೆಳಭಾಗದಲ್ಲಿ ಕಪೋತವು ಪದ್ಮಾಲಂಕಾರದಲ್ಲಿದ್ದು ದೇವಕೋಷ್ಠದ ಮೇಲೆ, ಕಪೋತದ ಭಾಗದಲ್ಲಿ, ಪದ್ಮದಳಗಳು ಅದರ ಮೇಲೆ ದೇವಾಲಯ ಶಿಖರದಲ್ಲಿನ ಶಿಲ್ಪಗಳು ಇದರ ಇನ್ನೊಂದು ವೈಶಿಷ್ಟ್ಯತೆ. ಇಂತಹ ಅಂಶಗಳನ್ನು ಹಾನೇಯ ಪರಿಸರದ ದೇವಾಲಯ, ಕಂಪಿಲರಾಯನ ದೇವಾಲಯಗಳಾದ ಹಂಪೆಯ ಹೇಮಕೂಟ ದೇವಾಲಯ, ಪ್ರಸನ್ನ ವಿರೂಪಾಕ್ಷ ದೇವಾಲಯ, ತ್ರಿಕೂಟ ದೇವಾಲಯಗಳು, ಕುಂಥು ಜಿನನಾಥ (ಚೈತ್ಯಾಲಯ) ದೇವಾಲಯಗಳಲ್ಲಿ ಈ ವ್ಯತ್ಯಾಸಗಳನ್ನು ನೋಡಬಹುದು. ಒಟ್ಟಾರೆ ದೇವಕೋಷ್ಠಗಳು ಇರುವುದು ದೇವತಾ ಮೂರ್ತಿಗಳನ್ನು ಸ್ಥಾಪಿಸಲಿಕ್ಕಾಗಿ ಈ ದೇವಕೋಷ್ಠಗಳು ಆಳವಾಗಿ, ಅಗಲವಾಗಿ, ಎತ್ತರವಾಗಿ ಆಯತಾಕಾರದಲ್ಲಿದೆ. ಈ ಕೋಷ್ಠಗಳ ಎರಡೂ ಬದಿಯಲ್ಲಿ ಸ್ತಂಭಾಕೃತಿಗಳಿವೆ. ಅವುಗಳು ಚತುರಾಶ್ರ, ಅಷ್ಟಾಶ್ರ, ಚತುರಾಶ್ರ ಕೋನದಲ್ಲಿರುವಂತೆ ವಿನ್ಯಾಸಗೊಳಿಸಲಾಗಿದೆ.

ಕಕ್ಷಾಸನಗಳು

ಕುಮ್ಮಟ ನಾಯಕರ ಕಾಲದ ದೇವಾಲಯಗಳ ಕಕ್ಷಾಸನಗಳು ನವರಂಗದಲ್ಲಿರುವುದು ಇನ್ನೊಂದು ವೈಶಿಷ್ಟ್ಯತೆ. ನವರಂಗವಿರುವುದೇ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಅನುಕೂಲಕ್ಕಾಗಿ. ಕಕ್ಷಾಸನಗಳಿದ್ದರೆ ಇದರ ಉಪಯುಕ್ತತೆ ಇನ್ನೂ ಹೆಚ್ಚಿರುತ್ತದೆ. ಇಂತಹ ಕಕ್ಷಾಸನಗಳು ಕುಮ್ಮಟ ನಾಯಕರ ಕಾಲದ ಹೆಚ್ಚಿನ ದೇವಾಲಯಗಳಲ್ಲಿ ಅಳವಡಿಸಲ್ಪಟ್ಟಿವೆ. ತ್ರಿಶಂಕೇಶ್ವರ ದೇವಾಲಯ, ಜಟಂಗ ರಾಮೇಶ್ವರ ದೇವಾಲಯ, ಹಾನೇಯದ ಅಕ್ಕ ತಂಗಿಯರ ದೇವಾಲಯ, ಕುಮ್ಮಟದ ಈಶ್ವರ ದೇವಾಲಯ, ಹಾನೇಯದ ಜಿನಾಲಯಗಳಲ್ಲಿ, ನವರಂಗದ ಪೂರ್ವ ಮತ್ತು ದಕ್ಷಿಣದ ಭಿತ್ತಿಯ ಬದಿಯಲ್ಲಿರುವಂತೆ ಕಕ್ಷಾಸನಗಳನ್ನು ನಿರ್ಮಿಸಲಾಗಿದೆ. ಹಾಗೂ ಕಂಪಿಲರಾಯನ ತ್ರಿಕೂಟ ದೇವಾಯ ನಂ. ೧, ೨ ಮತ್ತು ೩, ದ್ವಿಕೂಟ ದೇವಾಲಯಗಳಲ್ಲಿ ಈ ವೈಶಿಷ್ಟ್ಯತೆಯನ್ನು ಕಾಣಬಹುದು.

ದ್ವಾರಗಳು

ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದಂತೆ ಈ ಕಾಲದ ದೇವಾಲಯಗಳಲ್ಲಿ ಸರಳತೆಗೆ, ನೈಜತೆಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಲಾಗಿದೆ. ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದಲ್ಲಿ ಚಾಲುಕ್ಯ ಹೊಯ್ಸಳರ ಕಾಲದ ವೈಭವಯುತ ಅಲಂಕರಣ ಇಲ್ಲಿ ಕಾಣಬರುವುದಿಲ್ಲ. ಹೆಚ್ಚೆಂದರೆ ದ್ವಾರದ ಶಾಖೆಗಳಲ್ಲಿ ಸ್ತಂಭಾಕೃತಿ. ಲಲಾಟದಲ್ಲಿ ಗಜಲಕ್ಷ್ಮಿ. ಲಲಾಟದ ಮುಂಭಾಗದ ಅರ್ಧ ವೃತ್ತಾಕಾರದಲ್ಲಿ ಮುಂದೆ ಚಾಚಿವೆ. ಉದಾಹರಣೆಗೆ ಹಾನೇಯ ಪರಿಸರದ, ತ್ರಿಶಂಕೇಶ್ವರ

ದೇವಾಲಯ, ಅಕ್ಕ ತಂಗಿಯರ ಗುಡಿ, ಹಂಪೆಯ ಪ್ರಸನ್ನ ವಿರೂಪಾಕ್ಷ ಹಾಗೂ ಹೇಮಕೂಟದ ತ್ರಿಕೂಟ ದೇವಾಲಯಗಳ ದ್ವಾರಗಳ ಮೇಲ್ಭಾಗದಲ್ಲಿ ಸ್ಕಂದ ಮತ್ತು ಗಣೇಶನ ಶಿಲ್ಪ ಇರುವುದೊಂದು ವಿಶೇಷತೆ. ಮೈಲಾರ ದೇವಾಲಯದ ದ್ವಾರದ ಲಲಾಟದಲ್ಲಿ ದೇವಿಯ ಶಿಲ್ಪವಿದೆ. ಕೆಳಭಾಗದಲ್ಲಿ ದ್ವಾರಪಾಲಕರ ಬದಲಿಗೆ ಭೈರವ ಶಿಲ್ಪ ಇರುವುದಲ್ಲದೆ ಮಹಿಷ ಮರ್ದಿನಿ ಶಿಲ್ಪವಿರುವುದು ಗಮನಿಸಬೇಕಾದ ಅಂಶ. ದ್ವಾರದ ಮೇಲಿನ ಪಟ್ಟಿಕೆಯಲ್ಲಿ ದೇವಾಲಯಗಳ ಶಿಖರ ಆಕೃತಿಗಳು ನಿರ್ಮಿತವಾಗಿವೆ. ಹೇಮಕೂಟದ ತ್ರಿಕೂಟ ದೇವಾಲಯಗಳಲ್ಲಿ, ಪ್ರಸನ್ನ ವಿರೂಪಾಕ್ಷ ದೇವಾಲಯ ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಇಲ್ಲಿನ ಇನ್ನೊಂದು ವಿಶೇಷತೆ ನಾಗರ, ರೇಖನಾಗರ, ದ್ರಾವಿಡ ವಿಮಾನ, ಕದಂಬನಾಗರ ಶೈಲಿಯ ಶಿಖರಗಳು ಕುಮ್ಮಟ ನಾಯಕರ ಕಾಲದಲ್ಲೂ ಮುಂದುವರಿದಿರುವುದು, ಇವರು ಮೊದಲಿನ ಶೈಲಿಯನ್ನು ಅಳವಡಿಸಿಕೊಂಡಿದ್ದರೆಂಬುದಕ್ಕೆ ಉತ್ತಮ ಉದಾಹರಣೆ.

ಗರ್ಭಗೃಹ

ಗರ್ಭಗೃಹಗಳು ಹೆಚ್ಚಿನ ಮಟ್ಟಿಗೆ ಚೌಕಾಕಾರವಾಗಿದೆ. ಗರ್ಭಗೃಹದ ಭಿತ್ತಿಗಳಲ್ಲಿ ಚಪ್ಪಡಿಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ. ಮುಂದೆ ಚಾಚಿರುವ ಕಲ್ಲು ಚಪ್ಪಡಿ ಹಾಗೂ ಇವುಗಳು ಕಪೋತಾಕಾರದಲ್ಲಿರುತ್ತವೆ. ಮೇಲ್ಭಾವಣಿಯಲ್ಲಿ ನವರಂಗ, ಅಂತರಾಳ ಮತ್ತು ಗರ್ಭಗೃಹಗಳಲ್ಲಿ ಏಕವೃತ್ತ, ದ್ವಿವೃತ್ತ ಮತ್ತು ತ್ರಿವೃತ್ತ ಆಕಾರದಲ್ಲಿ ಇಲ್ಲಿ ಅರಳಿದ ಕಮಲವಿರುವುದು ಇಲ್ಲಿನ ವೈಶಿಷ್ಟ್ಯತೆ.

ಒಟ್ಟಾರೆ ಹಾನೇಯದ ಪರಿಸರದಲ್ಲಿನ ತ್ರಿಶಂಕೇಶ್ವರ ದೇವಾಲಯ, ಅಕ್ಕ ತಂಗಿಯರ ದೇವಾಲಯ, ಜಟಿಂಗ ರಾಮೇಶ್ವರ ದೇವಾಲಯ, ಕುಮ್ಮಟದ ಮಲ್ಲಿಕಾರ್ಜುನ ದೇವಾಲಯ, ಹೇಮಕೂಟದ ತ್ರಿಕೂಟ, ದ್ವಿಕೂಟ, ಕಿನ್ನರೇಶ್ವರ, ಪ್ರಸನ್ನ ವಿರೂಪಾಕ್ಷ, ಎಮ್ಮೆ ಗುಡ್ಡದ ಕನಕಾಚಲ ದೇವಾಲಯ, ದೊರವದಿಯ ರಾಮೇಶ್ವರ ದೇವಾಲಯಗಳು ಕದಂಬನಾಗರ ಶೈಲಿಗೆ ಉತ್ತಮ ಉದಾಹರಣೆಯಾಗಿವೆ. ಹಂಪೆಯ ತ್ರಿಕೂಟ ದೇವಾಲಯ ನಂ-೩, ಸೋಮೇಶ್ವರ ದೇವಾಲಯ ಕಂಪಲಿ ದ್ರಾವಿಡ ಶೈಲಿಗೆ ಉತ್ತಮ ಉದಾಹರಣೆಗಳಾಗಿವೆ. ಕದಂಬನಾಗರ ಶೈಲಿಯ ದೇವಾಲಯಗಳಲ್ಲಿ ಹೇಮಕೂಟದ ತ್ರಿಕೂಟ ದೇವಾಲಯ ನಂ. ೧-೨ ದ್ವಿಕೂಟ ದೇವಾಲಯ, ಕದಂಬನಾಗರ ಶಿಖರವನ್ನು ಒಳಗೊಳ್ಳುತ್ತವೆ. ಒಟ್ಟಾರೆ ನಾಗರ, ದ್ರಾವಿಡ ಹಾಗೂ ಕದಂಬನಾಗರ ಮಾದರಿಯಲ್ಲಿ ದೇವಾಲಯಗಳು ಈ ಕಾಲದಲ್ಲಿಯೂ ಮುಂದುವರಿದಿರುವುದರ ಜೊತೆಗೆ ತಮ್ಮದೆ ಆದ ಸರಳ ವಾಸ್ತು ಶೈಲಿಯನ್ನು ಅಳವಡಿಸಿದರು ಎಂಬುದಂತೂ ಇಲ್ಲಿ ಸ್ಪಷ್ಟವಾಗಿದೆ. ಕುಮ್ಮಟ ನಾಯಕರ ಕಾಲದಲ್ಲಿ ಜೈನ ದೇವಾಲಯಗಳು ಹಿಂದೂ ದೇವಾಲಯಗಳನ್ನೇ ಹೋಲುತ್ತವೆ. ಉದಾಹರಣೆ ಅಮರಾಪುರದ ಬ್ರಹ್ಮ ಜಿನಾಲಯ, ಕುಮ್ಮಟದ ಜಿನಾಲಯ, ಕಾಮಲಾಪುರದ ಕುಂಥು ಜಿನಾಲಯ, ಅಮರಾಪುರದ ಜೈನ ಶಾಸನವೊಂದು ಉಪಾನದಿಂದ ಸ್ತೂಪಿಯವರೆಗೂ, ಮಹಾಮಂಟಪ, ಭದ್ರೆ, ಲಕ್ಷ್ಮಿ ಮಂಟಪ, ಪರಿಸೂತ್ರ, ಮಾನಸ್ತಂಭ ಹಾಗೂ ಮಕರ ತೋರಣದ ಉಲ್ಲೇಖ ನೀಡುತ್ತದೆ. (ಕವಿಶಾಸಂ ೫, ಭಾಗ- ೧, ನಂ. ೫೬, ಪು. ೬೨-೬೪, ARIEA, 1917, No. EC XII, Sira, No. 32)

ಒಟ್ಟಾರೆ ಹಿಂದೂ ದೇವಾಲಯಗಳ ಹಾಗೂ ಜೈನ ದೇವಾಲಯಗಳ ಜೊತೆಗೆ ಶಕ್ತಿ ಆರಾಧನೆಗಳು ಇಲ್ಲಿತ್ತೆಂಬುದು ಸ್ಪಷ್ಟವಾಗಿದೆ. ಈ ಕಾಲದಲ್ಲಿ ತಾಯಮ್ಮನ ಶಿಲ್ಪಗಳು ಹೆಚ್ಚು ಮಹತ್ವವನ್ನು ಪಡೆದಿವೆ. ದೊರವದಿ, ಹೊಸಮಲೆ, ಕುಮ್ಮಟದುರ್ಗ, ಹಂಪೆಯ ಪರಿಸರದಲ್ಲಿನ ತಾಯಮ್ಮನ ದೇವಾಲಯಗಳಲ್ಲಿ ಗರ್ಭಗೃಹ ಮಾತ್ರವಿದ್ದು ಇಲ್ಲಿ ಚಿಕ್ಕ ಕಲ್ಲು ಮತ್ತು ಮಣ್ಣಿನಿಂದ ತಾಯಮ್ಮನ ಗುಡಿಗಳು ನಿರ್ಮಿತವಾಗಿವೆ. ಕುಮ್ಮಟದುರ್ಗದಲ್ಲಿ ತಾಯಮ್ಮನ ಗುಡಿ ಇಲ್ಲವಿದ್ದರೂ ತಾಯಮ್ಮನ ಮುಖದ ಶಿಲ್ಪವಿದೆ. ಒಟ್ಟಾರೆ ಹೇಳುವುದಾದಲ್ಲಿ ತಾಯಮ್ಮನ ಶಿಲ್ಪಗಳು ವೈಷ್ಣವ, ಶೈವ ಸಂಪ್ರದಾಯಕ್ಕೆ ಹೋಲಿಸಿ ನೋಡಿದಲ್ಲಿ ಶಕ್ತಿ ಆರಾಧನೆ ಹೆಚ್ಚು ಪ್ರಚಲಿತವಿತ್ತೆಂಬುದು ಪ್ರಮುಖವಾದ ಅಂಶ.

ಶೈವ, ವೈಷ್ಣವ, ಶಕ್ತಿ ಆರಾಧನೆಯಂತೆ ಇನ್ನೊಂದು ಪ್ರಮುಖವಾದ ಪಂಥ ಗಾಣಪತ್ಯ. ಗಣೇಶ ದೇವಾಲಯಗಳು ಹಂಪೆಯ ಪರಿಸರದಲ್ಲಿ, ಸಿಂಗೆಯನಾಯಕನಹಳ್ಳಿ, ಆನೆಗೊಂದಿ, ಜಟಂಗ ರಾಮೇಶ್ವರಗಳಲ್ಲಿ ಗಾಣಪಥ್ಯ ಪಂಥವಿತ್ತೆಂಬುದು ತಿಳಿದು ಬರುತ್ತದೆ. ಕುಮ್ಮಟದಲ್ಲಿರುವ ಬೈಚಪ್ಪನಗುಡಿ, ಕಾಟಪ್ಪನ ಗುಡಿಗಳು ಶಿಥಿಲವಾಗಿದ್ದರೂ ಇವು ಮೂಲತಃ ಶೈವ ದೇವಾಲಯಗಳು.

ವೈಷ್ಣವ ಪಂಥಕ್ಕೆ ಸಂಬಂಧಿಸಿದಂತೆ, ಕುಮ್ಮಟ ದುರ್ಗದ ಬಳಿ ಇರುವ ಕನಕಾಚಲ ದೇವಾಲಯ, ಹೊಸಮಲೆ ದುರ್ಗದ ಕೇಶವ ದೇವಾಲಯ, ದೊರವದಿಯ ವೆಂಕಟೇಶ್ವರ, ಜಟಂಗ ರಾಮೇಶ್ವರದಲ್ಲಿರುವ ವೆಂಕಟೇಶ್ವರ ಮುಂತಾದವುಗಳು ಇಲ್ಲಿ ವೈಷ್ಣವ ಪಂಥವಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ. ಕಾಮಲಾಪುರ, ಸಿಂಗೆಯನಾಯಕನಹಳ್ಳಿ, ಹೊಸಮಲೆದುರ್ಗ, ಕುಮ್ಮಟದುರ್ಗ ಈ ಪ್ರದೇಶದ ಸುತ್ತಮುತ್ತಲು ಹನುಮಂತನ ದೇವಾಲಯ ಹಾಗೂ ಶಿಲ್ಪಗಳಿರುವುದು ವೈಶಿಷ್ಟ್ಯಪೂರ್ಣ. ಒಟ್ಟಾರೆ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ಕುಮ್ಮಟದ ನಾಯಕರ ಕಾಲದಲ್ಲಿ ಶೈವಪಂಥಕ್ಕೆ ಪ್ರಥಮಸ್ಥಾನ. ಶಕ್ತಿಯ ಆರಾಧನೆಗೂ ಮಹತ್ವವಿತ್ತೆಂಬುದು ತಾಯಮ್ಮನ ಮೂರ್ತಿಶಿಲ್ಪಗಳೊಂದಿಗೆ, ಶಾಸನಗಳೂ ಸ್ಪಷ್ಟಪಡಿಸುತ್ತವೆ. ವೈಷ್ಣವ ಪಂಥದ ದೇವಾಲಯಗಳು ಮತ್ತು ಜೈನ ಪಂಥದ ದೇವಾಲಯಗಳು ಇರುವುದರಿಂದ, ಇವರು ಈ ಪಂಥವನ್ನು ಕಡೆಗಣಿಸಿರಲಿಲ್ಲವೆಂಬುದಕ್ಕೆ ಈ ದೇವಾಲಯಗಳು ಪುಷ್ಟಿಯನ್ನು ನೀಡುತ್ತವೆ. ಹೀಗೆ ಶೈವ, ಶಕ್ತಿ, ವೈಷ್ಣವ, ಜೈನ ಮತಗಳಿದ್ದರೂ ಇವರ ನಂತರದ ಕಾಲದಲ್ಲಿ, ಕುಮ್ಮಟದುರ್ಗದಲ್ಲಿ ದೊರವದಿಯಲ್ಲಿ, ಹಾನೇಯ, ಆನೆಗೊಂದಿ ಮುಂತಾದ ಪ್ರದೇಶಗಳಲ್ಲಿ ಲಭ್ಯವಾದ ಕುಮಾರರಾಮನ ದೇವಾಲಯಗಳು ಕುಮಾರರಾಮನ ಪಂಥವನ್ನು ಪ್ರತ್ಯೇಕವಾಗಿ ಕರ್ನಾಟಕದ ಇತರ ಪ್ರದೇಶಗಳಲ್ಲಿ ಕುಮಾರರಾಮನ ಪಂಥವೆಂಬ ಪ್ರತ್ಯೇಕ ಪಂಥ ಮಾರ್ಪಾಡಾಗಿರುವುದು ಇದೊಂದು ವಿಶೇಷತೆ. ಅಂದರೆ ಕುಮ್ಮಟದ ನಾಯಕರ ಕಾಲದ ನಂತರವೂ ಹೊಸಮಲೆ ದರ್ಗ, ಕುಮ್ಮಟದುರ್ಗದಲ್ಲಿ ಕುಮಾರರಾಮನ ಹೆಸರಿನಲ್ಲಿ ಪೂಜೆ ಪುನಸ್ಕಾರಗಳು ಮಾಡಲ್ಪಟ್ಟವು. ಈ ಪ್ರದೇಶಗಳಲ್ಲಿ ಹಾಗೂ ಕರ್ನಾಟಕದ ಹಲವು ಭಾಗಗಳಲ್ಲಿ ಕುಮಾರರಾಮನ ದೇವಾಲಯಗಳ ನಿರ್ಮಾಣವಾದವು. ಉದಾಹರಣೆಗಾಗಿ, ತುಮಕೂರು ಜಿಲ್ಲೆಯ ದೊಡ್ಡ ಪಾಲನಹಳ್ಳಿ, ತೀರ್ಥಹಳ್ಳಿ ತಾಲೂಕಿನ ಕೊಕ್ಕೋಡು. ಹಾವೇರಿ ಜಿಲ್ಲೆಯ ಸಂಗಾಪುರ, ಉತ್ತರ ಕನ್ನಡ ಜಿಲ್ಲೆಯ ಅಣಲಗೋಡು, ಹಳದೀಪುರ ಗ್ರಾಮಗಳಲ್ಲಿ, ಕೊಪ್ಪಳ ಜಿಲ್ಲೆಯ ನಿಲೋಗಲ್ಲು ಕುಮ್ಮಟದುರ್ಗ, ಹೊಸಮಲೆ ದುರ್ಗಗಳಲ್ಲಿ ಕುಮಾರರಾಮನ ಪೂಜೆ ಈಗಲೂ ಪ್ರಚಲಿತದಲ್ಲಿರುವುದನ್ನು ಕಾಣಬಹುದು.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಉಮಟೆಗದ್ದೆಯಲ್ಲಿ, ಹೊಸಮಲೆದುರ್ಗದ ದೇವಾಲಯದಲ್ಲಿ, ಕುಮಾರ ರಾಮನನ್ನು ಲಿಂಗರೂಪದಲ್ಲಿ ಪೂಜಿಸುವ ಪರಿಪಾಠವಿದೆ. ಉಮಟೆಗದ್ದೆಯಲ್ಲಿ ಕುಮಾರ ರಾಮನ ದೇವಾಲಯವನ್ನು ರಾಮೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಶಿವಮೊಗ್ಗ ಜಿಲ್ಲೆಯ ಮಾಳಗೊಂಡನಕೊಪ್ಪದಲ್ಲಿ ಇಟ್ಟಿಗೆ ಹಾಗೂ ಮಣ್ಣಿನಲ್ಲಿ ನಿರ್ಮಿಸಿದ ಕುಮಾರ ರಾಮನ ದೇವಾಲಯ ಒಂದಿದೆ. ಈ ದೇವಾಲಯದ ಶಿಲ್ಪದಲ್ಲಿ (ಕುಮಾರ ರಾಮನ ಶಿಲ್ಪ) ಕಂಪಿಲದೇವನ ಮಗ ಕುಮಾರ ರಾಮನಾಥ ಒಡೆಯರಿಗೆ ಖಂಡುಗದ ಹೊಲವನ್ನು ದೇವರ ನೈವೇದ್ಯಕ್ಕೆ ಮಾಳಗೌಡನು ಬಿಟ್ಟನೆಂದಿದೆ. ಈ ಶಾಸನದ ಕಾಲ ೧೬ನೇ ಶತಮಾನ. ಕುಮಾರರಾಮನು ೧೪ನೇ ಶತಮಾನದವನಾದರೂ ಕುಮ್ಮಟದ ನಾಯಕರ ನಂತರವೂ ಕುಮಾರರಾಮನ ಪಂಥ ಎಂಬ ಪ್ರತ್ಯೇಕ ಪಂಥ ಬೆಳೆದಿರುವುದು ಇಲ್ಲಿ ಗಮನಿಸಬೇಕಾದ ಅಂಶ. ಜನರ ಮನದಲ್ಲಿ ಆರಾಧ್ಯ ದೈವವಾಗಿ ಕಾಣುತ್ತಿರುವುದು ನಿಜಕ್ಕೂ ಗಣನೀಯ (ಬೋಜರಾಜ ಪಾಟೀಲ ೧೯೯೮ ಕರ್ನಾಟಕ ಇತಿಹಾಸ ಸಂಪುಟ ೧೩, ಪು. ೩೨) ಹೊಸಮಲೆದುರ್ಗದಲ್ಲಿ ಮತ್ತು ಕುಮ್ಮಟದುರ್ಗದಲ್ಲಿ ರಾಮನಾಥ ದೇವಾಲಯಗಳು ಬಹಳ ಮಹತ್ವದ ಸ್ಥಾನವನ್ನು ಪಡೆದಿವೆ. ಕುಮ್ಮಟದುರ್ಗದಲ್ಲಿ ಮತ್ತು ಹೊಸಮಲೆದುರ್ಗದಲ್ಲಿ ರಾಮನಾಥನ ತಲೆಯನ್ನು ಸಮಾಧಿ ಮಾಡಲಾಗಿದೆ ಎಂಬುದು ಪ್ರತೀತಿಯೂ ಇದೆ. ಗೋಪಾಯಿ ಎಂಬುವಳು ಕುಮ್ಮಟ ಮತ್ತು ಹೊಸಮಲೆ ದುರ್ಗದಲ್ಲಿ ರಾಮನಾಥನ ಗುಡಿಯನ್ನು ಕಟ್ಟಿಸಿ ಹೊನ್ನು ಹರಿವಾಣಗಳನ್ನು ದಾನವಾಗಿ ಕೊಟ್ಟಿರುವಳು. (ARIE. 1943-44, No. 76, VPR, 1988-91. PP. 240-41) ಇವುಗಳು ಸ್ಮಾರಕ ದೇವಾಲಯಗಳಾಗಿವೆ. ಆನೆಗೊಂದಿಯಲ್ಲೊಂದು ರಾಮನಾಥ ದೇವರ ಗುಡಿಯನ್ನು ಕಟ್ಟಿಸಿದ ಉಲ್ಲೇಖವಿದೆ. (ಕವಿಶಾಸಂ. ೨ ಕೊಪ್ಪಳ ನಂ. ೧೬೬ ಪು. ೧೫೫) ಹಾವೇರಿ ಜಿಲ್ಲೆಯ, ಸಂಗೂರಿನ ಶಾಸನ ಕ್ರಿ.ಶ. ೧೪೦೭ರಲ್ಲಿ ಕುಮಾರ ರಾಮನಾಥನ ಹೆಸರಿನಲ್ಲಿ ಮಾದರಸರು ಕುಮಾರ ರಾಮನಾಥನ ಪ್ರತಿಷ್ಠೆಯನ್ನು ಮಾಡಿಸಿದನೆಂದಿದೆ. ಮಾದರಸ ಎಂಬುವರು ವಿಜಯನಗರದ ಒಂದನೇ ದೇವರಾಯನ ಕಾಲದಲ್ಲಿ ಸೈನ್ಯಾಧಿಪತಿ ಆಗಿದ್ದನು. ಈತನು ಕಂಪಿಲದೇವನ ಬಾಹತ್ತರ ವಿನಿಯೋಗಾಧಿಪತಿ ಬೈಚ ವೆಗ್ಗಡೆಯ ಮೊಮ್ಮಗ. ಮೊಮ್ಮಸೇನಾಧಿಪತಿ ಮಾಧರಸ ಎಂದಿದೆ. (E.I. XXII. 182-185. Appendix-4)

ಕ್ರಿ.ಶ. ೧೪೧೮ರಲ್ಲಿ ಪ್ರೌಢದೇವರಾಯ ಮಹಾರಾಯರ ಆಳ್ವಿಕೆಯಲ್ಲಿ ಕಟಾರಿ ತಿಪ್ಪಣ್ಣ ನಾಯಕರ ಮಕ್ಕಳು ಆದವಾನಿ ಕೋಟೆಯಲ್ಲಿ ಕುಮಾರ ರಾಮಯ್ಯ ದೇವರ ಪ್ರತಿಷ್ಠೆಯನ್ನು ಮಾಡಿದನೆಂದಿದೆ. ಈ ಶಾಸನ ಪ್ರಸ್ತುತ ಕೋಟೆಯಲ್ಲಿರುವ ಮಸೀದಿಯ ಸ್ತಂಭದ ಮೇಲಿದೆ. (ARIE, 1915, B No. P. 529 ಕವಿಶಾಸಂ ೫, ಭಾಗ II. ನಂ. 274, P: 298. SII IX. Pt. IINo.58) ಒಟ್ಟಾರೆ ಸಾಹಿತ್ಯದ ಮತ್ತು ಶಾಸನಗಳನ್ನೊಳಗೊಂಡ ಪುರಾವೆಗಳು ಕುಮಾರ ರಾಮನ ಪಂಥ ಪ್ರತ್ಯೇಕ ಪಂಥವಾಗಿ ಬೆಳೆದುದನ್ನು ಸ್ಪಷ್ಟಪಡಿಸಿವೆ.

ಅಧ್ಯಾಯ - ೪

ಮೂರ್ತಿಶಿಲ್ಪ

ದೇವಾಲಯ ಎಂದಮೇಲೆ ಅಲ್ಲಿ ಮೂರ್ತಿಶಿಲ್ಪ ಇರಲೇಬೇಕು. ದೇವಾಲಯ ಇದು ದೇವರ ಆಲಯ. ಹಲವಾರು ರೀತಿಯ ಪೂಜೆ ಪುನಸ್ಕಾರಗಳು, ಹಬ್ಬಗಳು, ಜಾತ್ರೆಗಳು ಉತ್ಸವಗಳು ಸಮಾಜದ ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಿವೆ. ದೇವರು ಎಂಬ ಪದದ ರೀತಿ, ಇದರ ವಿಕಾರ ರೂಪ ನೋಡುವುದು ಒಂದು ಮಾಧ್ಯಮದ ಮೂಲಕ ಈ ಮಾಧ್ಯಮ ಶಿಲ್ಪಗಳಾಗಿರಬಹುದು ಅಥವಾ ಕಂಚಿನ ಪ್ರತಿಮೆಗಳಾಗಿರಬಹುದು. ನಮ್ಮ ನಾಡಿನ ದೇವತಾ ಮೂರ್ತಿಗಳಲ್ಲಿ ಎದ್ದು ಕಾಣುವುದು. ಅಪ್ರಾಕೃತ ಮತ್ತು ಅಸ್ವಾಭಾವಿಕ (ರಾಮಚಂದ್ರಮೂರ್ತಿ ಎಸ್.ಕೆ. ೧೯೭೫, ಪು. ೫೦) ಮೂರ್ತಿಶಿಲ್ಪದ ಮೊಟ್ಟ ಮೊದಲಿನ ಉದಾಹರಣೆ ಹರಪ್ಪ ಮತ್ತು ಮೊಹೆಂಜೊದಾರೋದಲ್ಲಿ ದೊರೆತ ಮುದ್ರಿಕೆಗಳ ಮೇಲಿನ ಪಶುಪತಿ. ವೈದಿಕ ಸಾಹಿತ್ಯದಲ್ಲಿ ಅಗ್ನಿಗೆ ಎರಡು ತಲೆ. ನಾಲ್ಕು ಕೊಂಬು, ಮೂರು ಕಾಲು, ಏಳು ಕೈಗಳಿವೆ. ಇಂತಹ ಮೂರ್ತಿ ಶಿಲ್ಪಗಳನ್ನು ನೋಡಿದಾಗ ಅನುಮಾನ ಬರುವುದು ಸಹಜ. ದೇವರುಗಳು, ದೇವತೆಗಳು ಎಷ್ಟೆಂದು ಕೇಳಿದರೆ ಉತ್ತರ ಸಿಗುವುದು ಕಷ್ಟ. ಋಗ್ವೇದದಲ್ಲಿ ''ಏಕಂಸತ್ ವಿಪ್ರಾ ಬಹುದಾವದಂತಿ'' ಎಂದಿದೆ. ನಾಮಗಳು ಹಲವು ಶಕ್ತಿ ಒಂದೇ ಒಟ್ಟಾರೆ ಇಲ್ಲಿ ಭಾವನೆಗಳು ಮುಖ್ಯ. ಭಕ್ತಿ ಜನಪ್ರಿಯವಾದಂತೆ ವೈದಿಕ ಪೂಜೆ, ಚಿಂತನೆ, ಸಾತ್ವಿಕ ರೂಪವನ್ನು ಪಡೆಯಿತು. ಮಣ್ಣಿನಲ್ಲಿ, ಮರದಲ್ಲಿ ಗೊಂಬೆಗಳನ್ನು ಮಾಡಿಕೊಂಡು, ಮರದ ಬುಡದಲ್ಲಿ ಕಟ್ಟೆಯ ಮೇಲೆ, ಕಲ್ಲು ಚಪ್ಪಡಿಯ ಮೇಲೆ ಚಪ್ಪಡಿಗಳನ್ನಿಟ್ಟು ಭಕ್ತಿಯಿಂದ ಪೂಜಿಸುತ್ತಿದ್ದರು. (ಸುಂದರ ೧೯೯೩, ಪು. ೭೨) ಒಟ್ಟಾರೆ ಮೂರ್ತಿಶಿಲ್ಪವೆಂಬುದು ಈ ಸಂಕೇತ ಮುದ್ರೆ, ಶಿಲ್ಪದ ಉಗಮಕ್ಕೆ ಕಾರಣವಾಗಿರಬೇಕು. ಈ ಮಾಧ್ಯಮ ಶಿಲೆಯಾಗಿರಬಹುದು, ಲೋಹವಾಗಿರಬಹುದು ಅಥವಾ ಮಣ್ಣು ಎಂದು ಆಗಿರಬಹುದು. (ಚಿದಾನಂದ ಮೂರ್ತಿ ಎಂ. ೧೯೭೯, ಪು. ೪೫೯) ಶಿಲ್ಪಕಲೆ ತನ್ನದೇ ಆದ ಶೃಂಖಲೆಯನ್ನು ಬಿಗಿದುಕೊಂಡು ತನ್ನ ಬೆಳವಣಿಗೆಯನ್ನು ಕುಂಠಿತಗೊಳಿಸಿತು. ಅದಕ್ಕೆ ಒಂದು ಕಾರಣ ಅದು ಆಯ್ದುಕೊಂಡ ವಸ್ತು. ಕೇವಲ ಪುರಾಣ ಸಂಜನಿತ ದೇವರುಗಳಾದುದು. ಇಲ್ಲಿ ಶಿಲ್ಪಿ ಶೃಂಗಾರಕ್ಕೂ ಸ್ಥಾನವನ್ನು ಕೊಟ್ಟಿದ್ದಾನೆ. ಅದರ ಫಲ ದೇವಾಲಯಗಳಲ್ಲಿ ಕಾಣುವ ಸಾಲಭಂಜಿಕಾ ಮೂರ್ತಿಗಳು ಮತ್ತು ಇನ್ನೂ ಮುಂದುವರೆದರೆ ಪ್ರಣಯ ಶಿಲ್ಪಗಳು, ಇನ್ನೊಂದು ಹೆಜ್ಜೆ ಸಾಗಿದರೆ ರತಿಶಿಲ್ಪ. ಹೀಗೆ ಶಿಲ್ಪಮೂರ್ತಿಗಳು ಆಕಾರ, ಸ್ವರೂಪ ತೆರತೆರನವು (ಶಿವರಾಮ ಕಾರಂತ ಕೆ. ೧೯೭೫, ಪು. ೬) ಒಟ್ಟಾರೆ ಪ್ರತಿಯೊಂದು ಶಿಲ್ಪಕ್ಕೂ ತನ್ನದೆ ಆದ ಆಕಾರವಿದೆ. ಶಿಲ್ಪಿ ದುಂಡು ಮುಖವನ್ನು, ಅಗಲ ಮುಖವನ್ನು ಮತ್ತು ನೀಳಮುಖವನ್ನು ನಿರ್ಮಿಸಿದರೂ. ಅದೇ ಆಕೃತಿಯು ಮುಂದೆ ಬೆಳವಣಿಗೆಯನ್ನು ಕಂಡಿತು. ಒಟ್ಟಾರೆ ನಾಡಿನಲ್ಲಿ ಬೆಳೆದ ಬಂದ ವಿವಿಧ ಕಾಲದ ಶಿಲ್ಪ ಶೈಲಿಗಳು ಸಾಕಷ್ಟಿವೆ. ಕದಂಬರ ಕಾಲದಲ್ಲಿ, ಗಂಗರ ಕಾಲದಲ್ಲಿ, ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಕಾಲದಲ್ಲಿ, ತನ್ನದೇ ಆದ ವೈಶಿಷ್ಟ್ಯತೆಯನ್ನು ಮೂರ್ತಿಶಿಲ್ಪ ಕಂಡುಕೊಂಡಿತು. ಪ್ರಸ್ತುತ ಅಧ್ಯಯನ ಕುಮ್ಮಟ ನಾಯಕರ ಕಾಲದ ಮೂರ್ತಿ ಶಿಲ್ಪಕ್ಕೆ ಸಂಬಂಧಿಸಿದ್ದರಿಂದ ಇಲ್ಲಿ ಕುಮ್ಮಟ ನಾಯಕರ ಕಾಲದಲ್ಲಿನ ಮೂರ್ತಿ ಶಿಲ್ಪಗಳ ಅಧ್ಯಯನ ಪ್ರಸ್ತಾವನೆ ಮಾಡಲಾಗಿದೆ. ಕುಮ್ಮಟ ನಾಯಕರ ಕಾಲದಲ್ಲಿನ ಮೂರ್ತಿ ಶಿಲ್ಪಗಳ ವೈವಿಧ್ಯತೆ ಹೀಗಿದೆ.

೧. ಶೈವ ಮೂರ್ತಿಶಿಲ್ಪಗಳು

೨. ಶಾಕ್ತ ಪಂಥ ಮೂರ್ತಿಶಿಲ್ಪಗಳು

೩. ವೈಷ್ಣವ ಪಂಥ ಮೂರ್ತಿಶಿಲ್ಪಗಳು

೪. ಜೈನ ಪಂಥ ಮೂರ್ತಿಶಿಲ್ಪಗಳು

೫. ಕುಮಾರ ರಾಮ ಪಂಥ ಮೂರ್ತಿಶಿಲ್ಪಗಳು

ಒಟ್ಟಾರೆ ಕುಮ್ಮಟ ನಾಯಕರ ಕಾಲದ ಮೂರ್ತಿ ಶಿಲ್ಪಗಳು ಕುಮ್ಮಟದುರ್ಗ, ಹಾನೇಯ, ಹೊಸಮಲೆ ದುರ್ಗ, ಆನೆಗೊಂದಿ, ದೊರವದಿ ಈ ಸ್ಥಳಗಳ ಪರಿಸರದಲ್ಲಿ ದೊರಕಿದೆ. ದೊರೆತ ಮೂರ್ತಿಶಿಲ್ಪಗಳ ಒಟ್ಟಾರೆ ವೈಶಿಷ್ಟ್ಯತೆಯ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಕುಮ್ಮಟ ನಾಯಕರು ಸೇವುಣರ ಮಾಂಡಲೀಕರಾಗಿದ್ದರೂ ಅವರು ತಮ್ಮ ದೇವಾಲಯ ವಾಸ್ತು ಶೈಲಿಯಲ್ಲಿ ಸೇವುಣ ಹೊಯ್ಸಳರ ಶೈಲಿಯನ್ನು ಅಳವಡಿಸಿಕೊಂಡರೂ ಅದರ ಜೊತೆ ಸರಳತೆಯನ್ನು ಅಳವಡಿಸಿದರು. ಹೊಯ್ಸಳ-ಸೇವುಣರ ಶಿಲ್ಪಗಳಲ್ಲಿ ವೈಭವಯುತವಾದ ಅಲಂಕರಣಗಳು ಇಲ್ಲಿ ಕಂಡು ಬರುವುದಿಲ್ಲ. ಇವರು ಶೈವ ಮತಾವಲಂಬಿಗಳಾದರೂ ಕೂಡ, ಅನ್ಯ ಧರ್ಮದ ದೇವಾಲಯಗಳು ಮೂರ್ತಿಶಿಲ್ಪಗಳು ಇವರ ಕಾಲದಲ್ಲಿ ಕಂಡುಬಂದಿವೆ. ಕುಮ್ಮಟ ನಾಯಕರು ಶಿಲ್ಪಗಳು ದೇವಾಲಯಗಳಲ್ಲಿ, ಬಯಲು ಬಂಡೆಯ ಮೇಲೆ, ಪ್ರಾಕೃತಿಕ ಗುಹೆಗಳಲ್ಲೂ ಕೋಟೆ ಕೊತ್ತಳಗಳಿರುವ ಸ್ಥಳಗಳಲ್ಲಿ ನಿರ್ಮಾಣ ಮಾಡಲಾಗಿದೆ. ಇವರಿಗೆ ದೇವಾಲಯದಲ್ಲಿ ಮೂರ್ತಿ ಶಿಲ್ಪಗಳನ್ನು ನಿರ್ಮಿಸಬೇಕೆಂಬ ಅನಿವಾರ್ಯತೆಯನ್ನು ತೊಡೆದು ಎಲ್ಲೆಲ್ಲಿ ಅವಶ್ಯಕವೆಂದು ಅನಿಸಿದರೆ ಅಲ್ಲಿ ಶಿಲ್ಪಗಳನ್ನು ನಿರ್ಮಾಣ ಮಾಡಿ ಬಯಲು ಆಲಯವೆಂಬಂತೆ ಸಾಕ್ಷೀಕರಿಸಿರುವುದು ವೈಶಿಷ್ಟ್ಯಪೂರ್ಣ.

ಒಂದು ತುಲನಾತ್ಮಕ ಅಧ್ಯಯನ ಮಾಡಿದರೆ ಶೈವ ಶಿಲ್ಪಗಳು ಇವರ ಕಾಲದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿವೆ. ಹೆಚ್ಚಿನ ಮಟ್ಟಿಗೆ ಕುಮ್ಮಟದಲ್ಲಿರುವ ಶಿವಲಿಂಗಗಳು, ವೃತ್ತ ಪೀಠವನ್ನು ಹೊಂದಿವೆ. ಕೆಳಭಾಗದಲ್ಲಿ ಚತುರಾಶ್ರವಾಗಿದ್ದರೂ ಪೀಠದ ಮೇಲ್ಭಾಗದಲ್ಲಿ ವೃತ್ತಾಕಾರವಾಗಿದೆ. ಇದರಲ್ಲಿ ಲಿಂಗವು ಕೆಳಭಾಗದಲ್ಲಿ ಚತುರಾಶ್ರ, ಅಷ್ಟಾಶ್ರ ಮತ್ತು ಮೇಲಿನ ದೀರ್ಘವಾದ ಅಂಡಭಾಗದಲ್ಲಿ ಬ್ರಹ್ಮಸೂತ್ರಗಳಿರುವುದು ವಿಶೇಷ. (VPR. 1987-88. PL262. 270-92) ಹಂಪೆಯ ಪರಿಸರದ ದೇವಾಲಯಗಳಲ್ಲಿಯೂ ಈ ಮಾದರಿಯ ಶಿವಲಿಂಗಲಿಂಗಗಳಿವೆ. ಕೆಲವೊಮ್ಮೆ ಇಡೀ ಪೀಠವೇ ವೃತ್ತಾಕಾರವಾಗಿರುವುದು ಮೂಲ ವಿರೂಪಾಕ್ಷ ದೇವಾಲಯದಲ್ಲಿದೆ. (VPR 1987-88. PL 67) ಸಂಪಿಗೆ ಸಿದ್ಧೇಶ್ವರ ದೇವಾಲಯ. ಇನ್ನೊಂದು ವೃತ್ತ ಪೀಠದಲ್ಲಿ ಪಾದಗಳಿದ್ದು ಯೋಗಿಯೊಬ್ಬರು ಕುಳಿತು ಪಾದಾರಾಧನೆ ಮಾಡುವುದು ವಿಶೇಷ ರೀತಿಯವಾಗಿದೆ. ಈ ವೃತ್ತಪೀಠಗಳು ಹೊಸಮಲೆದುರ್ಗ, ಹಂಪೆ, ಕುಮ್ಮಟದುರ್ಗ, ಹಾನೇಯದ ಪರಿಸರ ಚಿತ್ರದುರ್ಗಗಳಲ್ಲೂ

ಕಂಡುಬಂದಿವೆ. ಕೆಲವೊಮ್ಮೆ, ಪೀಠವು ಗ್ರಾನೈಟ್ ಶಿಲೆಯಲ್ಲಿ ನಿರ್ಮಿತವಾಗಿದ್ದರೂ ಶಿವಲಿಂಗ ಮಾತ್ರ ಕಪ್ಪು ಶಿಲೆಯದು. ದೊರವದಿಯ ರಾಮೇಶ್ವರ ದೇವರ ಪೀಠವು ಚತುರಾಶ್ರವಾಗಿದ್ದು ಪೀಠದ ಪ್ರಣಾಳವು ಗರ್ಭಗೃಹದ ಹೊರಭಾಗಕ್ಕೂ ಬಂದಿರುವಷ್ಟು ದೊಡ್ಡದಾಗಿದೆ. ಶಿವಲಿಂಗ ಶಿಲ್ಪಗಳಲ್ಲಿ ಕೆಲವು ಭಿತ್ತಿಯ ಮೇಲೆ ಇವುಗಳು ಗಜಾರ್ಚಿತ ಶಿವಲಿಂಗ. ಮೃಗ ಪುರುಷಾರ್ಚಿತ ಶಿವಲಿಂಗಗಳೆಂದು ಈ ಅಧ್ಯಯನದಲ್ಲಿ ಗಮನಿಸಬೇಕಾದ ಅಂಶ. ಹಂಪೆಯ ಪರಿಸರದಲ್ಲಿರುವ ಸಂಗಮೇಶ್ವರ ಹಾಗೂ ಸಂಗನ ಬಸವನೆಂದು ಹೆಸರಿಸುವ ಶಿವಲಿಂಗಗಳು, ಆನೆಗೊಂದಿಯ ಗುಹೆಯಲ್ಲಿರುವ ಶಿವಲಿಂಗಗಳು. ಕಲ್ಲುಗಸಿಯ ಬಳಿಯ ಬಂಡೆಯ ಮೇಲಿನ ನಂದಿ. ಶಿವಲಿಂಗ ಶಿಲ್ಪಗಳು, ಗುಹೇಶ್ವರ ಆಶ್ರಮದ ಗುಹೆಯಲ್ಲಿರುವ ಶಿವಲಿಂಗಗಳು. ಆನೆಗೊಂದಿಯ ಸಂಗಾಪುರದಲ್ಲಿರುವ ಶಿವಲಿಂಗ, ನಾಗೇನಹಳ್ಳಿಯಲ್ಲಿರುವ ಶಿವಲಿಂಗಗಳು ಚಿತ್ರದುರ್ಗದ ಸಿದ್ದೇಶ್ವರ ದೇವಾಲಯ ಶಿವಲಿಂಗ ಉತ್ತಮ ಉದಾಹರಣೆ. ಹೊಸಮಲೆ ದುರ್ಗದಲ್ಲಿ ಸಂಶೋಧನೆಯಾದ ಶಿಲ್ಪ ಪಟ್ಟಿಕೆಯಲ್ಲಿ ವೀರಭದ್ರ, ನಂದಿ. ಶಿವಲಿಂಗ. ನಂದಿವಾಹನ ಉಮಾಮಹೇಶ್ವರ, ವಿಷ್ಣು, ನಾರದ, ಏಳು ಹೆಡೆಯ ನಾಗ ಶಿಲ್ಪಗಳಿರುವುದು ವಿಶೇಷವಾಗಿದೆ. ಹಾನೇಯದ ಪರಿಸರದಲ್ಲಿರುವ ತ್ರಿಶಂಕೇಶ್ವರ ಲಿಂಗ, ಜಟಂಗ ರಾಮೇಶ್ವರ ಶಿವಲಿಂಗಗಳು ಕುಮ್ಮಟ ನಾಯಕರು ಶೈವ ಧರ್ಮದ ಮತಾವಲಂಬಿಗಳಾಗಿರುವುದನ್ನು ಪುಷ್ಟೀಕರಿಸುತ್ತದೆ. ಕಂಪಿಲರಾಯನು ಕಂಪಲಿ ಸೋಮೇಶ್ವರನ ಅನುಗ್ರಹದಿಂದ ಕುಮಾರ ರಾಮನು ಜಟಂಗಿ ರಾಮೇಶ್ವರ ದೇವರ ಅನುಗ್ರಹದಿಂದಲೂ ಹುಟ್ಟಿದನೆಂಬ ಹಿನ್ನೆಲೆಯಲ್ಲಿ ಜಟಂಗ ರಾಮೇಶ್ವರ ದೇವಾಲಯದ ಪ್ರಕಾರದಲ್ಲಿ ಹಲವಾರು ದೇವಾಲಯಗಳನ್ನು ನಿರ್ಮಿಸಿರುವುದು ಗಮನಾರ್ಹ. ಪ್ರಾಕೃತಿಕ ಗುಹೆಗಳನ್ನು ಆಲಯಗಳಾಗಿ ಮಾರ್ಪಡಿಸಿ ಅವುಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸಿ ಶೈವ ಆರಾಧನೆಗೆ ಅನುವು ಮಾಡಿಕೊಡಲಾಗಿದೆ. ಚಿತ್ರದುರ್ಗ ಸಂಪಿಗೆ ಸಿದ್ದೇಶ್ವರ. ಗುಹೇಶ್ವರ ಆಶ್ರಮ ಗುಹಾಲಯ. ಆನೆಗೊಂದಿಯ ಗುಹೆಯಲ್ಲಿರುವ ಶಿವಲಿಂಗ, ನಂದಿ ಶಿಲ್ಪಗಳು. ಅನಂದ ಸಿದ್ದನ ಗುಹೆ, ಶಿವಯೋಗಿ ದೇವರ ಗುಹೆಗಳು. ಸಂಗಾಪುರದಲ್ಲಿನ ಮಂಜುನಾಥ ಗುಹೆಯಲ್ಲಿ ಶಿವಲಿಂಗ ಮತ್ತು ನಂದಿ ಗಣೇಶ ಶಿಲ್ಪಗಳು, ನಾಗೇನಹಳ್ಳಿಯ ಚನ್ನಬಸವೇಶ್ವರ ಗುಹೆಗಳಲ್ಲಿ ಶಿವಲಿಂಗಗಳು. ಬಯಲು ಬಂಡೆಯ ಶಿವಲಿಂಗ ಮತ್ತು ಲಿಂಗನಂದಿಯ ಶಿಲ್ಪಗಳನ್ನು ನಿರ್ಮಿಸಿರುವುದು ಗಮನಾರ್ಹ ಅಂಶವಾಗಿದೆ.

ಶಿವನ ಉಗ್ರರೂಪವೇ ಭೈರವ. ಭೈರವನ ಶಿಲ್ಪಗಳಂತೂ ಇವರ ಕಾಲದಲ್ಲಿ ಬಹು ವಿಶೇಷವಾಗಿ ಕಂಡುಬಂದಿವೆ. ಭೈರವನಿಗೆ ಚತುರ್ಭುಜಗಳು ಸಾಮಾನ್ಯವಾದರೂ ಅಷ್ಟಭುಜಗಳ ಭೈರವನಮೂರ್ತಿ ಇರುವುದೊಂದು ವಿಶೇಷ. ಹಾಗೂ ಭೈರವನನ್ನು ಕಾಲಭೈರವನೆಂದು, ಕಪಾಲಿಕ ಎಂದು ಕರೆಯಲಾಗಿದೆ. ಮಹಾಪುರದ ಭೈರವ ದೇವರ ಪ್ರತಿಷ್ಠೆಯನ್ನು ಸಿಂಗೆನಾಯಕನ ಭಟರು ಪ್ರತಿಷ್ಠಾಪಿಸಿರುವರು. ಭೈರವನೊಂದಿಗೆ ಪಂಚಭೂತಗಣಗಳು. ಶಿಲ್ಪಗಳು, ಕೆಳಭಾಗದಲ್ಲಿರುವುದನ್ನು ಕುಮ್ಮಟದುರ್ಗ. ಹಂಪೆಯ ಪರಿಸರ, ಹೊಸಮಲೆದುರ್ಗ, ಹಾನೇಯ, ಆನೆಗೊಂದಿ. ಚಿತ್ರದುರ್ಗದಲ್ಲಿರುವ ಇತರ ಕಾಲದ ಭೈರವನ ಶಿಲ್ಪಗಳೂ ಕಂಡು ಬರುತ್ತವೆ. ಭೈರವನ ಶಿಲ್ಪಗಳನ್ನು ಬಯಲು ಬಂಡೆಯ ಮೇಲೆ ಮಂಟಪಾಕೃತಿಯೊಳಗೆ ನಿರ್ಮಿಸಿದೆ. ಹಾಗೂ ಇನ್ನೊಂದು ವಿಶೇಷತೆಗಳಲ್ಲೊಂದು ಮಂಟಪ ಸ್ತಂಭಗಳು ನಾಗಾಲಂಕೃತವಾಗಿದೆ. ತಳವಾರಘಟ್ಟದಲ್ಲಿರುವ ಭೈರವ ಮೂರ್ತಿಗೆ ಅಷ್ಟಭುಜಗಳಿವೆ. ಕೈಗಳಲ್ಲಿ ಖಡ್ಗ, ಬಾಣ, ಡಮರು, ಕಠಾರಿ. ತ್ರಿಶೂಲ. ಬಿಲ್ಲು. ಗುರಾಣಿ. ಕಪಾಲ ಪಾತ್ರೆ ಹಾಗೂ ಮುಂಗೈಯಲ್ಲಿ

ನೇತಾಡುವ ಕಪಾಲಗಳು, ಕಪಾಲರ ಕುತ್ತಿಗೆಯಿಂದ ಬರುವ ರಕ್ತವನ್ನು ಕುಡಿಯುತ್ತಿರುವ ನಾಯಿ, ಕೆಳ ಪೀಠಭಾಗದಲ್ಲಿರುವ ಪಕ್ಷಿ, ಕಿ. ಎಡಬದಿಯಲ್ಲಿ ಬಿದ್ದಿರುವ ಶವ ಹಾಗೂ ರಣಹದ್ದು (ಡೇಗೆ)ಯೊಂದು ಶವಕ್ಕಾಗಿ ತಿನ್ನುವುದಕ್ಕಾಗಿ ಕಾಯುತ್ತಿರುವ ದೃಶ್ಯ, ನಿಜಕ್ಕೂ ಕಲಾತ್ಮಕವಾಗಿದೆ. ಭೈರವನ ಬಲಭಾಗದಲ್ಲಿ ಬಾಗಿರುವ ಖಡ್ಗವ ಹಿಡಿದು ನಿಂತಿರುವ ಸಹಚರ, ಮಂಟಪದ ಸ್ತಂಭವನ್ನೇರುತ್ತಿರುವ ದೊಡ್ಡ ಸರ್ಪಗಳು, ಪ್ರಭಾವಳಿಯಲ್ಲಿರುವ ಮಕರ, ಭೈರವನ ಹಣೆಯ ಮೇಲಿರುವ ತ್ರಿನೇತ್ರ, ಜಟಾಮಕುಟವಲ್ಲಿರುವ ಶಿವಲಿಂಗ, ದೊಡ್ಡದಾದ ರುಂಡಮಾಲೆ ಇವು ಭೈರವನ ಲಕ್ಷಣಗಳು.ಇಂತಹ ಭೈರವ ಶಿಲ್ಪವು ಆನೆಗೊಂದಿಯ ಕೋಟೆಯಿಂದ ಕಾಮಾಲಾಪುರಕ್ಕೆ ನದಿಯನ್ನು ದಾಟುವ ಬಿಳಿಯ ಚಿಕ್ಕ ಬೆಟ್ಟದ ಬಂಡೆಯಲ್ಲಿದೆ.

ವೀರಭದ್ರ ಶಿಲ್ಪಗಳು ಸಹ ಭೈರವನ ಶಿಲ್ಪಗಳಂತೆ ಇದ್ದು, ಹೊಸ ಮಲೆದುರ್ಗ, ಚಿತ್ರದುರ್ಗ, ಹಂಪೆಯ ಪರಿಸರದಲ್ಲಿರುವ ಶಿಲ್ಪಗಳು ವಿಶೇಷವಾಗಿವೆ. ತ್ರಿಭಂಗದಲ್ಲಿ ಹೆಚ್ಚಿನ ವೀರಭದ್ರ ಶಿಲ್ಪಗಳಿದ್ದರೂ ಭಿನ್ನತೆಯ ದೃಷ್ಟಿಯಿಂದ, ವೀರಾಸನದಲ್ಲಿ ಬಲಗಾಲಿನ ಮಂಡಿಯನ್ನು ನೆಲದ ಮೇಲಿಟ್ಟು ನಿಂತಿರುವ ಶಿಲ್ಪಗಳು ಹಂಪೆ ಹಾಗೂ ನಾಗೇನ ಹಳ್ಳಿಯಲ್ಲಿವೆ. ಗಣ್ಯವ್ಯಕ್ತಿಗಳ ಅರಮನೆ ಬಳಿಯಲ್ಲಿರುವ ವೀರಭದ್ರ ಶಿಲ್ಪ, ಗುಹೇಶ್ವರ ಆಶ್ರಮದ ಗುಹೆಯಲ್ಲಿ ಇರುವ ವೀರಭದ್ರ ಶಿಲ್ಪ, ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ಶಿಲ್ಪಗಳು ವಿಶೇಷವಾಗಿವೆ. ಸಿಂಗೆನಾಯಕನ ಹಳ್ಳಿಯಲ್ಲಿರುವ ವೀರಭದ್ರ ಶಿಲ್ಪದ ಬಳಿಯಲ್ಲಿ ದಕ್ಷಬ್ರಹ್ಮನು ಕೈಮುಗಿದು ಕುಳಿತಿರುವ ಶಿಲ್ಪವಿದೆ. ಹೆಚ್ಚಿನ ವೀರಭದ್ರ ಶಿಲ್ಪಗಳಲ್ಲಿ, ದಕ್ಷಬ್ರಹ್ಮನು ಅಂಜಲಿ ಮುದ್ರೆಯಲ್ಲಿ ನಿಂತಿದೆ. ಹೊಸಮಲೆ ದುರ್ಗದ ಹುಲಿಮಾನಪ್ಪನ ಮಠದಲ್ಲಿನ ವೀರಭದ್ರನ ಶಿಲ್ಪವು ಸರಳ. ನಾಗೇನಹಳ್ಳಿಯಲ್ಲಿರುವ ಮಂಡಿಗಾಲು ವೀರಭದ್ರ ಶಿಲ್ಪಗಳಲ್ಲಿ ಸಾಮ್ಯತೆ ಹಾಗೂ ಒಂದೇ ನಗುಮುಖ ಸೌಮ್ಯ ಭಾವವನ್ನು ಹೊಂದಿವೆ.

ಸ್ಕಂದ ಶಿಲ್ಪಗಳಿಗೆ ಸಂಬಂಧಿಸಿದಂತೆ ಜಟಂಗ ರಾಮೇಶ್ವರ ಹಾಗೂ ನಾಗೇನಹಳ್ಳಿಯಲ್ಲಿರುವ ಶಿಲ್ಪಗಳು ನವಿಲಿನ ಮೇಲೆ ಕುಳಿತಿವೆ. ಹಾಗೂ ಆರು ಭುಜಗಳಿದ್ದು ಕೈಗಳಲ್ಲಿ ಶಂಖ ಚಕ್ರ ತ್ರಿಶೂಲ ಡಮರು, ಬಾಣ, ಬಿಲ್ಲು ಆಯುಧಗಳನ್ನು ಹಿಡಿದಿವೆ. ತಲೆಯ ಮೇಲೆ ಪುಷ್ಪ ಮಕುಟವಿದೆ. ಸರಳತೆಗೆ ಹೆಮ್ಮೆ ಪ್ರಾಧಾನ್ಯತೆಯನ್ನು ಕೊಟ್ಟಿರುವುದು ಕುಮ್ಮಟ ನಾಯಕರ ಶಿಲ್ಪಗಳಲ್ಲಿ ಕಾಣಬಹುದು.

ಶೈವಮೂರ್ತಿ ಶಿಲ್ಪಗಳು

ಹೆಸರು : ಶಿವಲಿಂಗ

ಸಿಕ್ಕ ಸ್ಥಳ : ಗರ್ಭಗೃಹದಲ್ಲಿ ಮೂಲ ವಿರುಪಾಕ್ಷ ದೇವಾಲಯ, ಹೇಮಕೂಟ, ಹಂಪೆ. ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : VPR 1988-91, PP. 155-157.

ಗರ್ಭಗೃಹದಲ್ಲಿ ಸ್ಥಾಪಿತವಾಗಿರುವ ಶಿವಲಿಂಗ ಪೀಠ ವೃತ್ತಾಕಾರವಾಗಿದೆ. ಮೂರು ಹಂತದಲ್ಲಿರುವ ಪೀಠದ ಮೇಲ್ಭಾಗದಲ್ಲಿ ಶಿವಲಿಂಗವಿದೆ. ಶಿವಲಿಂಗ ಅರ್ಧಗೋಲಾಕಾರದಲ್ಲಿದೆ. ಮುಂಭಾಗದಲ್ಲಿ ಬ್ರಹ್ಮಸೂತ್ರವಿದೆ.

ಹೆಸರು : ಶಿವಲಿಂಗ ಮತ್ತು ಪಾರ್ವತಿ

ಸಿಕ್ಕ ಸ್ಥಳ : ಸೋಮೇಶ್ವರ ದೇವಾಲಯದ ಪ್ರಾಕಾರದಲ್ಲಿನ ಮರದ ಕೆಳಗೆ, ಕಂಪಲಿ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಶಿವಲಿಂಗ ಮತ್ತು ನಿಂತಿರುವ ಪಾರ್ವತಿ ಶಿಲ್ಪ ಇದೆ. ಕಾಲಾಂತರದಲ್ಲಿ ಶಿಲ್ಪಗಳು ಭಗ್ನವಾಗಿ, ಮರದ ಕೆಳಗೆ ಇರಿಸಿರುವ ಸಾಧ್ಯತೆಗಳಿವೆ. ಶಿವಲಿಂಗವನ್ನು ಮಾತ್ರ ನೆಲದ ಮೇಲೆ ಇರಿಸಲಾಗಿದೆ. ಲಿಂಗದ ಮುಂಭಾಗದಲ್ಲಿ ಬ್ರಹ್ಮ ಸೂತ್ರವಿದೆ. ನಿಂತಿರುವ ಪಾರ್ವತಿ ಶಿಲ್ಪದ ಪ್ರಭಾವಳಿಯಲ್ಲಿ ಯಾವುದೇ ಅಲಂಕಾರತೆ ಇರದೆ ಮೂಲರೂಪಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ಶಿಲ್ಪದ ತಲೆಯಲ್ಲಿ ಕರಂಡ ಮುಕುಟವಿದೆ. ಕಿವಿಯಲ್ಲಿ ಕುಂಡಲಾಭರಣಗಳು, ಕೊರಳಲ್ಲಿ ವಿವಿಧ ನಮೂನೆಯ ಹಾರಗಳು, ತೋಳಬಂಧಿಗಳು, ಕೈಬಳೆ ಧರಿಸಿ ಅಲಂಕೃತವಾಗಿ ನೆರಿಗೆಯ ಸೀರೆ ತುಂಬ ಕಲಾತ್ಮಕವಾಗಿದೆ.

ಹೆಸರು : ಶಿವಲಿಂಗಪೀಠ

ಸಿಕ್ಕ ಸ್ಥಳ : ಕುಮಾರ ರಾಮನ ಗುಡ್ಡ ದಕ್ಷಿಣ ಭಾಗದಲ್ಲಿ ಕುಮ್ಮಟದುರ್ಗ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

ಶಿಲಾ ವಸ್ತು : ಕಪ್ಪು ಶಿಲೆ

ಕಾಲ : ಕ್ರಿ,ಶ.೧೩-೧೪ ನೇ ಶತಮಾನ

ಉಲ್ಲೇಖ : VPR, 1987-88, P. 207

ಶಿವಲಿಂಗ ಪೀಠದ ಕೆಳ ಭಾಗ ಚತುರಸ್ರ ಆಕಾರ. ಮೇಲಿನ ಭಾಗ ವೃತ್ತಾಕಾರದಲ್ಲಿದ್ದು ಪ್ರಣಾಳವಿದೆ. ಪ್ರಣಾಳದ ಭಾಗವು ಮುರಿದಿದೆ.

ಹೆಸರು : ಶಿವಲಿಂಗ ಪೀಠ

ಸಿಕ್ಕ ಸ್ಥಳ : ಎಲ್ಲಮ್ಮನ ದೇವಾಲಯದ ಹತ್ತಿರ, ಕುಮ್ಮಟದುರ್ಗ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

ಶಿಲಾವಸ್ತು	: ಗ್ರಾನೈಟ್ ಕಪ್ಪುಶಿಲೆ
ಕಾಲ	: ಕ್ರಿ.ಶ. ೧೩ನೇ ಶತಮಾನ
ಉಲ್ಲೇಖ	: VPR, 1987-88, P. 208.

ಎಲ್ಲಮ್ಮನ ದೇವಾಲಯದ ಬಳಿ ಇರುವ ಶಿವಲಿಂಗಪೀಠದ ಮೇಲಿನ ಭಾಗ ವೃತ್ತಾಕಾರ ಹಾಗೂ ಪ್ರಣಾಳವಿದೆ. ಪೀಠದ ಮೇಲೆ, ಮಧ್ಯದಲ್ಲಿ ವೃತ್ತಾಕಾರದ ರಂಧ್ರವಿದ್ದು ಶಿವಲಿಂಗವಿದೆ. ಪೀಠದ ಪೂರ್ಣ ಕೆಳಭಾಗ ಚತುರಸ್ರ ಆಕಾರ.

ಹೆಸರು	: ಶಿವಲಿಂಗ
ಸಿಕ್ಕ ಸ್ಥಳ	: ಮಲ್ಲಿಕಾರ್ಜುನ (ಈಶ್ವರ) ದೇವಾಲಯದ ಗರ್ಭಗೃಹ, ಕುಮ್ಮಟದುರ್ಗ, ಕೊಪ್ಪಳ ತಾಲೂಕು, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ.೧೩ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: VPR. 87-88, PP. 207-208.

ಈಶ್ವರ ದೇವಾಲಯದ ಗರ್ಭಗೃಹದಲ್ಲಿನ ಶಿವಲಿಂಗ ಪೀಠದ ಮೇಲಿದೆ. ಶಿವಲಿಂಗದ ಕೆಳಭಾಗ ಅಷ್ಟಾವರಣ (ಅಷ್ಟಭುಜಾಕೃತಿ)ದಲ್ಲಿದ್ದು ಮೇಲಿನ ಭಾಗವ ಅಂಡಾಕಾರವಾಗಿದೆ. ಬ್ರಹ್ಮ ಸೂತ್ರವಿದೆ. ಪೀಠದ ಕೆಳಭಾಗ ಚತುರಸ್ರ ಆಕಾರ. ಮೇಲ್ಭಾಗವು ವೃತ್ತಾಕಾರವಾಗಿ ಚಿಕ್ಕದಾಗುತ್ತಾ ಹೋಗಿದೆ. ಪ್ರಣಾಳವಿದೆ. ಈ ರೀತಿಯ ಶಿವಲಿಂಗಗಳು ಕೆಳಭಾಗದಲ್ಲಿ ಚತುರ್ಭುಜವು ಮದ್ಯದಲ್ಲಿ ಅಷ್ಟ ತುದಿಯಲ್ಲಿ ಅಂಡಾಕಾರವಾಗಿ ವೈಶಿಷ್ಟ್ಯ ಪೂರ್ಣವಾಗಿದೆ.

ಹೆಸರು	: ಶಿವಲಿಂಗ
ಸಿಕ್ಕ ಸ್ಥಳ	: ರಾಮಸ್ವಾಮಿ ದೇವಾಲಯದ ಮುಂದೆ ಶಾಸನ ಮೇಲೆ, ಹೊಸಮಲೆದುರ್ಗ. ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ೧೬ನೇ ಶತಮಾನ
ಶಿಲಾ ವಸ್ತು	: ಗ್ರಾನೈಟ್
ಉಲ್ಲೇಖ	: VPR, 1988-91, P. 238.

ಶಿಲಾ ಶಾಸನದ ಮೇಲೆ ಇರುವ ಪಟ್ಟಿಕೆಯಲ್ಲಿ ಶಿವಲಿಂಗದ ಶಿಲ್ಪವು ಅಷ್ಟ ಕೋನಾಕೃತಿ ಪೀಠದ ಮೇಲಿದ್ದು, ಅಂಡಾಕಾರದ ಲಿಂಗವಿದೆ. ಮಲಗಿರುವ ನಂದಿ ಮತ್ತು ಭಕ್ತನ ಶಿಲ್ಪಗಳು ಎಡಬದಿಯಲ್ಲಿವೆ. ಶಿವಲಿಂಗದ ಮೇಲೆ ಇನ್ನೊಂದು ಪಟ್ಟಿಕೆಯಲ್ಲಿ ಸೂರ್ಯ ಮತ್ತು ಅರ್ಧ ಚಂದ್ರ ಶಿಲ್ಪಗಳ ಮಧ್ಯದಲ್ಲಿ ಮೂರು ಪುಷ್ಪಗಳು ಕಲಾತ್ಮಕವಾಗಿವೆ.

ಹೆಸರು : ಶಿವಲಿಂಗ

ಸಿಕ್ಕ ಸ್ಥಳ : ರಾಮಸ್ವಾಮಿ ದೇವಾಲಯದ ಗರ್ಭಗೃಹದಲ್ಲಿ, ಹೊಸಮಲೆದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ೧೬ನೇ ಶತಮಾನ

ಶಿಲಾವಸ್ತು : ಇಟ್ಟಿಗೆ ಗಾರೆ

ಉಲ್ಲೇಖ : VPR: 1988-91, PP. 237-238

ರಾಮಸ್ವಾಮಿ ದೇವಾಲಯದ ಗರ್ಭಗೃಹದಲ್ಲಿ ಪೀಠದ ಮೇಲೆ ಶಿವಲಿಂಗವಿದ್ದು ಅಂಡಾಕಾರವಾಗಿದೆ. ಮುಂದಿನ ಭಾಗದಲ್ಲಿ ದೇವಕೋಷ್ಠಾಕಾರದಲ್ಲಿದೆ. ಶಿವಲಿಂಗದ ಹಿಂಭಾಗದಲ್ಲಿ ಕೇಶವ ಮೂರ್ತಿಯ ಶಿಲ್ಪವಿದೆ. ಈ ದೇವಾಲಯವನ್ನು ಕುಮಾರ ರಾಮನಾಥ ಮತ್ತು ಪೂರ್ವಭಪ್ಪನಸ ಮಂದಿ ವೀರರಿಗೆ ವೀರಸ್ವರ್ಗ ಆಗಬೇಕೆಂದು ಸ್ಮರಣಾರ್ಥವಾಗಿ ಕಟ್ಟಿಸಿರುವರು.

ಹೆಸರು : ಶಿವಲಿಂಗ

ಸಿಕ್ಕ ಸ್ಥಳ : ಆಂಜನೇಯ ದೇವಾಲಯದ ಗರ್ಭಗೃಹದಲ್ಲಿ, ಹೊಸಮಲೆದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ.

ಶಿಲಾ ವಸ್ತು : ಬಳಪದ ಶಿಲೆ.

ಉಲ್ಲೇಖ : VPR, 1988-91, P. 238.

ಆಂಜನೇಯ ದೇವಾಲಯದ ಗರ್ಭಗೃಹದಲ್ಲಿರುವ ಈ ಶಿವಲಿಂಗವು ಅಂಡಾಕಾರವಾಗಿದೆ. ಶಿವಲಿಂಗದ ಪೀಠದ ಮೇಲ್ಭಾಗ ವೃತ್ತಾಕಾರವಾಗಿದ್ದು, ಪ್ರಣಾಳವಿದೆ. ಈ ಶಿವಲಿಂಗ ಹಿಂಭಾಗದಲ್ಲಿ ಆಂಜನೇಯನ ಶಿಲ್ಪವಿದೆ.

ಹೆಸರು : ಶಿವ, ವಿಷ್ಣು, ನಾರದ, ವೀರಭದ್ರ ಶಿಲ್ಪಗಳ ಪಟ್ಟಿಕೆ.

ಸಿಕ್ಕ ಸ್ಥಳ : ಅಯ್ಯನಕೊಳ್ಳದ ಬಂಡೆಯ ಮೇಲೆ, ಹೊಸಮಲೆದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ.೧೩ನೇ ಶತಮಾನ

ಶಿಲಾವಸ್ತು : ಪದರು ಶಿಲೆ, ಕಬ್ಬಿಣದ ಅಂಶವಿರುವ ಗಟ್ಟಿ ಶಿಲೆ.

ಶಿಲ್ಪ ಪಟ್ಟಿಕೆಯಲ್ಲಿ ವೀರಭದ್ರ ನಿಂತಿದ್ದು, ತಲೆಯಲ್ಲಿ ಜಟಾಮುಕುಟವಿದೆ. ಚತುರ್ಭುಜಗಳಿವೆ. ಕೈಗಳಲ್ಲಿ ಖಡ್ಗ, ಬಾಣ, ಬಿಲ್ಲು ಮತ್ತು ಗುರಾಣಿ ಮೇಲೆ, ಕೆಳಭಾಗದಲ್ಲಿ ಎಡಗೈನ್ನಿರಿಸಿದ್ದು ಧೋತರವನ್ನು ಧರಿಸಿದ್ದಾನೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿಯನ್ನು ನಿರ್ಮಿಸಿಲಾಗಿದೆ. ಶಿಲ್ಪವು ಭಾಗಶಃ ಭಗ್ನವಾಗಿದೆ.

ನಾಗ ಶಿಲ್ಪವು ಕೋನಾಕಾರಧ ಪ್ರಭಾವಳಿಯ ಆಕಾರದಲ್ಲಿ ನಾಗ ಶಿಲ್ಪವಿದ್ದು ಏಳು ಹೆಡೆಗಳಿವೆ. ಇದು ವೀರಭದ್ರನ ಎಡ ಭಾಗದಲ್ಲಿದ್ದು, ಅಷ್ಟೇ ಎತ್ತರವಾಗಿದೆ. ಶಿವಲಿಂಗ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರಿದ್ದು, ಕೆಳಭಾಗಳಲ್ಲಿ ಪಾಣಿಪೀಠವಿರುವ ಶಿವಲಿಂಗ ಶಿಲ್ಪವಿದೆ. ಲಿಂಗ ನಂದಿ ಮತ್ತು ನಾರದ ಮುನಿಯ ಶಿಲ್ಪಗಳು ಶಿವಲಿಂಗದ ಬಲಬದಿಯಲ್ಲಿ ನಂದಿ ಶಿಲ್ಪವು ಅದಕ್ಕೆ ಕೆಳಭಾಗದಲ್ಲಿ ತಂಬೂರಿಯನ್ನು ಹಿಡಿದು ಸಂಗೀತದಲ್ಲಿ ಮಗ್ನನಾಗಿರುವಂತೆ ನಾರದ ಮುನಿಯ ಶಿಲ್ಪವಿದೆ.

ನಂದಿಯ ಮೇಲೆ ಶಿವಪಾರ್ವತಿಯರು ಆಸೀನರಾಗಿದ್ದಾರೆ. ಶಿವನ ಕೈಯಲ್ಲಿರುವ ಡಮರು ಮತ್ತು ಶಿವ ಪಾರ್ವತಿಯರ ಕಾಲುಗಳು ಮತ್ತು ಕಟಿಭಾಗಗಳು ಕಾಣಿಸುತ್ತವೆ. ನಂದಿಯು ತನ್ನ ಬೆನ್ನ ಮೇಲೆ ಆಸೀನರಾಗಿರುವ ಶಿವ ಪಾರ್ವತಿಯರನ್ನು ನೋಡುತ್ತಿರುವಂತಿದೆ. ನಂದಿಯ ಕೊರಳಲ್ಲಿ ಗಂಟೆಗಳ ಹಾರವಿದ್ದು, ಬೆನ್ನ ಮೇಲೆ ಅಲಂಕಾರಿಕವಾಗಿ ಜೂಲನ್ನು ಹೊದಿಸಿದಂತಿದೆ. ಪ್ರಸ್ತುತ ಈ ಶಿಲ್ಪದ ಮೇಲ್ಭಾಗವು ಭಾಗಶಃ ಭಿನ್ನವಾಗಿದೆ. ವಿಷ್ಣು ಸಮಭಂಗದಲ್ಲಿ ನಿಂತಿದ್ದು ಮೇಲ್ಭಾಗ ಭಗ್ನವಾಗಿದೆ. ಕೈಗಳಲ್ಲಿ ಚಕ್ರ, ಶಂಖ ಎಡಗೈ ಕಟಿಹಸ್ತವು ಬಲಗೈಯಲ್ಲಿ ಅಭಯ ಹಸ್ತವಿದೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿ ಇದೆ. ಈ ಶಿಲ್ಪ ಪಟ್ಟಿಕೆಯು ದೇವ ಸಭೆಯನ್ನು ಪ್ರತಿಬಿಂಬಿಸುವಂತಿದೆ.

ಹೆಸರು	: ಶಿವಲಿಂಗ
ಸಿಕ್ಕ ಸ್ಥಳ	: ಗರ್ಭಗೃಹ, ಪಂಪಾಪತಿ ದೇವಾಲಯ, ಚಿಕ್ಕರಾಂಪುರ, (ಆನೆಗೂಂದಿ ಪಶ್ಚಿಮ) ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ

ಪಂಪಾಪತಿ ದೇವಾಲಯದ ಗರ್ಭಗೃಹದಲ್ಲಿರುವ ಶಿವಲಿಂಗ ಕಪ್ಪು ಶಿಲೆಯಲ್ಲಿ ನಿರ್ಮಿತವಾಗಿದೆ. ಶಿವಲಿಂಗದ ಮುಂಭಾಗದಲ್ಲಿ ಬ್ರಹ್ಮಸೂತ್ರವಿದೆ. ಶಿವಲಿಂಗವನ್ನು ಚತುರಾಶ್ರ(ಬ್ರಹ್ಮಕಾಂತ)ಪೀಠದಲ್ಲಿ ಸ್ಥಾಪಿಸಲಾಗಿದೆ. ಪೀಠದ ಭಾಗವನ್ನು ಹೊಸದಾಗಿ ಬಿಳಿಯ ಟೈಲ್ಸ್‌ನಿಂದ ಮುಚ್ಚಲಾಗಿದೆ. ಶಿವಲಿಂಗದ ಎದುರಿಗೆ ಮಲಗಿರುವ ನಂದಿಯ ಶಿಲ್ಪವಿದೆ. ನಂದಿಶಿಲ್ಪ ಗಂಟೆ, ಗೆಜ್ಜೆ ಹಾಗೂ ಸರಪಳಿ ಹಾರಗಳಿಂದ ಅಲಂಕೃತಗೊಂಡಿದೆ.

ಹೆಸರು	: ಶಿವಲಿಂಗ
ಸಿಕ್ಕ ಸ್ಥಳ	: ಗ್ರಾಮದ ಪಶ್ಚಿಮಕ್ಕೆ ಗುಡದಲ್ಲಿನ ಗುಹೆಯ ಮಂಜುನಾಥ ಗುಹೆ, ಸಂಗಾಪುರ. ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ.೧೩ ೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್

ಪ್ರಾಕೃತಿಕ ಗುಹೆಯಲ್ಲಿರುವ ಹಾಸು ಬಂಡೆಯ ಮೇಲೆ ವೃತ್ತ ಪೀಠಾಕಾರವನ್ನು ನಿರ್ಮಿಸಿ, ಅದರಲ್ಲಿ ಕಪ್ಪು ಕಲ್ಲಿನಲ್ಲಿ ಲಿಂಗ ಸ್ಥಾಪನೆ ಮಾಡಲಾಗಿದೆ. ಪೀಠದಲ್ಲಿ ಎರಡು ವೃತ್ತಗಳಿವೆ. ಪೀಠದ ಪ್ರಣಾಳವನ್ನು ಸ್ವಲ್ಪ ಮುಂಭಾಗದವರೆಗೂ ನಿರ್ಮಿಸಲಾಗಿದೆ. ಪ್ರಣಾಳದ ಬಾಯಿಯಿಂದ ಲಿಂಗ ಪ್ರವೇಶದ ದೃಶ್ಯವನ್ನು ನಿರ್ಮಿಸಿರುವುದು ವೈಶಿಷ್ಟಪೂರ್ಣ.

ಹೆಸರು	: ಶಿವಲಿಂಗ
ಸಿಕ್ಕ ಸ್ಥಳ	: ಮಂಟಪದ ಮಧ್ಯದ ಅಂಕಣದಲ್ಲಿ ಈಶ್ವರ ದೇವಾಲಯ, ಸಿಂಗೆಯನಾಯನ ಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ.
ಶಿಲಾವಸ್ತು	: ಗ್ರಾನೈಟ್ ಮತ್ತು ಕಪ್ಪು ಶಿಲೆ ಲಿಂಗ
ಉಲ್ಲೇಖ	: VPR, 1988-91, PP. 20-21

ಶಿವಲಿಂಗವು ವೃತ್ತ ಪೀಠದಲ್ಲಿದ್ದು ಅಂಡಾಕೃತಿಯಲ್ಲಿದೆ. ಪ್ರಸ್ತುತ ಈ ದೇವಾಲಯ ಪಾಳು ಬಿದ್ದಿದ್ದು, ಪೂಜೆ ಮಾತ್ರ ನಡೆಯುತ್ತಲಿದೆ.

ಹೆಸರು	: ಮೃಗಪುರುಷಾರ್ಚಿತ ಶಿವಲಿಂಗ
ಸಿಕ್ಕ ಸ್ಥಳ	: ಗರ್ಭಗೃಹದ ಹೊರಬಿತ್ತಿಯ ಮೇಲೆ ದಕ್ಷಿಣ ದ್ವಿಕೂಟ ದೇವಾಲಯ, ಹೇಮಕೂಟ, ಹಂಪೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩ ೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ
ಉಲ್ಲೇಖ	: VPR. 1987-88, P. 133

ದ್ವಿಕೂಟ ದೇವಾಲಯದ ದಕ್ಷಿಣ ದಿಕ್ಕಿನ ಗಭಾಗೃಹದ ಬಿತ್ತಿಯ ಪ್ರಸ್ತರದ ಮೇಲ್ಭಾಗದಲ್ಲಿ ಶಿವಲಿಂಗದ ಮುಂದೆ ಮೃಗ ಪುರುಷ(ವ್ಯಾಗ್ರಪಾದ) ಕೈಯಲ್ಲಿ ಧೂಪಾರತಿಯನ್ನು ಬೆಳಗುತ್ತಿರುವಂತಿದೆ. ಇನ್ನೊಂದು ಬದಿಯಲ್ಲಿ ಋಷಿ ಮುನಿಯು ಶಿವಲಿಂಗದ ಮೇಲೆ ಬಲಗೈಯಿಂದ ಪುಷ್ಪವನ್ನು ಇರಿಸುತ್ತಿದ್ದಾನೆ.

ಹೆಸರು	: ಶಿವಲಿಂಗ
ಸಿಕ್ಕ ಸ್ಥಳ	: ಚನ್ನಬಸವೇಶ್ವರ ಗುಹಾಲಯ, ಗರ್ಭಗೃಹ, ನಾಗೇನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ

ಶಿವಲಿಂಗ ಪೀಠ ಚತುರ್ರಾಶ್ರ ಕೋನದಲ್ಲಿದೆ. ಪೀಠದ ಮೇಲ್ಭಾಗದಲ್ಲಿ ಪ್ರಣಾಳವಿದೆ. ಲಿಂಗದ ಮೇಲೆ ಬ್ರಹ್ಮಸೂತ್ರವಿರುವುದು ಈ ಮೂರ್ತಿ ಶಿಲ್ಪದ ಇನ್ನೊಂದು ವೈಶಿಷ್ಟ್ಯ.

ಹೆಸರು	: ಶಿವಲಿಂಗ (ಸಂಪಿಗೆ ಸಿದ್ದೇಶ್ವರ)
ಸಿಕ್ಕ ಸ್ಥಳ	: ಗರ್ಭಗೃಹ, ಸಂಪಿಗೆ ಸಿದ್ದೇಶ್ವರ ದೇವಾಲಯ, ಚಿತ್ರದುರ್ಗ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: MAR, 1929, P. 18

ಅಷ್ಟಾಶ್ರ ಪೀಠದ ಮೇಲೆ ಸ್ಥಾಪಿತವಾಗಿರುವ ಶಿವಲಿಂಗವಿದೆ. ಪೀಠದ ಮೇಲ್ಭಾಗವೂ ಮಾತ್ರ ಕಾಣುತ್ತದೆ. ಉಳಿದ ಭಾಗ ನೆಲದಲ್ಲಿ ಮುಚ್ಚಿದೆ. ಈ ಶಿವಲಿಂಗದ ಪ್ರಣಾಳವು ಎಡಭಾಗದಲ್ಲಿದೆ. ಸಾಮಾನ್ಯವಾಗಿ ಪೀಠದ ಪ್ರಣಾಳವು ಬಲಭಾಗದಲ್ಲಿರುವುದು ಎಡಭಾಗಕ್ಕೆ ಇರುವುದು ಇಲ್ಲಿನ ವಿಶೇಷತೆ.

ಹೆಸರು	: ಗಜಾರ್ಚಿತ ಶಿವಲಿಂಗ
ಸಿಕ್ಕ ಸ್ಥಳ	: ದ್ವಿಕೂಟ ದೇವಾಲಯ, ದಕ್ಷಿಣ ದಿಕ್ಕಿನ ಗರ್ಭಗೃಹದ ಹೊರ ಬಿತ್ತಿಯ ಮೇಲೆ. ಹೇಮಕೂಟ, ಹಂಪೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ.
ಶಿಲಾವಸ್ತು	: ಗ್ರಾನೈಟ್ ಶಿಲೆ.
ಉಲ್ಲೇಖ	: VPR, 1987-88, P. 133

ದೇವಾಲಯದ ಉತ್ತರ ದಿಕ್ಕಿನ ದ್ವಾರದ ಬದಿಯಲ್ಲಿನ ಬಿತ್ತಿಯ ಮೇಲೆ ಶಿವಲಿಂಗವಿದ್ದು, ಎಡಬಲದಲ್ಲಿ ಆನೆಗಳು ನಿಂತಿದ್ದು ಒಂದು ಆನೆಯ ಕಮಲ ಪುಷ್ಪವನ್ನು ಸೊಂಡಿಲಿನಲ್ಲಿ ಹಿಡಿದಿದ್ದು ಶಿವಲಿಂಗದ ಮೇಲೆ ನೀರೆರೆಯುವ ಚಿತ್ರಣ ಸುಂದರ.

ಹೆಸರು	: ಯೋಗಿ ಶಿಲ್ಪ
ಸಿಕ್ಕ ಸ್ಥಳ	: ಗರ್ಭಗೃಹದಲ್ಲಿ, ಸಂಪಿಗೆ ಸಿದ್ದೇಶ್ವರ ದೇವಾಲಯ, ಚಿತ್ರದುರ್ಗ ತಾಲೂಕು, ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: MAR, 1929, P. 18

ವೃತ್ತಾಕಾರದ ಪೀಠದ ಮೇಲೆ ಪಾದ ಶಿಲ್ಪವಿದೆ. ಪಾದ ಶಿಲ್ಪದ ಹಿಂಭಾಗದಲ್ಲಿ ಪದ್ಮಾಸನದಲ್ಲಿ ಕುಳಿತ ಯೋಗಿ ಶಿಲ್ಪವಿದ್ದು, ಯೋಗಿಯು ಪಾದಗಳನ್ನು ಪೂಜಿಸುತ್ತಿರುವಂತಿದೆ. ಯೋಗಿಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿ ಇದೆ. ಲಲಾಟದಲ್ಲಿ ವೃತ್ತಪೀಠದ ಪ್ರಣಾಳದ ಕೆಳಭಾಗದಲ್ಲಿ ಚಿಕ್ಕ ನಂದಿಯ ಶಿಲ್ಪವಿದೆ.

ಹೆಸರು	: ವೀರಭದ್ರ
ಸಿಕ್ಕ ಸ್ಥಳ	: ಚನ್ನಬಸವೇಶ್ವರ ಗುಹಾಲಯದ ಗರ್ಭಗೃಹ, ನಾಗೇನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ

ವೀರಭದ್ರ ಕುಳಿತಿದ್ದಾನೆ. ಬಲಗಾಲಿನ ಮಂಡಿಯನ್ನು ನೆಲದ ಮೇಲೆ ಊರಿ ಎಡಗಾಲನ್ನು ಮುಂದೆ ಇಟ್ಟಿರುವನು. ವೀರಭದ್ರನಿಗೆ ಚತುರ್ಭುಜಗಳಿವೆ. ಕೈಗಳಲ್ಲಿ ಬಾಣ, ಬಿಲ್ಲು, ಖಡ್ಗ ಮತ್ತು ಗುರಾಣಿಗಳನ್ನು ಹಿಡಿದಿದ್ದಾನೆ. ತಲೆಯಲ್ಲಿ ಕರಂಡ ಮಕುಟ ಧರಿಸಿದ್ದಾನೆ. ಕಟಿಯಲ್ಲಿ ಕಠಾರಿ ಇದೆ. ಕಿವಿಯಲ್ಲಿ ಕುಂಡಲಾಭರಣ, ಅಗಲವಾದ ಕಂಠಹಾರ, ರುಂಡ ಮಾಲೆಯನ್ನು ಧರಿಸಿದ್ದಾನೆ. ಶಿಲ್ಪದ ಹಿಂಭಾಗದಲ್ಲಿ ಸ್ತಂಭ ಚಿತ್ರದ ಪ್ರಭಾವಳಿ ಇದ್ದು, ಪ್ರಭಾವಳಿ ಮೇಲೆ ಕೀರ್ತಿಮುಖವಿದೆ. ಪ್ರಭಾವಳಿಯೂ ಅರ್ಧ ಸುರುಳಿಗಳಿಂದಲಂಕೃತವಾಗಿವೆ. ಪ್ರತಿ ಸುರಳಿಯಲ್ಲಿ ಪುಷ್ಪಗಳಿವೆ. ವೀರಭದ್ರನ ಎಡಭಾಗದಲ್ಲಿ ಕುರಿ ತಲೆಯ ದಕ್ಷಬ್ರಹ್ಮನು ಪದ್ಮಾಸನದಲ್ಲಿ ಕುಳಿತಿದ್ದಾನೆ.

ವೀರಭದ್ರನಲ್ಲಿ ವೀರ ಕಲ್ಪನೆಯನ್ನು ಮಾಡಲಾಗಿದೆ. ರೌದ್ರಾಕಾರವಾದ ಮುಖವಿದೆ. ವೀರಭದ್ರನ ಭಂಗಿಯನ್ನು ನೋಡಿ. ದಕ್ಷಬ್ರಹ್ಮನು ಪದ್ಮಾಸನದಲ್ಲಿ ಕುಳಿತಿದ್ದಾನೆ. ಈ ಮಾದರಿಯ ವೀರಭದ್ರ ಶಿಲ್ಪವು ಹಂಪೆಯ ಮತಂಗ ಪರ್ವತದ ಪೂರ್ವಕ್ಕಿರುವ ಗುಹೆಯಲ್ಲಿದೆ. (VPR, 1983-84, P. 135)

ಹೆಸರು	: ವೀರಭದ್ರ
ಸಿಕ್ಕ ಸ್ಥಳ	: ಸಂಪಿಗೆ ಸಿದ್ದೇಶ್ವರ ದೇವಾಲಯದ ನವರಂಗದಲ್ಲಿನ ಚಿಕ್ಕ ಗುಡಿಯಲ್ಲಿ ಚಿತ್ರದುರ್ಗ ತಾಲೂಕು-ಜಿಲ್ಲೆ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: MAR 1929, P. 18

ತ್ರಿಭಂಗದಲ್ಲಿ ನಿಂತಿರುವ ವೀರಭದ್ರನು ಬಾಣ, ಬಿಲ್ಲು, ಖಡ್ಗ, ಗುರಾಣಿ, ಆಯುಧ ಪಾಣಿಯಾಗಿದ್ದಾನೆ. ರುಂಡ ಮಾಲೆಯನ್ನು ಧರಿಸಿದ್ದಾನೆ. ಯಜ್ಞೋಪವೀತ, ಕೊರಳಲ್ಲಿ ವಿವಿಧ ಹಾರಗಳು, ಕೈಗಳಿಗೆ ಹಾಗೂ ಕಾಲುಗಳಲ್ಲಿ ಕಡಗಾಭರಣಗಳು, ಕರ್ಣಕುಂಡಲಗಳನ್ನು ಧರಿಸಿ, ಧೋತರವನ್ನು ಧರಿಸಿದ್ದಾನೆ. ಜಟಾಮುಕುಟದಲ್ಲಿ ಚಿಕ್ಕ ಶಿವಲಿಂಗದ ಶಿಲ್ಪವಿದೆ. ಹಿಂಭಾಗದಲ್ಲಿ ಪ್ರಭಾವಳಿ ಇದೆ. ಇಲ್ಲಿ ಅಲಂಕರಣಕ್ಕೆ ಪ್ರಾಧಾನ್ಯತೆ ನೀಡಿಲ್ಲ. ಕೆಳಭಾಗದಲ್ಲಿ ನಂದಿ, ಲಿಂಗ ಹಾಗೂ ದಕ್ಷಬ್ರಹ್ಮನ ಶಿಲ್ಪಗಳಿವೆ. ದಕ್ಷಬ್ರಹ್ಮನು ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ.

ಹೆಸರು	: ವೀರಭದ್ರ
ಸಿಕ್ಕ ಸ್ಥಳ	: ಹುಲಿಮಾನಪ್ಪನ ಮಠದ ಒಳಭಾಗದಲ್ಲಿ, ಹೊಸಮಲೆ ದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: VPR, 1988-91, P. 238

ಅಯ್ಯನಕೊಳ್ಳದ ಪೂರ್ವದಿಕ್ಕಿನಲ್ಲಿರುವಚಿಕ್ಕ ಬೆಟ್ಟದ ಮೇಲೆ ಸೈಜುಕಲ್ಲುಗಳಿಂದ ನಿರ್ಮಿಸಲಾಗಿರುವ ಮನೆಯಂತೆ ಕಾಣುವ ಕಟ್ಟಡದ ಅವಶೇಷವಿದ್ದು, ಈ ಮನೆಯನ್ನು ಹುಲಿಮಾನಪ್ಪನ ಗುಡಿ ಎಂದು ಕರೆಯುತ್ತಾರೆ. ತ್ರಿಭಂಗದಲ್ಲಿ ನಿಂತಿರುವ ವೀರಭದ್ರನು ಚತುರ್ಭುಜಗಳನ್ನು ಹೊಂದಿದ್ದು, ಖಡ್ಗ, ಬಾಣ, ಬಿಲ್ಲು (ಧನಸ್ಸು) ಹಿಡಿದು, ಗುರಾಣಿಯ ಮೇಲೆ ಕೈಯನ್ನು ಇರಿಸಿದ್ದಾನೆ. ತಲೆಯ ಮೇಲೆ ಜಟಾ ಮುಕುಟವಿದ್ದು ಹಣೆಯಲ್ಲಿ ಮೂರನೇ ಕಣ್ಣು, ಕಿವಿಯಲ್ಲಿ ಸರ್ಪ ಕುಂಡಲವಿದೆ. ಜಟಾ ಮುಕುಟವಲ್ಲಿ ಚಿಕ್ಕದಾದ ಶಿವಲಿಂಗ ಮೂಡಲ್ಪಟ್ಟ ಚಿತ್ರಣ ನಿಜಕ್ಕೂ ಸುಂದರ. ಕಂಠಾಭರಣ, ಕೈತೋಳುಗಳಲ್ಲಿ ಮತ್ತು ಕಡಗಗಳನ್ನು ಧರಿಸಿದ್ದಾನೆ. ಧೋತರ, ರುಂಡಮಾಲೆಯನ್ನು ಧರಿಸಿದ್ದಾನೆ. ಈ ಶಿಲ್ಪದಲ್ಲಿ ಪ್ರಭಾವಳಿ ಇದ್ದು, ಕೆಳಭಾಗದಲ್ಲಿ ಎರಡು ಬದಿಯಲ್ಲಿ ದಕ್ಷಬ್ರಹ್ಮನು ಅಂಜಲಿ ಮುದ್ರೆಯಲ್ಲಿದ್ದಾನೆ. ಎಡ ಭಾಗದಲ್ಲಿ ನಿಂತಿರುವ ಸ್ತ್ರೀ ಶಿಲ್ಪವಿದ್ದು, ಬಲಗೈ ಅಭಯ-ಹಸ್ತವು ಮತ್ತು ಎಡಗೈ ವ್ಯಾಖ್ಯಾನ ಮುದ್ರೆಯಲ್ಲಿದೆ.

ಹೆಸರು	: ನಂದಿ, ವೀರಭದ್ರ
ಸಿಕ್ಕ ಸ್ಥಳ	: ಗರ್ಭಗೃಹದಲ್ಲಿನ ಬಂಡೆಯ ಮೇಲೆ ವೀರಭದ್ರ ದೇವಾಲಯ, ಭೀಮನ ಬಾಗಿಲ ಬಳಿ, ಈಶಾನ್ಯಕ್ಕೆ ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ವೀರಭದ್ರ ದೇವಾಲಯದಲ್ಲಿ ನಂದಿ, ವೀರಭದ್ರ ಶಿಲ್ಪಗಳಿವೆ. ವೀರಭದ್ರ ದಕ್ಷಿಣ ದಿಕ್ಕಿನ ಗುಂಡಿಗೆ ಹೊಂದಿಕೊಂಡಂತೆ. ಚೌಕಾಕಾರದಲ್ಲಿ ಗರ್ಭಗೃಹವನ್ನು ನಿರ್ಮಿಸಲಾಗಿದೆ. ಗುಂಡಿನ ಮೇಲೆ ವೀರಭದ್ರ ನಿಂತಿದ್ದು, ಚತುರ್ಭುಜಗಳನ್ನು ಹೊಂದಿದ್ದು. ಖಡ್ಗ. ಬಾಣ. ಬಿಲ್ಲು, ಮತ್ತು ಗುರಾಣಿಯನ್ನು ಹಿಡಿದಿದ್ದಾನೆ. ಕೈ ತೋಳು ಮತ್ತು ಬಲ ಹಸ್ತದಲ್ಲಿ ರುದ್ರಾಕ್ಷಿ ಮಾಲೆಗಳಿವೆ. ಬೆರಳುಗಳಲ್ಲಿ ಉಂಗುರ, ಮೂರು ಹಂತದ ನೆರಿಗಳ ದೋತರ, ಕಂಠಹಾರ ತಲೆಯ ಮೇಲೆ ಜಟಾಮುಕುಟ ಧರಿಸಿದ್ದಾನೆ. ಮಧ್ಯದಲ್ಲಿ ಶಿವಲಿಂಗವಿದೆ. ತ್ರಿನೇತ್ರಧಾರಿ, ಕಿವಿಗಳಲ್ಲಿ ಮಕರ ಮತ್ತು ಸರ್ಪಕುಂಡಲಗಳು ಇವೆ. ಬಲಭಾಗದಲ್ಲಿ ದಕ್ಷಬ್ರಹ್ಮನ ಶಿಲ್ಪವಿದ್ದು, ಅಂಜಲಿ ಮುದ್ರೆಯಲ್ಲಿ ಸಮಭಂಗದಲ್ಲಿ ನಿಂತಿದ್ದಾನೆ. ಸಹಚರರು ವೀರಭದ್ರನ ಎರಡು ಭಾಗದಲ್ಲಿ ಋಷಿದಂಪತಿಗಳು ಸಮಭಂಗದಲ್ಲಿ ನಿಂತಿದ್ದು ಅಂಜಲಿ ಮುದ್ರೆಯಲ್ಲಿವೆ. ದೋತರವನ್ನು ಧರಿಸಿದ್ದು, ವಕ್ಷಸ್ಥಲದಲ್ಲಿ ಇಷ್ಟಲಿಂಗವಿದೆ. ಗಡ್ಡ, ಮೀಸೆ ಇದ್ದು, ತಲೆಯ ಕೂದಲನ್ನು ಹಿಂಭಾಗದಲ್ಲಿ ಮುಡಿಕಟ್ಟಿದ್ದು, ರುದ್ರಾಕ್ಷಿ ಮಾಲೆಗಳನ್ನು ಕೈಯಲ್ಲಿ ಹಿಡಿದಿದ್ದಾನೆ. ಋಷಿಯ ಪತ್ನಿಯೂ ಸೀರೆಯನ್ನು, ಕಂಠಾಭರಣಗಳನ್ನು ಧರಿಸಿರುವಳು ಹಾಗೂ ತಲೆಗೂದಲನ್ನು ಮುಡಿ ಕಟ್ಟಿರುವಳು.

ಹೆಸರು	: ವೀರಭದ್ರ
ಸಿಕ್ಕ ಸ್ಥಳ	: ಪಶ್ಚಿಮ ಭಾಗದಲ್ಲಿರುವ ಚಿಕ್ಕ ದೇವಾಲಯದಲ್ಲಿ ಗುಂಡಿನ ಮೇಲೆ. ಸಿಂಗೆನಾಯಕನಹಳ್ಳಿ, ಹೊಸಪೇಟೆ ತಾಲೂಕು. ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ವೀರಭದ್ರ ಶಿಲ್ಪವು ದ್ವಿಭಂಗದಲ್ಲಿದ್ದು ಚತುರ್ಭುಜಗಳಿವೆ. ಬಲಭಾಗದ ಕೈಗಳಲ್ಲಿ ಖಡ್ಗ ಮತ್ತು ಬಾಣವನ್ನು. ಎಡಗೈಯಲ್ಲಿ ಬಿಲ್ಲು ಮತ್ತು ಗುರಾಣಿಯನ್ನು ಹಿಡಿದಿದ್ದಾನೆ. ಕೊರಳಲ್ಲಿ ರುದ್ರಾಕ್ಷಿ ಮಾಲೆ ಯಜ್ಞೋಪವೀತವನ್ನು (ಮೂರು ದಾರಗಳು) ರುಂಡಮಾಲೆ ಕಿವಿಯಲ್ಲಿ, ಕರ್ಣಾಭರಣಗಳನ್ನು ಧರಿಸಿದ್ದಾನೆ. ತಲೆಯಲ್ಲಿ ಮೊನಚಾದ ತುದಿಯಂತಿರುವ ಜಟಾಮುಕುಟವೂ. ಹಣೆಯ ಮೇಲೆ ತ್ರಿನೇತ್ರವೂ ಇದ್ದು, (ನಡುವಿನಲ್ಲಿ) ದೋತರವನ್ನು ಧರಿಸಿದ್ದಾನೆ. ಕೆಳ ಎಡಬದಿಯಲ್ಲಿ ಟಗರಿನ (ಮೇಷ) ಮುಖವಿರುವ ದಕ್ಷಬ್ರಹ್ಮನು ಅಂಜಲಿ ಮುದ್ರೆಯಲ್ಲಿ ಕುಳಿತಿದ್ದಾನೆ. ಎಡಬದಿಯಲ್ಲಿ ನಿಂತ ನಂದಿಯ ಶಿಲ್ಪವಿದೆ. ನಂದಿಯು ಮುಂದಿನ ಎಡಗಾಲನ್ನು ಮೇಲೆ ಎತ್ತಿದೆ. ಕೊರಳಲ್ಲಿ ಗಂಟೆ. ಭುಜದ ಹಿಂಬದಿಯಿಂದ ಹಿಡಿದು ಎದೆಯ ಭಾಗದವರೆಗೂ ಬಾಲವನ್ನು ಮೇಲೆ ಎತ್ತಿರುವುದು ಇದು ಈ ಮೂರ್ತಿ ಶಿಲ್ಪದ ಸಾಮಾನ್ಯ ಲಕ್ಷಣ. ವೀರಭದ್ರ ಮತ್ತು ನಂದಿಯ ವಿಗ್ರಹವ ಮಧ್ಯದಲ್ಲಿ ಪ್ರಸ್ತುತ ಒಡೆದಿದೆ.

ಹೆಸರು	: ವೀರಭದ್ರ ಹಾಗೂ ನಂದಿ
ಸಿಕ್ಕ ಸ್ಥಳ	: ಗರ್ಭಗೃಹದಲ್ಲಿ ಬಂಡೆಯ ಮೇಲೆ, ವೀರಭದ್ರ ದೇವಾಲಯ ಗಣ್ಯವ್ಯಕ್ತಿಗಳ ಅರಮನೆ ಆವರಣ, ಕಾಮಲಾಪುರ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : VPR, 1983-84, P. 134

ವೀರಭದ್ರ ದೇವಾಲಯದ ಗರ್ಭಗೃಹದಲ್ಲಿನ ಬಂಡೆಯ ಮೇಲೆ ವೀರಭದ್ರನ ಶಿಲ್ಪ ನಿರ್ಮಿಸಲಾಗಿದೆ. ನಿಂತ ಭಂಗಿಯಲ್ಲಿದ್ದು, ಚತುರ್ಭುಜಗಳಿದ್ದ ಈ ವೀರಭದ್ರ ಖಡ್ಗ, ಬಾಣ, ಬಿಲ್ಲು, ಗುರಾಣಿಯನ್ನು ಹಿಡಿದಿದ್ದಾನೆ. ರುಂಡಮಾಲೆ, ಕಟಿಬಂಧ, ಧೋತರವನ್ನು ಕಂಠಾಭರಣಗಳನ್ನು ಧರಿಸಿದ್ದು, ಹಣೆಯಲ್ಲಿ ತ್ರಿನೇತ್ರವಿದೆ. ತಲೆಯಲ್ಲಿ ಜಟಾಮುಕುಟ ಧರಿಸಿದ್ದಾನೆ. ಕಿವಿಗಳಲ್ಲಿ ಸರ್ಪ ಕುಂಡಲಗಳಿವೆ. ಭುಜಗಳಲ್ಲಿ ಭುಜಕೀರ್ತಿಗಳು ತೋಳುಗಳಲ್ಲಿ ಸರ್ಪಗಳನ್ನು ಸುತ್ತಿಕೊಂಡಿರುವುದನ್ನು ಮುಂಗೈಗಳಲ್ಲಿ ಬಿಡ್ಗಗಳು ಎಡಪಾದದಲ್ಲಿ ಖಡ್ಗ ಕೈ ಮತ್ತು ಕಾಲುಬೆರಳುಗಳಲ್ಲಿ ಉಂಗುರಗಳಿವೆ. ಯಜ್ಞೋಪವೀತ ಧರಿಸಿದ್ದಾನೆ. ಎಡೆಯ ಕೆಳಭಾಗದಲ್ಲಿ ನಿಂತಿರುವ ಅಂಜಲಿ ಮುದ್ರೆಯಲ್ಲಿದ್ದು, ಧೋತರವನ್ನು ತೊಟ್ಟಿದ್ದು, ಕಂಠಾಭರಣಗಳನ್ನು ಧರಿಸಿದ್ದಾನೆ. ಸ್ತಂಭವನ್ನೊಳಗೊಂಡ ಈ ಶಿಲ್ಪದ ಮೇಲೆ ಪ್ರಭಾವಳಿ ಇದೆ. ಪ್ರಭಾವಳಿಯ ಮೇಲು ತುದಿಯಲ್ಲಿ ಕೀರ್ತಿ ಮುಖವಿದೆ.

ಹೆಸರು : ಭೈರವ

ಸಿಕ್ಕ ಸ್ಥಳ : ಹುಲಿಮಾನಪ್ಪನ ಮಠದ ಮುಂದೆ, ಹೊಸಮಲೆದುರ್ಗ, ಸಂಡೂರು ತಾಲೂಕು. ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : VPR, 1988-91, P. 238

ಭೈರವ ಶಿಲ್ಪ ಭಗ್ನವಾಗಿದೆ. ಭೈರವನು ತ್ರಿಭಂಗದಲ್ಲಿ ನಿಂತಿದ್ದಾನೆ. ಪಾದಗಳಲ್ಲಿ ಆಭರಣಗಳಿವೆ. ಎಡಬಲದಲ್ಲಿ ಭೂತಗಣಗಳಿವೆ. ಕುಳಿತಿರುವ ಭೂತಗಣ ಶಿಲ್ಪದ ಪೀಠ ಭಾಗದ ಮಧ್ಯದಲ್ಲಿ ಚೇಳು ಶಿಲ್ಪವಿದೆ.

ಹೆಸರು : ಭೈರವ

ಸಿಕ್ಕ ಸ್ಥಳ : ಕಲ್ಲಿಗಸೆಯ ದಕ್ಷಿಣಕ್ಕೆ ಗುಂಡಿನ ಮೇಲೆ, ಆನೆಗೊಂದಿ ಪಶ್ಚಿಮ ದಿಕ್ಕಿಗೆ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : VPR, 1984-87, PP. 68-69

ನಿಂತಿರುವ ಭೈರವ ಮೂರ್ತಿಯ ಮೇಲ್ಭಾಗದಲ್ಲಿ ಪ್ರಭಾವಳಿ ಇದ್ದು ಪ್ರಭಾವಳಿಯ ಸ್ತಂಭ ನಾಗತೋರಣಗಳಿಂದ ಅಲಂಕೃತವಾಗಿದೆ. ಭೈರವ ಮೂರ್ತಿಯ ಶಿರದಲ್ಲಿ ಜಟಾಮಕುಟವಿದೆ. ತ್ರಿನೇತ್ರದಾರಿ, ಕಿವಿಗಳಲ್ಲಿ ಸರ್ಪಕುಂಡಲ ಧರಿಸಿದ್ದಾನೆ. ಕಂಠಾಭರಣಗಳು ಕೈ ತೋಳು, ಮುಂಗೈಗಳಲ್ಲಿ, ಮುಂಗಾಲುಗಳಲ್ಲಿ ಕಡಗಾಭರಣಗಳು, ನಾಲ್ಕು ಕೈಗಳಿವೆ. ಉದ್ದನೆಯ ಖಿಡ್ಗ, ಡಮರು, ತ್ರಿಶೂಲ, ಕಪಾಲ ಪಾತ್ರೆ ಮತ್ತು ಕಪಾಲವನ್ನು ಮುಂಗೈಗೆ ಬ್ರಹ್ಮಕಪಾಲವಿದೆ. ಕೆಳಭಾಗದಲ್ಲಿ ನಾಯಿಯು ಹಿಂಗಾಲುಗಳ ಮೇಲೆ ನಿಂತು ಕಪಾಲದ ರಕ್ತವನ್ನು ನೆಕ್ಕುತ್ತಿರುವ ದೃಶ್ಯವಿದೆ. ಎಡಭಾಗದಲ್ಲಿ ಸರ್ಪವಿದೆ. ಉದ್ದನೆಯ ರುಂಡಮಾಲೆಯನ್ನು ಧರಿಸಿದ್ದಾನೆ. ಪೀಠದ ಮಧ್ಯದಲ್ಲಿ ಚೇಳಿನ ಚಿತ್ರವಿದೆ. ಎಡ ಮತ್ತು ಬಲಭಾಗದಲ್ಲಿ ಎರಡು ಭೂತಗಣಗಳು ಕುಳಿತಿವೆ.

ಹೆಸರು	: ಭೈರವ
ಸಿಕ್ಕ ಸ್ಥಳ	: ತೇರು ಬೀದಿಯ ಪಶ್ಚಿಮಕ್ಕೆ ಬಂಡೆಯ ಮೇಲೆ, ಶಿಥಿಲವಾದ ಮಂಟಪದ ಬಳಿ, ಅಚ್ಯುತರಾಯ ತೇರು ಬೀದಿಯ ಪಶ್ಚಿಮಕ್ಕೆ ಹಂಪೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಭೈರವ ಮೂರ್ತಿ ನಿಂತಿದ್ದು, ಶಿರ ಭಾಗ ಮುರಿದಿದೆ. ಭೈರವ ಮೂರ್ತಿಯು ಬೆತ್ತಲೆಯಾಗಿದೆ. ಕೊರಳಲ್ಲಿ ಕಂಠಾಹಾರಗಳು ಮುಂಗಾಲುಗಳಲ್ಲಿ ಕಡಗಾಭರಣಗಳು ಇವೆ. ಭೈರವ ಮೂರ್ತಿಗೆ ನಾಲ್ಕು ಕೈಗಳಿದ್ದು, ಕೈಗಳಲ್ಲಿ (ಕೇತಕ, ಮುಂಬಾಗ ಅಗಲವಾಗಿ ಬಾಗಿರುವ ಆಯುಧ) ಡಮರು, ತ್ರಿಶೂಲ, ಕಪಾಲ ಪಾತ್ರೆ ಇದೆ. ವೈಜಯಂತಿಯ ಹಾರವನ್ನು ಧರಿಸಿದೆ. ಎಡಭಾಗದಲ್ಲಿ ನಾಯಿ ಹಿಂಗಾಲುಗಳ ಮೇಲೆ ನಿಂತು ಮುಂಗಾಲನ್ನು ಭೈರವನ ಕೈಯಲ್ಲಿ ಬ್ರಹ್ಮ ಕಪಾಲದ ಮೇಲಿರಿಸಿದೆ. ಕೆಳ ಎಡಬಲಗಳಲ್ಲಿ ಎರಡು ಸರ್ಪಗಳು ಹೆಡೆಬಿಚ್ಚಿ ಕುಳಿತಿದ್ದು ಭೈರವನ ಕಡೆ ಮುಖ ಮಾಡಿವೆ. ಪ್ರಭಾವಳಿಯ ಲಲಾಟದಲ್ಲಿ ನಾಗತೋರಣದ ಮುಂಬಾಗ ಮುಖವಿದೆ. ಪ್ರಭಾವಳಿಯನ್ನು ಸ್ತಂಭಗಳ ಮೇಲೆ ನಿರ್ಮಿಸಿದ್ದು ಸ್ತಂಭಗಳು ರೇಖಾ ಚಿತ್ರದಲ್ಲಿವೆ. ಸ್ತಂಭಗಳ ಮೇಲೆ ಸ್ತಂಭ ರೇಖಾ, ಚಕ್ರ ಬೋದಿಗೆ ಮತ್ತು ಪುಷ್ಪ ಬೋದಿಗೆಗಳ ಮೇಲೆ ಸರ್ಪ ಪ್ರಭಾವಳಿ ಇವೆ. ವಿಶೇಷ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಪ್ರಭಾವಳಿಯಲ್ಲಿ ಸರ್ಪಗಳಿಂದಾವೃತವಾಗಿದ್ದು ಮೇಲೆ ಮಕರವಿದೆ. ಶಿಲ್ಪದಲ್ಲಿ ಭೈರವನ ಅಂಗ ಸೂಕ್ಷ್ಮ ಕೆತ್ತನೆ ಮಾಡಲಾಗಿದೆ. ವಿಶಾಲವಾದ ವಕ್ಷಸ್ಥಲ, ಬಲಯುತವಾದ ಭುಜ ತೋಳುಗಳು, ಚಿಕ್ಕದಾದ ಕಟಿಭಾಗ, ದೃಢವಾದ ತೊಡೆಗಳು, ಕಾಲುಗಳು, ಹಾಗೂ ಲಿಂಗ, ಜಾಗರೂಕತೆಯಿಂದ ನಿರ್ಮಿಸಿರುವನು. ಭೈರವ ಮೂರ್ತಿಯ ಮುಖದ ಭಾಗವು ಅಪೂರ್ಣವಾಗಿದೆ.

ಹೆಸರು	: ಭೈರವ
ಸಿಕ್ಕ ಸ್ಥಳ	: ದುರ್ಗದೇವಿಗುಡಿಗೆ ಹೋಗುವ ದಾರಿಯಲ್ಲಿ ಗುಂಡಿಯ ಮೇಲೆ ಆನೆಗೊಂದಿ ಪಶ್ಚಿಮಕ್ಕೆ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರ್ಯಾನೈಟ್ ಶಿಲೆ

ಉಲ್ಲೇಖ : ವಿಜಯನಗರ ಅಧ್ಯಯನ, ಸಂ-೬, ನಂ-೧

ಸಿಂಗೇಯ ನಾಯಕನ ಭಟರು (ಸೈನಿಕರು) ಪ್ರತಿಷ್ಠಾಪಿಸಿದ ಮಾಪುರದ ಭೈರವನೆಂದು ಇದರ ಬಳಿ ಇರುವ ಶಾಸನವು ಉಲ್ಲೇಖಿಸಿದೆ. ತ್ರಿಭಂಗದಲ್ಲಿ ನಿಂತಿರುವ ಈ ಭೈರವ ಮೂರ್ತಿ ಬೆತ್ತಲೆಯಾಗಿದ್ದು ಚತುರ್ಭುಜಗಳಿವೆ. ಖೇತಕ (ಅಗಲವಾದ ಬಾಗಿದ ಖಡ್ಗಾಯುಧ), ಡಮರು, ತ್ರಿಶೂಲ, ಕಪಾಲ ಪಾತ್ರೆ, ಮುಂಗೈಯಲ್ಲಿ ನೇತಾಡುತ್ತಿರುವ ಬ್ರಹ್ಮಕಪಾಲವಿದೆ. ತಲೆಯಲ್ಲಿನ ಕೇಶಗಳು ಹರಡಿದ್ದು, ಹಣೆಯ ಮೇಲೆ ಮಣಿಸರವನ್ನು ಕಟ್ಟಿದೆ. ತ್ರಿನೇತ್ರಧಾರಿ ಮೀಸೆಯೂ, ಕರ್ಣಾಭರಣಗಳು, ಕಂಠಾಭರಣಗಳು, ಹೃದಯಬಂಧ, ಗೆಜ್ಜೆಗಳಿರುವ ಕಟೀಹಾರವು ಕೈತೋಳು ಮತ್ತು ಮುಂಗೈಯಲ್ಲಿ ಕಡಗಾಭರಣಗಳು, ಮುಂಗಾಲುಗಳಲ್ಲಿ ಕಡಗಗಳು, ಪಾದರಕ್ಷೆಗಳು ಉದ್ದನೆಯ ರುಂಡಮಾಲೆಯನ್ನು ಧರಿಸಿರುವುದು ಮೂರ್ತಿಶಿಲ್ಪದ ವೈಶಿಷ್ಟ್ಯ. ಎಡಭಾಗದಲ್ಲಿ ನಾಯಿಯೂ ಹಿಂಗಾಲುಗಳ ಮೇಲೆ ನಿಂತು ಬ್ರಹ್ಮಕಪಾಲದ ಕುತ್ತಿಗೆಯನ್ನು ನಾಲಿಗೆಯಿಂದ ರಕ್ತ ಹೀರುವಂತಿದೆ. ಪ್ರಭಾವಳಿಯು ಎರಡು ಸ್ತಂಭಗಳ ತೋರಣಗಳಿಂದ ಅಲಂಕೃತಗೊಂಡಿವೆ.

ಹೆಸರು : ಭೈರವ ಮೂರ್ತಿ

ಸಿಕ್ಕ ಸ್ಥಳ : ಚಿಕ್ಕಬೆಟ್ಟದ ಬಂಡೆಯ ಮೇಲೆ, ತಳವಾರ ಘಟ್ಟದ ಪಶ್ಚಿಮಕ್ಕೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರ್ಯಾನೈಟ್ ಶಿಲೆ

ನಿಂತಿರುವ ಭೈರವ ಮೂರ್ತಿಗೆ ಅಷ್ಟಭುಜಗಳಿವೆ. ತಲೆಯಲ್ಲಿ ಕರಂಡ ಮುಕುಟವಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ತ್ರಿನೇತ್ರಧಾರಿ, ಮೇಲೇರಿದ ಮೀಸೆ ಮತ್ತು ಕೋರೆಹಲ್ಲು, ಮಕರ ಮತ್ತು ಸರ್ಪ ಕುಂಡಲಗಳು, ಕರ್ಣಾಭರಣಗಳು, ಕೊರಳಲ್ಲಿ ಕಂಠಾಭರಣ, ತೋಳ್ಬಂದಿಗಳು, ಕೈಕಡಗಗಳು, ಹೃದಯ ಬಂದ, ಗೆಜ್ಜೆಗಳಿರುವ ಕಟೀಹಾರ, ಕೈಗಳಲ್ಲಿ ಉದ್ದನೆಯ ನೀಳವಾದ ಖಡ್ಗ, ಬಾಗಿರುವ ಕಿರುಗತ್ತಿ, ಬಾಣ, ಡಮರು, ತ್ರಿಶೂಲ, ಧನಸ್ಸು, ಗುರಾಣಿ ಕಪಾಲ ಪಾತ್ರೆ ಹಿಡಿದಿದೆ. ಬ್ರಹ್ಮ ಕಪಾಲವನ್ನು ಮುಂಗೈಯಲ್ಲಿ ಹಿಡಿದಿರುವ ದೃಶ್ಯ, ಕಪಾಲದ ಕುತ್ತಿಗೆಯಿಂದ ಬಸರುವ ನೆತ್ತರವನ್ನು ನಾಯಿಯೊಂದು ಹೀರುತ್ತಿರುವಂತಿದೆ. ಸಣ್ಣದಾಗಿರುವ ಕಟೀ ಭಾಗ ಬಾಲವು ಬೆನ್ನಿನ ಮೇಲೆ ಸುರಳಿಯಾಗಿ ಸುತ್ತಿಕೊಂಡಿದೆ.

ಪೀಠದ ಮಧ್ಯದಲ್ಲಿ ವೃಶ್ಚಿಕ ಶಿಲ್ಪವಿದೆ. ಶಿಲ್ಪದ ಮೇಲೆ ಪ್ರಭಾವಳಿ ಇದ್ದು, ಪ್ರಭಾವಳಿಯ ಸ್ತಂಭಾಕೃತಿಗಳಲ್ಲಿ ಸರ್ಪಗಳೆರಡು ಸುತ್ತಿಕೊಂಡಿವೆ. ಪ್ರಭಾವಳಿಯು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳಿವೆ. ಭೈರವ ಮೂರ್ತಿಯ ಎಡಭಾಗದಲ್ಲಿ ನಾಲ್ಕು ಮತ್ತು ಬಲಭಾಗದಲ್ಲಿ ಒಂದು ಪಂಚಭೂತಗಳಿವೆ. ಸಹಚರರು ಕೆಳಭಾಗದಲ್ಲಿದ್ದಾರೆ. ಕೈಯಲ್ಲಿ ಆಯುಧಗಳಿವೆ.

ಬಲಭಾಗದಲ್ಲಿ ಕೈಯಲ್ಲಿ ಖಡ್ಗ ಮತ್ತು ಚಾಮರವನ್ನು ಹಿಡಿದಿದೆ. ಮುಖ ಭಾವ ರೌದ್ರರೂಪದಲ್ಲಿದೆ. ಈ ಎಲ್ಲಾ ಅಂಶಗಳನ್ನೊಳಗೊಂಡ ಭೈರವ ಮೂರ್ತಿ ಶಿಲ್ಪ ವೈಶಿಷ್ಟ್ಯಪೂರ್ಣವಾಗಿದೆ.

ಹೆಸರು : ಭೈರವ

ಸಿಕ್ಕ ಸ್ಥಳ : ಗ್ರಾಮದ ಬಸ್‌ನಿಲ್ದಾಣದ ಬಳಿ ದಕ್ಷಿಣಕ್ಕೆ, ಕಾಕುಬಾಳು, ಹೊಸಪೇಟೆ ತಾಲೂಕು. ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ತ್ರಿಭಂಗದಲ್ಲಿ ನಿಂತಿರುವ ಭೈರವ ಮೂರ್ತಿಗೆ ಚತುರ್ಭುಜಗಳಿವೆ. ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲ ಪಾತ್ರೆಯನ್ನು ಕೈಗಳಲ್ಲಿ ಹಿಡಿದಿದೆ. ಬ್ರಹ್ಮ ಕಪಾಲವನ್ನು ಹಿಡಿದಿದ್ದು. ಕಪಾಲವು ಕೆಳಗೆ ಜೋತು ಬಿದ್ದಂತಿದೆ. ನಾಯಿ ಹಿಂಗಾಲುಗಳ ಮೇಲೆ ನಿಂತು ಕಪಾಲದಿಂದ ರಕ್ತವನ್ನು ಹೀರುತ್ತಿರುವ ದೃಶ್ಯವಿದೆ. ಕರ್ಣಗಳಲ್ಲಿ ಸರ್ಪ ಮತ್ತು ಮಕರ ಕುಂಡಲಗಳಿವೆ. ಕಂಠಹಾರ, ಕಟೀಹಾರ ಹಾಗೂ ಉದ್ದನೆಯ ರುಂಡ ಮಾಲೆ, ಕೈತೋಳು, ಕಾಲುಗಳಲ್ಲಿ ಕಡಗಗಳು ಇವು ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆ. ಪಾದಗಳಲ್ಲಿ ಪಾದುಕೆಗಳಿವೆ. ಕೆಳ ಎಡಭಾಗದಲ್ಲಿ ಏಳು ಹೆಡೆಗಳ್ಳುಳ್ಳ ಸರ್ಪವಿದೆ. ಬಲಭಾಗದಲ್ಲಿ ಭೂತಗಣಗಳು ಕುಳಿತಿವೆ.

ಹೆಸರು : ಭೈರವಮೂರ್ತಿ

ಸಿಕ್ಕ ಸ್ಥಳ : ಭೈರವ ದೇವರ ಗರ್ಭಗೃಹದಲ್ಲಿ ಕಿನ್ನರೇಶ್ವರ ದೇವಾಲಯ, ಬುಕ್ಕಸಾಗರ. ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಕಿನ್ನರೇಶ್ವರ ದೇವಾಲಯದ ಉತ್ತರ ದಿಕ್ಕಿನಲ್ಲಿ ಗರ್ಭಗೃಹದಲ್ಲಿ ಭೈರವ ಮೂರ್ತಿ ಚತುರಾಶ್ರ ಪೀಠದಲ್ಲಿದೆ. ಮೂರ್ತಿಯು ತ್ರಿಭಂಗದಲ್ಲಿ ನಿಂತಿದ್ದು ಚತುರ್ಭುಜಗಳಿವೆ. ಖಡ್ಗ, ಡಮರು, ತ್ರಿಶೂಲ ಕಪಾಲಪಾತ್ರೆಗಳನ್ನು ಕೈಯಲ್ಲಿ ಹಿಡಿದಿದ್ದಾನೆ. ನಾಯಿಯು ಕಪಾಲದಿಂದ ಬೀಳುತ್ತಿರುವ ರಕ್ತ ಹೀರುವಂತಿದೆ. ಬಲಭಾಗದಲ್ಲಿ ಭೂತಗಣದ ಮೂರ್ತಿ ನಿಂತಿದೆ. ಭೈರವ ಮೂರ್ತಿ ರುಂಡಮಾಲೆಯನ್ನು ಧರಿಸಿದ್ದು, ಮೊಳಕಾಲಿನ ಮೇಲ್ಭಾಗದವರೆಗೂ ಇದೆ. ಸರ್ಪವೂ ಎರಡು ಕಾಲುಗಳನ್ನು ಸುತ್ತಿಕೊಂಡಿದೆ. ಕಾಲ್ಗಡಗಗಳು, ಕಟೀಹಾರವು, ಕಂಟಾಭರಣಗಳು, ಕೊರಳಲ್ಲಿ ಸರ್ಪವನ್ನು ಕಿವಿಗಳಲ್ಲಿ ಕರ್ಣಕುಂಡಲಗಳೂ ಇದ್ದು, ಹಣೆಯಲ್ಲಿ ತ್ರಿನೇತ್ರವಿದೆ. ಇವೆಲ್ಲವೂ ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು : ಭೈರವ

ಸಿಕ್ಕ ಸ್ಥಳ : ಸಂಪಿಗೆ ಸಿದ್ದೇಶ್ವರ ದೇವಾಲಯದ ನವರಂಗದಲ್ಲಿ, ಚಿತ್ರದುರ್ಗ ತಾಲೂಕು, ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : MAR, 1929, P. 28

ದ್ವಿಭಂಗದಲ್ಲಿ ನಿಂತಿರುವ ಭೈರವ ಮೂರ್ತಿ ಶಿಲ್ಪಕ್ಕೆ ಚತುರ್ಭುಜಗಳಿವೆ. ತ್ರಿಶೂಲ, ಡಮರು, ಖಡ್ಗ ಮತ್ತು ಕಪಾಲಗಳನ್ನು ಕೈಗಳಲ್ಲಿ ಹಿಡಿದಿದ್ದಾನೆ. ಎಡಭಾಗದಲ್ಲಿ ನಾಯಿ, ಬಲಭಾಗದಲ್ಲಿ ಭೂತಗಣವಿದೆ. ಭೈರವನ ಹಿಂಭಾಗದಲ್ಲಿ ಪ್ರಭಾವಳಿ ಇದೆ. ಇರುವುದು, ಪ್ರಭಾವಳಿಯ ಲಲಾಟದಲ್ಲಿ ಮಕರ ಶಿಲ್ಪವಿದೆ. ಪ್ರಭಾವಳಿಯಲ್ಲಿ ಸರ್ಪಜಾಲವಿದೆ. ತಲೆಯಲ್ಲಿ ಚಿಕ್ಕದಾದ ಶಿವಲಿಂಗವಿದೆ.

ಈ ಶಿಲ್ಪವು ಗಂಭೀರ ಮುಖಭಾವವನ್ನು ಹೊಂದಿದೆ. ಈ ಮಾದರಿಯ ಶಿಲ್ಪಗಳು ಹಂಪೆ ಪರಿಸರದ ಹಾಗೂ ಆನೆಗೊಂದಿಯಲ್ಲಿಯೂ ಕಾಣಬಹುದು. ಆನೆಗೊಂದಿಯ ಸಿದ್ದನಾಥನ ಗುಹೆಯ ಮುಂದಿರುವ ಶಿಲ್ಪ ಮತ್ತು ಅಚ್ಯುತರಾಯ ತೇರು ಬೀದಿಯಲ್ಲಿರುವ ಶಿಲ್ಪಗಳಂತಿವೆ.

ಹೆಸರು : ಭೈರವ

ಸಿಕ್ಕ ಸ್ಥಳ : ಗವಿರಂಗನಾಥ ದೇವಾಲಯದ ಬಳಿ, ರಸ್ತೆಯ ಉತ್ತರ ದಿಕ್ಕಿನ ಬಂಡೆಯ ಮೇಲೆ, ಆನೆಗೊಂದಿ ಪಶ್ಚಿಮಕ್ಕೆ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ದ್ವಿಭಂಗದಲ್ಲಿ ನಿಂತಿರುವ ಭೈರವನು ಬೆತ್ತಲೆಯಾಗಿದ್ದಾನೆ. ಚತುರ್ಭುಜಗಳಿದ್ದು, ಖಡ್ಗ, ಡಮರು, ತ್ರಿಶೂಲ, ಮತ್ತು ಕಪಾಲಗಳನ್ನು ಕೈಗಳಲ್ಲಿ ಹಿಡಿದಿದ್ದಾನೆ. ತಲೆಯ ಕೂದಲು ಹಿಂಭಾಗಕ್ಕೆ ಹರಡಿದೆ. ಹಣೆಯಲ್ಲಿ ತ್ರಿನೇತ್ರವಿದೆ. ಕರ್ಣಗಳಲ್ಲಿ ಮಕರ ಹಾಗೂ ಸರ್ಪಕುಂಡಲಗಳಿವೆ. ಕೊರಳಲ್ಲಿ ಸರಗಳಿವೆ. ಚಿಕ್ಕ ಗೆಜ್ಜೆಗಳಂತಿರುವ ಕಟಿ ಬಂಧವಿದೆ. ದೊಡ್ಡದಾದ ರುಂಡಮಾಲೆಯನ್ನು ಧರಿಸಲಾಗಿದೆ. ಮಾಲೆಯಲ್ಲಿ ರುಂಡಗಳ ಶಿಲ್ಪಗಳಿವೆ. ಮುಂಗಾಲುಗಳಲ್ಲಿ ಕಡಗ ಆಭರಣಗಳಿವೆ. ಕೆಳಬಲಭಾಗದಲ್ಲಿ ಸರ್ಪವಿದೆ. ಎಡಬದಿಯಲ್ಲಿ ನಾಯಿಯೊಂದು ತನ್ನ ಹಿಂದಿನ ಕಾಲುಗಳ ಮೇಲೆ ನಿಂತು ಭೈರವನ ಎಡಗೈಯಲ್ಲಿನ ಕಪಾಲದಿಂದ ಬರುವ ರಕ್ತವನ್ನು ಹೀರುತ್ತಿರುವ ದೃಶ್ಯ ಸುಂದರ. ಭೈರವನ ಶಿಲ್ಪಗಳು, ವಿಜಯನಗರ ಕಾಲದ ಪೂರ್ವದಲ್ಲಿ ಹಂಪೆಯ ಪರಿಸರದಲ್ಲಿ ಹೆಚ್ಚಾಗಿದೆ.

ಹೆಸರು : ಭೈರವ

ಸಿಕ್ಕ ಸ್ಥಳ : ಕುಮಾರ ರಾಮನ ಗುಡ್ಡದ ದಕ್ಷಿಣ ದಿಕ್ಕಿನ ಕಣಿವೆಯಲ್ಲಿ ಕುಮ್ಮಟದುರ್ಗ, ಕೊಪ್ಪಳ ತಾಲೂಕು, ಕೊಪ್ಪಳ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : VPR, 1987-88, P. 210

ಭೈರವ ಶಿಲ್ಪದ ಮೇಲಿನ ಭಾಗ ಭಗ್ನವಾಗಿದೆ. ಅಷ್ಟಾಶ್ರಪೀಠದ ಮೇಲೆ ದ್ವಿಭಂಗದೋಪಾದಿಯಲ್ಲಿ ಭೈರವನ ಪಾದಗಳಿವೆ. ಪೀಠದ ಮಧ್ಯಭಾಗದಲ್ಲಿ ವೃಶ್ಚಿಕ (ಚೇಳು) ಚಿತ್ರ, ಶಿಲ್ಪದ ಎರಡೂ ಬದಿಯಲ್ಲಿ ಸ್ತ್ರೀ ಮತ್ತು ಪುರುಷರ ಸಹಚರರು ಬಲಬದಿಯಲ್ಲಿ ಮೂರು ಶಿಲ್ಪಗಳು ಎಡಬದಿಯಲ್ಲಿ ಎರಡು ಶಿಲ್ಪಗಳಿವೆ.

ಹೆಸರು : ನಂದಿ

ಸಿಕ್ಕ ಸ್ಥಳ : ಅಂತರಾಳದಲ್ಲಿ ಕಿನ್ನರೇಶ್ವರ ದೇವಾಲಯ ಬುಕ್ಕಸಾಗರ ಹೊಸಪೇಟೆಯ ತಾಲೂಕು. ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಅಂತರಾಳದಲ್ಲಿ ನಂದಿ ಶಿಲ್ಪವಿದೆ. ಗ್ರಾನೈಟ್ ಶಿಲೆಯಲ್ಲಿ ನಿರ್ಮಿಸಿದ್ದು, ಗಂಟೆಮತ್ತು ಗೆಜ್ಜೆಯ ಸರಗಳಿಂದ ಅಲಂಕೃತ ವಾಗಿದೆ.

ಹೆಸರು : ನಂದಿ

ಸಿಕ್ಕ ಸ್ಥಳ : ಚೆನ್ನಬಸವೇಶ್ವರ ಗುಹಾಲಯದ ಗರ್ಭಗೃಹದಲ್ಲಿ ನಾಗೇನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ನಂದಿ ಸಾಲಂಕೃತಗೊಂಡಿದೆ. ಕೊರಳಲ್ಲಿ ಗಂಟೆ, ಗೆಜ್ಜೆಯ ಸರಗಳನ್ನು, ಸರಪಳಿಯ ಹಾರಕ್ಕೆ ಗಂಟೆಯನ್ನು ಕಟ್ಟಲಾಗಿದೆ. ನಂದಿ ತನ್ನ ಬಲಗಾಲನ್ನು ಮುಂದಿಟ್ಟಿದೆ. ಪ್ರಸ್ತುತ ನಂದಿ ಅಷ್ಟಾಶ್ರಪೀಠದ ಮೇಲೆ ಸ್ಥಾಪಿತವಾಗಿದೆ.

ಹೆಸರು : ನಂದಿ

ಸಿಕ್ಕ ಸ್ಥಳ : ದೇವಾಲಯದ ನವರಂಗದಲ್ಲಿ, ಸಂಪಿಗೆ ಸಿದ್ಧೇಶ್ವರ ದೇವಾಲಯ. ಚಿತ್ರದುರ್ಗ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : MAR, 1929, P. 18

ದೇವಾಲಯದ ನವರಂಗದಲ್ಲಿರುವ ಮಲಗಿರುವ ಈ ನಂದಿ ಗರ್ಭಗೃಹದಲ್ಲಿರುವ ಶಿವಲಿಂಗದ ಎದುರಿನಲ್ಲಿದೆ. ನಂದಿಯ ಶಿಲ್ಪವನ್ನು ಆಭರಣ ಭೂಷಿತವಾಗಿ ನಿರ್ಮಿಸಲಾಗಿದೆ. ದೊಡ್ಡದಾದ ಗಂಟಿನ ಹಾರವೊಂದು ನಂದಿಯ ಎದೆಯ ಭಾಗದಿಂದ ಭುಜದ ಹಿಂಭಾಗದವರೆಗೂ ಇದೆ. ಕೊರಳಲ್ಲಿ ಸರಪಳಿ, ಗೆಜ್ಜೆಯ ಹಾರಗಳು ಇವೆ. ಎಡಗಾಲು ಮುಂದೆ ಇಡಲ್ಪಟ್ಟಿದೆ.

ಹೆಸರು : ನಂದಿ ಶಿಲ್ಪದ ದ್ವಾರ ಮತ್ತು ಬಾವಿ ಲಿಂಗ.

ಸಿಕ್ಕ ಸ್ಥಳ : ಬುಕ್ಕಸಾಗರ-ವೆಂಕಟಾಪುರ ರಸ್ತೆಯ ದಕ್ಷಿಣ ದಿಕ್ಕಿನಲ್ಲಿ ಬಾವಿಯ ಮುಂದೆ, ಬುಕ್ಕಸಾಗರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ನಂದಿ ಶಿಲ್ಪದ ದ್ವಾರ ಸುಮಾರು ೧೨ ಅಡಿ ಎತ್ತರವಿದೆ. ಎರಡು ಕಂಬಗಳು ಅದರ ಮೇಲೆ ತೊಲೆ, ಮೇಲೆ ಎರಡು ನಂದಿ ಶಿಲ್ಪಗಳಿವೆ. ನಂದಿ ಶಿಲ್ಪಗಳು ಮೇಲಿರುವ ಭಂಗಿಯಲ್ಲಿವೆ. ಈ ದ್ವಾರವು ಹಿಂದೆ ಇರುವ ದೊಡ್ಡ ಬಾವಿಗೆ ಪ್ರವೇಶವಾಗಿದೆ. ನಂದಿ ದ್ವಾರದಿಂದಲೇ ಬಾವಿಯಲ್ಲಿ ಇಳಿಯಲು ಸೋಪಾನ ಮೆಟ್ಟಿಲುಗಳಿವೆ. ಈ ಬಾವಿಯು ಅಷ್ಟಕೋನಗಳಾಕಾರದಲ್ಲಿದೆ. ಶಿವಲಿಂಗದ ಪೀಠ ಚತುರಾಶ್ರ ಆಕಾರದಲ್ಲಿದೆ. ಬಾವಿ ಮಾತ್ರ ಚತುರಾಶ್ರವಾಗಿದ್ದು, ಮುಂದಿನ ಸೋಪಾನಗಳ ಭಾಗ ಷಷ್ಠ ಕೋನಾಕೃತಿಯಲ್ಲಿದೆ. ಬಾವಿಯ ಮೇಲೆ ಸುತ್ತಲೂ ಕಕ್ಷಾಸನವಿದೆ.

ನಂದಿ ಸ್ತಂಭಗಳು ಚತುರಾಶ್ರ ಕೋನಗಳಲ್ಲಿವೆ. ಮೇಲ್ಭಾಗ ಪುಷ್ಪದ ಆಕಾರದಲ್ಲಿದೆ. ಸ್ತಂಭಗಳ ಮೇಲೆ ಅಡ್ಡತೊಲೆ, ತೊಲೆಯ ಮೇಲೆ ಮಲಗಿರುವ ನಂದಿ ಶಿಲ್ಪಗಳಿವೆ. ಬಾವಿಯ ಮುಂಭಾಗದಲ್ಲಿರುವ ಬಿಲ್ವ ಮರದ ಕೆಳಗೆ ಶಿವಲಿಂಗವಿದೆ. ಶಿವಲಿಂಗವು ವೃತ್ತಪೀಠದ ಮೇಲೆ ಸ್ಥಾಪಿತವಾಗಿದೆ. ಬಾವಿ ಪಶ್ಚಿಮಾಭಿಮುಖವಾಗಿರುವುದರಿಂದ ಇದರ ಎದುರಿನಲ್ಲಿ ಮೂಲತಃ ಶಿವಾಲಯವಿದ್ದು, ಶಿವಾಲಯ ಶಿಥಿಲವಾದ ನಂತರ ಪ್ರಸ್ತುತಃ ಶಿವಲಿಂಗ ಮರದ ಕೆಳಗೆ ಇದೆ.

ಗಾಣಪತ್ಯ ಮೂರ್ತಿ ಶಿಲ್ಪಗಳು

ಕುಮ್ಮಟ ನಾಯಕರ ಕಾಲದಲ್ಲಿ ಗಾಣಪತ್ಯ ಶಿಲ್ಪಗಳು ಶಿವಾಲಯಗಳಲ್ಲಿ, ಕೋಟೆಯ ದ್ವಾರಗಳಲ್ಲಿ, ಗುಹಾಲಯಗಳಲ್ಲಿ ಇವೆ ಹಾಗೂ ಬಯಲು ಬಂಡೆಗಳ ಮೇಲೂ ನಿರ್ಮಿಸಿರುವುದನ್ನು ಕಾಣಬಹುದು. ಉದಾ: ಆನೆಗೊಂದಿಯ ಅಂಬಿಗರ ದ್ವಾರದಲ್ಲಿರುವ ಗಣೇಶ ದೇವಾಲಯ ಪ್ರತ್ಯೇಕ ದೇವಾಲಯವಾಗಿದೆ. ಹಾಗೂ ಹಂಪೆಯ ಪರಿಸರದ ಹಾಗೂ ರಾಮಚಂದ್ರ

ದೇವಾಲಯವು, ಬೀದಿಯಲ್ಲಿರುವ ಗಣೇಶದೇವಾಲಯ, ಲಿಂಗನಾಯಕನ ಹಳ್ಳಿಯಲ್ಲಿರುವ ಶಿವಾಲಯದಲ್ಲಿರುವ ಗಣೇಶ ಶಿಲ್ಪ, ಬುಕ್ಕಸಾಗರದ ಕಿನ್ನರೇಶ್ವರ ದೇವಾಲಯದ ಗಣೇಶ ಶಿಲ್ಪ, ಸಂಗಾಪುರದಲ್ಲಿರುವ ಮಂಜುನಾಥ ಗುಹೆಯ ಹೊರ ಭಾಗದ ಗುಂಡಿನ ಮೇಲಿರುವ ಗಣೇಶ ಶಿಲ್ಪವು ಎಲ್ಲಾ ಶಿಲ್ಪಗಳಿಗಿಂತ ಭಿನ್ನವಾಗಿದೆ. ಆನೆಗೊಂದಿ ಆನಂದ ಸಿದ್ಧ ದೇವನ ಗುಹೆಯ ದ್ವಾರದ ಬಂಡೆಯ ಮೇಲಿರುವ ರೇಖಾಚಿತ್ರಗಳಲ್ಲಿ ನಿರ್ಮಿಸಲಾದ ಗಣೇಶ ಶಿಲ್ಪ, ದೊರವಿ ಕೆರೆಯ ಏರಿಯ ಮೇಲಿರುವ ಶಿಲ್ಪಗಳು ಇವೆ. ಶಿವ ಶಕ್ತಿಯಂತೆ (ವಿನಾಯಕ) ಗಣೇಶನನ್ನೂ ಆರಾಧಿಸುವ ಪದ್ಧತಿ ಇವರ ಕಾಲದಲ್ಲಿ ಇತ್ತೆಂಬುದನ್ನು ಪುಷ್ಟೀಕರಿಸುತ್ತವೆ. ಸಾಮಾನ್ಯವಾಗಿ ದಂತ, ಅಂಕುಶ, ಪಾಶ, ಮೊದಕವನ್ನೂ ಕೈಗಳಲ್ಲಿ ಹಿಡಿದಿವೆ. ಆನೆಗೊಂದಿ ಹಾಗೂ ಬುಕ್ಕಸಾಗರ ಕಿನ್ನರೇಶ್ವರ ದೇವಾಲಯಗಳಲ್ಲಿರುವ ಗಣೇಶ ಶಿಲ್ಪಗಳಿಗೆ ಮಂಟಪಾಕೃತಿ ಇದ್ದು ಪ್ರಭಾವಳಿ ಅಲಂಕೃತವಾಗಿದೆ.

ಹೆಸರು	: ಗಣೇಶ
ಸಿಕ್ಕ ಸ್ಥಳ	: ಅಂಬಿಗರ ಬಾಗಿಲ ಬಳಿ ಇರುವ ಗಣೇಶ ದೇವಾಲಯದ ಗರ್ಭಗೃಹ. ಆನೆಗೊಂದಿ. ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಬಂಡೆಯ ಮೇಲೆ ನಿರ್ಮಿಸಲಾಗಿರುವ ಈ ಗಣೇಶನ ಶಿಲ್ಪ ಲಲಿತಾಸನದಲ್ಲಿದೆ. ಚತುರ್ಭುಜಗಳಿದ್ದು ಕೈಗಳಲ್ಲಿ ದಂತ, ಪರಶು, (ಚಂದ್ರಾಯುಧ) ಪಾಶ ಹಾಗೂ ಮೋದಕಗಳಿವೆ. ಅಗಲವಾದ ಕರ್ಣಗಳಿವೆ. ತಲೆಯಲ್ಲಿ ಕರಂಡ ಮುಕುಟವಿದೆ. ಯಜ್ಞೋಪವೀತ ಧರಿಸಿದ್ದಾನೆ. ಉದರಕ್ಕೆ ಸರ್ಪವನ್ನು ಸುತ್ತಲಾಗಿದೆ. ಸೊಂಡಿಲು ಕೈಯಲ್ಲಿರುವ ಮೋದಕವನ್ನು ಮುಟ್ಟಿದೆ. ಗಣೇಶನ ಪ್ರಭಾವಳಿಯಲ್ಲಿ ಎರಡು ಸ್ತಂಭದ ಅಲಂಕಾರತೆ ಇದೆ.

ಹೆಸರು	: ಗಣೇಶ
ಸಿಕ್ಕ ಸ್ಥಳ	: ಗ್ರಾಮದ ಉತ್ತರಕ್ಕಿರುವ ಗುಹಾಲಯದಲ್ಲಿ ನಾಗೇನಹಳ್ಳಿ, ಹೊಸಪೇಟೆ ತಾಲೂಕು. ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಲಲಿತಾಸನದಲ್ಲಿ ಕುಳಿತಿರುವ ಗಣೇಶನಿಗೆ ಚತುರ್ಭುಜಗಳಿವೆ. ಅಭಯ ಹಸ್ತ, ಅಂಕುಶ, ಪಾಶ ಮತ್ತು ಮೋದಕಗಳು ಕೈಗಳಲ್ಲಿವೆ. ಶಿರದಲ್ಲಿ ಕರಂಡ ಮುಕುಟವಿದೆ. ಕರ್ಣಗಳು ಅಗಲವಾಗಿವೆ. ಸೊಂಡಿಲಿನ ತುದಿಯು ಎಡಗೈಯಲ್ಲಿನ ಮೋದಕವನ್ನು ಹಿಡಿದಿದೆ. ಕಂಠಾಭರಣಗಳಿವೆ. ಉದರದ ಮೇಲೆ ಸರ್ಪವನ್ನು ಸುತ್ತಲಾಗಿದೆ. ಕೈಗೆ ಬಳೆ, ಕಾಲಿಗೆ ಕಡಗಾಭರಣಗಳಿವೆ. ಪೀಠದಲ್ಲಿ ಮೂಷಿಕ ಶಿಲ್ಪವಿದೆ. ಮೂಷಿಕ ಗಣೇಶನ ವಾಹನ. ಇವು ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು : ಗಣೇಶ

ಸಿಕ್ಕ ಸ್ಥಳ : ಈಶ್ವರ ದೇವಾಲಯದಲ್ಲಿನ ದಕ್ಷಿಣ ಭಾಗದ ಮಂಟಪದಲ್ಲಿ ಈಶ್ವರ ದೇವಾಲಯ, ಸಿಂಗೆನಾಯಕನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಗಣೇಶ ಶಿಲ್ಪ ಲಲಿತಾಸನದಲ್ಲಿ ಕುಳಿತಿದೆ. ಚತುರ್ಭುಜಗಳಿದ್ದು, ಕೈಗಳಲ್ಲಿ ಪಾಶ ಅಂಕುಶ, ಮೋದಕ ಮತ್ತು ದಂತಗಳಿವೆ. ತಲೆಯ ಮೇಲೆ ಕರಂಡ ಮುಕುಟವಿದೆ. ಯಜ್ಞೋಪವೀತಧಾರಣೆ ಮತ್ತು ಉದರ ಬಂಧವಾಗಿ ಸರ್ಪವನ್ನು ಸುತ್ತಿಕೊಂಡಿರುವುದು. ಇವು ಈ ಮೂರ್ತಿ ಶಿಲ್ಪದ ಲಕ್ಷಣಗಳಾಗಿವೆ.

ಹೆಸರು : ಗಣೇಶ ಶಿಲ್ಪ

ಸಿಕ್ಕ ಸ್ಥಳ : ದೇವಾಲಯದ ದಕ್ಷಿಣ ಭಾಗದಲ್ಲಿನ ಬಂಡೆಯ ಮೇಲೆ ಕಿನ್ನರೇಶ್ವರ ದೇವಾಲಯ, ಬುಕ್ಕಸಾಗರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಗಣೇಶನ ಶಿಲ್ಪವನ್ನು ದೇವಾಲಯದ ದಕ್ಷಿಣ ದಿಕ್ಕಿನ ಹೊರಭಾಗದ ಬಯಲಿನಲ್ಲಿ ಬಂಡೆಯ ಮೇಲೆ ಇಡಲಾಗಿದೆ. ಗಣೇಶನಿಗೆ ಚತುರ್ಭುಜಗಳಿವೆ. ಕೈಗಳಲ್ಲಿ ಪಾಶ ಅಂಕುಶ, ದಂತ ಮತ್ತು ಮೋದಕವನ್ನು ಕೈಯಲ್ಲಿ ಹೊಂದಿದ್ದಾನೆ. ಪಂಪಮಹಾತ್ಮೆಯಲ್ಲಿ ಪ್ರಸನ್ನ ಗಣೇಶ ಮೂರ್ತಿ ಎಂದು ವರ್ಣಿಸಲಾಗಿದೆ. ಕಿರೀಟ, ಮಕುಟ, ಕೈಬಳೆ, ಕಾಲ್ಗಡಗ, ಕಂಠಹಾರ, ಯಜ್ಞೋಪವೀತ, ಹಾವನ್ನು ಹೊಟ್ಟೆಗೆ ಸುತ್ತಿರುವುದು ಇವು ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ. ಗಣೇಶನ ಪೀಠದ ಮಧ್ಯಭಾಗ ಮೂಷಿಕವಿದೆ.

ಹೆಸರು : ಗಣೇಶ

ಸಿಕ್ಕ ಸ್ಥಳ : ಗರ್ಭಗೃಹದ ಮೂಲೆಯಲ್ಲಿ ಕಿನ್ನರೇಶ್ವರ ದೇವಾಲಯ, ಬುಕ್ಕಸಾಗರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಗರ್ಭಗೃಹದಲ್ಲಿ ಶಿವಲಿಂಗದ ಹಿಂಭಾಗದಲ್ಲಿ ಗಣೇಶನ ಮೂರ್ತಿ ಶಿಲ್ಪ ಕುಳಿತ ಭಂಗಿಯಲ್ಲಿದ್ದು, ಚತುರ್ಭುಜಗಳಿವೆ. ಬಲಗೈಯಲ್ಲಿ ದಂತ, ಅಂಕುಶ, ಎಡಗೈಯಲ್ಲಿ ಪಾಶ ಮತ್ತು ಮೋದಕಗಳನ್ನು ಹೊಂದಿದ್ದು, ತಲೆಯ ಮೇಲೆ ಕರಂಡ ಮಕುಟ, ಹಾರ, ಯಜ್ಞೋಪವೀತ ಕೈಬಳೆ, ಕಾಲ್ಗಡಗಗಳು ಇವು ಈ ಮೂರ್ತಿ ಶಿಲ್ಪದ ಲಕ್ಷಣಗಳಾಗಿವೆ.

ಹೆಸರು : ಗಣೇಶ

ಸಿಕ್ಕ ಸ್ಥಳ : ಗಣೇಶ ದೇವಾಲಯದ ಗರ್ಭಗೃಹದಲ್ಲಿ ಗಣೇಶ ದೇವಾಲಯ, ಹಜಾರ ರಾಮಚಂದ್ರ ಬೀದಿ, ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೫-೧೬ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಗರ್ಭಗೃಹದಲ್ಲಿ ಚತುರಾಶ್ರಪೀಠದ ಮೇಲಿರುವ ಗಣೇಶನ ಮೂರ್ತಿಶಿಲ್ಪ ಲಲಿತಾಸನದಲ್ಲಿದೆ. ನಾಲ್ಕು ಕೈಗಳಿದ್ದು ಪಾಶ, ಅಂಕುಶ, ದಂತ ಮತ್ತು ಮೋದಕಗಳಿವೆ. ಶಿಲ್ಪದ ಮೇಲ್ಭಾಗವು ಶಿಥಿಲವಾಗಿದೆ. ಆದರೂ ಸೌಮ್ಯ ಮುಖ ಭಾವ ಈ ಶಿಲ್ಪದ ವೈಶಿಷ್ಟ್ಯತೆ.

ಹೆಸರು : ಗಣೇಶ

ಸಿಕ್ಕ ಸ್ಥಳ : ಗಣ್ಯವ್ಯಕ್ತಿಗಳ ಅರಮನೆ ಆವರಣದ ಪಶ್ಚಿಮ ಭಾಗದಲ್ಲಿ, ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ.೧೫-೧೬ನೇ ಶತಮಾನ.

ಶಿಲಾವಸ್ತು : ಗ್ರಾನೈಟ್ ಶಿಲೆ

ಚತುರಾಶ್ರಪೀಠದ ಮೇಲೆ ಕುಳಿತಿರುವ ಗಣೇಶ ಶಿಲ್ಪಕ್ಕೆ ಚತುರ್ಭುಜಗಳಿವೆ. ಕೈಗಳಲ್ಲಿ ದಂತ ಅಂಕುಶ, ಪಾಶ ಹಾಗೂ ಮೋದಕಗಳಿವೆ. ಶಿರದಲ್ಲಿ ಕರಂಡ ಮುಕುಟವಿದೆ. ಅಗಲವಾದ ಕಿವಿಗಳಿವೆ. ಯಜ್ಞೋಪವೀತವಿದ್ದು ಸರ್ಪ ಉದರ ಬಂಧವಾಗಿದೆ. ಉದರದ ಮುಂದಿನ ಭಾಗ ಸ್ವಲ್ಪ ಶಿಥಿಲವಾಗಿದೆ. ಕೈಬಳೆ, ಕಡಗಾಭರಣಗಳನ್ನು ಧರಿಸಿದೆ. ಪೀಠದ ಮಧ್ಯ ಭಾಗದಲ್ಲಿ ಮೂಷಿಕವಾಹನವಿದೆ.

ಹೆಸರು : ಗಣೇಶ

ಸಿಕ್ಕಸ್ಥಳ : ಕುಮ್ಮಟದುರ್ಗ (ಮುಕ್ಕುಂಪೆ ಶಾಲೆಯ ಆವರಣ) ಕೊಪ್ಪಳ ತಾಲೂಕು ಮತ್ತು ಜಿಲ್ಲೆ

ಕಾಲ : ಕ್ರಿ.ಶ. ೧೫-೧೬ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಲಲಿತಾಸನದಲ್ಲಿ ಕುಳಿತಿರುವ ಗಣೇಶನ ವಿಗ್ರಹ ಭಗ್ನವಾಗಿದೆ. ಕೈಗಳಲ್ಲಿ ದಂತ, ಅಂಕುಶ, ಪಾಶ ಮತ್ತು ಮೋದಕವಿದೆ. ಸೊಂಡಿಲು ಕೈಯಲ್ಲಿರುವ ಮೋದಕವನ್ನು ಸ್ಪರ್ಶಿಸಿದೆ. ತಲೆಯ ಮೇಲೆ ಕರಂಡಮುಕುಟವಿದೆ. ಮುಂಗೈಗೆ ಬಳೆ ಹಾಗೂ ಕಾಲುಗಳಲ್ಲಿ ಕಡಗಗಳನ್ನು ಧರಿಸಿದೆ. ಉದರಬಂಧವಿದೆ. ಭಗ್ನಗೊಂಡಿರುವ ಶಿಲ್ಪವನ್ನು ಪುನಃ ಜೋಡಿಸಿಡಲಾಗಿದೆ.

ಸ್ಕಂದ ಪಂಥ

ಹೆಸರು	: ಸ್ಕಂದ
ಸಿಕ್ಕಸ್ಥಳ	: ಚನ್ನಬಸವೇಶ್ವರ ಗುಹೆಯ ಗರ್ಭಗೃಹದಲ್ಲಿ, ನಾಗೇನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ

ಆರು ಮುಖಗಳಿರುವ ಸ್ಕಂದ ಮೂರ್ತಿ ನವಿಲಿನ ಮೇಲೆ ಲಲಿತಾಸನದಲ್ಲಿದೆ. ಮಯೂರವೇ ಪೀಠೋದೋಪಾದಿಯಲ್ಲಿದೆ. ಷಣ್ಮುಖನ ತಲೆಯ ಮೇಲೆ ಪದ್ಮ ಮುಕುಟವಿದೆ. ಆರು ಮುಖಗಳಿರುವಂತೆ ಹನ್ನೆರಡು ಕೈಗಳಿವೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಎರಡನೇ ಕೈಗಳಲ್ಲಿ ತ್ರಿಶೂರ ಡಮರು ಹಾಗೂ ಉಳಿದ ಎಂಟು ಕೈಗಳಲ್ಲಿ ಆಯುಧಗಳ ಸ್ಪಷ್ಟತೆ ಇಲ್ಲ. ಕಿರೀಟ ಮತ್ತು ಕಂಠಹಾರ ಧರಿಸಿದ್ದಾನೆ. ಕಾಲುಗಳಲ್ಲಿ ಕಡಗಾಭರಣವಿದೆ. ಬಲ ಹಸ್ತ ಅಭಯ ಮತ್ತು ಎಡ ಹಸ್ತ ವರದ ಮುದ್ರೆಗಳಲ್ಲಿವೆ. ನವಿಲಿನ ಗರಿಗಳು ಸಹ ಸ್ಪಷ್ಟವಾಗಿವೆ. ಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿ ಸರಳವಾಗಿದೆ.

ಶಕ್ತಿ ಪಂಥ

ಶಕ್ತಿ ದೇವತೆ ಶಿಲ್ಪಗಳಿಗೆ ಸಂಬಂಧಿಸಿದಂತೆ ಶಿವನನ್ನು ಆರಾಧಿಸಿದ ರೀತಿಯಲ್ಲಿ ಶಕ್ತಿ ಪೂಜೆಯೂ ವಿಶೇಷವಾಗಿತ್ತು. ಕಾಳಿ, ಮಹಿಷ ಮರ್ದಿನಿ, ಭುವನೇಶ್ವರಿ ಹಾಗೂ ತಾಯಮ್ಮನ ಶಿಲ್ಪಗಳು ಇವರ ಕಾಲದಲ್ಲಿ ಪ್ರಮುಖವಾಗಿ ಕಂಡುಬರುವ ಶಕ್ತಿ ದೇವತೆಗಳು. ಕುಮ್ಮಟದುರ್ಗ ಆನೆಗೊಂದಿ, ಹಂಪೆಯ ಪರಿಸರ, ಹೊಸಮಲೆದುರ್ಗ, ದೂರವಡಿ, ಜಟಂಗಿ ರಾಮೇಶ್ವರ, ಚಿತ್ರದುರ್ಗ, ಕಂಪಲಿಗಳಲ್ಲಿ ಇಂತಹ ಮೂರ್ತಿ ಶಿಲ್ಪಗಳಿವೆ. ಕುಮ್ಮಟದುರ್ಗದಲ್ಲಿ ಕಾಳಿ ಶಿಲ್ಪವಿದೆ. ಅರ್ಧಗೋಲಾಕಾರದ ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತು, ಖಡ್ಗ ಮತ್ತು ಕಪಾಲಪಾತ್ರೆ ಕೈಗಳಲ್ಲಿ ಹಿಡಿದಿವೆ. ಕರಂಡ ಮುಕುಟಧರಿಸಿದ್ದಾಳೆ. ಬುಕ್ಕಸಾಗರದಲ್ಲಿರುವ ಪಂಪಾದೇವಿ, ಭುವನೇಶ್ವರಿ ಶಿಲ್ಪಗಳು, ಚಿತ್ರದುರ್ಗದಲ್ಲಿರುವ ಭದ್ರಕಾಳಿ ಶಿಲ್ಪಗಳು ಸರಳವಾಗಿದ್ದರೂ ಮುಖಭಾವ ಭಂಗಿಯಲ್ಲಿ ಪ್ರಾಸಬದ್ಧವಾಗಿವೆ. ಬುಕ್ಕಸಾಗರ ಕಿನ್ನಾರೇಶ್ವರ ದೇವಾಲಯದಲ್ಲಿರುವ ಪಂಪಾದೇವಿಯ ಶಿಲ್ಪವು ಉತ್ತಮವಾಗಿ, ಸಿಂಹಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದ್ದು, ದೇವಿಯ ಕೈಗಳಲ್ಲಿ, ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲಪಾತ್ರೆಗಳಿವೆ. ದೇವಿಗೆ ಕರಂಡ ಮಕುಟವಿದೆ. ಮುಖದಲ್ಲಿ ಗಂಭೀರ ಭಾವವಿದೆ. ವಿಶಾಲವಾದ ವಕ್ಷಸ್ಥಲ, ಕುಚದ್ವಯಗಳು, ಸಿಂಹಕಟಿ ಇವುಗಳ ಮೂರ್ತಿ ಶಿಲ್ಪದ ಮುಖ್ಯ ಲಕ್ಷಣಗಳಾಗಿವೆ. ಚಿತ್ರದುರ್ಗದಲ್ಲಿರುವ ಭದ್ರಕಾಳಿ ಶಿಲ್ಪ ತ್ರಿಭಂಗಿಯಲ್ಲಿದೆ. ತ್ರಿಶೂಲ ಡಮರು, ಕಳಶ ಹಾಗೂ ಅಭಯ ಹಸ್ತವಿದೆ. ಸರಳ ಪ್ರಭಾವಳಿಯೂ ಇದೆ.

ಹೊಸಮಲೆದುರ್ಗದಲ್ಲಿ ಭಗ್ನವಾಗಿರುವ ದೇವಿಯ ಶಿಲ್ಪವಿದೆ. ತಾಯಮ್ಮನ ಶಿಲ್ಪಗಳೆಂದು ಕರೆಯಲ್ಪಡುವ ಶಿಲ್ಪಗಳು, ಕೆಲವೊಮ್ಮೆ ಬಂಡೆಯ ಮೇಲೆ ಬಿಡಿ ಶಿಲ್ಪಗಳ ರೂಪದಲ್ಲಿಯೂ ಹಾಗೂ ದೇವಾಲಯಗಳಲ್ಲಿಯೂ ಸ್ಥಾಪಿಸಿದ್ದು, ಪ್ರಸ್ತುತ

ಮುಖವನ್ನು ಮಾತ್ರ ಪೂಜೆ ಮಾಡುವ ಪದ್ಧತಿ ಇದೆ. ತಾಯಮ್ಮನೆಂದು ಕರೆಯುವ ಈ ಶಿಲ್ಪವು ಮೂಲತಃ ಜಮದಗ್ನಿ ಋಷಿಯ ಪತ್ನಿ ರೇಣುಕಾದೇವಿಯ ಮುಖವಾಗಿದೆ. ಪರಶುರಾಮನಿಂದ ಶಿರಚ್ಛೇದನವಾದ ನಂತರ ಮುಖವನ್ನು ಮಾತ್ರ ಪೂಜಿಸುವ ಪರಿಪಾಠವಿದೆ. ಇವುಗಳು ಕುಮ್ಮಟದುರ್ಗ, ಹೊಸಮಲೆದುರ್ಗ, ಕಂಪಲಿ, ಆನೆಗೊಂದಿ, ಹಂಪೆಯ ಪರಿಸರ ದೂರವಿ, ಹಾನೇಯ, ಚಿತ್ರದುರ್ಗ ಹೀಗೆ ಕರ್ನಾಟಕದಲ್ಲಿ ಇವು ಬಹುಪ್ರಸಿದ್ಧವಾಗಿದೆ. ಉಚ್ಚಂಗಮ್ಮ, ಏಕನಾಥೇಶ್ವರಿ, ಹುಲಿಗೆಮ್ಮ, ತಾಯಮ್ಮ, ಎಲ್ಲಮ್ಮ ಎಂಬ ಹಲವು ಹತ್ತಾರು ಹೆಸರುಗಳಿಂದ ಈ ಶಿಲ್ಪವನ್ನು ಕರೆಯುತ್ತಿರುವರು. ಇಂದಿಗೂ ಈ ದೇವಿಯ ಆರಂಭವೇ ವಿಶೇಷವಾಗಿ ಹುಲಿಗೆ, ಉಚ್ಚಂಗಿ ದುರ್ಗ ಮತ್ತು ಚಿತ್ರದುರ್ಗದಲ್ಲಿ ರೂಢಿಯಲ್ಲಿದೆ.

ಹೆಸರು	: ಸ್ತ್ರೀ ದೇವತೆ
ಸಿಕ್ಕ ಸ್ಥಳ	: ಹುಲಿಮಾನಪ್ಪನ ಮಠದ ಮುಂದೆ, ಹೊಸಮಲೆ ದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ.
ಶಿಲಾವಸ್ತು	: ಬಳಪದ ಶಿಲೆ.
ಉಲ್ಲೇಖ	: VPR: 1988-91, P: 238.

ಸಮಭಂಗದಲ್ಲಿ ನಿಂತಿರುವ ಶಿಲ್ಪ ಭಾಗಶಃ ಭಗ್ನವಾಗಿದೆ. ಶಿಲ್ಪದ ಮೇಲ್ಭಾಗದ ಸುತ್ತಲೂ ಪ್ರಭಾವಳಿ ಇದೆ. ಪ್ರಭಾವಳಿಯ ಪಟ್ಟಿಕೆಯಲ್ಲಿ ಲತಾ, ಪುಷ್ಪ, ದೇವರ ಚಿತ್ರಗಳಿವೆ. ಶಿಲ್ಪದ ಮುಂಗೈಗಳು ಭಗ್ನವಾಗಿದೆ. ಧರಿಸಿರುವ ಸೀರೆಯು ಕಲಾತ್ಮಕವಾಗಿದೆ. ನೆರಿಗೆಯು ಸ್ವಲ್ಪ ಎದ್ದು ಕಾಣುವಂತೆ ಇದ್ದು, ಕೆಳಭಾಗದಲ್ಲಿ ವಿಶಾಲವಾಗಿ ಹರಡಿಕೊಂಡಿದೆ. ಕೊರಳಲ್ಲಿ ಪದಕವಿದೆ. ಶಿಲ್ಪದ ಮುಖದ ಭಾಗವು ಭಗ್ನವಾಗಿದೆ.

ಹೆಸರು	: ತಾಯಮ್ಮನ ಶಿಲ್ಪ
ಸಿಕ್ಕ ಸ್ಥಳ	: ಕಡ್ಡಿರಾಂಪುರ ರಸ್ತೆ ಬದಿಯ ಗುಂಡಿನ ಮೇಲೆ, ಕಡ್ಡಿರಾಂಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ತಾಯಮ್ಮನ ಮುಖದ ಶಿಲ್ಪವು ಪ್ರಭಾವಳಿಯನ್ನೊಳಗೊಂಡಿದ್ದು, ಪ್ರಭಾವಳಿಯ ಎರಡೂ ಬದಿಯಲ್ಲಿ ಸ್ತಂಭಾಕೃತಿಗಳಿದ್ದು, ಮೇಲೆ ಪ್ರಭಾವಳಿಯು ತ್ರಿಕೋನಾಕೃತಿಯಲ್ಲಿದೆ. ಮಧ್ಯದಲ್ಲಿ ಕಳಸದ ಮೇಲ್ಭಾಗದಲ್ಲಿ ಎಲೆಯಾಕೃತಿ ಇದ್ದು, ಮೇಲ್ಭಾಗದಲ್ಲಿ ಕರಂಡ ಮಕುಟವಿದೆ. ಸರ್ಪಗಳು ಕರಂಡ ಮಕುಟವನ್ನು ಸುತ್ತಿಕೊಂಡಿವೆ. ಕರ್ಣಗಳಲ್ಲಿ ಕುಂಡಲಗಳಿವೆ. ವಿಶಾಲ ನೇತ್ರ ಈಶಿಲ್ಪದ ಇನ್ನೊಂದು ವಿಶೇಷತೆ.

ಹೆಸರು : ತಾಯಮ್ಮ

ಸಿಕ್ಕ ಸ್ಥಳ : ಗರ್ಭಗೃಹ, ತಾಯಮ್ಮ ಗುಡಿ ಕಂಪಲಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ.೧೩-೧೪ ನೇ ಶತಮಾನ.

ಶಿಲಾವಸ್ತು : ಬಳಪದ ಶಿಲೆ

ವಿವರಣೆ : ಮುಖದ ಭಾಗ ಮಾತ್ರವಿರುವ ತಾಯಮ್ಮನ ಶಿಲ್ಪದಲ್ಲಿ ವಿಶಾಲವಾದ ನೇತ್ರಗಳಿವೆ. ಕರ್ಣ ಭಾಗಗಳು ಬಟ್ಟೆಯಿಂದ ಮುಚ್ಚಲ್ಪಟ್ಟಿದೆ. ತಲೆಯ ಮೇಲೆ ಸರ್ಪವಿದೆ.

ಹೆಸರು : ತಾಯಮ್ಮ

ಸಿಕ್ಕ ಸ್ಥಳ : ಕುಮಾರ ರಾಮನ ದುರ್ಗದ ಈಶಾನ್ಯ ದಿಕ್ಕಿನ ಬಯಲಿನಲ್ಲಿ ಬೇವಿನ ಮರದ ಕೆಳಗೆ, ಕುಮ್ಮಟ ದುರ್ಗ, ಕೊಪ್ಪಳ ತಾಲೂಕು-ಜಿಲ್ಲೆ.

ಕಾಲ : ಕ್ರಿ.ಶ.೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : VPR; 1987-88, P. 210

ತಲೆ ಮತ್ತು ಎದೆಯ ಭಾಗವಿರುವ ಈ ಶಿಲ್ಪವು ಕಿರೀಟವನ್ನು ಹೊಂದಿಲ್ಲ. ವಿಶಾಲವಾದ ಹಣೆಯ ಭಾಗವಿದ್ದು ಕಿವಿಗಳಲ್ಲಿ ತುಸು ದೊಡ್ಡದಾಗಿರುವ ವರ್ತುಲಾಕಾರದ ಕಂಠಾಭರಣಗಳಿವೆ. ಬಲಭಾಗ ಹಾಗೂ ಎಡಭಾಗದ ಭುಜಗಳು ಭಗ್ನಗೊಂಡಿವೆ. ಮೂಗಿನ ಭಾಗವೂ ತೃಟಿತ. ಈ ರೀತಿಯ ಶಿಲ್ಪಗಳನ್ನು ಸಿಂಗೆನಾಯಕನಹಳ್ಳಿಯ ಕೋಟೆಯಲ್ಲೂ ದೊರವದಿ ಕೋಟೆಯಲ್ಲೂ ಹಾಗೂ ಪೂಸಮಲೆ ದುರ್ಗದಲ್ಲೂ ಕಾಣಬಹುದು. ಇಂತಹ ಶಿಲ್ಪಗಳು ಪ್ರಮುಖವಾಗಿದ್ದು ಹಂಪೆಯ ವಿರುಪಾಕ್ಷ ತೇರುಬೀದಿಯ ಎದುರು ಬಸವಣ್ಣನ ಬಳಿ ನಡೆದ ಉತ್ಖನನದಲ್ಲಿ ಈ ತರಹ ಶಿಲ್ಪ ಬೆಳಕಿಗೆ ಬಂದಿದೆ.

ಹೆಸರು : ದುರ್ಗ

ಸಿಕ್ಕ ಸ್ಥಳ : ಬಸ್‌ನಿಲ್ದಾಣದ ಬಳಿ ಇರುವ ಚಿಕ್ಕಗುಡಿಯಲ್ಲಿ ದರೋಜಿ, ಸಂಡೂರು ತಾಲೂಕು. ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ.೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಚತುರಾಶ್ರಪೀಠದ ಮೇಲೆ ಸುಖಾಸನದಲ್ಲಿ ಆಸೀನಳಾಗಿರುವ ದೇವಿಗೆ ಚತುರ್ಭುಜಗಳಿವೆ. ಖಡ್ಗ, ಡಮರು. ತ್ರಿಶೂಲ, ಮತ್ತು ಪಾತ್ರೆ(ಬಟ್ಟಲು)ಯನ್ನು ಕೈಗಳಲ್ಲಿ ಹಿಡಿದಿದ್ದಾಳೆ. ತಲೆಯಲ್ಲಿ ಕರಂಡ ಮುಕುಟವಿದೆ. ಕೈ ಮತ್ತು ಕಾಲುಗಳಲ್ಲಿ ಕಡಗಾಭರಣಗಳಿವೆ. ಕರ್ಣಕುಂಡಲವಿದೆ.

ಹೆಸರು : ತಾಯಮ್ಮನ ಶಿಲ್ಪ

ಸಿಕ್ಕ ಸ್ಥಳ : ಗರ್ಭಗೃಹದಲ್ಲಿ ಬಂಡೆಯ ಮೇಲೆ ತುರ್ತಾಕಾಲುವೆಯ ದಕ್ಷಿಣಕ್ಕೆ ಗುಡ್ಡದ ಮೇಲೆ. ಹಂಪೆಯ ಪಶ್ಚಿಮಕ್ಕೆ ಸಂಗೆಯನಾಯಕನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ.೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ತಾಯಮ್ಮನೆಂದು ಕರೆಯಲ್ಪಡುವ ಈ ದೇವಿಯ ಮುಖದ ಶಿಲ್ಪವನ್ನು ಗರ್ಭಗೃಹದ ದಕ್ಷಿಣದಲ್ಲಿರುವ ಪ್ರಾಕೃತಿಕ ಬಂಡೆಯ ಮೇಲೆ ನಿರ್ಮಿಸಲಾಗಿದೆ. ಮುಖ ದುಂಡಾಗಿದೆ. ವಿಶಾಲವಾದ ಕಣ್ಣು, ಕಿವಿಗಳಲ್ಲಿ ಕುಂಡಲಾಭರಣ ಮತ್ತು ಕೊರಳಲ್ಲಿ ಕಂಠಹಾರ ಈ ಶಿಲ್ಪದ ಲಕ್ಷಣಗಳಾಗಿವೆ.

ಜಮದಗ್ನಿಯ ಪತ್ನಿ ರೇಣುಕಾ ದೇವಿಯ ಮುಖವನ್ನು ಮಾತ್ರ ಪೂಜಿಸುವುದು ರೂಢಿಯಲ್ಲಿದೆ. ಪರಶುರಾಮನ ತಂದೆ ಜಮದಗ್ನಿಯ ಆದೇಶದಂತೆ ತಾಯಿ ರೇಣುಕಾದೇವಿಯ ಶಿರಚ್ಛೇದನ ಮಾಡಿದ್ದು, ನಂತರ ಪರಶುರಾಮನು ತಂದೆಗೆ ತಿಳಿಸಿದಾಗ ಜಮದಗ್ನಿ, ಮಗನಿಗೆ ಏನು ವರವು ಬೇಕೆಂದು ಕೇಳಿಕೋ ಎಂದಾಗ, ಜಮದಗ್ನಿಯು ನನಗೆ ನನ್ನ ತಾಯಿಯೆ ಬೇಕೆಂದು ತನ್ನ ಬೇಡಿಕೆಯನ್ನು ಮುಂದಿಡುತ್ತಾನೆ. ನಂತರ ತಾಯಿಯ ದೇಹದ ರುಂಡ ಮುಂಡುಗಳನ್ನು ಸೇರಿಸು, ಜೀವಂತಳಾಗುತ್ತಾಳೆಂದು ಹೇಳುತ್ತಾನೆ. ಆದರೆ ಆ ವೇಳೆಗಾಗಲೇ ನಾಯಿಗಳು ದೇಹದ ಮುಂಡ ಭಾಗವನ್ನು ತಿಂದು ಹಾಕಿದ್ದರಿಂದ ಪರಶುರಾಮನಿಗೆ ತಾಯಿಯ ಮುಖವೇ ಮಾತನಾಡಿ ಮಗನೇ ನನ್ನ ದೇಹವನ್ನು ಬದುಕಿಸುವ ಅವಶ್ಯಕತೆ ಇಲ್ಲ ನನ್ನ ಮುಖವನ್ನು ಮಾತ್ರ ಪೂಜಿಸು ಎಂದು ಹೇಳಿದ್ದರಿಂದ ಮುಖವನ್ನು ಮಾತ್ರ ಪೂಜಿಸುವುದು ರೂಢಿಗತವಾಗಿ ಬಂದಿದೆ. ರೇಣುಕಾ ದೇವಿಯನ್ನು, ತಾಯಮ್ಮ, ಎಲ್ಲಮ್ಮ ಮಹಾಮಾಯಿ ಎಂದು ಪೂಜಿಸುವರು. ಇದೇ ಮಾದರಿಯ ತಾಯಮ್ಮನ ಗುಡಿಯು ಕುಮ್ಮಟದುರ್ಗದಲ್ಲೂ ಇದೆ.

ಹೆಸರು : ದೇವಿಯ ಶಿಲ್ಪ

ಸಿಕ್ಕ ಸ್ಥಳ : ತಾಯಮ್ಮನ ಗುಡಿಯ ಮುಂದೆ ಸಿಂಗೆನಾಯಕನ ಹಳ್ಳಿ, ತುರ್ತುಕಾಲುವೆಯ ದಕ್ಷಿಣಕ್ಕೆ ಗುಡ್ಡದ ಮೇಲೆ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ.೧೩-೧೪ ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ದೇವಿಯ ಶಿಲ್ಪದ ಎದೆಯ ಕೆಳಗಿನ ಭಾಗವು ಒಡೆದಿದೆ. ಮೇಲಿನ ಭಾಗದಲ್ಲಿ ತಲೆಯ ಮೇಲೆ ಕಿರೀಟವಿದ್ದು, ಹಣೆಯ ಮೇಲೆ ತ್ರಿನೇತ್ರ, ಕರ್ಣಕುಂಡಲಗಳು, ಬಲಗೈಗಳಲ್ಲಿ ತ್ರಿಶೂಲ ಮತ್ತು ಖಡ್ಗವಿದೆ. ಎದ್ದು ಕಾಣುವ ವಕ್ಷಸ್ಥಳ ಈ ಮೂರ್ತಿ ಶಿಲ್ಪದ ವೈಶಿಷ್ಟ್ಯ.

ನಾಗಪಂಥ ಶಿಲ್ಪಗಳು

ಹೆಸರು	: ನಾಗಶಿಲ್ಪ
ಸಿಕ್ಕ ಸ್ಥಳ	: ಕಲ್ಲಿಗಸೆಯ ದಕ್ಷಿಣಕ್ಕೆ ಗುಂಡಿನ ಮೇಲೆ ಆನೆಗೊಂದಿ ಪಶ್ಚಿಮಕ್ಕೆ ಗಂಗಾವತಿ ತಾಲೂಕ, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ
ಉಲ್ಲೇಖ	: VPR; 1984-87, P: 68-69, Plate No. 131-135

ಭೈರವನ ಶಿಲ್ಪದ ಗುಂಡಿಗೆ ಇರುವ ಇನ್ನೊಂದು ಬದಿಯಲ್ಲಿ ಮೂರು ನಾಗ ಶಿಲ್ಪಗಳಿವೆ. ಮಧ್ಯದಲ್ಲಿ ದೊಡ್ಡದಾದ ಏಳು ಹೆಡೆ ಸರ್ಪವಿದ್ದು ಪಕ್ಕದಲ್ಲಿ ಎರಡು ಮರಿ ಸರ್ಪಗಳಿವೆ.

ಈ ಮೇಲಿನ ಶಿಲ್ಪಗಳು ಆನಂದ ಸಿದ್ಧದೇವನ ಮಠದ ಮುಂಬಾಗದಲ್ಲಿದ್ದು, ಶಾಸನವು ಈ ಶಿಲ್ಪಗಳ ಸಮೀಪದಲ್ಲಿದೆ. ಆನಂದ ಸಿದ್ಧನನ್ನು ಆನಂದ ಸಿದ್ಧನಾಥನೆಂದು ಶಾಸನವು ಉಲ್ಲೇಖಿಸುತ್ತಿದ್ದು, ಈ ಸಿದ್ಧನಾಥನು ನೇಪಾಳದ ದೇಶದಲ್ಲಿ ಪ್ರಮುಖವಾದ ಶೈವನಾಥ ಪಂಥದ ಸಿದ್ಧನಾಗಿರುವನು.

ಹೆಸರು	: ನಾಗ ನಾಗಿಣಿ ಶಿಲ್ಪ
ಸಿಕ್ಕ ಸ್ಥಳ	: ತಾಯಮ್ಮನ ಗುಡಿಯ ಮುಂದೆ, ಸಿಂಗೆನಾಯಕನಹಳ್ಳಿ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಒಂದೇ ಗ್ರಾನೈಟ್ ಕಲ್ಲಿನಲ್ಲಿ ಏಳು ಹೆಡೆಯ (ಸರ್ಪ) ನಾಗ ಶಿಲ್ಪವೂ ಅದರ ಎಡಭಾಗದಲ್ಲಿ ಅರ್ಧ ಮನುಷ್ಯ ಸ್ತ್ರೀಯ ದೇಹವು ಕೆಳಗಿನ ಭಾಗವು ಸರ್ಪದಂತೆ ಇದ್ದು, ಕೈಗಳಲ್ಲಿ ಖಡ್ಗ ಮತ್ತು ಗುರಾಣಿಯನ್ನು ಹಿಡಿದಿದೆ. ತಲೆಯ ಮೇಲೆ ಕಿರೀಟವಿದೆ.

ಹೆಸರು	: ನಾಗಿಣಿ ಶಿಲ್ಪಗಳು
ಸಿಕ್ಕ ಸ್ಥಳ	: ಗ್ರಾಮದ ಆಗ್ನೇಯಕ್ಕೆ ಬಾವಿಯ ಬಳಿ, ಕಾಕುಬಾಳು ಗ್ರಾಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಗ್ರಾನೈಟ್ ಶಿಲೆಯಲ್ಲಿ ನಿರ್ಮಿಸಲಾದ ಎರಡು ಶಿಲ್ಪಗಳಿವೆ. ನಾಗಿಣಿಯ ಮುಖದ ಶಿಲ್ಪದಲ್ಲಿ ವಿಶಾಲವಾದ ನೇತ್ರಗಳು. ಕರ್ಣಕುಂಡಲಗಳು ತಲೆಯ ಮೇಲೆ ಕರಂಡ ಮುಕುಟವಿದೆ. ಒಂದರ ಮೇಲೊಂದರಂತೆ ಸರ್ಪಗಳು ತಲೆಯನ್ನು ಸುತ್ತಿದ್ದು ಕಿರೀಟೋಪಾದಿಯಲ್ಲಿದ್ದು, ಪ್ರತಿಯೊಂದು ಸರ್ಪವೂ ಹೆಡೆಯನ್ನು ಬಿಚ್ಚಿರುವುದು. ಹಣೆಯ ಮೇಲೆ ತಿಲಕವಿದೆ. ಶಿಲ್ಪದ ಮುಂದೆ ಬೇರೊಂದು ಶಿಲೆಯಲ್ಲಿ ಪಾದುಕೆಗಳಿವೆ.

ವೈಷ್ಣವ ಮೂರ್ತಿಶಿಲ್ಪಗಳು

ಕುಮ್ಮಟ ನಾಯಕರ ಕಾಲದಲ್ಲಿ ಶೈವ ಸಂಪ್ರದಾಯದ ಕುರುಹುಗಳಿದ್ದಷ್ಟು ವೈಷ್ಣವ ಪಂಥದ ಕುರುಹುಗಳಿಲ್ಲವಿದ್ದರೂ ವೈಷ್ಣವ ಸಂಪ್ರದಾಯ ಇದ್ದುದರ ಕುರಿತು ವೈಷ್ಣವ ದೇವಾಲಯಗಳು ಮತ್ತು ಶಿಲ್ಪಗಳು ಕುಮ್ಮಟ ನಾಯಕ ಕಾಲದಲ್ಲಿ ವೈಷ್ಣವ ಧರ್ಮ ಅಸ್ತಿತ್ವದಲ್ಲಿತ್ತೆಂಬುದು ಹೊಸಮಲೆ ದುರ್ಗದಲ್ಲಿರುವ ಕೇಶವ ಹಾಗೂ ವಿಷ್ಣು ಶಿಲ್ಪಗಳು, ದೊರವಡಿಯಲ್ಲಿರುವ ವೆಂಕಟೇಶ್ವರ ಶಿಲ್ಪ, ಹಾನೇಯದ ಪರಿಸರದ ಜಟಂಗರಾಮೇಶ್ವರದ ವೆಂಕಟೇಶ್ವರ, ಕಂಪಲಿ ಸೋಮೇಶ್ವರ ದೇವಾಲಯದಲ್ಲಿರುವ ಅನಂತಶಯನ. ಆನೆಗೊಂದಿಯಲ್ಲಿರುವ ಗರುಡ ಶಿಲ್ಪಗಳು ವೈಷ್ಣವಧರ್ಮದ ಇರುವಿಕೆಯನ್ನು ಪುಷ್ಟೀಕರಿಸಿವೆ.

ಹೊಸಮಲೆ ದುರ್ಗದ ರಾಮಸ್ವಾಮಿ ಗುಡಿಯಲ್ಲಿರುವ ಕೇಶವ ಶಿಲ್ಪ, ರಾಮಸ್ವಾಮಿ ಗುಡಿಯ ಬಳಿಯಿರುವ ವಿಷ್ಣು ಶಿಲ್ಪಗಳು ಹಾಗೂ ಹಾನೇಯದ ಜಟಂಗ ರಾಮೇಶ್ವರದ ದೇವಾಲಯ ಆರಂಭದಲ್ಲಿನ ವೆಂಕಟೇಶ್ವರ ಗುಡಿ, ಶಿಲ್ಪ ದೊರವಡಿಯ ವೆಂಕಟೇಶ್ವರ ಗುಡಿ. ಆನೆಗೊಂದಿಯ ರಂಗನಾಥ ದೇವಾಲಯದಲ್ಲಿರುವ ಗರುಡಶಿಲ್ಪಗಳು ಈ ಪ್ರದೇಶದಲ್ಲಿನ ವೈಷ್ಣವ ಧರ್ಮದ ಉತ್ತಮ ಉದಾಹರಣೆ. ಹೊಸಮಲೆದುರ್ಗ ರಾಮಸ್ವಾಮಿ ದೇವಾಲಯ ಮೂಲತಹ ವಿಷ್ಣುವಿನ ದೇವಾಲಯ. ಹಂಪೆಯ ಪರಿಸರದ ಸಿಂಗೆನಾಯಕನಹಳ್ಳಿ, ಹೇಮಕೂಟ ಕಾಮಲಾಪುರದ ಆಂಜನೇಯ ಶಿಲ್ಪಗಳು. ಆನೆಗೊಂದಿಯ ಆಂಜನೇಯ ಹಾಗೂ ವಾನರ ಸೈನ್ಯದ ಶಿಲ್ಪಗಳು ಹೊಸಮಲೆದುರ್ಗದ ಆಂಜನೇಯ ಶಿಲ್ಪಗಳು ಇದ್ದು, ಆಂಜನೇಯನ ಪೂಜೆ ಆರಾಧನೆಯೂ ಇವರ ಕಾಲದಲ್ಲಿದ್ದುದನ್ನು ಪುಷ್ಟೀಕರಿಸುತ್ತದೆ. ಆಭರಣಗಳು ಕಟೀಬಂಧ, ವೈಜಯಂತಿ, ಮುಖದ ಗಾಂಭೀರ್ಯತೆ ಇಪ್ಪ ಆಂಜನೇಯ ಶಿಲ್ಪದ ಚಿತ್ರಣ, ಅದರಲ್ಲೂ ಹೆಚ್ಚಾಗಿ ಹಂಪೆಯ ಪರಿಸರದ ಹೇಮಕೂಟದ ಪ್ರಸನ್ನ ಆಂಜನೇಯ ಶಿಲ್ಪ ಹಾಗೂ ಸಿಂಗೆನಾಯಕನಹಳ್ಳಿಯ ಶಿಲ್ಪಗಳಲ್ಲಿ ಆಂಜನೇಯ ಪಾದಗಳ ಮಧ್ಯದಲ್ಲಿ ಅಕ್ಷಯ ಕುಮಾರನು ಅಂಜಲಿ ಮುದ್ರೆಯಲ್ಲಿ ಕುಳಿತಿರುವುದು ಹಾಗೂ ಅವನ ರಾಕ್ಷಸ ರೂಪವನ್ನು ಬಿಟ್ಟು, ಗಂಧರ್ವ ವೇಷದಲ್ಲಿರುವ ಈ ಮೂರ್ತಿ ವೈಶಿಷ್ಟ್ಯಪೂರ್ಣವಾಗಿದೆ. ಶಿಲ್ಪದ ಬದಿಗಳಲ್ಲಿ ಸೂರ್ಯ ಚಂದ್ರ, ಚಕ್ರ, ಶಂಖಗಳಿದ್ದು ಪಾದಗಳ ಬಳಿಯಲ್ಲಿ ಬಿದ್ದಿರುವ ಅಕ್ಷಕುಮಾರನು ಚಂದ್ರಾಯುಧವನ್ನು ಹಿಡಿದು ಮೇಲೆ ಆಂಜನೇಯನ ಮುಖವನ್ನು ನೋಡುತ್ತಿರುವನು. ವೀರ, ಶೌರ್ಯ. ಧರ್ಮಗಳ ಪ್ರತೀಕ ಮೂರ್ತಿಯಾಗಿ ಆಂಜನೇಯನನ್ನು ಆರಾಧಿಸುವರು.

ಹೆಸರು : ಕೇಶವ ಶಿಲ್ಪ

ಸಿಕ್ಕ ಸ್ಥಳ : ರಾಮಸ್ವಾಮಿ ದೇವಾಲಯದ ಗರ್ಭಗೃಹದಲ್ಲಿ, ಹೊಸಮಲೆದುರ್ಗ ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ೧೫-೧೬ ಸೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : VPR; 1988-99, P. 240

ಪೀಠದ ಮೇಲೆ ಸಮಭಾಗದಲ್ಲಿ ನಿಂತಿರುವ ಕೇಶವ ಮೂರ್ತಿಗೆ ಚತುರ್ಭುಜಗಳಿದ್ದು, ಗದೆ, ಶಂಖ,ಚಕ್ರ ಮತ್ತು ಪದ್ಮಗಳು ಕೈಗಳಲ್ಲಿವೆ. ತಲೆಯ ಹಿಂಭಾಗದಲ್ಲಿ ಪ್ರಭಾವಳಿ ಇದೆ. ತಲೆಯ ಮೇಲೆ ಕರಂಡ ಮುಕುಟವಿದೆ. ಕರ್ಣಾಭರಣಗಳಿವೆ. ಕಂಠಾಭರಣ,ಯಜ್ಞೋಪವೀತ ಮತ್ತು ವೈಜಯಂತಿಹಾರ, ಕಾಲ್ಗಡಗ ಇವು ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳು.

ಹೆಸರು : ಅನಂತಶಯನ

ಸಿಕ್ಕ ಸ್ಥಳ : ಸೋಮೇಶ್ವರ ದೇವಾಲಯದ ನವರಂಗದಲ್ಲಿ, ಕಂಪಲಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ ನೆಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಅನಂತಶಯನ ಶಿಲ್ಪವನ್ನು ಪದ್ಮ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ವಿಷ್ಣು ಸರ್ಪದ ಮೇಲೆ ಮಲಗಿರುವನು. ಸರ್ಪ ಏಳು ಹೆಡೆಯಿಂದ ಶ್ರೀವಿಷ್ಣುವಿನ ತಲೆಯ ಮೇಲೆ ನೆರಳಿನಂತೆ ರಕ್ಷಣೆಯನ್ನು ನೀಡಿದೆ. ಕರಂಡ ಮುಕುಟ, ಕರ್ಣಾಭರಣ, ಕಂಠಾಭರಣ, ಭುಜಕೀರ್ತಿಗಳು ಉದರಬಂಧ ಕಂಠಿಹಾರ, ಧೋತರ ವಸ್ತ್ರವನ್ನು ಧರಿಸಿದ್ದು, ಆಭರಣಗಳಿಂದ ಅಲಂಕೃತವಾಗಿದೆ. ಪಾದಗಳನ್ನು ಕಮಲದ ಮೇಲೆ ಇರಿಸಿದ್ದು, ಭಕ್ತನೊಬ್ಬನು ಪಾದದ ಬಳಿ ನಿಂತು ಶ್ರೀವಿಷ್ಣುವಿಗೆ ಸೇವೆಗೈಯ್ಯುವಂತಿದೆ. ಗದೆಯು ಪೀಠದ ತುದಿಭಾಗದಲ್ಲಿಡಲ್ಪಟ್ಟಿದೆ.

ಹೆಸರು : ವಿಷ್ಣು (ವೆಂಕಟೇಶ್ವರ)

ಸಿಕ್ಕ ಸ್ಥಳ : ಕೋಟೆಯ ಬಳಿ, ರಸ್ತೆಗೆ ಹೊಂದಿಕೊಂಡಂತೆ ಇರುವ ದೇವಾಲಯದಲ್ಲಿ, ಹೊಸ ದೇವಾಲಯ, ಹಳೇದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ ನೆಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : VPR; 1988-87, P: 245

ಚಿಕ್ಕ ದೇವಾಲಯದಲ್ಲಿ ವಿಷ್ಣುವಿನ ಮೂರ್ತಿ ಮಾತ್ರ ಇದ್ದು, ಚತುರ್ಭುಜಗಳಿವೆ. ಕೈಗಳು ಅಭಯ, ಶಂಖ, ಚಕ್ರ ಮತ್ತು ಕಟಿಹಸ್ತ ಹೊಂದಿದೆ. ಶಿರದಲ್ಲಿ ಕರಂಡ ಮುಕುಟವು ಕೊರಳಲ್ಲಿ ಕಂಠಹಾರಗಳು ಇವೆ.

ಹೆಸರು : ಬಾಲಮುರಳಿ ಕೃಷ್ಣ

ಸಿಕ್ಕ ಸ್ಥಳ : ಸೋಮೇಶ್ವರ ದೇವಾಲಯದ ಮುಂದೆ, ಕಂಪಲಿ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಬಾಲಕೃಷ್ಣ ನಿಂತಿದ್ದು ತನ್ನ ಎರಡು ಕೈಯಲ್ಲಿ ಕೊಳಲನ್ನು ಹಿಡಿದು ಒಂದು ತುದಿಯನ್ನು ತನ್ನ ಬಾಯಿ ಬಳಿ ಇಟ್ಟುಕೊಂಡು ಕೊಳಲನ್ನು ಊದುತ್ತಿರುವ ದೃಶ್ಯವಿದೆ. ಶಿಲ್ಪದ ಬಲಬದಿಯಲ್ಲಿ ಸೂರ್ಯ ಹಾಗೂ ಎಡಬದಿಯಲ್ಲಿ ಚಂದ್ರನ ಚಿತ್ರಗಳಿವೆ.

ಹೆಸರು : ಗರುಡ

ಸಿಕ್ಕ ಸ್ಥಳ : ಗವಿರಂಗನಾಥ ದೇವಾಲಯ ಆರ್ವಣದಲ್ಲಿ ಚಿಕ್ಕ ಗುಡಿಯಲ್ಲಿ, ಆನೆಗೊಂದಿ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಗರುಡನು ಎಡಗಾಲ ಮಂಡಿಯನ್ನು ನೆಲದ ಮೇಲೆ ಇಟ್ಟು, ಬಲಗಾಲನ್ನು ಹಿಂದೆ ಇಟ್ಟಿರುವನು. ಗರುಡನ ಕೈಗಳು ಅಂಜಲಿಮುದ್ರೆಯಲ್ಲಿದೆ. ಭುಜಗಳ ಹಿಂಭಾಗದಲ್ಲಿ ರೆಕ್ಕೆಗಳಿವೆ. ಕೊರಳಲ್ಲಿ ಆಭರಣಗಳಿವೆ. ಭುಜ, ತೋಳು, ಮತ್ತು ಮುಂಗಾಲುಗಳಲ್ಲಿಯೂ ಆಭರಣಗಳಿವೆ. ಕರ್ಣಗಳಲ್ಲಿ ಕುಂಡಲಾಭರಣಗಳಿವೆ. ತಲೆಯ ಮೇಲೆ ಕಿರೀಟವಿದೆ. ಮುಖಭಾವ ಸೌಮ್ಯತೆ ಹಾಗು ಭಕ್ತಿಪೂರ್ವ ವಿನಯತೆ ಈ ಮೂರ್ತಿ ಶಿಲ್ಪದಲ್ಲಿದೆ.

ಹೆಸರು : ಆಂಜನೇಯ

ಸಿಕ್ಕ ಸ್ಥಳ : ದೇವಾಲಯದ ಗರ್ಭಗೃಹದಲ್ಲಿ, ಸಿಂಗೆನಾಯಕನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಆಂಜನೇಯನ ಶಿಲ್ಪವು ವೀರ ಭಂಗಿಯಲ್ಲಿದ್ದು, ಬಲಗೈಯನ್ನು ಮೇಲೆ ಎತ್ತಿದ್ದು ಎಡಗೈನಲ್ಲಿ ಪುಷ್ಪವನ್ನು ಹಿಡಿದಿದ್ದಾನೆ. ಕೆಳಭಾಗದಲ್ಲಿ ಆಂಜನೇಯನ ಎದುರು ಕಾಲುಗಳ ಮಧ್ಯದಲ್ಲಿ ಕುಳಿತಿರುವ ಅಕ್ಷಯ ಕುಮಾರನ ಶಿಲ್ಪವಿದೆ. ಅಂಜಲಿ

ಮುದ್ರೆಯಲ್ಲಿದೆ. ಆಂಜನೇಯನ ಬಾಲ ಅವನ ತಲೆಯ ಮೇಲಿನಿಂದ ಇನ್ನೊಂದು ಬದಿಯಲ್ಲಿನ ಮೊಳಕಾಲವರೆಗೂ ಬಾಗಿದ್ದು ಪ್ರಭಾವಳಿಯಂತಿದೆ. ಈ ಮಾದರಿಯ ಆಂಜನೇಯನ ಶಿಲ್ಪ ಹೇಮಕೂಟ ಪರ್ವತ ಹಂಪೆಯಲ್ಲಿರುವ ಮೂಲ ವಿರುಪಾಕ್ಷ ದೇವಾಲಯದಲ್ಲಿದೆ.

ಹೆಸರು	: ಆಂಜನೇಯ
ಸಿಕ್ಕ ಸ್ಥಳ	: ಭೀಮನ ಬಾಗಿಲ ಈಶಾನ್ಯಕ್ಕೆ, ಗುಡ್ಡದ ಮೇಲೆ, ದೇವಾಲಯದಲ್ಲಿ ಬಂಡೆಯ ಮೇಲೆ, ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ
ಉಲ್ಲೇಖ	: Vijayanagara Inventory; Vol.-I, P. 222

ಆಂಜನೇಯ ಶಿಲ್ಪವನ್ನು ದೇವಾಲಯದ ಗುಂಡಿಗೆ ನಿರ್ಮಿಸಲಾಗಿದೆ. ದ್ವಿಭಂಗದಲ್ಲಿ ಬಲಗೈಯನ್ನು ಮೇಲೆ ಎತ್ತಿದ್ದು ಎಡಗೈಯಲ್ಲಿ ಕಮಲದ ಮೊಗ್ಗನ್ನು ಹಿಡಿದುಕೊಂಡಿದೆ. ತೋಳು ಬಂದ ಕೈಕಡಗಗಳು, ಕಾಲ್ಗಡಗಗಳು, ಕರ್ಣಾಭರಣಗಳು, ಕಂಠಾಹಾರಗಳನ್ನು ವೈಜಯಂತಿ ಹಾರ, ಗೆಜ್ಜೆಯನ್ನು ಧರಿಸಿದ್ದಾನೆ. ತಲೆಯಲ್ಲಿ ಜುಟ್ಟನ್ನು ಮಡಿಚಿ ಕಟ್ಟಿದ್ದು, ಬಾಲವು ಹಿಂದಿನಿಂದ ಬಿಲ್ಲಿನಂತೆ ಬಾಗಿದೆ. ಸೂರ್ಯ, ಚಂದ್ರ, ಶಂಖ, ಚಕ್ರಗಳ ಚಿತ್ರಗಳಿವೆ. ಕೆಳಗೆ ಕಾಲುಗಳ ಮಧ್ಯದಲ್ಲಿ ರಾವಣನ ಮಗ ಅಕ್ಷಯಕುಮಾರನು ಬಿದ್ದಿದ್ದು, ಬಲಗೈಯಲ್ಲಿ ಪರಶುವಿನಾಕಾರದ ಆಯುಧವನ್ನು ಹಿಡಿದಿವೆ.

ಹೆಸರು	: ಪ್ರಸನ್ನ ಆಂಜನೇಯ
ಸಿಕ್ಕ ಸ್ಥಳ	: ಮೂಲವಿರೂಪಾಕ್ಷ ದೇವಾಲಯದ ಹಿಂಭಾಗ, ಆಂಜನೇಯ ದೇವಾಲಯ, ಹೇಮಕೂಟ, ಹಂಪೆ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಎಡಮುಖವಾಗಿ ನಿಂತಿರುವ ಆಂಜನೇಯ ದ್ವಿಭುಜ ಮೂರ್ತಿಯಾಗಿದೆ. ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಕಮಲವನ್ನು ಮತ್ತು ಮಾವಿನಕಾಯಿ ಗೊಂಚಲನ್ನು ಹಿಡಿದಿದ್ದಾನೆ. ತಲೆಯಲ್ಲಿ ಜುಟ್ಟನ್ನು ಕಟ್ಟಿರುವುದು ಕಿವಿಗಳಲ್ಲಿ ಮುತ್ತಿನ ಆಭರಣ, ಕೊರಳಲ್ಲಿ ವಿವಿಧ ರೀತಿಯ ಕಂಠಾಭರಣಗಳು, ತೋಳಬಂಧ ಮತ್ತು ಮುಂಗೈಯಲ್ಲಿ ಕೈ ಬಳೆಗಳು ಹೃದಯಬಂಧ ಮತ್ತು ಯಜ್ಞೋಪವೀತವಿದೆ. ಬೆರಳುಗಳಲ್ಲಿ ಉಂಗುರುಗಳಿವೆ. ಉದ್ದನೆಯ ವೈಜಯಂತಿಯನ್ನು (ಪುಷ್ಪಮಾಲೆ) ಧರಿಸಿದ್ದಾನೆ. ಬಾಲವು ಹಿಂಭಾಗದಿಂದ ಮೇಲೆ ಬಂದು ಮುಂಭಾಗದಲ್ಲಿ ಬಾಗಿದ್ದು, ತುದಿಯು ಸುರುಳಿ ಆಕಾರದಲ್ಲಿದೆ. ಎರಡು ಕಾಲುಗಳ

ಮಧ್ಯದಲ್ಲಿ ರಾವಣನ ಮಗ ಅಕ್ಷಯಕುಮಾರನು ಮಡಿದಿದ್ದು ಅವನ ಮೇಲೆ ಗಂದರ್ವನು ಪದ್ಮಾಸನದಲ್ಲಿ ಕುಳಿತು ಅಂಜಲಿ ಮುದ್ರೆಯಲ್ಲಿದ್ದಾನೆ. ಗಂಧರ್ವನ ಕಿವಿಗಳಲ್ಲಿ ಪುಷ್ಪಾಭರಣಗಳಿವೆ. ಈ ಶೈಲಿಯ ಶಿಲ್ಪ ಸಿಂಗನಾಯಕಹಳ್ಳಿಯಲ್ಲಿರುವ ಆಂಜನೇಯ ದೇವಾಲಯದಲ್ಲಿದೆ.

ಹೆಸರು	: ಆಂಜನೇಯ
ಸಿಕ್ಕ ಸ್ಥಳ	: ಪಶ್ಚಿಮಕ್ಕೆ ಗುಂಡಿನ ಮೇಲೆ ಆನಂದ ಸಿದ್ಧದೇವನ ಗುಹೆಯ ಬಳಿ, ಆನೆಗೊಂದಿ. ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಎಡಗಾಲನ್ನು ಮುಂದಿಟ್ಟು ನಿಂತಿರುವ ಅಂಜನೇಯ ಶಿಲ್ಪ ದ್ವಿಭಂಗದಲ್ಲಿದೆ. ಬಲಗೈಯನ್ನು ಮೇಲೆತ್ತಿದ್ದು ಅಭಯ ಮುದ್ರೆಯಲ್ಲಿದೆ. ಬಾಲವು ಆಂಜನೇಯನ ಹಿಂಬದಿ ಮೇಲಿನಿಂದ ಮುಂದೆ ಬಾಗಿದ್ದು ಸುರಳಿಯಾಕಾರದಲ್ಲಿದೆ. ಆಂಜನೇಯನ ಕೊರಳಲ್ಲಿ ವಿವಿಧ ಹಾರಗಳಿವೆ. ಕರ್ಣಾಭರಣಗಳಿವೆ. ಕಟೀಬಂಧವಿದೆ. ಭುಜಗಳಲ್ಲಿ ಆಭರಣಗಳಿವೆ. ಕೈ ತೋಳು, ಮುಂಗೈ ಹಾಗೂ ಕಾಲುಗಳಲ್ಲಿ ಕಡಗಾಭರಣಗಳನ್ನು ಧರಿಸಿದೆ. ತಲೆಯ ಹಿಂಬದಿಯಲ್ಲಿ ಶಿಖೆಯನ್ನು ಮಡಚಿ ಕಟ್ಟಿದೆ. ಎರಡೂ ಕಾಲುಗಳ ಮಧ್ಯದಲ್ಲಿ ಅಕ್ಷಯ ಕುಮಾರನು ಮಲಗಿದ್ದು, ಕೈಗಳಲ್ಲಿ ಖಡ್ಗ ಗುರಾಣಿಗಳನ್ನು ಹಿಡಿದಿದ್ದಾನೆ. ಬಲಭಾಗದಲ್ಲಿ ಚಕ್ರ ಎಡಭಾಗದಲ್ಲಿ ಶಂಖವಿದೆ.ಆಂಜನೇಯನ ಕಣ್ಣಿನ ನೇರದಲ್ಲಿ ಶಿವಲಿಂಗದ ಶಿಲ್ಪವಿರುವುದು ಈ ಶಿಲ್ಪದ ಇನ್ನೊಂದು ವಿಶೇಷ. ಬಲಗೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದಾನೆ.

ಹೆಸರು	: ಹನುಮಂತ
ಸಿಕ್ಕ ಸ್ಥಳ	: ಚನ್ನಬಸವೇಶ್ವರ ಗುಹಾಲಯದ ದ್ವಾರದ ಬಳಿ, ಗುಂಡಿನ ಮೇಲೆ ನಾಗೇನಹಳ್ಳಿ. ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ

ಗುಹಾಲಯದ ದ್ವಾರದ ದಕ್ಷಿಣಕ್ಕೆ ಇರುವ ದ್ವಾರದಲ್ಲಿ ವೀರ ನಡಿಗೆಯಲ್ಲಿರುವ ಆಂಜನೇಯನ ಶಿಲ್ಪವಿದೆ. ಎಡಗೈಯಲ್ಲಿ ಕಮಲದ ಪುಷ್ಪವನ್ನು ಹಿಡಿದಿದ್ದು ಬಲಗೈಯನ್ನು ಮೇಲೆತ್ತಿರುವನು. ಆಂಜನೇಯನ ಬಾಲ ತನ್ನ ಹಿಂದಿನಿಂದ ಮೇಲೆ ಬಂದಿದ್ದು ಬಾಗಿದೆ. ಮುಂಭಾಗದಲ್ಲಿ ವ್ಯಕ್ತಿಯೊಬ್ಬನು ನಿಂತಿರುವನು. ಅಕ್ಷಕುಮಾರನು ಕಾಲುಗಳ ಮಧ್ಯದಲ್ಲಿ ಸೋತು ಬಿದ್ದಿರುವಂತಿದೆ. ಆಂಜನೇಯನ ಮುಖ ಭಾವ ವೀರಾವೇಶದಿಂದ ಇದ್ದುದು ಈ ಶಿಲ್ಪದ ಇನ್ನೊಂದು ವೈಶಿಷ್ಟ್ಯ.

ಜೈನ ಮೂರ್ತಿಶಿಲ್ಪಗಳು

ಜೈನ ಧರ್ಮಕ್ಕೆ ಸಂಬಂಧಿಸಿದಂತೆ, ಜೈನ ಬಸದಿಗಳು, ಚೈತ್ಯಗಳು ಹಾಗು ಶಿಲ್ಪಗಳೂ ಈ ಧರ್ಮ ಕುಮ್ಮಟ ನಾಯಕರ ಕಾಲದಲ್ಲಿತ್ತೆಂಬುದನ್ನು ಸ್ಪಷ್ಟೀಕರಿಸಿವೆ. ಕುಮ್ಮಟ ಬಸದಿಯಲ್ಲಿ ತೀರ್ಥಂಕರರ ಶಿಲ್ಪವಿದೆ. ಈ ಶಿಲ್ಪದಲ್ಲಿ ತೀರ್ಥಂಕರರು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾರೆ. ಪೀಠದಲ್ಲಿ ಸಿಂಹವಿದೆ. ತೀರ್ಥಂಕರರ ಎಡಬಲದಲ್ಲಿ ಚೌರಿಯನ್ನು ಹಿಡಿದು ನಿಂತಿರುವ ಯಕ್ಷಿಯರಿರುವರು. ಶಿಲ್ಪದ ಮೇಲೆ ಕೊಡೆಗಳು ಜೈನ ಪ್ರಭಾವವನ್ನು ತೋರಿಸುತ್ತವೆ. (Channabasappa S. Patil: 1991. VPR. P: 207) ಜಿನಾಲಯದ ಲಲಾಟದಲ್ಲಿರುವ ಜಿನ ಶಿಲ್ಪಗಳನ್ನು ಆನೆಗೊಂದಿಯ ಚೈತ್ಯಾಲಯ ಹಾಗು ಕಾಮಲಾಪುರದ ಕುಂಥು ಜಿನನಾಥ ಚೈತ್ಯಾಲಯದಲ್ಲಿ (ಗಾಣಗಿತ್ತಿ ಜಿನಾಲಯ) ಕಾಣಬಹುದು. ಈ ಕಾಲದ ಜೈನ ತೀರ್ಥಂಕರರ ವಿಗ್ರಹಗಳು ಯಲಬುರ್ಗದಲ್ಲಿ ಇವೆ. (ಕವಿಶಾಸಂ.೩., ಯಲಬುರ್ಗ,ಸಂ. ಪು.) ಪ್ರಸ್ತುತ ಯಲಬುರ್ಗದ ಜೈನ ಶಿಲ್ಪಗಳು ಆಂಧ್ರಪ್ರದೇಶದ ಸಾಲಾರಜಂಗ ವಸ್ತುಸಂಗ್ರಹಾಲಯದಲ್ಲಿದೆ.

ಬಸದಿಗಳ ಉದ್ದೇಶ ತೀರ್ಥಂಕರರಿಗಾಗಿ ಬಾದಾಮಿ ಚಾಲುಕ್ಯರ ಕಾಲದಿಂದಲೇ ಜೈನ ಗುಹಾಲಯಗಳನ್ನು ನಿರ್ಮಾಣ ಮಾಡಿದರು. ಈ ಜೈನ ಗುಹಾಲಯಗಳು ಬಾದಾಮಿ, ಐಹೊಳೆಗಳಲ್ಲಿವೆ. ಈ ಗುಹಾಲಯಗಳಲ್ಲಿರುವ ಗೊಮ್ಮಟ ಪಾರ್ಶ್ವನಾಥರ ಮೂರ್ತಿಗಳು ಕರ್ನಾಟಕದ ಅತ್ಯಂತ ಹಳೆಯ ಜೈನ ಶಿಲ್ಪಗಳಾಗಿವೆ. ಇವುಗಳ ಪ್ರಭಾವ ಅನಂತರ ಕಾಲದಲ್ಲಿ ನಿರ್ಮಾಣಗೊಂಡ ಜೈನ ಮೂರ್ತಿ ಶಿಲ್ಪಗಳ ಮೇಲೂ ಆಯಿತು. (ಶುಭಚಂದ್ರ ೧೯೭೬ ಪು. ೪೪-೪೫) ಬಾದಾಮಿ ಚಾಲುಕ್ಯರ ಕಾಲದಿಂದ ಹಿಡಿದು ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರ ಕಾಲದವರೆಗೆ ಮೂರ್ತಿಶಿಲ್ಪ ತನ್ನದೇ ಆದ ಬೆಳವಣಿಗೆಯನ್ನು ಕಂಡಿತು. (ಭಟ್‌ಸೂರಿ ಕೆ.ಜಿ., ೧೯೯೬ ಪು. ೧೯)

ಉಳಿದ ಧರ್ಮಗಳಿಗೆ ಹೋಲಿಸಿ ನೋಡಿದಲ್ಲಿ ಜೈನಧರ್ಮದಲ್ಲಿಯೂ ಅನೇಕ ಬದಲಾವಣೆಗಳಾದರೂ ಜೈನ ಶಿಲ್ಪಕಲೆಯ ದೃಷ್ಟಿಯಿಂದ ಹೆಚ್ಚಿನ ಬೆಳವಣಿಗೆಯಾಗಲಿಲ್ಲ. ಉದಾಹರಣೆ ಇಂದಿನ ತೀರ್ಥಂಕರರ ಮೂರ್ತಿಶಿಲ್ಪಗಳಲ್ಲಿ ಕಾಣುವ ಸಾಮಾನ್ಯ ಲಕ್ಷಣಗಳನ್ನು ಪ್ರಾರಂಭದ ಹಂತದಲ್ಲಿಯೂ ನಾವು ಕಾಣುತ್ತೇವೆ. ಎಲ್ಲಾ ತೀರ್ಥಂಕರರ ಮೂರ್ತಿ ಲಕ್ಷಣಗಳು ಒಂದೇ ತೆರನಾಗಿರುತ್ತವೆ. ತೀರ್ಥಂಕರರ ಮೂರ್ತಿಗಳಲ್ಲಿ ಎರಡು ವಿಧ. ೧. ಸ್ಥಾನಕ ಅಥವಾ ಕಾಯೋತ್ಸರ್ಗ ೨. ಆಸೀನ-ಪದ್ಮಾಸನ ಅಥವಾ ಪರ್ಯಂಕಾಸನ (ಭಟ್‌ಸೂರಿ ಕೆ.ಜಿ. ೧೯೯೬, ಪು. ೨೦)

ಸ್ಥಾನಕನಾಗಿದ್ದಾಗ ಎರಡೂ ಕೈಗಳನ್ನು ಪಕ್ಕದಲ್ಲಿ ಇಳಿಬಿಟ್ಟು ಸಮಭಂಗದಲ್ಲಿ ನಿಂತಿರುವಂತೆ ಕಾಣುತ್ತೇವೆ. ಇದನ್ನೇ ಕಾಯೋತ್ಸರ್ಗವೆನ್ನುತ್ತಾರೆ. ಕುಳಿತಿದ್ದಾಗ ಎಡಗಾಲ ಮೇಲೆ ಬಲಗಾಲನ್ನು ಇಟ್ಟು ಪದ್ಮಾಸೀನನಾಗಿರುವುದು. ಇದನ್ನೇ ಪರ್ಯಂಕಾಸನ ಎನ್ನುತ್ತಾರೆ. ಇಲ್ಲಿ ತೀರ್ಥಂಕರನ ಕಣ್ಣು ನೇರವಾಗಿ ಆತನ ನಾಸಿಕಾಗ್ರವನ್ನು ನೋಡುತ್ತಿರುವುದು. ಇದನ್ನು ಧ್ಯಾನಮುದ್ರೆ ಎಂತಲೂ ಕರೆಯುತ್ತಾರೆ. ಜಿನ ಮೂರ್ತಿ ಯಾವಾಗಲೂ ಪೂರ್ಣವಾಗಿ ನಗ್ನನಾಗಿರುವುದು. ನಿರಾಭರಣ, ಉದ್ದಕಿವಿ. ಗುಂಗುರು ಕೂದಲು. ಕೆಲವೊಮ್ಮೆ ಎದೆಯ ಮೇಲೆ ಶ್ರೀವತ್ಸ ಚಿಹ್ನೆ, ಇವು ತೀರ್ಥಂಕರರ ಸಾಮಾನ್ಯ ಲಕ್ಷಣಗಳು. ಎಲ್ಲಾ ತೀರ್ಥಂಕರರ

ಮೂರ್ತಿ ಲಕ್ಷಣಗಳೂ ಒಂದೇ ತೆರನಾಗಿರುವುದರಿಂದ ಅವರ ಹೆಸರುಗಳನ್ನು ಅವರ ಲಾಂಛನದಿಂದ ಗುರುತಿಸುತ್ತಾರೆ. ೨೪ ತೀರ್ಥಂಕರರು ಅವರ ಲಾಂಛನ, ವೃಕ್ಷ, ತೀರ್ಥಂಕರರ ಎಡಬಲದಲ್ಲಿನ ಯಕ್ಷ ಯಕ್ಷಿಯರ ಹೆಸರುಗಳು ಇರುತ್ತವೆ. (ರಾಜಶೇಖರ ಎಸ್. ೧೯೮೮, ಪು. ೨೦೭) ಕುಮ್ಮಟ ನಾಯಕರ ಕಾಲಕ್ಕೆ ಸಂಬಂಧಿಸಿದಂತೆ ಜೈನ ಮೂರ್ತಿಶಿಲ್ಪಗಳ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಕುಮ್ಮಟ ದುರ್ಗ, ಯಲಬುರ್ಗದಲ್ಲಿ ಜೈನ ಮೂರ್ತಿಶಿಲ್ಪಗಳು ಇಲ್ಲಿ ಪ್ರಮುಖವಾಗಿವೆ. ಯಲಬುರ್ಗದ ನಗರ ಜಿನಾಲಯದ ಪಾರ್ಶ್ವನಾಥ ಮೂರ್ತಿ, ಪ್ರಸಕ್ತ ಲಂಡನ್ನಿನ ವಿಕ್ಟೋರಿಯಾ ಅಂಡ್ ಅಲ್ಬರ್ಟ್ ಮ್ಯೂಜಿಯಂನಲ್ಲಿದೆ. ಉಳಿದಂತೆ ಸಾಲಾರಜಂಗ್ ಮ್ಯೂಜಿಯಂನಲ್ಲಿರುವ ಪಂಚಪರಮೇಷ್ಠಿಗಳ ಶಿಲ್ಪ ಚೌವೀಸ ತೀರ್ಥಂಕರರ ಪ್ರತಿಮೆಗಳಿವೆ. ಕುಮ್ಮಟದುರ್ಗದಲ್ಲಿರುವ ತೀರ್ಥಂಕರರ ಜೈನ ಮೂರ್ತಿಗಳನ್ನು ಈ ನನ್ನ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಹೆಸರು	: ಪಾರ್ಶ್ವನಾಥ
ಸ್ಥಳ	: ನಗರ ಜಿನಾಲಯ ಯಲಬುರ್ಗಾ (ಪ್ರಸ್ತುತ ವಿಕ್ಟೋರಿಯಾ ಅಂಡ್ ಅಲ್ಬರ್ಟ್ ಮ್ಯೂಜಿಯಮ್, ಲಂಡನ್)
ಶಿಲಾವಸ್ತು	: ಬಳಪದ ಶಿಲೆ
ಕಾಲ	: ಕ್ರಿ.ಶ. ೧೩ನೇ ಶತಮಾನ (೧೨೮೭)
ಉಲ್ಲೇಖ	:ಚನ್ನಬಸಪ್ಪ ಎಸ್.ಪಾಟೀಲ, ೧೯೭೭ ವಿಜಯನಗರ ಅಧ್ಯಯನ-೩, ಪು.೯೪-೯೬.

ಸಮಭಂಗದಲ್ಲಿ ನಿಂತಿರುವ ಪಾರ್ಶ್ವನಾಥನ ಶಿಲ್ಪವನ್ನು ಅತ್ಯಂತ ಸೂಕ್ಷ್ಮವಾಗಿ ರಚಿಸಲಾಗಿದೆ. ಪಾರ್ಶ್ವನಾಥನು ಪದ್ಮಪೀಠದ ಮೇಲೆ ನಿಂತಿದ್ದು, ವಿಶಾಲವಾದ ವಕ್ಷಸ್ಥಲ, ಬಲಯುತವಾದ ಬಾಹುಗಳು ಇರುವುವು. ಗಂಭೀರವಾದ ಮುಖ ಭಾವ, ಅಗಲವಾದ ಕರ್ಣಗಳು, ತಲೆಯ ಮೇಲೆ ಗುಂಗುರು ಕೂದಲುಗಳು ಇರುವುದು. ಹಿಂಭಾಗದಲ್ಲಿ ಶೇಷನಾಗವನ್ನು ಪಾರ್ಶ್ವನಾಥನ ತಲೆಯ ಮೇಲೆ ತನ್ನ ಏಳು ಹೆಡೆಗಳಿಂದ ನೆರಳನ್ನು ನೀಡಿರುವನು. ಸರ್ಪದ ಏಳು ತಲೆಗಳ ಮೇಲೆ ನಾಗಮಣಿಗಳಿವೆ. ಹಾಗೂ ಹೆಡೆಯ ಬದಿಗಳಲ್ಲಿ ಕಮಲದ ಪುಷ್ಪಗಳು ಮತ್ತು ಚಾಮರಗಳಿವೆ ಹಾಗೂ ತೊಡೆಯ ಮೇಲೆ ಮುಕ್ಕೊಡೆ ಇರುವುದು. ಮುಕೊಡೆಯು ಪುಷ್ಪಾಲಂಕರಣವನ್ನು ಒಳಗೊಂಡಿದೆ. ಪಾರ್ಶ್ವನಾಥನ ಹಿಂಭಾಗದಲ್ಲಿ ಸರಳವಾದ ಪ್ರಭಾವಳಿ ಇದೆ. ಲಲಾಟದಲ್ಲಿ ಕೂಡ ಶಿಲ್ಪವಿದೆ. ಪಾರ್ಶ್ವನಾಥನ ಪಾದಗಳ ಬದಿಗಳಲ್ಲಿ ಯಕ್ಷಯಕ್ಷಿಯರ ಶಿಲ್ಪಗಳಿವೆ. ಯಕ್ಷಯಕ್ಷಿಯರ ಶಿಲ್ಪಗಳು, ಕಿರೀಟಧಾರಿಗಳೂ ಸರ್ವಾಭರಣ ಭೂಷಿತರಾಗಿ ಲಲಿತಾಸನದಲ್ಲಿ ಕುಳಿತಿರುವರು. ಕೈಗಳಲ್ಲಿ ಪಾಶಾ ಮತ್ತು ಅಂಕುಶಗಳನ್ನು ಹೊಂದಿರುವರು. ಶಿಲ್ಪಗಳ ತಲೆಯ ಮೇಲೆ ನಾಗಸರ್ಪದ ಹೆಡೆ ಇರುವುದು ಹಾಗೂ ಹೆಡೆಯ ಮೇಲೆ ನಾಗಮಣಿಗಳಿವೆ.

ಪಾರ್ಶ್ವನಾಥ ಶಿಲ್ಪ ಸರಳವಾಗಿದೆ ಹಾಗೂ ಪೀಠಭಾಗದಲ್ಲಿರುವ ಶಾಸನದನ್ವಯ ಮುಮ್ಮಡಿ ಸಿಂಗೆಯ ನಾಯಕನಿಂದ ಯಲಬುರ್ಗದ ಜೈನಧರ್ಮಕ್ಕೆ ತೊಂದರೆ ಆಯಿತೆಂದು ನಂತರ ಮಲ್ಲಿಸೆಟ್ಟಿ ಎಂಬುವರು ನಗರ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದರ ಉಲ್ಲೇಖವಿದೆ.

ಹೆಸರು : ಚೌವೀಸ ತೀರ್ಥಂಕರ

ಸ್ಥಳ : ನಗರ ಜಿನಾಲಯ ಯಲಬುರ್ಗಾ, (ಪ್ರಸಕ್ತ ಸಾಲಾರ ಜಂಗ್ ಮ್ಯೂಜಿಯಂ ಹೈದರಾಬಾದ್)

ಶಿಲಾವಸ್ತು : ಬಳಪದ ಶಿಲೆ

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : ಕವಿವಿಶಾಸಂ-೨, ಯಲಬುರ್ಗಾ ನಂ. ೪, ಪು. ೧೬೧

ಇಪ್ಪತ್ನಾಲ್ಕು ತೀರ್ಥಂಕರರ ವಿಗ್ರಹವನ್ನು ಮಾದರಿಕಾ ದಂಡನಾಯಕನು ಮಾಡಿಸಿದ ಬಸದಿಗೆ ಮಂಡಳಾಧಿಕಾರಿಗಳ ರಾಯ ರಾಜಗುರು ಶ್ರೀ ಪದ್ಮನಂದಿ ಸಿದ್ಧಾಂತ ಚಕ್ರವರ್ತಿಗಳ ಶಿಷ್ಯರು ಚೌವೀಸ ತೀರ್ಥಂಕರ ಮೂರ್ತಿಯನ್ನು ಮಾಡಿಕೊಟ್ಟಿರುವುದಾಗಿ ಉಲ್ಲೇಖಿಸಲಾಗಿದೆ.

ಹೆಸರು : ಪಂಚ ಪರಮೇಷ್ಠಿಗಳ ಪ್ರತಿಮೆ

ಸ್ಥಳ : ನಗರ ಜಿನಾಲಯ ಯಲಬುರ್ಗಾ, ಕೊಪ್ಪಳ ತಾಲೂಕು, ಜಿಲ್ಲೆ (ಸಾಲಾರ್‌ಜಂಗ ಮ್ಯೂಜಿಯಂ ಹೈದರಾಬಾದ್)

ಶಿಲಾವಸ್ತು : ಬಳಪದ ಶಿಲೆ

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : ಕವಿವಿಶಾಸಂ. ೨ ಯಲಬುರ್ಗ ನಂ. ೫, ಪು. ೧೬೨

ಪಂಚಪರಮೇಷ್ಠಿಗಳ ಪೀಠಭಾಗದಲ್ಲಿರುವ ಶಾಸನ ಉಲ್ಲೇಖದನ್ವಯ ಎರಂಬರಗೆಯ ಯಲಬುರ್ಗದ ಸೇನಬೋವ ಅಚಣ್ಣಾಯವರ ಮಗ ದೇವನಾಮ ಪಂಚ ಪರಮೇಷ್ಠಿಗಳ ಪ್ರತಿಮೆಯನ್ನು ಮಾಡಿಸಿರುವುದಾಗಿ ಉಲ್ಲೇಖವಿದೆ.

ಹೆಸರು : ಪಾರ್ಶ್ವನಾಥ

ಸ್ಥಳ : ಜೈನದೇವಾಲಯ ಕುಮಾರ ರಾಮನ ಗುಡ್ಡ ಕುಮ್ಮಟ ದುರ್ಗ, ಕೊಪ್ಪಳ ತಾಲೂಕು, ಜಿಲ್ಲೆ.

ಶಿಲಾವಸ್ತು : ಬಳಪದ ಶಿಲೆ

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಉಲ್ಲೇಖ : VPR 1987-88 P: 206-207

ಭಗ್ನಗೊಂಡಿರುವ ಪಾರ್ಶ್ವನಾಥ ಶಿಲ್ಪವು ಜಿನಾಲಯದ ಸಭಾ ಮಂಟಪದಲ್ಲಿದೆ. ಪಾದಗಳ ಭಾಗ ಹಾಗೂ ಪ್ರಭಾವಳಿಯ ಭಾಗಗಳು ಭಗ್ನಗೊಂಡಿವೆ. ಪಾರ್ಶ್ವನಾಥನ ಶಿಲ್ಪವು ಸಮಭಂಗದಲ್ಲಿ ನಿಂತಿದೆ. ತಲೆಯ ಮೇಲೆ ಗುಂಗುರು ಕೂದಲುಗಳ ಅಲಂಕರಣವಿದೆ, ಮುಖ ಗಂಭೀರವಾಗಿದೆ.

ಹೆಸರು	: ಪಾರ್ಶ್ವನಾಥ
ಸ್ಥಳ	: ಜಿನಾಲಯ, ಕುಮಾರ ರಾಮನ ಗುಡ್ಡ, ಕುಮ್ಮಟ ಕೊಪ್ಪಳ ತಾಲೂಕು ಜಿಲ್ಲೆ.
ಶಿಲಾವಸ್ತು	: ಬಳಪದ ಶಿಲೆ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ
ಉಲ್ಲೇಖ	: VPR 1987-88. P: 206-207

ಜಿನಾಲಯದ ಮಧ್ಯದ ಗರ್ಭಗೃಹದಲ್ಲಿರುವ ಪಾರ್ಶ್ವನಾಥ ಮೂರ್ತಿ ಪದ್ಮಾಸನದಲ್ಲಿ ಸಿಂಹಪೀಠದ ಮೇಲೆ ಕುಳಿತಿರುವನು. ತೀರ್ಥಂಕರರ ಹಿಂಭಾಗದಲ್ಲಿ ಯಕ್ಷರಿದ್ದು ಚೌರಿಧಾರಿಗಳಾಗಿರುವರು. ಪಾರ್ಶ್ವನಾಥನ ಶಿರಭಾಗದಲ್ಲಿ ಪ್ರಭಾವಳಿ ಇದೆ. ಶಿರದ ಮೇಲ್ಭಾಗದಲ್ಲಿ ಮುಕ್ಕೊಡೆ ಇರುವುದು. ಪೀಠದ ಮೂಲೆಗಳಲ್ಲಿ ನಿಂತಿರುವ ಸಿಂಹಗಳ ಶಿಲ್ಪಗಳಿವೆ. ಈ ಪಾರ್ಶ್ವನಾಥನನ್ನು ಸ್ಥಳೀಯ ಜನರು ಬುದ್ದಪ್ಪನೆಂಬ ಹೆಸರಿನಿಂದ ಕರೆಯುವ ವಾಡಿಕೆ ಇದೆ.

ಗುಂಡು ಬ್ರಹ್ಮಯ್ಯರ ಮೂರ್ತಿಶಿಲ್ಪಗಳು

ಕುಮ್ಮಟ ನಾಯಕರಿಗೂ ಶೂಲಬ್ರಹ್ಮ(ಗುಂಡಭೊಮ್ಮಯ್ಯ)ಗಳಿಗೂ ನಿಕಟವಾದ ಸಂಬಂಧವಿದೆ. ಗುಂಡ ಬ್ರಹ್ಮಯ್ಯಗಳು ಕುಮ್ಮಟ ನಾಯಕರ ಸಮಕಾಲೀನರಲ್ಲ. ಆದರೆ ಇವರು ಶಿವನ ಪರಮ ಭಕ್ತರು. ಕುಮಾರ ರಾಮನೂ ಗುಂಡಭೊಮ್ಮಯ್ಯರ ಪರಮ ಭಕ್ತ. ಕಾರಣ ಈತನ ಎಲ್ಲಾ ದಿಗ್ವಿಜಯಗಳಲ್ಲಿ ಗುಂಡಭೊಮ್ಮಯ್ಯರ ಆಶೀರ್ವಾದವಿತ್ತೆಂದು ಕುಮಾರ ರಾಮನ ಚರಿತದಲ್ಲಿ ಉಲ್ಲೇಖವಿದೆ. ಅಲ್ಲದೆ, ನಂಜುಂಡ ಕವಿಯು ಕುಮಾರ ರಾಮನ ಚರಿತದಲ್ಲಿ ಶೂಲದ ಹಬ್ಬದ ಕುರಿತು ಪ್ರತ್ಯೇಕ ಅಧ್ಯಾಯವನ್ನು ರಚಿಸಿದ್ದಾನೆ ಗುಂಡಭೊಮ್ಮಯ್ಯರ ಸ್ಮರಣಾರ್ಥವಾಗಿ ಶೂಲದ ಹಬ್ಬವನ್ನು ತನ್ನ ರಾಜ್ಯ ಪ್ರಥಮವಾಗಿ ಕಂಪಿಲ ದೇವನು ಆಚರಣೆಗೆ ತಂದನು. ಕುಮಾರ ರಾಮನು ಭೊಲ್ಲನೆಂಬ ಅಶ್ವವನ್ನು ತಂದದ್ದು, ಇವರ ಆಶೀರ್ವಾದದ ಫಲದಿಂದ. ಈ ವಿಜಯಗಳ ಹಿನ್ನೆಲೆಯಲ್ಲಿ ಕುಮ್ಮಟ ನಾಯಕರ ಸ್ಥಳಗಳಲ್ಲಿ ಇವರ ಶಿಲ್ಪಗಳನ್ನು ಸ್ಥಾಪಿಸಿದನು. ದೇವಾಲಯಗಳ ಸ್ತಂಭಗಳ ಮೇಲೆ ಈ ಶಿಲ್ಪಗಳ ನಿರ್ಮಾಣ ಕಂಡು ಬರುತ್ತದೆ. ಉದಾ : ಹೊಸಮಲೆದುರ್ಗ, ಚಿತ್ರದುರ್ಗ, ಕುರುವತ್ತಿ, ಬಳ್ಳಾರಿ, ಶಿವಮೊಗ್ಗ, ಬುಕ್ಕಸಾಗರಗಳಲ್ಲಿ ಈ ಶಿಲ್ಪಗಳು ಕಂಡುಬರುತ್ತವೆ. ಗುಂಡಭೊಮ್ಮಯ್ಯಗಳು ಶೂಲವನ್ನು ಹಿಡಿದು ನಿಂತಿರುವ ದೃಶ್ಯ ಹಾಗು ಶೂಲವನ್ನೇರಿ ಆತ್ಮಾರ್ಪಣೆ ಮಾಡಿಕೊಂಡಿರುವ ಶಿಲ್ಪಗಳು ಹಾಗು ಅವರ ಸತಿಯರು, ತಮ್ಮ ಕೊರಳನ್ನು ಕೊಯ್ದುಕೊಂಡು ಸಹಗಮನ ಮಾಡಿರುವ ಶಿಲ್ಪಗಳು, ಕಹಳೆಯನ್ನು ಊದುವ ಶಿಲ್ಪ ತಮ್ಮ ಕುಲವೃತ್ತಿಯಾದ ಮಡಿಕೆ ಮಾಡುವ ಕಾಯಕವನ್ನು ಮಾಡುವ, ತಾಳದ ಶಬ್ದಕ್ಕೆ ಶಿವನು ನೃತ್ಯವನ್ನು ಮಾಡುವ ಶಿಲ್ಪಗಳು, ಬಳ್ಳಾರಿಯ ಕೋಟೆ ಮಲ್ಲೇಶ್ವರ ದೇವಾಲಯ ಮತ್ತು ಬುಕ್ಕಸಾಗರದ ವೀರಭದ್ರ ದೇವಾಲಯಗಳಲ್ಲಿವೆ. ಚಿತ್ರದುರ್ಗ ಸಂಪಿಗೆ ಸಿದ್ದೇಶ್ವರ ದೇವಾಲಯದ ನವರಂಗದಲ್ಲಿ ಶೂಲಬ್ರಹ್ಮರ ಪ್ರತ್ಯೇಕವಾದ ಚಿಕ್ಕ ಆಲಯವಿದೆ. ಹೊಸಮಲೆದುರ್ಗದ ಶಿಲ್ಪವು ಹುಲಿಮಾನಪ್ಪನೆಂದು ಕರೆಯಲ್ಪಡುವ ಮಠದಲ್ಲಿದೆ. ಇಲ್ಲಿ ಶಿಲ್ಪದ ಪೀಠಭಾಗದಲ್ಲಿ ಶೂಲಬ್ರಹ್ಮರ ಶಿಲ್ಪಗಳಿವೆ. ಈ ಯೋಗಿ

ಹುಲಿಮೇಲೆ ಸವಾರಿ ಮಾಡುತ್ತಿರುವಂತಿದೆ. ಒಂದು ಸರ್ಪವನ್ನು ಹುಲಿಯ ಬಾಯಿಗೆ ಕಡಿವಾಣದಂತೆಯೂ ಇನ್ನೊಂದು ಸರ್ಪವನ್ನು ಬಲಗೈಯಲ್ಲಿ ಹಿಡಿದು ಚಾಟಿಯಂತೆ ಉಪಯೋಗಿಸಿದಂತಿದೆ. ಹಂಪೆಯ ಪರಿಸರದಲ್ಲಿನ ಇನ್ನೊಂದು ಶಿಲ್ಪದಲ್ಲಿ ಶೂಲದ ಮುಂದೆ ಕುಮಾರ ರಾಮನು ಕುದುರೆಯ ಮೇಲೆ ಕುಳಿತಿದ್ದಾನೆ. ಇದರಿಂದ ಶೂಲಬ್ರಹ್ಮರು ಕುಮ್ಮಟ ನಾಯಕರ ಕಾಲಾವಧಿಯಲ್ಲಿ ಜನಪ್ರಿಯರಾಗಿದ್ದಾರೆ. ಆನೆಗುಂದಿಯ ತಾಮ್ರಶಾಸನದಲ್ಲಿರುವ ಶಿವನ ಮೂರು ಪುರಾಣಗಳನ್ನು ಇವರು ಬರೆದಿರುವ ಅಂಶವು ವ್ಯಕ್ತವಾಗುವುದು. (VPR: 1987, P. 17-32) ಇದರಲ್ಲಿ ಇವರು ವೃತ್ತಿಯಿಂದ ಕುಂಬಾರರೆಂದು ಕರೆದುಕೊಂಡಿರುವರು. ದೋಶೋಪಹಾರಿಗಳೆಂಬ ಉಲ್ಲೇಖವಿದೆ. ಕಥೆಯ ಅನ್ವಯ ಇವರು ಒರಿಸ್ಸಾದ ಗಜಪತಿ ಆಶ್ರಯದಲ್ಲಿದ್ದವರು. ಬ್ರಹ್ಮಗುಂಡಯರನ್ನು ಕಾಕತೀಯರು ಶೂಲಕ್ಕೇರಿಸಿದುದರ ಹಿನ್ನೆಲೆಯಲ್ಲಿ ಇವರನ್ನು ಶೂಲ ಬ್ರಹ್ಮರೆಂದು ಕರೆಯಲಾಗಿದೆ. ಪ್ರಸ್ತುತ ಈ ಕಾಲದ ಗುಂಡುಬೊಮ್ಮಯ್ಯರುಗಳಿಗೆ ಸಂಬಂಧಿಸಿದ ಶಿಲ್ಪಗಳ ಲಕ್ಷಣಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

ಹೆಸರು : ಗುಂಡಬ್ರಹ್ಮಯ್ಯ

ಸಿಕ್ಕ ಸ್ಥಳ : ನವರಂಗದ ಸ್ತಂಭಗಳ ಮೇಲೆ, ವೀರಭದ್ರ ದೇವಾಲಯ, ಬುಕ್ಕಸಾಗರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ. ೧೩ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : ಕೊಟ್ರಯ್ಯ ಸಿಟಿ.ಎಂ. ೧೯೯೭, ವಿಜಯನಗರ ಅಧ್ಯಯನ-೩, ಪು. ೧-೨೦

ವೀರಭದ್ರ ದೇವಾಲಯದ ನವರಂಗದಲ್ಲಿನ ಗೋಡೆಗೆ ಹೊಂದಿಕೊಂಡಿರುವ ಸ್ತಂಭಗಳ ಮೇಲೆ ಪುರಾತನ ಶಿವಶರಣರ ಶಿಲ್ಪಗಳಿವೆ. ಅವುಗಳಲ್ಲಿ ಮೂರು ಶಿಲ್ಪಗಳು ಗುಂಡಬ್ರಹ್ಮಯ್ಯರ ಶಿಲ್ಪಗಳಾಗಿವೆ. ಇವುಗಳಲ್ಲಿ

೧. ಗುಂಡಯ್ಯನು ಮಡಿಕೆ ಮಾಡುವಾಗ ಬಡಿತದ ಶಬ್ದಕ್ಕೆ ಶಿವನು ನೃತ್ಯ ಮಾಡುವ ಶಿಲ್ಪ, ೨. ಗುಂಡಬ್ರಹ್ಮಯ್ಯರು ಕಹಳೆಯನ್ನು ಊದುತ್ತಿರುವ ಶಿಲ್ಪ, ೩. ಗುಂಡಬ್ರಹ್ಮಯ್ಯರ ಶೂಲದ ಶಿಲ್ಪಗಳಾಗಿವೆ.

ಕಂಬದ ಮೇಲಿರುವ ಈ ಶಿಲ್ಪವು ಪೀಠದ ಮೇಲೆ ರಚಿತವಾಗಿದ್ದು, ಗುಂಡಯ್ಯನು ಕುಳಿತುಕೊಂಡು ಮಡಿಕೆ ಮಾಡುವ ಕಾಯಕದಲ್ಲಿ ಮಗ್ನನಾಗಿರುವನು. ಅವನ ಬಲಗೈಯಲ್ಲಿ ಮಡಕೆ (ಹಸಿಯಾಗಿರುವ) ತಟ್ಟುತ್ತಿದೆ. ಮೈಮೇಲೆ ಯಜ್ಞೋಪವೀತ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೊರಳಲ್ಲಿ ಕಂಠಾಭರಣ,ಕರ್ಣಾಭರಣ, ಮತ್ತು ತಲೆಯ ಮೇಲೆ ಮುಕುಟವಿದೆ. ಶಿರವಸ್ತ್ರ(ರುಮಾಲು)ವನ್ನು ಧರಿಸಿದ್ದಾನೆ. ಇವನ ಮುಂಭಾಗದಲ್ಲಿ ಶಿವನು ತ್ರಿಭಂಗದಲ್ಲಿದ್ದು, ತ್ರಿಶೂಲವನ್ನು ಭುಜದ ಮೇಲೆ ಅಡ್ಡವಾಗಿ ಇರಿಸಿ ಎರಡೂ ಕೈಗಳನ್ನು ಬದಿಗಳಲ್ಲಿ ಹಿಡಿದಿರುವನು. ಶಿವನ ತಲೆಯಲ್ಲಿ ಕೇಶಗಳು ಹರಡಿಕೊಂಡಿವೆ. ಹಣೆಯ ಮೇಲೆ ಪಟ್ಟವನ್ನು ಧರಿಸಿದ್ದಾನೆ. ಮುಂಗೈಗಳಲ್ಲಿ ಕಡಗಗಳಿವೆ. ಶಿವನು ನರ್ತನ ಮಾಡುವ ಭಂಗಿಯಲ್ಲಿದ್ದಾನೆ. ಕುಮಾರ

ಗುಂಡಯ್ಯನ ತಾಳಕ್ಕೆ ನಿಷ್ಠೆಗೆ ಮೆಚ್ಚಿ ಶಿವನೇ ಗುಂಡಯ್ಯನ ಮುಂದೆ ನರ್ತನ ಮಾಡಿದನೆಂದು, ಹರಿಹರ ಕವಿಯೂ, ಗುಂಡಯ್ಯನ ರಗಳೆಗಳೂ ಉಲ್ಲೇಖಿಸುತ್ತವೆ.

ಗುಂಡ ಮತ್ತು ಬ್ರಹ್ಮಯ್ಯರ ಶಿಲ್ಪಗಳು ಚಿಕ್ಕಾದಾದ ಪೀಠದ ಮೇಲೆ ನಿರ್ಮಾಣವಾಗಿದ್ದು, ಇಬ್ಬರು ಎದುರಾಗಿ ನಿಂತುಕೊಂಡಿದ್ದು, ಗುಂಡಯ್ಯ ಎಡಕಾಲು ಮತ್ತು ಬ್ರಹ್ಮಯ್ಯ ಬಲಗಾಲುಗಳನ್ನು ಮುಂದೆ ಇಟ್ಟಂತಿದೆ. ದೋತರವನ್ನು ನಡುವಿನಲ್ಲಿ ಧರಿಸಿದೆ. ಅದರ ಮೇಲೆ ಇನ್ನೊಂದು ವಸ್ತ್ರವನ್ನು ನಡುವಿನಲ್ಲಿ ಕಟ್ಟಿದಂತಿದೆ. ಇಬ್ಬರು ಮೇಲ್ಮುಖ ಮಾಡಿಕೊಂಡು, ಕಹಳೆಗಳನ್ನು ಎರಡೂ ಕೈಗಳಲ್ಲಿ ಹಿಡಿದಿದ್ದು ಊದುತ್ತಿರುವಂತಿದೆ. ಅವರ ತಲೆಯ ಮೇಲಿಂದ ಜಡೆಗಳು ಬೆನ್ನ ಹಿಂದೆ ಹೆಣೆಯಲ್ಪಟ್ಟಿದೆ.

ಗುಂಡ ಮತ್ತು ಬ್ರಹ್ಮಯ್ಯ ಎಂಬವರಿಬ್ಬರೂ ಕೆಚ್ಚೆದೆಯ ಧೀರರಾಗಿದ್ದು, ವೀರಶೈವ ಭಕ್ತರೂ ಅವರು ತಮ್ಮ ಪೂರ್ವ ಜನ್ಮದಲ್ಲಿ ಜಗದೇವ ಮತ್ತು ಮಲ್ಲಿ ಬೊಮ್ಮ ಎಂಬ ಹೆಸರುಗಳಿಂದ ಹುಟ್ಟಿದ್ದರೆಂದೂ ಮತ್ತು ಆಗ ಕಲ್ಯಾಣದಲ್ಲಿದ್ದ ಬಸವೇಶ್ವರ ಸಮಕಾಲೀನರಾಗಿದ್ದರು. ಎಂಬ ವಿವರಗಳನ್ನು ಹರಿಹರ ಕವಿಯ ``ಗುಂಡಯ್ಯನ ರಗಳೆ'' ಉಲ್ಲೇಖಿಸುತ್ತದೆ. (ಕಲಬುರ್ಗಿ ಎಂ.ಎಂ. ೧೯೯೯, ಪು. ೨೨) ಕಲ್ಯಾಣದಲ್ಲಿ ಜರುಗಿದ ಕ್ರಾಂತಿಯ ಕಾಲದಲ್ಲಿ ಇವರೇ ಕಳಚೂರಿ ಬಿಜ್ಜಳ ಅರಸನನ್ನು ಕೊಲೆ ಮಾಡಿದರೆಂದು, ಆ ಕಾರಣದಿಂದಾಗಿಯೇ ಅವರನ್ನು ಮರಣದಂಡನೆಗೆ ಒಳಪಡಿಸಿ ಶೂಲಕ್ಕೇರಿ ಸಲಾಯಿತೆಂಬ ಪ್ರತೀತಿಯಿದೆ. ಅನಂತರ ಅವರಿಬ್ಬರಿಗೂ ಗುಂಡ ಮತ್ತು ಬ್ರಹ್ಮಯರು ಎಂಬ ಹೆಸರುಗಳಿಂದ ತೆಲಗು ದೇಶದಲ್ಲಿಯ ಗವಪೆರ (ತೆಲಗು ದೇಶ)ಎಂಬ ಗ್ರಾಮದಲ್ಲಿ ಪುನರ್‌ಜನ್ಮವಾಯಿತೆನ್ನಲ್ಲಾಗಿದೆ.

ಗಂಡ ಬ್ರಹ್ಮಯ್ಯರ ಧ್ಯೇಯ ಧೋರಣೆಗಳನ್ನು ಶಿವನು ಪರೀಕ್ಷೆ ಮಾಡಬೇಕೆಂದು ನಿರ್ಧರಿಸಿ, ಕಳ್ಳನ ವೇಷವನ್ನು ಧರಿಸಿ ಹೋಗುತ್ತಾನೆ. ಮಹಾನಗರದ ಕಾಕತೀಯ ವಂಶದ ಅರಸ ಗಣಪತಿರಾಯನ ಅರಮನೆಗೆ ಕನ್ನ ಹಾಕಿ ರಾಜ ಸಂಪತ್ತನ್ನು ಸೂರೆಗೊಳ್ಳುತ್ತಾರೆ. ನೇರವಾಗಿ ಶಿವನು ಗುಂಡಬ್ರಹ್ಮಯ್ಯರಿದ್ದಲ್ಲಿಗೆ ಹೋಗಿ, ತಾನು ಮಾಡಿದ್ದ ಕಳ್ಳತನದ ಕುರಿತಾಗಿ ತಿಳಿಸಿದಾಗ ಗುಂಡ ಬ್ರಹ್ಮಯ್ಯರು ತಮ್ಮ ಧ್ಯೇಯಧೋರಣೆಗಳಂತೆ ಆತನಿಗೆ ಆಶ್ರಯವನ್ನು ನೀಡಿದರು. ಇವನಿಗೆ ಆಶ್ರಯ ನೀಡಿದ ವಿಷಯ ಅರಸನಿಗೆ ತಿಳಿದು ಕಳ್ಳನನ್ನು ತಂದೊಪ್ಪಿಸುವಂತೆ ಆಜ್ಞೆ ಮಾಡಿದಾಗ, ಅವರು ಅದಕ್ಕೊಪ್ಪಲಿಲ್ಲ. ಇದರಿಂದ ಗುಂಡಬ್ರಹ್ಮಯ್ಯರನ್ನು ಶೂಲಕ್ಕೆ ಆಹುತಿಗೆ ಗುರಿಪಡಿಸುತ್ತಾರೆ.

ನಂಜುಂಡ ಕವಿಯು ಕುಮಾರ ರಾಮನಾಥನ ಚರಿತ್ರೆಯಲ್ಲಿ ಈ ಶೂಲದ ಹಬ್ಬದ ಆಚರಣೆಯನ್ನು ವಿಶೇಷವಾಗಿ ಕಂಪಿಲರಾಯನ ಕಾಲದಿಂದಲೇ ಪ್ರಾರಂಭಿಸಲಾಯಿತೆಂದು ಅಧ್ಯಾಯ ೬ ಸಂಧಿ ೧ ರಲ್ಲಿ ಶೂಲದ ಹಬ್ಬ, ಪದ್ಯ ಸಂಖ್ಯೆ ೮ರಲ್ಲಿ ಉಲ್ಲೇಖಿಸಿದೆ. (ದೇವೀರಪ್ಪ ಹೆಚ್, ೧೯೬೪, ಸಂ. ೩, ಪು. ೧-೨೦)

ಆ ಕಾಲದೊಳು ಬಂದ ಶೂಲದ ಹಬ್ಬ
ಲೋಕಕದನು ಕಂಪನೃಪತಿ

ಜೋಕೆ ತಪ್ಪದೆ ಮಾಡಿಸಿದನು ನಲವಿಂದ
ನೇಕ ವಿಭವ ಕೈಮಿಗನಲು......

ಎಂಬುದು ಗಮನಾರ್ಹವಾಗಿದ್ದು, ಚಿತ್ರದುರ್ಗದಲ್ಲಿನ ಗುಂಡಬ್ರಹ್ಮಯ್ಯರ ಶಿಲ್ಪ ಮತ್ತು ಸಂಪಿಗೆ ಸಿದ್ದೇಶ್ವರ ದೇವಾಲಯಗಳ ಶಾಸನಗಳು ಶೂಲದ ಹಬ್ಬವನ್ನು ಪುಷ್ಟೀಕರಿಸುತ್ತವೆ.

ಇನ್ನೊಂದು ಕಂಬದ ಮೇಲೆ ಗುಂಡಬ್ರಹ್ಮಯ್ಯರು ಶೂಲವೇರಿದ ಶಿಲ್ಪವಿದೆ. ಕಂಬದ ಮೇಲೆ ಚಿತ್ರಿತವಾಗಿರುವ ಈ ಜೋಡಿ ಶೂಲದ ಶಿಲ್ಪಕ್ಕೆ ಮೇಲ್ಭಾಗದಲ್ಲಿ ಒಂದೇ ಹಲಗೆ ಇದ್ದು ಗುಂಡಬ್ರಹ್ಮಯ್ಯರು ಒಂದೊಂದು ಬದಿಯಲ್ಲಿ ಕುಳಿತಿದ್ದು ಶೂಲವನ್ನೆರಲಾಗಿದೆ. ಎರಡೂ ಶೂಲಗಳ ಮೇಲ್ಭಾಗದಲ್ಲಿ ಶಿವನು ನಿಂತಿರುವ ಶಿಲ್ಪವಿದೆ. ತ್ರಿಶೂಲ, ಡಮರುಗಳನ್ನು ಹಿಡಿದು ಸಮಭಂಗದಲ್ಲಿ ನಿಂತಿದ್ದಾನೆ. ಕೆಳಭಾಗದ ಎರಡೂ ಬದಿಯಲ್ಲಿ ಸ್ತ್ರೀಯರು ನಿಂತಿದ್ದಾರೆ. ಗುಂಡಬ್ರಹ್ಮಯ್ಯರ ಪತ್ನಿಯರ ಕೈಗಳಲ್ಲಿನ ತಟ್ಟೆಯಲ್ಲಿರುವ ರುಂಡಗಳು ನಿಂತಿರುವ ಸ್ತ್ರೀಯರ ರುಂಡಗಳಾಗಿವೆ. ಸ್ತ್ರೀಯರು ಸರ್ವಾಭರಣ ಭೂಷಿತರಾಗಿದ್ದು, ಸಮಭಾಗಗಳಲ್ಲಿ ನಿಂತಿದ್ದ ಗುಂಡಬ್ರಹ್ಮಯ್ಯರನ್ನು ಶೂಲಕ್ಕೇರಿಸಿದ ಮೇಲೆ ಅವರ ಪತ್ನಿಯರು ತಮ್ಮ ಕೊರಳನ್ನು ಕೊಯ್ದು ತಟ್ಟೆಯಲ್ಲಿಟ್ಟಿದ್ದು, ಸಹಗಮನ ಮಾಡಿರುವ ಈ ಶಿಲ್ಪವು ಅತ್ಯಂತ ವಿಶಿಷ್ಟವಾಗಿದೆ.

ಹೆಸರು	: ಶೂಲಬ್ರಹ್ಮ ಅಥವಾ ಗುಂಡಬ್ರಹ್ಮಯ್ಯರು
ಸಿಕ್ಕ ಸ್ಥಳ	: ಹುಲಿಮಾನಪ್ಪನ ಮಠದ ಒಳಭಾಗದಲ್ಲಿ, ಹೊಸಮಲೆದುರ್ಗ,ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ ನೇ ಶತಮಾನ.
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: VPR: 1988-91, P. 238

ಹುಲಿಮಾನಪ್ಪನ ಶಿಲ್ಪದ ಕೆಳಭಾದಲ್ಲಿ ಶೂಲಬ್ರಹ್ಮ ಅಥವಾ ಗುಂಡಬ್ರಹ್ಮಯ್ಯಗಳ ಶಿಲ್ಪಗಳಿದ್ದು, ಗುಂಡಬ್ರಹ್ಮಯ್ಯರು ತಮ್ಮ ಕೈಗಳಲ್ಲಿ ಶೂಲವನ್ನು ಹಿಡಿದು ನಿಂತಿದ್ದು, ಹುಲಿಯ ಮೇಲೆ ಕುಳಿತಿರುವ ಯೋಗಿಯನ್ನು ನೋಡುತ್ತಿರುವಂತಿದೆ.

ಹೆಸರು	: ಹುಲಿಮಾನಪ್ಪ
ಸಿಕ್ಕ ಸ್ಥಳ	: ಹುಲಿಮಾನಪ್ಪ ಮಠದ ಒಳಭಾಗದಲ್ಲಿ, ಹೊಸಮಲೆದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : VPR: 1988-91, P. 238.

ಯೋಗಿ (ಸಂತ) ಹುಲಿಯ ಮೇಲೆ ಕುಳಿತಿದ್ದು, ಸರ್ಪವನ್ನು ಹುಲಿಯ ಬಾಯಿಗೆ ಕಡಿವಾಣ ಹಾಕಿ ಎಡಗೈಯಲ್ಲಿ ಹಿಡಿದಿದ್ದಾನೆ. ಕೊರಳಲ್ಲಿ ಶಿವಲಿಂಗ ಕರಡಿಗೆಯನ್ನು ಧರಿಸಿದ್ದು, ಕೈತೋಳು ಮತ್ತು ಮುಂಗೈಯಲ್ಲಿ ರುದ್ರಾಕ್ಷಿ ಮಾಲೆಗಳನ್ನು, ಕಟಿಯಲ್ಲಿ ಉಡಿದಾರ. ಮುಂಗಾಲುಗಳಲ್ಲಿ ಕಡಗಗಳನ್ನು ಧರಿಸಿದ್ದು, ಹುಲಿಯ ಮೇಲೆ ಕುಳಿತಿರುವಂತಿದೆ.

ಹೆಸರು : ಗುಂಡ ಬ್ರಹ್ಮಯ್ಯರು

ಸಿಕ್ಕ ಸ್ಥಳ : ಪಶ್ಚಿಮ ಭಾಗದ ಪ್ರಾಕಾರದ ಗೋಡೆಯ ಮೇಲೆ, ಕೋಟೆ ಮಲ್ಲೇಶ್ವರ ದೇವಾಲಯ, ಬಳ್ಳಾರಿ ತಾಲೂಕು ಮತ್ತು ಜಿಲ್ಲೆ.

ಕಾಲ : ಕ್ರಿ.ಶ.೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : ವಿ.ಅ.ಸಂ.-೪, ಪು.- ೧೨-೨೩.

ಪ್ರಸ್ತುತ ಈ ಶಿಲ್ಪಗಳ ಪಟ್ಟಿಕೆಯಲ್ಲಿ ಗುಂಡಬ್ರಹ್ಮಯರು ತಮ್ಮ ಕುಲವೃತ್ತಿಯಾದ ಮಣ್ಣಿನ ಮಡಿಕೆಗಳ ತಯಾರಿಕೆಯಲ್ಲಿ ತೊಡಗಿದಂತಿದೆ. ತಮ್ಮ ಎಡಕೈಗಳಲ್ಲಿ ಮಡಿಕೆಗಳನ್ನು ಹಿಡಿದುಕೊಂಡಿದ್ದು, ಬಲಗೈಯಲ್ಲಿ ಮರದ ತಟ್ಟುಗದಿಂದ ಮಡಿಕೆಯನ್ನು ತಟ್ಟುತ್ತಿದ್ದು, ಮಡಿಕೆಯ ತಟ್ಟಿದ ಶಬ್ದದ ತರಂಗಗಳಿಗೆ ಅವರಿಬ್ಬರ ಮಧ್ಯದಲ್ಲಿ ಶಿವನು ಪ್ರತ್ಯಕ್ಷನಾಗಿದ್ದ ದೃಶ್ಯವಿದೆ. ಶಿವ ತ್ರಿಶೂಲ, ಡಮರುಗಗಳನ್ನು ಹಿಡಿದಿದ್ದು, ಚತುರ್ಭುಜವುಳ್ಳವನಾಗಿದ್ದಾನೆ. ತಲೆಯಲ್ಲಿ ಜಟಾಮುಕುಟ, ಹಣೆಯಲ್ಲಿ ತ್ರಿನೇತ್ರ, ಕೊರಳಲ್ಲಿ ಕಂಠಹಾರ, ಕಟಿಯಿಂದ ಕೆಳಭಾಗದಲ್ಲಿ ದೋತರವಸ್ತ್ರವನ್ನು, ಮೇಖಲವನ್ನು ಧರಿಸಿದ್ದು ಸಮಭಂಗದಲ್ಲಿ ನಿಂತಿರುವನು. ಇನ್ನೊಂದು ಬದಿಯಲ್ಲಿ ಶಿವನು ನೃತ್ಯದಲ್ಲಿ ತೊಡಗಿರುವನು. ಗುಂಡಬ್ರಹ್ಮಯ್ಯರು ಮಡಕೆ ಮಾಡುವ ಶಬ್ದಗಳು ತಾಳಮದ್ದಳೆಯಂತೆ ಇಂಪಾಗಿದ್ದರಿಂದ, ಸಂತೋಷಗೊಂಡು ನೃತ್ಯವನ್ನು ಮಾಡುವಂತಿದೆ.

ಇದೇ ದೇವಾಲಯದ ದಕ್ಷಿಣ ಭಾಗದ ಪ್ರಾಕಾರದ ಗೋಡೆಯ ಮೇಲೆ, ಪಟ್ಟಿಯಲ್ಲಿ ಗುಂಡಬ್ರಹ್ಮರ ಶಿಲ್ಪ ಇದೆ. ಇಲ್ಲಿ ಗುಂಡಬ್ರಹ್ಮಯ್ಯರಿಬ್ಬರೂ ಪದ್ಮಾಸನದಲ್ಲಿ ಕುಳಿತಿದ್ದು, ತಮ್ಮ ಎಡ ಅಂಗೈಯಲ್ಲಿ ಶಿವಲಿಂಗವನ್ನು ಹಿಡಿದಿದ್ದು ಪೂಜಾ ನಿರತರಾಗಿದ್ದಾರೆ. ಕೊರಳಲ್ಲಿ, ತೋಳುಗಳಲ್ಲಿ ರುದ್ರಾಕ್ಷಿ ಮಾಲೆಗಳನ್ನು ಧರಿಸಿದ್ದಾರೆ. ತಲೆಯ ಕೂದಲು ಹಿಂಬದಿಗೆ ನೀಳವಾಗಿದೆ. ಇನ್ನೊಂದು ಬದಿಯಲ್ಲಿ ಗುಂಡಬ್ರಹ್ಮಯ್ಯರು ಕುಳಿತುಕೊಂಡು ತಮ್ಮ ಕೈಯಗಳಲ್ಲಿ ಗುಂಡನ್ನು ಹಿಡಿದು ಕೊಂಡಿದ್ದು ಇನ್ನೊಬ್ಬರು ಗುಂಡನ್ನು ನೋಡುತ್ತಿರುವಂತಿದೆ.

ಹೆಸರು : ಶೂಲಬ್ರಹ್ಮ

ಸಿಕ್ಕ ಸ್ಥಳ : ದಕ್ಷಿಣ ದಿಕ್ಕಿನ ಪ್ರಾಕಾರದ ಒಳಗೋಡೆಯಲ್ಲಿ ನವಗ್ರಹ ಮಂಟಪದ ಗೋಡೆಯಲ್ಲಿ, ಕೋಟೆ ಮಲ್ಲೇಶ್ವರ ದೇವಾಲಯ, ಬಳ್ಳಾರಿ.

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ.

ಉಲ್ಲೇಖ : ವಿ.ಅ.ಸಂ. ೪, ಪು. ೨೩

ಗುಂಡಬ್ರಹ್ಮಯ್ಯರು ಶೂಲಗಳನ್ನು ಹಿಡಿದಿದ್ದು ಇನ್ನೊಂದು ಕೈಯಲ್ಲಿ ಶಿವಲಿಂಗಗಳನ್ನು ಹಿಡಿದುಕೊಂಡಿರುವರು. ಹಾರ ಮತ್ತು ರುದ್ರಾಕ್ಷಿ ಮಾಲೆಗಳನ್ನು ಕೊರಳಲ್ಲಿ ಧರಿಸಿದ್ದು ದೋತರವನ್ನು ಉಟ್ಟಿದ್ದಾರೆ. ಅವರ ಕೂದಲುಗಳು ತಲೆಯಿಂದ ಹಿಂದೆ ಜೋತು ಬಿದ್ದಿದೆ. ಅವರ ಮುಂಭಾಗದಲ್ಲಿ ಸ್ತ್ರೀಯರಿಬ್ಬರು ಸರ್ವಾಭರಣ ಭೂಷಿತರಾಗಿದ್ದಾರೆ. ತೋಳುಗಳಲ್ಲಿ ರುದ್ರಾಕ್ಷಿಮಾಲೆಗಳನ್ನು ಧರಿಸಿದ್ದು, ತಟ್ಟೆಯನ್ನು ಹಿಡಿದುಕೊಂಡಿದೆ. ದೀಪ ಮತ್ತು ಕಳಶಗಳು ತಟ್ಟೆಯಲ್ಲಿವೆ. ಒಂದೆಡೆ ಅವರ ವೃತ್ತಿನಿಷ್ಠೆ, ಭಕ್ತಿಗೆ ಮೆಚ್ಚಿ ಶಿವನೆ ನೃತ್ಯ ಮಾಡುವುದು ಮತ್ತು ಇನ್ನೊಂದೆಡೆ ಅವರು ಶೂಲವನ್ನು ಏರುವ ದೃಶ್ಯಗಳು ಮನ ಮುಟ್ಟುವಂತಿದೆ.

ಹೆಸರು : ಗುಂಡ ಬೊಮ್ಮಯ್ಯರು

ಸಿಕ್ಕ ಸ್ಥಳ : ಮಲ್ಲಿಕಾರ್ಜುನ ದೇವಾಲಯದ ಅಂತರಾಳದಲ್ಲಿ, ಕುರುವತ್ತಿ, ಹೂವಿನಹಡಗಲಿ ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ.೧೩ ೧೪ ನೇ ಶತಮಾನ.

ಶಿಲಾವಸ್ತು : ಬಳಪದ ಶಿಲೆ.

ಗುಂಡ ಬೊಮ್ಮಯ್ಯಗಳ ಬಿಡಿ ಶಿಲ್ಪವೊಂದು ದೇವಾಲಯದ ಅಂತರಾಳದಲ್ಲಿದೆ. ಇಲ್ಲಿ ಗುಂಡಯ್ಯ ಮತ್ತು ಬೊಮ್ಮಯ್ಯರು ಸಮಭಂಗದಲ್ಲಿ ನಿಂತಿರುವರು. ಇವರ ಮುಂದೆ ಎರಡೂ ಶೂಲಗಳಿವೆ. ಶೂಲಗಳ ಮೇಲೆ ತಮ್ಮ ಬಲಗೈಯನ್ನು ಇಟ್ಟಿರುವರು. ಎಡಗೈಗಳಲ್ಲಿ ಚಿಕ್ಕ ಶಿವಲಿಂಗವಿದೆ. ದೋತರವನ್ನು ಧರಿಸಿರುವರು. ಕೈಬಳೆ ಮತ್ತು ತೋಳುಬಂಧಗಳಿವೆ.

ಹೆಸರು : ಗುಂಡ ಬ್ರಹ್ಮಯ್ಯ

ಸಿಕ್ಕ ಸ್ಥಳ : ದಕ್ಷಿಣ ದಿಕ್ಕಿನ ಪ್ರಾಕಾರದ ಗೋಡೆಯ ಮೇಲೆ, ಕೋಟೆ ಮಲ್ಲೇಶ್ವರ ದೇವಾಲಯ ಬಳ್ಳಾರಿ ತಾಲೂಕು ಮತ್ತು ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : ವಿ.ಅ.ಸಂ.೪, ಪು. ೧೨-೨೩

ಗುಂಡಬ್ರಹ್ಮಯ್ಯರು ಶೂಲಗಳನ್ನು ಹಿಡಿದಿದ್ದು, ಇನ್ನೊಂದು ಕೈಯಲ್ಲಿ ಶಿವಲಿಂಗ ವನ್ನು ಹಿಡಿದು ಕೊಂಡಿರುವರು. ಹಾರ ಮತ್ತು ರುದ್ರಾಕ್ಷ ಮಾಲೆಗಳನ್ನು ಕೊರಳಲ್ಲಿ ಧರಿಸಿದ್ದು, ದೋತರವನ್ನು ಉಟ್ಟಿದ್ದಾರೆ. ಅವರ ಕೂದಲುಗಳು ತಲೆಯಿಂದ ಹಿಂದೆ ಜೋತು ಬಿದ್ದಿದೆ. ಅವರ ಮುಂಭಾಗದಲ್ಲಿ ಸ್ತ್ರೀಯರಿಬ್ಬರೂ ಸರ್ವಾಭರಣಭೂಷಿತರಾಗಿ, ತೋಳುಗಳಲ್ಲಿ ರುದ್ರಾಕ್ಷಿ ಮಾಲೆಗಳನ್ನು ಧರಿಸಿರುವರು. ತಟ್ಟೆಯನ್ನು ಹಿಡಿದುಕೊಂಡಿದ್ದಾರೆ. ದೀಪ ಮತ್ತು ಕಳಶಗಳು ತಟ್ಟೆಯಲ್ಲಿರುವವು. ಒಂದೆಡೆ ಅವರ ಪ್ರತ್ತಿನಿಷ್ಠ ಭಕ್ತಿಗೆ ಶಿವನೆ ನೃತ್ಯ ಮಾಡುವುದು ಮತ್ತು ಇನ್ನೊಂದೆಡೆ ಅವರು ಶೂಲವನ್ನು ಏರುವ ದೃಶ್ಯಗಳು. ದಂಪತಿಗಳ ಶಿಲ್ಪ ಮನ ಮುಟ್ಟುವಂತಿವೆ.

ಹೆಸರು	: ಗುಂಡ ಬ್ರಹ್ಮಯ್ಯರ ಶಿಲ್ಪ
ಸಿಕ್ಕ ಸ್ಥಳ	: ಸರಕಾರಿ ಸಂಗ್ರಹಾಲಯ, ಶಿವಪ್ಪನಾಯಕ ಅರಮನೆ, ಕುಸ್ತೂರು ಶಿವಮೊಗ್ಗ ಜಿಲ್ಲೆ.
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: Bhatsoori K.G. 1995, Shimoge, A Study Antiguities in the Govt. Museum, P. 57.

ಗುಂಡಬ್ರಹ್ಮಯ್ಯರುಗಳ ಶಿಲ್ಪದ ಮೇಲ್ಭಾಗದಲ್ಲಿ ಹೂಬಳ್ಳಿಗಳಿಂದ ಅಲಂಕೃತ ವಾಗಿರುವ ಪ್ರಭಾವಳಿ ಮೇಲೆ ಮಧ್ಯ ಭಾಗದಲ್ಲಿ ಸಿಂಹ ಲಲಾಟವಿದೆ. ಶಿಲ್ಪದ ಎರಡು ಬದಿಗಳಲ್ಲಿ ಲತಾಪುಷ್ಪಾಲಂಕಾರ ಕೆಳಭಾಗದಲ್ಲಿ ಪೀಠದ ಮೇಲೆ ಶೂಲಗಳಿವೆ. ಶೂಲಗಳು ಕೆಳಭಾಗದಲ್ಲಿ ಚತುರಾಶ್ರವಾಗಿದ್ದು ಮೇಲ್ಭಾಗವು ವೃತಾಕಾರದಲ್ಲಿ ಅಲಂಕೃತಗೊಂಡಿವೆ. ಮೇಲ್ಭಾಗದಲ್ಲಿ ಆಯತಾಕಾರದ ಹಲಗೆಯಂತಿದ್ದು ಅದರ ಮೇಲೆ ಗುಂಡಬ್ರಹ್ಮಯ್ಯರು ಶೂಲವನ್ನೇರಿ ಕುಳಿತಿದ್ದು, ತಮ್ಮ ಎರಡೂ ಕಾಲುಗಳನ್ನು ಶೂಲಗಳ ಎರಡು ಬದಿಯಲ್ಲಿ ಇಳಿಬಿಟ್ಟಿದ್ದು ಎಡಗೈ ಅಂಗೈಗಳಲ್ಲಿ ಇಷ್ಟ ಲಿಂಗವನ್ನು ಹಿಡಿದಂತಿದೆ. ಬಲಗೈಯಲ್ಲಿ ಕಿರುಗತ್ತಿಗಳನ್ನು ಹಿಡಿದುಕೊಂಡು ಕೈಗಳನ್ನು ಮೇಲಿತ್ತಿದ್ದಾರೆ. ಇಬ್ಬರ ತಲೆಯ ಮೇಲೆ ಕಿರೀಟಗಳಿವೆ. ಆಭರಣ ಹಾಗೂ ಪುಷ್ಪಮಾಲೆಯನ್ನು ಧರಿಸಿದ್ದು, ಇಬ್ಬರ ತಲೆಯ ಹಿಂಭಾಗದಲ್ಲಿ ಛತ್ರಗಳಿದ್ದು, ಛತ್ರಗಳ ಮೇಲೆ ಪುಷ್ಪಾಲಂಕರಣವಿದೆ.

ಹೆಸರು	: ಗುಂಡ ಬ್ರಹ್ಮಯ್ಯರು
ಸಿಕ್ಕ ಸ್ಥಳ	: ದೇವಾಲಯದ ನವರಂಗದಲ್ಲಿ, ಯೋಗನಂದೀಶ್ವರ ದೇವಾಲಯ ನಂದಿಬೆಟ್ಟ, ಚಿಕ್ಕಬಳ್ಳಾಪುರ ತಾಲೂಕು, ಕೋಲಾರ ಜಿಲ್ಲೆ.
ಕಾಲ	: ಕ್ರಿ.ಶ. ೧೪-೧೫ ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: ಇ.ದ. ಸಂ-೧೫, ೨೦೦೦, ಪು.-೭೨-೭೩

ಯೋಗನಂದೀಶ್ವರ ದೇವಾಲಯದ ನವರಂಗದಲ್ಲಿನ ಗುಂಡಬ್ರಹ್ಮಯ್ಯರ ಶಿಲ್ಪ ಇದ್ದು, ಶೂಲಗಳ ಮೇಲೆ ಕುಳಿತಿವೆ. ಗುಂಡಬ್ರಹ್ಮಯ್ಯರ ಶಿಲ್ಪಗಳ ಎಡ ಅಂಗೈನಲ್ಲಿ ಶಿವಲಿಂಗ ಅಥವಾ ಇಷ್ಟಲಿಂಗ ಧರಿಸಿದ್ದು ಬಲಗೈಯನ್ನು ತಲೆಯ ಮೇಲೆ ಎತ್ತಿ ಹಿಡಿದಿದ್ದು ಕಿರುಗತ್ತಿಯನ್ನು ಹಿಡಿದಿದೆ.

ಹೆಸರು	: ಗುಂಡ ಬೊಮ್ಮಯ್ಯರು
ಸಿಕ್ಕ ಸ್ಥಳ	: ನವರಂಗದಲ್ಲಿನ ದೇವಕೋಷ್ಠ, ಈಶ್ವರ ದೇವಾಲಯ, ಹಾರನಹಳ್ಳಿ, ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ
ಕಾಲ	: ಕ್ರಿ.ಶ.೧೪-೧೫ ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: ಇತಿಹಾಸ ದರ್ಶನ ಸಂ-೧೫. ಪು. ೭೨-೭೩

ಶೂಲಗಳ ಪಕ್ಕದಲ್ಲಿ ಗುಂಡಬ್ರಹ್ಮಯ್ಯರು ನಿಂತಿರುವರು. ಈ ಶಿಲ್ಪದ ಎಡಭಾಗದಲ್ಲಿರುವ ವ್ಯಕ್ತಿಯ ಬಲಭಾಗದಲ್ಲಿ ಕಮಂಡಲವನ್ನು ತೂಗು ಹಾಕಿಕೊಂಡಿದ್ದು, ಬಲ ಅಂಗೈಯಲ್ಲಿ ಇಷ್ಟಲಿಂಗ(ಶಿವಲಿಂಗ)ವನ್ನು ಹಿಡಿದು ಎಡಗೈನಲ್ಲಿ ಕಠಾರಿಯನ್ನು ಹಿಡಿದು ಬಲಗಾಲನ್ನು ಮುಂದಿಟ್ಟಿರುವಂತಿದೆ. ಬಲಭಾಗದಲ್ಲಿನ ಮೂರ್ತಿ ತನ್ನ ಎಡಗಾಲನ್ನು ಮುಂದಿಟ್ಟು ಎಡಗೈಯಲ್ಲಿ ಕಮಂಡಲವನ್ನು ತೂಗುಹಾಕಿಕೊಂಡಿದ್ದು, ಬಲಗೈಯಲ್ಲಿ ಕಿರುಗತ್ತಿಯನ್ನು ಧರಿಸಿದೆ. ಎರಡೂ ಶಿಲ್ಪಗಳ ಮಧ್ಯದಲ್ಲಿ ಎರಡು ತ್ರಿಶೂಲಗಳಿವೆ.

ಹೆಸರು	: ಗುಂಡ ಬ್ರಹ್ಮಯ್ಯರು
ಸಿಕ್ಕ ಸ್ಥಳ	: ನವಲಿಂಗದಲ್ಲಿರುವ ದೇವಕೋಷ್ಠದಲ್ಲಿ, ಸಂಪಿಗೆ ಸಿದ್ದೇಶ್ವರ ದೇವಾಲಯ, ಚಿತ್ರದುರ್ಗ ತಾಲೂಕು ಮತ್ತು ಜಿಲ್ಲೆ
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ
ಶಿಲಾವಸ್ತು	: ಬಳಪದಶಿಲೆ
ಉಲ್ಲೇಖ	: MAR: 1930, Pl VIII No. 4, P. 20

ದೇವಾಲಯದ ದಕ್ಷಿಣ ಭಾಗದ ಬಿತ್ತಿಯಲ್ಲಿನ ದೇವಕೋಷ್ಠದಲ್ಲಿ ಶೂಲಬ್ರಹ್ಮರ ಶಿಲ್ಪಗಳಿದ್ದು, ನಿಂತ ಭಂಗಿಯಲ್ಲಿವೆ. ಒಂದು ಶೂಲವನ್ನು ಇನ್ನೊಂದು ಕೈಯಲ್ಲಿ ಶಿವಲಿಂಗವನ್ನು ಹಿಡಿದಿರುವರು. ಗುಂಡಭೊಮ್ಮಯ್ಯರು ಹಣೆಯಲ್ಲಿ ಮುತ್ತಿನ ಹಾರವನ್ನು ಹಿಂಬದಿಯಲ್ಲಿ ಕೇಶವನ್ನು ಮುಡಿಕಟ್ಟಿರುವರು. ಕರ್ಣಾಭರಣ, ಕಂಠಿಹಾರ, ಉದ್ದನೆಯ ಹಾರಗಳು ವಕ್ಷಸ್ಥಳದ ಮೇಲಿನಿಂದ ಮೊಳಕಾಲ ಕೆಳಭಾಗದವರೆಗೂ ಇವೆ. ನಡುವಿನಲ್ಲಿ ದೋತರವನ್ನು ಧರಿಸಿದ್ದು, ದೋತರದ ಮೇಲೆ ಮುತ್ತಿನ

ಹಾರಗಳಂತಿರುವ ಸರಗಳನ್ನು ಧರಿಸಿರುವರು. ತೋಳಬಂದಿಗಳು, ಮುಂಗೈಗೆ ಕಡಗಗಳು, ನಡುವಿನಲ್ಲಿ ಕಿರುಗತ್ತಿಗಳು. ಕಾಲಿನಲ್ಲಿ ಕಾಲ್ಗಡಗಳ ಪಾದಾಭರಣಗಳನ್ನು ಇವು ಈ ಮೂರ್ತಿ ಶಿಲ್ಪದ ಲಕ್ಷಣಗಳಾಗಿವೆ. ಕೈಯಲ್ಲಿ ಹಿಡಿದಿರುವ ಶೂಲಗಳ ಮೇಲ್ಭಾಗವು ಮೊನಚಾಗಿದೆ ಮತ್ತು ಸ್ವಲ್ಪ ಕೆಳಗೆ ಬಾಗಿದೆ ವೃತ್ತಾಕಾರದ ಅಡ್ಡಪಟ್ಟಿಕೆ ಶೂಲಕ್ಕಿಂತಲೂ ಹೆಚ್ಚು ದಪ್ಪವಾಗಿರುವುದು.

ಹೆಸರು	: ಗುಂಡಬೊಮ್ಮಯ್ಯರು
ಸಿಕ್ಕ ಸ್ಥಳ	: ಸಣ್ಣ ದಿಣ್ಣೆಯ ಮೇಲಿರುವ ದೇವಾಲಯದ ಬಳಿ, ಲಕ್ಷ್ಮೀದೇವಾಲಯದ ದಾರಿಯಲ್ಲಿ, ದೊಡ್ಡಗದ್ದವನ ಹಳ್ಳಿ, ಹಾಸನ ತಾಲೂಕು ಮತ್ತು ಜಿಲ್ಲೆ
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	ಇತಿಹಾಸ ದರ್ಶನ ಸಂ.೧೫, ಪು. ೭೨

ದ್ವಿಭಂಗಿಯಲ್ಲಿ ನಿಂತಿರುವ ಗುಂಡಬ್ರಹ್ಮಯ್ಯ(ಬೊಮ್ಮಯ್ಯ)ರು ಎಡಗೈಯಲ್ಲಿ ಶಿವಲಿಂಗ (ಇಷ್ಟಲಿಂಗ) ಹಿಡಿದು ಬಲಗೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ಶೂಲದ ಮುಂದೆ ನಿಂತಿದ್ದಾರೆ. ಶೂಲದ ಮೇಲ್ಭಾಗ ಮೊನಚಾಗಿದ್ದು, ಸ್ವಲ್ಪ ಕೆಳಭಾಗದಲ್ಲಿ ಆಯುತಾಕಾರದ ಮಣೆಯನ್ನು ಅಳವಡಿಸಿದೆ. ಗುಂಡಬ್ರಹ್ಮಯ್ಯರ ಮೈಮೇಲೆ, ರುದ್ರಾಕ್ಷಿ ಸರಗಳನ್ನು ಕೊರಳಲ್ಲಿ, ತೋಳುಗಳಲ್ಲಿ, ಮುಂಗೈಗಳಲ್ಲಿಧರಿಸಿರುವರು. ಯಜ್ಞೋಪವೀತ, ಕಚ್ಚೆದೋತರ, ಕಿವಿಯಲ್ಲಿ ಆಭರಣ, ತಲೆಯ ಮೇಲೆ ಕಿರೀಟ(ಕರಂಡಮುಕುಟ)ವನ್ನು ಧರಿಸಿರುವರು. ಇಲ್ಲಿನ ಗುಂಡಬ್ರಹ್ಮಯ್ಯರ ಚಿತ್ರ ಪ್ರತ್ಯೇಕ ಶಿಲ್ಪಗಳಾಗಿವೆ.

ಕುಮಾರ ರಾಮನ ಶಿಲ್ಪಗಳು

ಕುಮ್ಮಟ ನಾಯಕರ ಅವಸಾನದ ನಂತರ ಅವರ ವೀರತ್ವ ಹಾಗೂ ಪಾರದರ್ಶಕ ಆಡಳಿತ, ಜನಸಾಮಾನ್ಯರ ಜೀವನದ ಮೇಲೂ ಪ್ರಭಾವ ಬೀರಿದೆ. ತಾಯ್ನಾಡಿನ ಜನತೆಗಾಗಿ ದೆಹಲಿ ಸುಲ್ತಾನರಂತಹ ಪ್ರಬಲ ಸೈನ್ಯದೊಡನೆ ಹೋರಾಡಿ ವೀರಸ್ವರ್ಗವನ್ನೇರಿದ ಇವರನ್ನು ಮಾನವತೆಯಿಂದ ದೈವತ್ವಕ್ಕೇರಿಸಿದ ಕೀರ್ತಿ ಕರ್ನಾಟಕದ ಜನತೆಗಿದೆ. ವಿಜಯನಗರ ಕಾಲದ ಪ್ರಥಮ ಹಂತದಲ್ಲೇ ಈ ಪ್ರಕ್ರಿಯೆ ಪ್ರಾರಂಭಗೊಂಡು ವಿಜಯನಗರ ಅಂತ್ಯದವರೆಗೂ ಕುಮಾರ ರಾಮನಾಥನ ಶಾಸನ ಶಿಲ್ಪಗಳು, ದೇವಾಲಯಗಳು ಕಂಡುಬಂದಿವೆ. ಪ್ರಥಮವಾಗಿ ಸಂಗೂರಿನಲ್ಲಿರುವ ವೀರಗಲ್ಲು ಶಾಸನದನ್ವಯ ಕುಮಾರ ರಾಮನಾಥನ ಹೆಸರಲ್ಲಿ ಕಟ್ಟಿಸಿದ ದೇವಾಲಯ ಹಾಗೂ ವೀರಗಲ್ಲು ಶಿಲ್ಪ, ತೀರ್ಥಹಳ್ಳಿ ತಾಲೂಕಿನ ಲೊಕ್ಕಿನ ಕರ್ಕೋಡು ಗ್ರಾಮದ ವೀರಗುಡಿ ಹಾಗೂ ಮಾಳಗೊಂಡನ ಕೊಪ್ಪದಲ್ಲಿರುವ ವೀರಗಲ್ಲು, ಹೊಸಮಲೆ ದುರ್ಗದ ಶಾಸನ ಮತ್ತು ರಾಮನಾಥನ ಗುಡಿ ಹಾಗೂ ಕುಮ್ಮಟದಲ್ಲಿರುವ ರಾಮಸ್ವಾಮಿ ಗುಡಿ. ಇವರ ಹೆಸರಿನಲ್ಲಿ ಪೆನುಗೊಂಡೆಯ ಕೋಟೆಯಲ್ಲಿ ಕಟ್ಟಿಸಿದ ತೀರ್ಥ. ಅದವಾನಿಯ ಕೋಟೆಯಲ್ಲಿ ಕಟ್ಟಿಸಿದ ರಾಮನಾಥನ ಗುಡಿ. ಈ ಐತಿಹಾಸಿಕ ಪುರಾವೆಗಳನ್ನು ಗಮನಿಸಿದಾಗ ಕುಮಾರ

ರಾಮನಾಥನಷ್ಟು ಜನಪ್ರಿಯ ವ್ಯಕ್ತಿತ್ವ ಸ್ಪಷ್ಟವಾಗುವುದು. ಇಂದಿಗೂ ಕುಮಾರ ರಾಮನ ಹೆಸರಿನಲ್ಲಿ ದೇವಾಲಯಗಳ ನಿರ್ಮಾಣ, ವಿವಿಧ ರೀತಿಯ ಉತ್ಸವ, ಜಾತ್ರೆ, ರಥೋತ್ಸವಗಳ ಆಚರಣೆ, ಕುಮಾರ ರಾಮನನ್ನು ತಮ್ಮ ಮನೆದೇವರಾಗಿ, ಗ್ರಾಮದೇವರಾಗಿ ಆರಾಧನೆ ಮಾಡುತ್ತಿರುವ ಅಂಶಗಳನ್ನು ಈ ಅಧ್ಯಯನದಲ್ಲಿ ಗಮನಿಸಬೇಕಾದ ಅಂಶ. ಕುಮಾರ ರಾಮನ ಹೆಸರಿನಲ್ಲಿ ಕಟ್ಟುತ್ತಿರುವ ಗುಡಿಗಳಿಗೇನು ಕಡಿಮೆ ಇಲ್ಲ. ಶ್ರೀಯುತ ತುಬಾಕಿಯವರು ಕೊಪ್ಪಳ ಜಿಲ್ಲೆಯ ನಿಲೋಗಲ್ ಎಂಬ ಗ್ರಾಮದಲ್ಲಿ ಇತ್ತೀಚೆಗೆ ಕುಮಾರ ರಾಮನ ದೇವಾಲಯವನ್ನು ಕಟ್ಟಿಸಿದ್ದಾರೆ. ವರ್ಷಕ್ಕೊಮ್ಮೆ ಕುಮಾರ ರಾಮನ ಸಾಂಗತ್ಯವನ್ನು ಒಂದು ದಿನ ಹೇಳಿಸುವ ಪರಿಪಾಠ ಈಗಲೂ ಇದೆ. ಈ ಆಚರಣೆ, ಕೊಪ್ಪಳ, ಬಾಗಲಕೋಟೆ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ, ಹಾವೇರಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ತುಮಕೂರು ಜಿಲ್ಲೆಗಳಲ್ಲಿ ಇಂದಿಗೂ ನಡೆಯುತ್ತಿದ್ದು, ಪ್ರತ್ಯೇಕವಾಗಿ ಕುಮಾರ ರಾಮ ಪಂಥವೆಂದು ಬೆಳೆದು ಬಂದಿರುವುದು ವೈಶಿಷ್ಟ್ಯಪೂರ್ಣ. ಆತನ ಪ್ರಭಾವ ಹಾಗೂ ಉನ್ನತ ಗುಣಗಳಿಂದ ಮೆರದ ವ್ಯಕ್ತಿಗೆ ನಮ್ಮ ಜನರು ನೀಡಿರುವ ಗೌರವ ಸ್ಥಾನವನ್ನು ಮರೆಯುವಂತಿಲ್ಲ. ಅನೇಕ ಗ್ರಾಮಗಳಲ್ಲಿ ಕುಮಾರ ರಾಮನನ್ನು ಗ್ರಾಮದೇವರೆಂದು ಪೂಜಿಸುವ ಪದ್ಧತಿ ಇದೆ. ಕುಮಾರ ರಾಮನಾಥನ ವೈವಿಧ್ಯ ಮೂರ್ತಿ ಶಿಲ್ಪಗಳ ಲಕ್ಷಣಗಳನ್ನು ಇಲ್ಲಿ ಸೆರೆಹಿಡಿಯಲಾಗಿದೆ.

ಹೆಸರು	: ಕಾಗೆ ರಾಮನ ಕಲ್ಲು
ಸಿಕ್ಕ ಸ್ಥಳ	: ಕುಮಾರ ರಾಮನ ಗುಡ್ಡದ ದಕ್ಷಿಣ ದಿಕ್ಕಿಗೆ, ಎರಡು ಕೋಟೆಗಳ ಮಧ್ಯದಲ್ಲಿ, ಕುಮ್ಮಟದುರ್ಗ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ
ಕಾಲ	: ಕ್ರಿ.ಶ.೧೪ ನೇ ಶತಮಾನ
ಶಿಲಾವಸ್ತು	: ಕಪ್ಪು ಮಿಶ್ರಿತ ಹಸಿರು
ಉಲ್ಲೇಖ	: Channabasppa S.Patil, 1991, P. 211. VPR, 1987-88, P. 211

ವೀರನೊಬ್ಬನು ಕುದುರೆಯ ಮೇಲೆ ಕುಳಿತಿರುವ ಈ ಶಿಲ್ಪವನ್ನು ಕಾಗೆರಾಮನ ಕಲ್ಲು ಅಥವಾ ಕುಮಾರ ರಾಮನ ಶಿಲ್ಪವೆಂದು ಕರೆಯುವ ವಾಡಿಕೆ ಇದೆ. ಶಿಲ್ಪದ ಎರಡೂ ಬದಿಯಲ್ಲಿ ಸೂರ್ಯ ಚಂದ್ರರ ಶಿಲ್ಪಗಳು, ಹಿಂಬದಿಯಲ್ಲಿ ಗಿಳಿಯೊಂದು ಬಾಯಲ್ಲಿ ಪುಷ್ಪವನ್ನು ಹಿಡಿದಿದೆ. ಕುದುರೆಯ ಮೇಲೆ ಕುಳಿತ ವೀರನ ತಲೆಗೆ ವಸ್ತ್ರವನ್ನು ಕಟ್ಟಲಾಗಿದೆ. ಉದ್ದನೆಯ ಮೀಸೆ, ವಿಶಾಲ ನೇತ್ರಗಳಿವೆ. ಕರ್ಣಾಭರಣಗಳು, ಕೊರಳಲ್ಲಿ ಹಾರಗಳು, ಮುಂಗೈಗೆ ಕೈ ಬಳೆ ಮತ್ತು ತೋಳುಬಂಧವಿದೆ. ಎಡಗೈಯಲ್ಲಿ ಕುದುರೆಯ ಲಗಾಮು, ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದಿದ್ದಾನೆ. ಕಟಿಯಲ್ಲೊಂದು ಕಠಾರಿಯನ್ನು ಸಿಕ್ಕಿಸಲಾಗಿದೆ. ಕುದುರೆಗೆ ಜೀನನ್ನು ಹೊದಿಸಲಾಗಿದೆ.

ಹೆಸರು	: ಕುಮಾರ ರಾಮು ಶಿಲ್ಪ
ಸಿಕ್ಕ ಸ್ಥಳ	: ರಾಮಸ್ವಾಮಿ ಗುಡಿಯ ಮುಖ ಮಂಟಪದಲ್ಲಿ ಹೊಸಮಲೆದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ. ೧೬ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : VPR, 1988-91, PP. 240-41

ಸಭಾ ಮಂಟಪದಲ್ಲಿರುವ ಶಾಸನ ಶಿಲ್ಪವು ಸಿಂಗೆನಾಯಕನಿಂದ ರಾಮನಾಥನ ಮಗ ಕೋನೇರಿ ನಾಯಕನ ಮಗಳು ಗೋಪಾಮಿಯವರೆಗೂ ವಂಶಾವಳಿಯನ್ನು ತಿಳಿಸುತ್ತಿದ್ದು, ಗೋಪಾಯಿ ರಾಮನಾಥನ ಗುಡಿಯನ್ನು ಕಟ್ಟಿಸಿದ್ದು, ರಾಮನಾಥನ ಜೊತೆಯಲ್ಲಿ ೬೪ ಮಂದಿ ವೀರರಿಗೂ ವೀರಸ್ವರ್ಗ ಆಗಬೇಕೆಂದು ಆಶಿಸಿರುವಳು. ಶಾಸನದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪವಿದ್ದು ಮಧ್ಯದಲ್ಲಿ ಮೂರು ಪುಷ್ಪಗಳಿವೆ.

ಕೆಳಭಾಗದ ಪಟ್ಟಿಕೆಯಲ್ಲಿ ಅಷ್ಟಾಶ್ರ ಪೀಠದ ಶಿವಲಿಂಗ ಮತ್ತು ಮಲಗಿರುವ ನಂದಿ, ಇನ್ನೊಂದು ಬದಿಯಲ್ಲಿ ವ್ಯಕ್ತಿಯೊಬ್ಬನು ಸಮಭಂಗದಲ್ಲಿ ಶಿವಲಿಂಗಕ್ಕೆ, ನಂದಿಗೆ ಕೈ ಮುಗಿದು ನಿಂತಿರುವನು. ಈ ವ್ಯಕ್ತಿಯ ಶಿಲ್ಪವು ಕುಮಾರ ರಾಮನಾಥನದೆಂದು ಕರೆಯುವರು.

ಹೆಸರು : ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ಪಟ್ಟಣದ ಎಲ್ಲಮ್ಮ ದೇವಾಲಯದ ಸಭಾಮಂಟಪದ ಮುಂದಿನ ಸ್ತಂಭದ ಮೇಲೆ, ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ. ೧೪-೧೫ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಶಿಲ್ಪವು ನಿಂತ ಬಂಗಿಯಲ್ಲಿದ್ದು, ಎಡಗೈಯಲ್ಲಿ ಕಪಾಲ ಪಾತ್ರೆಯನ್ನು ಬಲಗೈಯಲ್ಲಿ ಚಂದ್ರಾಯುಧವನ್ನು ಹಿಡಿದಿದೆ. ಹಣೆಯ ಮೇಲೆ ಪಟ್ಟಿಯನ್ನು ಕಟ್ಟಲಾಗಿದೆ. ಕೊರಳಲ್ಲಿ ಕಂಠಹಾರಗಳು, ದೋತರವನ್ನು ಉಟ್ಟಿದ್ದು, ಮುಂಗಾಲುಗಳಲ್ಲಿ ಕಡಗಗಳು ಮುಂಗೈಯಲ್ಲಿ ಕೈ ಬಳೆ, ಕಿವಿಯಲ್ಲಿ ಕರ್ಣಾಭರಣಗಳು ಇದೆ. ಎಡಭುಜದ ಮೇಲೆ ಶಲ್ಯವು ಇದ್ದು, ಶಲ್ಯದ ಒಂದು ಭಾಗವು ಕೆಳಗೆ ಜೋತು ಬಿದ್ದಿದೆ. ಹಾಗೂ ಪಾದಗಳಲ್ಲಿ ಪಾದರಕ್ಷೆಗಳಿವೆ. ಈ ಶಿಲ್ಪದ ಬಲಭಾಗದಲ್ಲಿ ನಿಂತಿರುವ ಸ್ತ್ರೀ ಶಿಲ್ಪವಿದ್ದು, ಸ್ತ್ರೀಯೂ ಕಲಾತ್ಮಕ ಸೀರೆ, ಕರ್ಣಾಭರಣ, ಕಂಠಾಭರಣಗಳನ್ನು ಧರಿಸಿದೆ. ಅಲ್ಲದೆ ನಡುವಿನಲ್ಲಿ ಮಗುವೊಂದನ್ನು ಎತ್ತಿಕೊಂಡಿದ್ದು ಎಡಗೈಯಲ್ಲಿ ಇನ್ನೊಂದು ಮಗುವಿನ ಕೈಯನ್ನು ಹಿಡಿದುಕೊಂಡಿದ್ದಾಳೆ. ದಂಡನೆಗೆ ಗುರಿ ಮಾಡಿದ ಕುಟಿಲ ದೇವತೆಯ ಶಿಲ್ಪವಿದೆ.

ಹೆಸರು : ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ಟೂರಿಸ್ಟ್ ಕ್ಯಾಂಟೀನ್ ಬಳಿ, ಕೋಟೆ ಗೋಡೆಯ ಬಳಿ, ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ. ೧೪-೧೫ ನೇ ಶತಮಾನ

ಶಿಲಾವಸ್ತು : ಗ್ರಾನೈಟ್

ಈ ಶಿಲ್ಪವು ವೀರಭಂಗಿಯಲ್ಲಿ ನಿಂತಿದ್ದು, ತಲೆಯಲ್ಲಿ ಮೊನಚಾದ ಎಲೆಗಳಿಂದ ಅಲಂಕೃತವಾಗಿದೆ. ಹಣೆಯ ಮೇಲೆ ಮೂರು ಮಣಿಸರಗಳ ರುದ್ರಾಕ್ಷಿ ಮಾಲೆಯನ್ನು ಧರಿಸಿದ್ದು, ಮುಖವು ಗಂಬೀರ ಮುದ್ರೆಯುಳ್ಳದ್ದಾಗಿದೆ. ಮೀಸೆ, ಕೋರೆ ಹಲ್ಲುಗಳಿವೆ. ಎರಡು ಕೈತೋಳುಗಳಲ್ಲಿ ತೋಳ್ಬಂದಿಗಳು, ಮುಂಗೈಗಳಲ್ಲಿ ಕೈ ಬಳೆ, ಕಂಠಾಭರಣಗಳು ಎರಡು ಹಾರಗಳನ್ನು ಧರಿಸಿದ್ದು ರುಂಡಮಾಲೆಗಳಂತೆ ಗೋಚರಿಸಿದೆ. ನಡುವಿನಲ್ಲಿ ಅಗಲವಾದ ನಡುಪಟ್ಟಿ ಇದೆ. ಬಲಭಾಗದ ನಡುವಿನಲ್ಲಿ ಕಿರುಗತ್ತಿ ಇದೆ. ಮುಂಭಾಗದಲ್ಲಿ ದೋತರದ ನೆರಿಗೆಗಳನ್ನು ಕಲಾತ್ಮಕವಾಗಿ ಕಾಣುವಂತೆ ಚಿತ್ರಿಸಲಾಗಿದೆ. ಕಾಲುಗಳಲ್ಲಿ ಕಡಗಗಳು ಇದೆ. ಬಲಗೈಯಲ್ಲಿ ಕಪಾಲ ಪಾತ್ರೆಯನ್ನು ಹಿಡಿದಿದ್ದಾನೆ ಬಲಬದಿಯಲ್ಲಿ ಮಗುವನ್ನು ಕಂಕುಳಲ್ಲಿ ಎತ್ತಿಕೊಂಡಿರುವ ಸ್ತ್ರೀಯ ಶಿಲ್ಪವಿದ್ದು, ಸ್ತ್ರೀಯ ಎಡಬದಿಯಲ್ಲಿ ನಿಂತಿರುವ ಇನ್ನೊಂದು ಮಗುವಿನ ಶಿಲ್ಪ ಇದೆ. ಸ್ತ್ರೀಯು ಕಲಾತ್ಮಕ ಸೀರೆಯನ್ನು ಧರಿಸಿದ್ದು, ಕಂಠಾಭರಣ, ಹಣೆಯಲ್ಲಿ ಸಿಂಧೂರ ಇದೆ. ಕೂದಲನ್ನು ಹಿಂಬಾಗದಲ್ಲಿ ಮುಡಿಕಟ್ಟಿರುವುದು. ಇದು ರಾಮನಾಥನ ಪತ್ನಿ ಹಾಗೂ ಮಕ್ಕಳ ಶಿಲ್ಪವಾಗಿದೆ ಎಂಬ ವಾಡಿಕೆ ಇದೆ.

ವಿಶಾಲವಾದ ವಕ್ಷಸ್ಥಲವೂ ಬಲಿಷ್ಟವಾದ ಭುಜ, ತೋಳುಗಳು, ಅಷ್ಟು ಬಲಿಷ್ಟವಾದ ನಡು, ತೊಡೆ ಮತ್ತು ಕಾಲುಗಳು ಈ ಶಿಲ್ಪದ ಇನ್ನೊಂದು ವೈಶಿಷ್ಟ್ಯತೆ.

ಹೆಸರು : ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ಅಹ್ಮದಖಾನ್ ಧರ್ಮಶಾಲೆ, ಬಾಲಕೃಷ್ಣ ದೇವಾಲಯದ ಮಧ್ಯದಲ್ಲಿರುವ ಹೊಲದಲ್ಲಿ, ಕಾಮಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ. ೧೪-೧೫ ನೇ ಶತಮಾನ

ಶಿಲಾವಸ್ತು : ಗ್ರಾನೈಟ್

ಈ ಶಿಲ್ಪವು ದೊಡ್ಡದಾದ ಮಾಲೆಯನ್ನು ಧರಿಸಿದೆ. ಮಾಲೆಯ ಕೆಳಭಾಗದಲ್ಲಿ ನಾಲ್ಕು ಮನುಷ್ಯರ ರುಂಡಗಳಿವೆ. ತಲೆಗೂದಲುಗಳನ್ನು ಹಿಂದಕ್ಕೆ ಪಟ್ಟಿಯಿಂದ ಕಟ್ಟಿದ್ದು, ಕಿವಿಗಳಲ್ಲಿ ಕುಂಡಲಾಭರಣಗಳಿವೆ. ಕೊರಳಲ್ಲಿ ಕಂಠಹಾರಗಳು, ತೋಳು, ಮುಂಗೈಗಳಲ್ಲಿ ಕಡಗಗಳಿವೆ. ನಡುವಿನಲ್ಲಿ ಹಾರ, ಕಟಿಪಟ್ಟಿ ಇದ್ದು, ನಡುವಿನ ಪಟ್ಟಿಯಲ್ಲಿ ಕಿರುಗತ್ತಿಯು ಬಲತೊಡೆಯ ಮೇಲೆ ಜೋತು ಬಿದ್ದಿದೆ. ಬಲಗೈಯಲ್ಲಿ ಚಂದ್ರಾಯುಧವಿದೆ. ಎಡಗೈಯಲ್ಲಿ ರುಂಡವಿದೆ. ಇದೇ ರೀತಿಯ ಬೇರೆ ಶಿಲ್ಪಗಳಲ್ಲಿ ಧೋತರವನ್ನು ಉಟ್ಟಿದ್ದು, ದೋತರದ ಅಂಚುಗಳು ಹಾಗೂ ಮುಂಭಾಗದಲ್ಲಿ ನೆರಿಗೆಗಳು ಇದ್ದು ವೀರಗಚ್ಚೆಯನ್ನು ಹಾಕಿದೆ. ಮುಂಗಾಲುಗಳಲ್ಲಿ ಕಡಗಗಳು ಮತ್ತು ಪಾದದ ಮೇಲೆ ಸರಪಳಿಯಂತಹ ಆಭರಣಗಳಿವೆ. ಈ ಶಿಲ್ಪದ ಮುಖಭಾಗವು ಸವೆದಿದೆ. ಬಲಬದಿಯಲ್ಲಿ ನಿಂತಿರುವ ಸ್ತ್ರೀಯ ಶಿಲ್ಪವಿದ್ದು, ಸ್ತ್ರೀಯು ಕಲಾತ್ಮಕ ಕಂಠಾಭರಣಗಳನ್ನು ಧರಿಸಿದ್ದು, ಕಂಕುಳಲ್ಲಿ ಒಂದು

ಮಗುವನ್ನು ಎತ್ತಿ ಕೊಂಡಿದೆ. ಬಲಭಾಗದಲ್ಲಿ ಮತ್ತೊಂದು ಮಗುವು ನಿಂತಿದ್ದು, ಮಗುವಿನ ತಲೆಯ ಮೇಲೆ ಬಲಗೈಯನ್ನು ಸ್ತ್ರೀಯು ಇರಿಸಿದ್ದಾಳೆ. ಎರಡು ಪ್ರಭಾವಳಿಯ ಬದಿಯಲ್ಲಿ ಕೆಳಭಾಗದಲ್ಲಿ ಕುಳಿತಿರುವ ಸಿಂಹಗಳ ಚಿತ್ರಣಗಳಿವೆ. ಮೇಲ್ಭಾಗದಲ್ಲಿ ಹೂ ಬಳ್ಳಿಗಳಿಂದ ಅಲಂಕೃತವಾಗಿದೆ. ಅದರ ಮೇಲ್ಭಾಗದಲ್ಲಿ ಎರಡೂ ಬದಿಯಲ್ಲಿ ಮಕರ ತೋರಣಗಳಿವೆ. ತೋರಣವು ಪುಷ್ಪಾಲಂಕೃತಗೊಂಡಿದ್ದು ಮೇಲ್ಭಾಗದಲ್ಲಿ ಕೀರ್ತಿ ಮುಖವಿದೆ. ರಾಮನಾಥನ ಶಿಲ್ಪ ಭೈರವನ ಅವತಾರವೆಂದೇ ಭಾವಿಸಿ ಪೂಜೆಗೊಳ್ಳುತ್ತಿದ್ದರೆಂದು ಪಾಂಚಾಳ ಗಂಗನ ರಾಮನಾಥ ಸಾಂಗತ್ಯದಲ್ಲಿ ಉಲ್ಲೇಖಿಸಲಾಗಿದೆ. (ವರದರಾಜ ರಾವ್, ೧೯೬೬, ಪು. ೧೯೩)

ಕುಮಾರ ರಾಮನ ಪತ್ನಿ ಮತ್ತು ಮಕ್ಕಳು ಬದಿಯಲ್ಲಿ ನಿಂತಿರುವ ಸ್ತ್ರೀಯೂ ರಾಮಲದೇವಿಯಾಗಿದ್ದು, ಕುಮಾರ ರಾಮನ ಪತ್ನಿ ಹಾಗೂ ಗುತ್ತಿಯ ಜಗತಾಪಿಯ ಮಗಳಿವಳು. ಇವಳಿಗೆ ಎರಡು ಮಕ್ಕಳು. ಹೊಸಮಲೆದುರ್ಗದ ಶಾಸನದಲ್ಲಿ, ಕುಮಾರ ರಾಮನಾಥನ ಗೋಪಾಯಿ ಎಂದು ಹೆಸರಿದೆ.

ಹೆಸರು	: ಕುಮಾರ ರಾಮ ಶಿಲ್ಪ
ಸಿಕ್ಕ ಸ್ಥಳ	: ಕಾಮಲಾಪುರ, ಕಡ್ಡಿರಾಂಪುರ ರಸ್ತೆ ಬದಿಯ ಗುಂಡಿನ ಮೇಲೆ, ಕಡ್ಡಿರಾಂಪುರ, ಹೊಸಪೇಟೆ, ಬಳ್ಳಾರಿ ಜಿಲ್ಲೆ
ಕಾಲ	: ಕ್ರಿ.ಶ. ೧೪-೧೫ ನೇ ಶತಮಾನ
ಶಿಲಾವಸ್ತು	: ಗ್ರ್ಯಾನೈಟ್

ಈ ಶಿಲ್ಪ ನಿಂತಿದ್ದು, ಎಡಗಾಲನ್ನು ಮುಂದೆ ಇಟ್ಟಂತಿದೆ. ಬಲಕೈಗಳಲ್ಲಿ ಮಚ್ಚಿನಂಥಹ ಆಯುಧವನ್ನು ಹಿಡಿದಿದೆ. ಗಂಭೀರ ಮುಖಭಾವವಿದ್ದು, ತಲೆಯಲ್ಲಿನ ಕೂದಲುಗಳು ಮೇಲ್ಮುಖವಾಗಿವೆ. ಕಂಠಾಭರಣ, ದೋತರವನ್ನು ವೀರಗಚ್ಚೆಯಂತೆ ಉಟ್ಟಂತಿದೆ. ಮುಂಗೈಗಳಲ್ಲಿ ಕಡಗಗಳು, ಭುಜಾಭರಣಗಳು, ಕಾಲುಗಳಿಗೆ ಕಡಗಗಳನ್ನು ಧರಿಸಿವೆ. ಕುಮಾರ ರಾಮನು ಪರಶುರಾಮನ ಅವತಾರವೆಂದು ಮಹಾಲಿಂಗಸ್ವಾಮಿ ಬಾಲರಾಮನ ಸಾಂಗತ್ಯದಲ್ಲಿ ಹೇಳಿದ್ದು, ಕುಮಾರ ರಾಮನ ಶಿಲ್ಪದ ಬಳಿ ಹಾಗೂ ಅವನ ಕೋಟೆಗಳಲ್ಲಿ ತಾಯಮ್ಮನ ಗುಡಿ ಶಿಲ್ಪವನ್ನು ಸ್ಥಾಪಿಸಿರುವುದು ಗಮನಾರ್ಹ.

ಹೆಸರು	: ಕುಮಾರ ರಾಮ ಶಿಲ್ಪ
ಸಿಕ್ಕ ಸ್ಥಳ	: ಗಂಗಾವತಿ ಸರಕಾರಿ ವಸ್ತು ಸಂಗ್ರಹಾಲಯ, ರಾಯಚೂರು
ಕಾಲ	: ಕ್ರಿ.ಶ. ೧೭ ನೇ ಶತಮಾನ
ಶಿಲಾವಸ್ತು	: ಗ್ರ್ಯಾನೈಟ್
ಉಲ್ಲೇಖ	: Bhatsoori K.G. 1997. Sclptures in the Govt. Museum Raichur P: 46. Pl. 23.

ವೀರಾಸನದಲ್ಲಿ ನಿಂತಿರುವ ಈ ವ್ಯಕ್ತಿಯು ಕೈಗಳಲ್ಲಿ ಭರ್ಜಿಯನ್ನು ಹಿಡಿದುಕೊಂಡಿದೆ. ಕೊರಳಲ್ಲಿ ಪದಕವುಳ್ಳ ಆಭರಣವನ್ನು ಧರಿಸಿದೆ. ತಲೆಗೂದಲನ್ನು ಮಡಿಕಟ್ಟಿದೆ. ಕಿವಿಯಲ್ಲಿ ಆಭರಣ, ಕೈತೋಳುಗಳಲ್ಲಿ ಹಾಗೂ ಮುಂಗೈಯಲ್ಲಿ ಕಡಗಾಭರಣಗಳಿವೆ. ದೋತರವನ್ನು ಉಟ್ಟಿದ್ದು, ಮಧ್ಯದಲ್ಲಿ ದೋತರದ ನೆರಿಗೆಗಳು ಕಲಾತ್ಮಕವಾಗಿ ಕಾಣಿಸುತ್ತವೆ. ನಡುವಿನಲ್ಲಿ ಮಣಿ ಪಟ್ಟಿಯನ್ನು ಧರಿಸಿದ್ದು. ಕಿರುಗತ್ತಿಯನ್ನು ಸಿಕ್ಕಿಸಿದೆ. ಬಲಬದಿಯಲ್ಲಿ ಚಂದ್ರ ಎಡಬದಿಯಲ್ಲಿ ಸೂರ್ಯರ ಚಿತ್ರಗಳಿವೆ. ಕೆಳಭಾಗದಲ್ಲಿ ಹೆಡೆ ಎತ್ತಿರುವ ನಾಗರ ಹಾವಿನ ಶಿಲ್ಪವಿದೆ.

ಹೆಸರು	: ಕುಮಾರ ರಾಮ ಶಿಲ್ಪ
ಸಿಕ್ಕ ಸ್ಥಳ	: ಗ್ರಾಮದ ಹೊರಭಾಗದ ಆಲದ ಮರದ ಕೆಳಗೆ, ಚಿಕ್ಕಾಂಶಿ, ಹಾನುಗಲ್ಲು ತಾಲೂಕು, ಹಾವೇರಿ ಜಿಲ್ಲೆ
ಕಾಲ	: ಕ್ರಿ.ಶ. ೧೪-೧೫ನೇ ಶತಮಾನ
ಶಿಲಾವಸ್ತು	: ಗ್ರಾನೈಟ್
ಉಲ್ಲೇಖ	: ಸುರೇಶ ಹರ್ಲಾಪುರ ೧೯೯೮, ಇ. ದ., ಸಂ.೧೩, ಪು. ೫೫, ೫೬

ಚಿಕ್ಕಾಂಶಿ ಗ್ರಾಮದ ಹೊರಭಾಗದಲ್ಲಿ ದೊಡ್ಡ ಆಲದ ಮರದ ಕೆಳಗೆ ನಿಲ್ಲಿಸಿರುವ ಈ ವೀರಗಲ್ಲು ಶಿಲ್ಪವನ್ನು ಕುಮಾರ ರಾಮ(ದೇವ)ನಾಥನೆಂದು ಆರಾಧನೆಯನ್ನು ಮಾಡುತ್ತಿದ್ದಾರೆ. ಈ ಶಿಲ್ಪದಲ್ಲಿರುವ ವ್ಯಕ್ತಿಯು ಸಾಲಂಕೃತ ಕುದುರೆಯ ಮೇಲೆ ಕುಳಿತಿದ್ದು. ಈಟಿಯನ್ನು ತನ್ನ ಬಲಗೈಯಲ್ಲಿ ಹಿಡಿದಿದ್ದು ಎಡಗೈಯಲ್ಲಿ ಕುದುರೆಯ ಕಡಿವಾಣವನ್ನು ಹಿಡಿದಿರುವನು. ಅವನ ಬದಿಯಲ್ಲಿ ಇಬ್ಬರು ವ್ಯಕ್ತಿಗಳು ನಿಂತಿರುವ ಶಿಲ್ಪಗಳಿದ್ದು, ಈ ವ್ಯಕ್ತಿಯು ಆತನ ನಿಕಟವರ್ತಿಯಾಗಿರಬಹುದೇ(?)

ಹೆಸರು	: ಕುಮಾರ ರಾಮ ಶಿಲ್ಪ
ಸಿಕ್ಕ ಸ್ಥಳ	: ಊರಿನ ಹೊರಭಾಗ ದಕ್ಷಿಣದ ಗುಡಿ ರಾಮೇಶ್ವರ ಗುಡಿ, ಉಂಯಟೆ ಗದ್ದೆ, ಸೊರಬ ತಾಲೂಕು, ಶಿವಮೊಗ್ಗ ಜಿಲ್ಲೆ
ಕಾಲ	: ಕ್ರಿ.ಶ. ೧೪-೧೫ನೇ ಶತಮಾನ.
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: ಸೂರ್ಯನಾರಾಯಣ ಎಸ್. ಪತ್ರಾಂಕಿತ ಸಹಾಯಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಹೊಸಪೇಟೆ ಇವರಿಂದ ಪಡೆದ ಮಾಹಿತಿ.

ಕುಮಾರ ರಾಮನನ್ನು ಲಿಂಗ ರೂಪದಲ್ಲಿ ಪೂಜಿಸಲಾಗುತ್ತಿದೆ. ಗುಡಿಯನ್ನು ಚಿಕ್ಕದಾಗಿ ಸೈಜು ಕಲ್ಲುಗಳಿಂದ ಕಟ್ಟಿದ್ದಾರೆ. ಒಳಭಾಗದಲ್ಲಿ ಲಿಂಗವಿದೆ. ಈ ಲಿಂಗವನ್ನು ಕುಮಾರ ರಾಮನೆಂದು ಆರಾಧಿಸುವರು. ಈ ರೀತಿ ಹೊಸಮಲೆಯ ದುರ್ಗದಲ್ಲಿರುವ ರಾಮಸ್ವಾಮಿ ದೇವಾಲಯದಲ್ಲೂ ಈ ಸಂಪ್ರದಾಯವಿದೆ.

ಹೆಸರು : ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ಗ್ರಾಮದ ಹೊರಭಾಗದ ಶಿರಗೋಡು, ಹಾನಗಲ್ಲು ತಾಲೂಕು, ಹಾವೇರಿ ಜಿಲ್ಲೆ.

ಕಾಲ : ಕ್ರಿ.ಶ. ೧೪-೧೫ನೇ ಶತಮಾನ.

ಶಿಲಾವಸ್ತು : ಗ್ರಾನೈಟ್

ಉಲ್ಲೇಖ : ಸುರೇಶ ಬ. ಹರ್ಲಾಪುರ ೧೯೯೮, ಇ.ದ., ಸಂ.೧೩, ಪು. ೫೫-೫೬

ಈ ಶಿಲ್ಪವೂ ಮೂರು ಜನ ವ್ಯಕ್ತಿಗಳನ್ನು ಒಳಗೊಂಡಿದ್ದು, ಮಧ್ಯದಲ್ಲಿನ ಶಿಲ್ಪವು ಕುದುರೆಯ ಮೇಲೆ ಕುಳಿತಿರುವ ವೀರನದ್ದು. ಎರಡು ಬದಿಯಲ್ಲಿ ನಿಂತಿರುವ ಸ್ತ್ರೀ ಶಿಲ್ಪಗಳಿವೆ. ಇವರ ಮಧ್ಯದಲ್ಲಿರುವ ವ್ಯಕ್ತಿಯನ್ನು ಕುಮಾರ ರಾಮನಾಥನೆಂದು ಕರೆಯುವ ವಾಡಿಕೆ ಇದೆ. ಸ್ತ್ರೀಯರ ಶಿಲ್ಪಗಳು ವೀರನ ಶಿಲ್ಪಗಳಿಗಿಂತ ದೊಡ್ಡದಾಗಿದ್ದು, ಕೈಗಳಲ್ಲಿ ನಿಂಬೆಹಣ್ಣು ಹಿಡಿದಿರುವುದು ಮತ್ತು ಮುಡಿಯಲ್ಲಿ ಕೇದಿಗೆಯನ್ನು ಮುಡಿದಿರುವುದರಿಂದಲೂ, ಕುಮಾರ ರಾಮನ ಮರಣದ ನಂತರ ಅವನ ಸತಿಯರು ಮಹಾಸತಿಯರಾದುದರ ನೆನಪಿಗಾಗಿ ನಿರ್ಮಿಸಿದ ಮಹಾಸತಿಯರ ಸ್ಮಾರಕ ಶಿಲ್ಪಗಳಾಗಿವೆ. ಸ್ಥಳೀಯ ಗ್ರಾಮಸ್ಥರು ಭಕ್ತಿ ಭಾವದಿಂದ ಕುಮಾರ ರಾಮನಿಗೆ ಸಲ್ಲುವ ಗೌರವವನ್ನು ಅವನ ಮಡದಿಯರಿಗೂ ಅಷ್ಟೆ ಉನ್ನತ ಗೌರವವನ್ನು ಕೊಟ್ಟಿರುವುದು ಇದರಿಂದ ವ್ಯಕ್ತವಾಗುವುದು.

ಹೆಸರು : ಕುಮಾರ ರಾಮ ಶಿಲ್ಪ

ಸ್ಥಳ : ಒಂದಂಕಣದ ಗುಡಿ ಗ್ರಾಮದ ಪಶ್ಚಿಮಕ್ಕೆ (ರಾಮಂತಗುಡಿ) ಮಾಳಗೊಂಡನ ಕೊಪ್ಪ, ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ

ಕಾಲ : ಕ್ರಿ.ಶ. ೧೫-೧೬ನೇ ಶತಮಾನ

ಶಿಲಾವಸ್ತು : ಗ್ರಾನೈಟ್

ಉಲ್ಲೇಖ : ಬೋಜರಾಜ ಪಾಟೀಲ, ೧೯೯೮, ಇ.ದ., ಸಂ.೧೩, ಪು. ೩೨

ಊರಿನ ಪಶ್ಚಿಮಕ್ಕೆ ಇರುವ ಈ ದೇವಾಲಯವನ್ನು ಸೈಜುಕಲ್ಲು ಹಾಗೂ ಇಟ್ಟಿಗೆಯಿಂದ ನಿರ್ಮಿಸಲಾಗಿದ್ದು. ಒಂದು ಅಂಕಣವಷ್ಟು ವಿಶಾಲವಾಗಿದ್ದು ಮೇಲ್ಛಾವಣಿಗೆ ತಗಡಿನ ಹೊದಿಕೆಯನ್ನು ಹೊದಿಸಲಾಗಿದೆ.

ದೇವಾಲಯದ ಒಳಭಾಗದಲ್ಲಿ ಸುಮಾರು ೩ ಅಡಿಗಳಷ್ಟು ಎತ್ತರ ಮತ್ತು ೧ ಅಡಿಯಷ್ಟು ಅಗಲವಾಗಿರುವ ಕಲ್ಲಿನ ಹಲಗೆಯ ಮೇಲೆ ಕುದುರೆಯ ಮೇಲೆ ಕುಳಿತಿರುವ ವ್ಯಕ್ತಿ, ಎಡಗೈಯಲ್ಲಿ ಕಡಿವಾಣ ಲಗಾಮನ್ನು ಹಿಡಿದಿದೆ. ಬಲಗೈಯಲ್ಲಿ ಈಟಿಯನ್ನು ಎಸೆಯುವ ಭಂಗಿಯಲ್ಲಿದ್ದು, ಕುದುರೆಯು ಓಡುತ್ತಿರುವ ಭಂಗಿಯಲ್ಲಿದೆ. ಶಿಲ್ಪದ ಹಿಂಭಾಗದಲ್ಲಿ ಒಬ್ಬ ವ್ಯಕ್ತಿಯು ಛತ್ರವನ್ನು ಹಿಡಿದಿದ್ದಾನೆ. ಶಿಲ್ಪದ ಪಕ್ಕದಲ್ಲಿ ಒಬ್ಬ ಸ್ತ್ರೀ ಶಿಲ್ಪವೂ ಇದೆ. ಈ ಶಿಲ್ಪದ ಕೆಳಭಾಗದಲ್ಲಿ ಐದು ಸಾಲಿನ ಶಾಸನವು

ಕನ್ನಡ ಲಿಪಿಯಲ್ಲಿದೆ. ಈ ಶಾಸನದಲ್ಲಿ ಕಂಪಿಲದೇವನ ಕುಮಾರ ರಾಮನಾಥವೊಡೇರಿಗೆ ತಾಳಗುಂದದ ಒಳಗಣ ಕೊಪ್ಪದ ಕೆಂಚಗೆಉಡನ ಮಗ ಮಾಳಗ ಉಡ ಮಾಡಿದ ಧರ್ಮ ಕೊಳಗದ ಹೊಲವನ್ನು ದೇವರ ನೈವೇದ್ಯಕ್ಕೆ ಬಿಟ್ಟ ಧರ್ಮವೆಂದಿದೆ.

ವಿಜಯನಗರ ಕಾಲದಲ್ಲಿ ಕುಮಾರ ರಾಮನಾಥನನ್ನು ಒಂದು ಶಕ್ತಿಯಾಗಿ ವೀರದೇವತೆಯಾಗಿ ಅಲ್ಲದೆ ಈ ರೀತಿಯ ದೇವಾಲಯಗಳ ನಿರ್ಮಾಣ ಮಾಡಿರುವುದು ಕಂಡು ಬರುತ್ತಿದ್ದು, ಆತನ ತಂದೆ ಕಂಪಿಲದೇವನ ಹೆಸರನ್ನು ಈ ಶಾಸನವು ಸೂಚಿಸುತ್ತದೆ.

ಹೆಸರು : ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ಊರಿನ ಹೊರಭಾಗದಲ್ಲಿ ಮೂಡೂರು, ಹಾನುಗಲ್ಲು ತಾಲೂಕು, ಹಾವೇರಿ ಜಿಲ್ಲೆ.

ಕಾಲ : ಕ್ರಿ.ಶ. ೧೪-೧೫ ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : ಸುರೇಶ್ ಬಿ. ಹರ್ಲಾಪುರ, ೧೯೯೪, ಹಾನಗಲ್ಲ ಪರಿಸರದಲ್ಲಿ ಕುಮಾರ ರಾಮನ ಶಿಲ್ಪಗಳು, ಇ. ದ., ಸಂ. ೧೩ ಪು. ೫೫-೫೬

ಸುಮಾರು ೬ ಅಡಿಗಳಷ್ಟು ಎತ್ತರ ೧.೫ ಅಡಿಗಳಷ್ಟು ಅಗಲವಿರುವ ಈ ವೀರಗಲ್ಲನ್ನು ಕುಮಾರ ರಾಮನ ಶಿಲ್ಪವೆಂದು ಮೂಡೂರು ಗ್ರಾಮದ ಜನರು ಇಂದಿಗೂ ಪೂಜೆ ಮಾಡುತ್ತಿದ್ದಾರೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿ ಇದ್ದು, ಸೂರ್ಯ ಚಂದ್ರ ಶಿಲ್ಪಗಳು ಇವೆ. ಮಧ್ಯದ ಲಲಾಟದಲ್ಲಿ ಮಕರ ಶಿಲ್ಪವಿದೆ. ಸಾಲಂಕೃತಗೊಂಡ ಕುದುರೆಯ ಮೇಲೆ ಕುಳಿತಿರುವ ಈ ವೀರನ ಶಿಲ್ಪ ಎಡಗೈಯಲ್ಲಿ ಕುದುರೆಯ ಕಡಿವಾಣ ಲಗಾಮನ್ನು ಹಿಡಿದಿದ್ದು, ಬಲಗೈಯಲ್ಲಿ ಭರ್ಚಿ ಬಲ್ಲೆಯನ್ನು ಹಿಡಿದಿದೆ. ವೀರನ ಕೊರಳಲ್ಲಿ ಸರಳ ಆಭರಣಗಳಿವೆ. ಮೈಮೇಲೆ ಕವಚದ ಅಂಗಿ ಮತ್ತು ಧೋತರವನ್ನು ಧರಿಸಿದ್ದು ತಲೆಯ ಮುಡಿಯನ್ನು ಹಿಂಭಾಗದಲ್ಲಿ ಕಟ್ಟಿದೆ. ಕುದುರೆಯ ಕೊರಳಲ್ಲಿ ವಿವಿಧ ಆಭರಣಗಳು ಮತ್ತು ಜೂಲನ್ನು ಹೊದಿಸಿದ್ದು ಅದರ ಮೇಲೆ ತಡಿಯನ್ನು ಹಾಕಿದ್ದು, ಸವಾರನ ಕಾಲುಗಳನ್ನಿಡುವ ರಿಕಾಪುಗಳು ಇರುವುದು ಕಂಡುಬರುತ್ತದೆ. ವಿಶಾಲವಾದ ಎದೆಭಾಗ. ಬಲಿಷ್ಠವಾದ ಕಾಲುಗಳು, ಕರ್ಣಗಳು ಹಿಂದಿನ ಬಾಲವು ಕಲಾತ್ಮಕವಾಗಿ ಚಿತ್ರಿತವಾಗಿದೆ.

ಹೆಸರು : ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ಗಂಗಾವತಿ ಸರ್ಕಾರಿ ವಸ್ತು ಸಂಗ್ರಹಾಲಯ ರಾಯಚೂರು

ಕಾಲ : ಕ್ರಿ.ಶ. ೧೭ನೇ ಶತಮಾನ

ಶಿಲಾವಸ್ತು : ಗ್ರಾನೈಟ್

ಉಲ್ಲೇಖ : Bhatsoori K.G., Sculptures in the Govt.Museum Raichur P. 46. Pl. 22.

ಶಿಲ್ಪವು ವೀರಾಸನದಲ್ಲಿ ನಿಂತಿದ್ದು ದ್ವಿಭುಜಗಳಿವೆ. ಬಲಗೈಯಲ್ಲಿ ಉದ್ದನೆಯ ಅಗಲವಾದ ಖಡ್ಗವನ್ನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದು, ಗುರಾಣಿಯಲ್ಲಿ ಆರು ಚಿಕ್ಕ ವೃತ್ತಾಕಾರದ ಉಬ್ಬುಗಳಿವೆ. ತಲೆಗೆ ಉದ್ದನೆಯ ರುಮಾಲನ್ನು ಸುತ್ತಿದ್ದು, ರುಮಾಲಿನ ಒಂದು ತುದಿ ಹೊರಗೆ ಇದೆ. ಕಿವಿಯೋಲೆ ಧರಿಸಿದ್ದಾನೆ. ಹಣೆಯ ಮೇಲೆ ತಿಲಕವಿದೆ. ಕಣ್ಣುಗಳು ವಿಶಾಲವಾಗಿವೆ. ಮೂಗಿನ ಭಾಗವು ಸ್ವಲ್ಪ ತ್ರುಟಿತವಾಗಿದೆ. ಮೀಸೆ ಇದೆ. ಕೊರಳಲ್ಲಿ ರುಂಡಗಳೋಪಾದಿಯಲ್ಲಿ ಕಾಣಸುವಂತಹ ಮಾಲೆಯೂ (ರುಂಡಮಾಲೆ) ದೊಡ್ಡ ಪದಕ ಕೆಳಭಾಗದಲ್ಲಿ ಇದೆ. ಎರಡೂ ಕೈ ತೋಳುಗಳಲ್ಲಿ ತೋಳ್ಬಂದಿಗಳು ಮುಂಗೈಯಲ್ಲಿ ಕಡಗ ಎಡಗೈ ಹಿಂಬದಿಯಲ್ಲಿ ಶೂಲದ ಚಿಕ್ಕ ಚಿತ್ರಣ ಇದೆ. ನಡುಪಟ್ಟಿಯನ್ನು ಕಟ್ಟಿಕೊಂಡಿದ್ದು, ಮೇಲೇರಿಸಿ ಕಟ್ಟಲಾದ ದೋತರವು ವೀರಗಚ್ಚೆಯಂತೆ ಕಾಣುತ್ತದೆ. ಮಧ್ಯದಲ್ಲಿ ದೋತರದ ನೆರಿಗೆ ಕಲಾತ್ಮಕವಾಗಿದೆ. ನಡುವಿನ ವಸ್ತ್ರದ ಚುಂಗುಗಳು ನೆರಿಗೆಯೋಪಾದಿಯಲ್ಲಿ ಎರಡೂ ಬದಿಯಲ್ಲಿ ಇಳಿಬಿದ್ದಿದೆ. ಕಾಲುಗಳಲ್ಲಿ ಕಡಗಗಳಿವೆ. ಎಡಗಾಲನ್ನು ಮುಂದಿಟ್ಟು ವೀರಾಸನದಲ್ಲಿ ಖಡ್ಗ ಗುರಾಣಿಗಳನ್ನು ಮೇಲೆತ್ತಿ ಹಿಡಿದು ನಡೆಯುವ ಭಂಗಿಯಲ್ಲಿದೆ. ಕುಮಾರ ರಾಮನಾಥನ ಸಾಂಗತ್ಯದಲ್ಲಿ ಕುಮಾರ ರಾಮನನ್ನು ಭೈರವನ ಅವತಾರವೆಂದು ವರ್ಣಿಸಲಾಗಿದೆ.

ಹೆಸರು : ತಾಯಮ್ಮ ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ನಲ್ಲಾರಪುರದ ಪೂರ್ವಕ್ಕೆ ದೀವಲಾಪುರ ರಸ್ತೆಯಲ್ಲಿರುವ ಪುರಾತನ ಕೋಟೆ ದ್ವಾರದ ಬಳಿ, ನಲ್ಲಾಪುರ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಕಾಲ : ಕ್ರಿ.ಶ. ೧೫-೧೬ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಉಲ್ಲೇಖ : ಮಂಜುನಾಥಯ್ಯ ಟಿ.ಎಂ.

ನಲ್ಲಾಪುರ ಕೋಟೆಯ ದ್ವಾರದ ಮುಂದೆ ಕಲ್ಲಾಸರೆಯಲ್ಲಿ ಈ ಶಿಲ್ಪವಿದೆ. ಹಾಗೂ ಈ ಶಿಲ್ಪದ ಬಳಿಯಲ್ಲಿ ಇನ್ನೊಂದು ಶಿಲ್ಪವಿದೆ. ವ್ಯಕ್ತಿಯೊಬ್ಬನು ಬಿಲ್ಲು ಬಾಣಗಳನ್ನು ಹಿಡಿದು ನಿಂತಿರುವನು. ಈತನ ಹಿಂಭಾಗದಲ್ಲಿ ಸ್ತ್ರೀಯೊಬ್ಬಳು ಕೈ ಮುಗಿದು ನಿಂತಿರುವ ಶಿಲ್ಪವಿದೆ. ಈ ಶಿಲ್ಪವನ್ನು ಕುಮಾರ ರಾಮ ಶಿಲ್ಪವೆಂದು ಸ್ಥಳೀಯರು ಆರಾಧಿಸುತ್ತಿದ್ದಾರೆ. ತಾಯಮ್ಮನ ಎರಡು ಶಿಲ್ಪಗಳ ಮಧ್ಯದಲ್ಲಿ ಕುಮಾರ ರಾಮ ಶಿಲ್ಪವಿದೆ.

ಹೆಸರು : ಕುಮಾರ ರಾಮ ಶಿಲ್ಪ

ಸಿಕ್ಕ ಸ್ಥಳ : ಗ್ರಾಮದ ಮಧ್ಯದಲ್ಲಿರುವ ಕಟ್ಟೆಯ ಮೇಲೆ, ಹಿರೆಕಾಂಶಿ, ಹಾನುಗಲ್ಲು ತಾಲೂಕು, ಹಾವೇರಿ ಜಿಲ್ಲೆ

ಕಾಲ : ಕ್ರಿ.ಶ. ೧೪-೧೫ನೇ ಶತಮಾನ

ಶಿಲಾವಸ್ತು : ಗ್ರಾನೈಟ್

ಉಲ್ಲೇಖ : ಸುರೇಶ ಬಿ. ಹರ್ಲಾಪುರ : ೧೯೯೮ ಇ. ದ., ಸಂ.೧೩, ಪು. ೫೫-೫೬

ಹಿರೇಕಾಂಶಿ ಗ್ರಾಮದ ಭಾಗದಲ್ಲಿದ್ದ ಈ ಶಿಲ್ಪವು ಮೂರು ಅಡಿಗಳಷ್ಟು ಎತ್ತರ ಹಾಗೂ ಎರಡು ಅಡಿಗಳಷ್ಟು ಅಗಲ ಕುದುರೆ ಮೇಲೆ ಕುಳಿತಿರುವ ಈ ವ್ಯಕ್ತಿಯು ಎಡಗೈಯಲ್ಲಿ ಕುದುರೆಯ ಕಡಿವಾಣವನ್ನು ಹಿಡಿದಿದ್ದು, ಬಲಗೈಯಲ್ಲಿರುವ ಈಟಿಯನ್ನು ಮೇಲಕ್ಕೆ ಎತ್ತಿ ಹಿಡಿದ್ದಾನೆ. ಈ ಶಿಲ್ಪದ ಮೇಲ್ಭಾಗದ ಸುತ್ತಲೂ ಪ್ರಭಾವಳಿಯ ಆಕಾರದ ಪಟ್ಟಿಕೆ ಇದ್ದು. ಲಲಾಟವಲ್ಲಿ ಕಳಶವಿದೆ. ಈ ಶಿಲ್ಪವನ್ನು ಕುಮಾರ ರಾಮನೆಂದು ಈ ಗ್ರಾಮದ ಜನರು ಆರಾಧಿಸುತ್ತಾರೆ.

ಹೆಸರು	: ಕುಮಾರ ರಾಮ ಶಿಲ್ಪ
ಸಿಕ್ಕ ಸ್ಥಳ	: ಸರ್ಕಾರಿ ವಸ್ತುಸಂಗ್ರಹಾಲಯ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ. ೧೮ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: K.G.Bhatsoori, Sculptures in the Govt. museum Raichur P: 46. Pl. 22.

ಈ ಶಿಲ್ಪದಲ್ಲಿ ಸಾಲಂಕೃತ ಗೊಂಡಿರುವ ಕುದುರೆ ಇದ್ದು, ಕುದುರೆ ಹಿಂಗಾಲುಗಳ ಮೇಲೆ ನಿಂತಿದ್ದು ಮುಂಗಾಲುಗಳನ್ನು ಮೇಲೆ ಎತ್ತಿದ್ದು ನೆಗೆಯುತ್ತಿರುವಂತೆ ಚಿತ್ರಿತವಾಗಿದೆ. ಕುದುರೆಯ ಮೇಲೆ ಕುಳಿತ ವ್ಯಕ್ತಿಯ ಬಲಗೈಯಲ್ಲಿ ದೊಡ್ಡದಾದ ಚಂದ್ರಾಯುಧವಂತೆ ಕಾಣುವ ಆಯುಧವಿದೆ. ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದುಕೊಂಡಿದ್ದಾನೆ. ನಡುವಿನ (ಸೊಂಟ)ಲ್ಲಿ ಕಿರುಗತ್ತಿಯನ್ನು ಸಿಕ್ಕಿಸಲಾಗಿದೆ. ತಲೆಯಲ್ಲಿ ರುಮಾಲನ್ನು ಸುತ್ತಿದ್ದು, ಕೈ ಮತ್ತು ಕಾಲುಗಳಲ್ಲಿ ಕಡಗಗಳಿವೆ. ಈ ವ್ಯಕ್ತಿಯ ಹಿಂಭಾಗದಲ್ಲಿ ಸ್ತ್ರೀಯೊಬ್ಬಳು ಕುಳಿತ್ತಿದ್ದು ತನ್ನ ಬಲಗೈಯನ್ನು ಮೇಲೆ ಎತ್ತಿ ಹಿಡಿದಿದ್ದಾಳೆ. ಕುದುರೆಯ ಹಿಂಭಾಗದಲ್ಲಿ ನಿಂತಿರುವ ವ್ಯಕ್ತಿಯು ತನ್ನೆರಡೂ ಕೈಯಗಳಲ್ಲಿ ಛತ್ರವನ್ನು ಹಿಡಿದುಕೊಂಡಿದೆ. ಕುದುರೆ ಮುಂಬಾಗದಲ್ಲಿ ಇನ್ನೊಬ ವ್ಯಕ್ತಿ ಭಲ್ಲೆ(ಭರ್ಜಿ)ಯನ್ನು ಹಿಡಿದು ನಿಂತಿರುವನು. ಈ ಶಿಲ್ಪದ ಮೇಲ್ಭಾಗದಲ್ಲಿ ಕೀರ್ತಿ ಮುಖವಿದೆ. ಶಿಲ್ಪದ ಅರ್ಧಭಾಗ ಹಾಳಾಗಿದೆ. ಇನ್ನೊಂದು ಕುಮಾರ ರಾಮ ಶಿಲ್ಪವಾಗಿದ್ದು, ಗುತ್ತಿಯ ಜಗತಾಪಿಯೊಡನೆ ಆ ಯುದ್ಧವನ್ನು ಮಾಡಿದ್ದು ಜಗತಾಪಿಯು ಯುದ್ಧದಲ್ಲಿ ಸೋತ ನಂತರ ತನ್ನ ಮಗಳು ರಾಮಲದೇವಿಯನ್ನು ಕುಮಾರ ರಾಮನಿಗೆ ಕೊಟ್ಟು ವಿವಾಹ ಮಾಡುತ್ತಾನೆಂದು ಕುಮಾರ ರಾಮ ಚರಿತದಲ್ಲಿ ನಂಜುಂಡ ಕವಿಯು ವರ್ಣಿಸಿದ್ದಾನೆ.

ಅಧ್ಯಾಯ - ೫

ಇತರೆ ಕಲೆಗಳು

ವೀರಗಲ್ಲುಗಳಲ್ಲಿ ಶಿಲ್ಪಕಲೆ

ಕರ್ನಾಟಕದಲ್ಲಿ ವೀರಗಲ್ಲುಗಳ ಸಂಖ್ಯೆ ಅಪಾರ. ಇವು ಶಾಸನರಹಿತ ಮತ್ತು ಶಾಸನ ಸಹಿತ ಶಿಲ್ಪವಿರಬಹುದು. ಹೆಚ್ಚಿನ ಮಟ್ಟಿಗೆ ವ್ಯಕ್ತಿ-ವ್ಯಕ್ತಿಗಳ ಹೋರಾಟ ಇಲ್ಲಿ ಚಿತ್ರಿತವಾಗಿರುತ್ತದೆ. ವೀರಗಲ್ಲೆಂದರೆ ವೀರರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕವೆಂದರ್ಥ. ಈ ವೀರಗಲ್ಲುಗಳಲ್ಲಿನ ಶಾಸನ, ವೀರನ ಪರಾಕ್ರಮವನ್ನು ಸಾರುತ್ತದೆ. ವೀರಗಲ್ಲು ಶಿಲ್ಪಗಳಲ್ಲಿ ಹಲವಾರು ವೈವಿಧ್ಯತೆಗಳಿರುತ್ತವೆ. ಇವು ಯುದ್ಧದಲ್ಲಿ ಮಡಿದ ವೀರಗಲ್ಲುಗಳಾಗಿರಬಹುದು. ತುರುಗೋಳ, ಪೆಣ್ಬುಯಲ್ ಅಥವಾ ದಾರಿಗಳ್ಳರೊಡನೆ ಕಾದಾಡಿದ ವೀರರ ಶಿಲ್ಪಗಳಾಗಿರಬಹುದು. ಒಟ್ಟಾರೆ ವ್ಯಕ್ತಿ ವ್ಯಕ್ತಿಗಳ ಹೋರಾಟ ಶಿಲ್ಪ, ಪ್ರಾಣಿ ಪ್ರಾಣಿಗಳ ಹೋರಾಟ ಶಿಲ್ಪ, ಅಥವಾ ಇದು ವೀರ ಸ್ತಂಭಗಳ ಶಿಲ್ಪಗಳಾಗಿರಬಹುದು. (ಪರಮಶಿವಮೂರ್ತಿ ಡಿ.ವಿ. ೧೯೯೯ ಪ್ರ. ೭೨, ಕನ್ನಡ ಶಾಸನ ಶಿಲ್ಪ) ವೀರಗಲ್ಲುಗಳಲ್ಲಿ ಹೆಚ್ಚಿನ ಮಟ್ಟಿಗೆ ೩-೫ ಪಟ್ಟಿಕೆಗಳ ಚಿತ್ರಣಗಳಿರುತ್ತವೆ. ಚಿತ್ರ ಪಟ್ಟಿಕೆಯ ಮಧ್ಯದಲ್ಲಿ ಶಾಸನಗಳು ಬರೆಯಲ್ಪಟ್ಟಿವೆ. ಇವೇ ಶಾಸನಶಿಲ್ಪ ವೀರಗಲ್ಲುಗಳಲ್ಲಿ ಮೂರು ಪಟ್ಟಿಕೆಗಳಿದ್ದರೆ ಪ್ರಾರಂಭದ ಹಂತದಲ್ಲಿ ಯುದ್ಧದಲ್ಲಿ ಹೋರಾಡುತ್ತಿರುವ ಚಿತ್ರಣ ಮಧ್ಯ ಪಟ್ಟಿಕೆಯಲ್ಲಿ ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುವ ಚಿತ್ರಣ, ಹಾಗೂ ಮೂರನೇಯ ಪಟ್ಟಿಕೆಯಲ್ಲಿ ಶಿವ ಸಾನಿಧ್ಯವನ್ನು ಪಡೆಯುವ ಚಿತ್ರಣವೂ ಇರುತ್ತದೆ. ಒಟ್ಟಾರೆ ಇವು ವೀರಶಿಲ್ಪಗಳು. ಕರ್ನಾಟಕದಲ್ಲಿ ಇಂತಹ ವೀರಶಿಲ್ಪಗಳು ಬಹಳಷ್ಟಿವೆ. ಕುಮ್ಮಟ ನಾಯಕರ ಕಾಲದಲ್ಲಿನ ಲಭ್ಯವಾದ ಇಂತಹ ವೀರಗಲ್ಲುಗಳು ಕುಮ್ಮಟದುರ್ಗ, ಆನೆಗೊಂದಿ, ಹಳೇದರೋಜಿ ಹಾಗೂ ಹೊಸಮಲೆದುರ್ಗ ಪರಿಸರದಲ್ಲಿ ದೊರಕಿವೆ. ಇಂತಹ ವೀರಗಲ್ಲುಗಳಲ್ಲಿನ ಲಕ್ಷಣಗಳನ್ನು ಒಂದೆಡೆ ಸೆರೆ ಹಿಡಿಯಲಾಗಿದೆ.

ಹೆಸರು	: ವೀರಗಲ್ಲು
ಸಿಕ್ಕ ಸ್ಥಳ	: ಕುಮಾರ ರಾಮನ ಗುಡ್ಡದ ಮೇಲೆ ತೋರಣಕ್ಕೆ, ದಕ್ಷಿಣ ಭಾಗದಲ್ಲಿ, ಕುಮ್ಮಟದುರ್ಗ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.
ಕಾಲ	: ಕ್ರಿ.ಶ. ೧೫ ನೇ ಶತಮಾನ
ಶಿಲಾವಸ್ತು	: ಗ್ರಾನೈಟ್ ಶಿಲೆ
ಉಲ್ಲೇಖ	: VPR. 1987-88 P. 211

ವೀರಗಲ್ಲಿನ ಕೆಳಭಾಗದಲ್ಲಿ ವೀರನು ಬಿಲ್ಲು ಬಾಣಗಳನ್ನು ಹಿಡಿದಿದ್ದು, ಕುದುರೆಯ ಮೇಲೆ ಕುಳಿತ ವೈರಿಪಡೆಯ ರಾವುತನೊಂದಿಗೆ ಯುದ್ಧದಲ್ಲಿ ನಿರತನಾಗಿರುವನು. ರಾವುತನು ಈಟಿ(ಭರ್ಚಿ)ಯನ್ನು ಬಲಗೈಯಲ್ಲಿ ಹಿಡಿದಿದ್ದು. ಎಡಗೈಯಲ್ಲಿ

ಕುದುರೆಯ ಲಗಾಮು ಹಿಡಿದಿದ್ದಾನೆ. ಆತನ ಹಿಂದೆ ಇನ್ನೊಬ್ಬ ಖಡ್ಗದಾರಿ ವ್ಯಕ್ತಿ ಚಿತ್ರಿಣವಿದೆ. ಬಿಲ್ಲು ಬಾಣಗಳನ್ನು ಹಿಡಿದ ವೀರನ ಜೊತೆಯಲ್ಲಿ ಮೂರು ಜನ ಸೈನಿಕರು, ಖಡ್ಗ, ಗುರಾಣಿ, ಈಟಿಗಳನ್ನು ಹಿಡಿದು ಹೋರಾಟ ಮಾಡುತ್ತಿರುವಂತಿದೆ. ಕೆಳಭಾಗದಲ್ಲಿ ಖಡ್ಗವನ್ನಿಡಿದ ಸೈನಿಕನೊಬ್ಬ ನೆಲದ ಮೇಲೆ ಬಿದ್ದಿರುವನು. ಅವನ ಮೇಲೆ ಕುದುರೆ ಎಡ ಮುಂಗಾಲನ್ನು ಎತ್ತಿ ಇರಿಸುತ್ತಿದೆ. ಮಧ್ಯದ ಪಟ್ಟಿಕೆಯಲ್ಲಿ ವೀರನು ಮಂಟಪದ ಒಳಗೆ ಅಂಜಲಿ ಮುದ್ರೆಯಲ್ಲಿ ಪದ್ಮಾಸನದಲ್ಲಿ ಕುಳಿತಿದ್ದಾನೆ. ಮಂಟಪದ ಎರಡೂ ಬದಿಯಲ್ಲಿ ಯಕ್ಷಿಯರು ಚಾಮರಗಳನ್ನಿಡಿದು ನಿಂತಿದ್ದಾರೆ. ಶಿವಲಿಂಗಕ್ಕೆ ಕೈ ಮುಗಿಯುತ್ತಿದ್ದು. ಗುರು ಶಿವಲಿಂಗವನ್ನು ಪೂಜೆ ಮಾಡುತ್ತಿರುವ ದೃಶ್ಯವಿದೆ.

ಹೆಸರು	: ವೀರಗಲ್ಲು
ಸಿಕ್ಕ ಸ್ಥಳ	: ರಾಮಸ್ವಾಮಿ ದೇವಾಲಯದ ದಕ್ಷಿಣಕ್ಕೆ, ಕಣಿವೆಯಲ್ಲಿ, ಕುಮ್ಮಟದುರ್ಗ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ.
ಕಾಲ	: ಕ್ರಿ.ಶ. ೧೪ ನೇ ಶತಮಾನ.
ಶಿಲಾವಸ್ತು	: ಕಪ್ಪು ಮಿಶ್ರಿತ ಹಸಿರು ಶಿಲೆ
ಉಲ್ಲೇಖ	: VPR, 1987-88 P. 213.

ಮೂರು ಹಂತದಲ್ಲಿರುವ ಈ ವೀರಗಲ್ಲಿನ ಕೆಳಭಾಗದಲ್ಲಿ ವೀರನು ನಿಂತು ಕುದುರೆಯ ಮೇಲೆ ಕುಳಿತ ವೈರಿ ಪಡೆ ವೀರರೊಂದಿಗೆ ಯುದ್ಧದಲ್ಲಿ ನಿರತನಾಗಿದ್ದಾನೆ. ಕೈಗಳಲ್ಲಿ ಖಡ್ಗ ಮತ್ತು ಗುರಾಣಿಯನ್ನು ಹಿಡಿದಿದ್ದು ದೋತರವನ್ನು ಧರಿಸಿ ವೀರಗಚ್ಚೆಯನ್ನು ಹಾಕಿದ್ದಾನೆ. ಕೊರಳಲ್ಲಿ ವೈಜಯಂತಿಹಾರ ಧರಿಸಿ, ಎಡಗಾಲನ್ನು ಮುಂದಿಟ್ಟು ವೀರಾವೇಶದಲ್ಲಿ ನಿಂತಿದ್ದು, ಆತನ ಬಲಕ್ಕೆ ಕುದುರೆಗೆ ಹಾಕಿದ ಕಡಿವಾಣ ಇದೆ. ಕಾರಣ ಈತನು ಸಹ ರಾವುತನಾಗಿರುವನೆಂಬುದರ ದ್ಯೋತಕ ಇದಾಗಿದೆ. ವೀರನ ಎದುರಿಗೆ ನಿಂತಿರುವ ವೈರಿ ಯೋಧರು ಕುದುರೆಗಳ ಮೇಲೆ ಕುಳಿತು, ಭರ್ಚಿಗಳಿಂದ ವೀರನನ್ನು ಎದುರಿಸುವಂತಿದೆ. ವೀರನ ಕಾಲುಗಳಡಿಯಲ್ಲಿ ಮಡಿದ ಯೋಧನ ಶವವಿದೆ. ವೀರನು ತಲೆ ಕೂದಲನ್ನು ಮುಡಿಕಟ್ಟಿದ್ದಾನೆ. ಹಣೆಯ ಮೇಲೆ ನಾಮವಿದೆ. ವೈರಿ ಪಡೆ ಯೋಧರು ತಲೆಗೆ ಬಟ್ಟೆಯನ್ನು ಸುತ್ತಿ ಕೊಂಡಿದ್ದಾರೆ. ಎರಡನೆ ಪಟ್ಟಿಕೆಯಲ್ಲಿ ಯಕ್ಷಯಕ್ಷಿಯರು ಕೈಗಳಲ್ಲಿ ಚಾಮರಗಳನ್ನು ಹಿಡಿದು, ವೀರನನ್ನು ಕರೆದೊಯ್ಯುವ ಚಿತ್ರಣ ಮೂಡಿದೆ. ಮೇಲಿನ ಹಂತದಲ್ಲಿ ನಂದಿ ಶಿವಲಿಂಗವಿದ್ದು, ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳಿವೆ. ಗುರುವು ಬಲಗೈಯಲ್ಲಿ ಧೂಪಾರತಿಯನ್ನು ಹಿಡಿದು ಶಿವಲಿಂಗಾರ್ಚನೆ ಮಾಡುತ್ತಿರುವನು. ವೀರನು ಶಿವಲಿಂಗದ ಮುಂದೆ ಅಂಜಲಿಯ ಮುದ್ರೆಯಲ್ಲಿದ್ದು, ಇದು ಶಿವಸಾನಿಧ್ಯವನ್ನು ಸೇರಿದ ಚಿನ್ಹೆಯಾಗಿದೆ.

ಹೆಸರು	: ವೀರಗಲ್ಲು (ಗಡೆಸಿಂಗ)
ಸಿಕ್ಕ ಸ್ಥಳ	: ರಾಮಸ್ವಾಮಿ ದೇವಾಲಯದ ದಕ್ಷಿಣಕ್ಕೆ, ಕಣಿವೆಯಲ್ಲಿ, ಕುಮ್ಮಟ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.

ಕಾಲ : ಕ್ರಿ.ಶ. ೧೪ ನೇ ಶತಮಾನ

ಶಿಲಾವಸ್ತು : ಕಪ್ಪು ಮಿಶ್ರಿತ ಹಸಿರು ಶಿಲೆ ಪಚ್ಚೆ ಬಣ್ಣದ್ದು

ಉಲ್ಲೇಖ : VPR, 1987-88, P: 212, Anila Verghese -2001. P. 49

ಮೂರು ಹಂತದಲ್ಲಿರುವ ಈ ವೀರಗಲ್ಲಿನಲ್ಲಿ, ಕೆಳಹಂತದಲ್ಲಿ ಯುದ್ಧದ ದೃಶ್ಯವಿದೆ. ಕೆಲವು ದೇಹಗಳ ರುಂಡಗಳು ಉರುಳಲ್ಪಟ್ಟಿದೆ. ನಾಯಿಯೊಂದು ಮಡಿದ ಸೈನಿಕನ ಶವವನ್ನು ತಿನ್ನುವ, ಇಲ್ಲಿ ಅಶ್ವದಳ ಹಾಗೂ ಪದಾತಿ ದಳಗಳು, ಪದಾತಿ ಸೈನಿಕರೊಂದಿಗಿನ ಹೋರಾಟದಲ್ಲಿರುವ ದೃಶ್ಯವಿದೆ. ವೀರರ ಕೈಗಳಲ್ಲಿ ಖಡ್ಗ, ಬಿಲ್ಲು ಬಾಣ, ಭರ್ಚಿ, (ಈಟಿ) ಹಾಗೂ ಗುರಾಣಿ ಹಿಡಿದಿವೆ. ಪ್ರಮುಖವಾಗಿ ಕಂಡುಬರುವ ವ್ಯಕ್ತಿಯು ಕುದುರೆಯ ಮೇಲೆ ಕುಳಿತಿದ್ದಾನೆ. ದೊಡ್ಡ ಉದ್ದನೆಯ ಖಡ್ಗವನ್ನು ಹಿಡಿದಿದ್ದಾನೆ. ಈತ ಗಡೆ ಸಿಂಗನಿರಬಹುದೆ(?). ಮಧ್ಯದ ಪಟ್ಟಿಕೆಯಲ್ಲಿ ಎಂಟು ಜನ ಸಹಚರರು ವೀರನ ಕೈಗಳನ್ನು ಹಿಡಿದು ದೇವಲೋಕಕ್ಕೆ ಕರೆದೊಯ್ಯುವ ಚಿತ್ರವಿದೆ. ಸಹಚರರು ಚಾಮರಧಾರಿಗಳಾಗಿರುವರು. ಮೂರನೆಯ ಪಟ್ಟಿಕೆಯಲ್ಲಿ ವೀರನು ಕೈ ಮುಗಿದು, ಕುಳಿತಂತೆ ಚಿತ್ರಿತವಾಗಿದೆ. ಅವನ ಮುಂದೆ ಶಿವಲಿಂಗವನ್ನು ಪೂಜಿಸುವ ಗುರುಗಳು ಹಾಗೂ ಇನ್ನೊಂದು ಬದಿಯಲ್ಲಿ ನಾಲ್ಕು ಜನ ಮಹಿಳೆಯರು ಶಿವಲಿಂಗಕ್ಕೆ ಕೈಮುಗಿಯುತ್ತಿರುವ ದೃಶ್ಯವಿದೆ. ವೀರನು ಮಡಿದಿದ್ದು ಕಂಪಿಲ ಹಾಗೂ ಸುಲ್ತಾನರ ನಡುವೆ ನಡೆದ ಯುದ್ಧಲ್ಲಿ ಎಂದು ಇದರಲ್ಲಿರುವ ಶಾಸನ ಉಲ್ಲೇಖಿಸುತ್ತದೆ. ವೀರಗಲ್ಲಿನ ಪೂರ್ಣ ಮೇಲ್ಭಾಗದಲ್ಲಿ ಚತುರಾಶ್ರ ಕೋನದ ಶಿಖರದ ಸ್ತೂಪಿ ಇದೆ.

ಹೆಸರು : ವೀರಗಲ್ಲು

ಸಿಕ್ಕ ಸ್ಥಳ : ರಾಮಸ್ವಾಮಿ ದೇವಾಲಯದ ದಕ್ಷಿಣಕ್ಕೆ ಕಣಿವೆಯಲ್ಲಿ ಕುಮ್ಮಟದುರ್ಗ ಜಿಲ್ಲೆ.

ಕಾಲ : ಕ್ರಿ.ಶ. ೧೪ ನೇ ಶತಮಾನ

ಶಿಲಾವಸ್ತು : ಕಪ್ಪು ಮಿಶ್ರಿತ ಹಸಿರು ಶಿಲೆ

ಉಲ್ಲೇಖ : VPR, 1987-88, P. 211

ಮೂರು ಹಂತದಲ್ಲಿರುವ ಈ ವೀರಗಲ್ಲಿನ ಕೆಳಭಾಗದಲ್ಲಿ, ವೀರನು ಎದುರಾಳಿ ಅಶ್ವದಳದ ವೈರಿಗಳೊಡನೆ ಹೋರಾಡುವ ದೃಶ್ಯವಿದೆ. ಎರಡು ಕಡೆಯೂ ಸೈನಿಕರ ಬಣಗಳಿವೆ. ಎಡಭಾಗದ ಗುಂಪಿನ ಸೈನಿಕರು ನಿಂತು ಹೋರಾಟವನ್ನು ಮಾಡುತ್ತಿರುವರು. ಬಲಭಾಗದ ಸೈನಿಕರ ಗುಂಪಿನಲ್ಲಿ ಎರಡು ಕುದುರೆಗಳಿವೆ. ಹಿಂದೆ ಕೆಲವು ಸೈನಿಕರು ಖಡ್ಗ, ಬಿಲ್ಲು, ಬಾಣಗಳನ್ನು ಹಿಡಿದು ಯುದ್ಧದಲ್ಲಿ ನಿರತರಾಗಿದ್ದಾರೆ. ಇವರು ವೃತ್ತಾಕಾರದ ಶಿರಾಭರಣವನ್ನು ತಲೆ ಮೇಲೆ ಧರಿಸಿರುವರು. ಇವರ ಕಡೆಯ ಕುದುರೆ ಹಾಗೂ ಸೈನಿಕನೊಬ್ಬನು ಕೆಳಗೆ ಮಡಿದು ಬಿದ್ದಿರುವ ದೃಶ್ಯವಿದೆ. ಇದರಲ್ಲಿನ ಶಾಸನ ಉಲ್ಲೇಖಿಸುವಂತೆ ಈತನು 'ರಾಮನಾಯಕ'ನೆಂದಿದೆ. ಇವನು ತುಳುವ ಗಡೆಸಿಂಗನಾಯಕನ ತಮ್ಮ. ಈತನು ಕೈಯಲ್ಲಿ ಖಡ್ಗ ಮತ್ತು ಗುರಾಣಿಯನ್ನು ಹಿಡಿದು ಯುದ್ಧದಲ್ಲಿ ನಿರತನಾಗಿದ್ದಾನೆ. ಮಧ್ಯದ ಪಟ್ಟಿಕೆಯಲ್ಲಿ ಮಡಿದ ವೀರ 'ರಾಮನಾಯಕ'ನು ಪಲ್ಲಕ್ಕಿಯಲ್ಲಿ ಕೈಮುಗಿದು

ಕುಳಿತಿದ್ದು, ಯಕ್ಷಯಕ್ಷಿಯರು ಪಲ್ಲಕ್ಕಿಯನ್ನು ಹೊತ್ತು ಹೋಗುತ್ತಿದ್ದಾರೆ. ಯಕ್ಷರ ಕೈಗಳಲ್ಲಿ ಚಾಮರಗಳಿವೆ. ಮೂರನೇ ಹಂತದ ಪಟ್ಟಿಕೆಯಲ್ಲಿ ಶಿವಲಿಂಗ ಹಾಗೂ ನಂದಿಯ ಶಿಲ್ಪಗಳಿವೆ. ಶಿವಲಿಂಗದ ಬದಿಯಲ್ಲಿ ಸೂರ್ಯ ಚಂದ್ರರ ಶಿಲ್ಪಗಳಿವೆ. ವೀರನು ಶಿವಲಿಂಗದ ಮುಂದೆ ನಿಂತು ಲಿಂಗಪೂಜೆಯಲ್ಲಿ ನಿರತನಾಗಿದ್ದಾನೆ. ಈ ಪಟ್ಟಿಕೆಯ ಮೇಲ್ಭಾಗದಲ್ಲಿ ಚತುರಾಶ್ರ ಶಿಖರದ ಶಿಲ್ಪಾಕೃತಿ ಇದೆ. ಶಾಸನದಲ್ಲಿ ಸುಲ್ತಾನನು ನೇಮಿಖಾನನೊಡನೆ ಕಂಪಿಲನ ಮೇಲೆ ಯುದ್ಧಕ್ಕಾಗಿ ಕುಮ್ಮಟಕ್ಕೆ ಬಂದಾಗ 'ರಾಮನಾಯಕ'ನು ಮಡಿದನೆಂದಿದೆ. ಈ ವೀರಗಲ್ಲು ಐತಿಹಾಸಿಕವಾಗಿ ಬಹಳ ಮಹತ್ವದ ಸ್ಥಾನವನ್ನು ಪಡೆದಿದ್ದು, ಕುಮ್ಮಟ ನಾಯಕ ಹಾಗೂ ಸುಲ್ತಾನರ ನಡುವೆ ನಡೆದ ಯುದ್ಧವನ್ನು ದಾಖಲಿಸಿದೆ. ಹಾಗು ಕಂಪಿಲನು ಕುಮ್ಮಟದಲ್ಲಿ ರಾಜ್ಯವಾಳುತ್ತಿದ್ದನೆಂದಿದೆ.

ಹೆಸರು	: ವೀರಗಲ್ಲು ಮತ್ತು ಕುದುರೆ ಶಿಲ್ಪ
ಸಿಕ್ಕ ಸ್ಥಳ	: ರಾಮಸ್ವಾಮಿ ಗುಡಿಯ ಬಳಿ ಕುಮ್ಮಟ ದುರ್ಗ, ಕೊಪ್ಪಳ ಜಿಲ್ಲೆ.
ಕಾಲ	: ಕ್ರಿ.ಶ. ೧೪ ನೇ ಶತಮಾನ
ಶಿಲಾವಸ್ತು	: ಕಪ್ಪು ಶಿಲೆ, ಗ್ರಾನೈಟ್
ಉಲ್ಲೇಖ	: Channabasappa S.Patil, 1991, P. 211

ಮೂರು ಹಂತದಲ್ಲಿರುವ ಈ ವೀರಗಲ್ಲಿನ ಕೆಳಭಾಗದಲ್ಲಿ, ವೀರನು ಬಿಲ್ಲು ಬಾಣಗಳ ಹಿಡಿದು ಹೋರಾಡುವ ಚಿತ್ರವಿದೆ. ವೀರನ ಎದುರಿಗೆ ಇಬ್ಬರು ವೈರಿ ಪಡೆಯ ಸೈನಿಕರು ನಿಂತಿದ್ದು, ಒಬ್ಬ ಕೈಯಲ್ಲಿ ಭರ್ಚಿಯನ್ನ ಹಿಡಿದಿರುವನು. ವೀರನ ಹಿಂದೆ ನಿಂತಿರುವ ಇನ್ನೊಬ್ಬ ವ್ಯಕ್ತಿಯ ಕೈಯಲ್ಲಿಯೂ ಭರ್ಚಿ ಇದೆ. ಮಧ್ಯದ ಪಟ್ಟಿಕೆಯಲ್ಲಿ ಇಬ್ಬರು ಯಕ್ಷಿಯರು ವೀರನ ಕೈ ತೋಳನ್ನು ಹಿಡಿದು ಎತ್ತಿಕೊಂಡು ಹೋಗುವ ಚಿತ್ರವಿದೆ. ಯಕ್ಷಿಯರ ಕೈಯಲ್ಲಿ ಚಾಮರಗಳಿವೆ. ಮೇಲ್ಭಾಗದಲ್ಲಿ ವೀರನು ಶಿವಲಿಂಗದ ಮುಂದೆ ಪದ್ಮಾಸನದಲ್ಲಿ ಕುಳಿತು ಅಂಜಲಿ ಮುದ್ರೆಯಲ್ಲಿದ್ದಾನೆ. ಇನ್ನೊಬ್ಬ ವ್ಯಕ್ತಿ ನಿಂತಿದ್ದು ಎಡಗೈಯಲ್ಲಿ ಗಂಟೆ ಹಾಗೂ ಬಲಗೈಯಲ್ಲಿ ಧೂಪಾರತಿಯನ್ನಿಡಿದು ಅರ್ಚನೆ ಮಾಡುತ್ತಿರುವನು. ಮೇಲ್ಭಾಗದಲ್ಲಿ ಚಂದ್ರ ಮತ್ತು ಸೂರ್ಯರ ಶಿಲ್ಪಗಳಿವೆ. ವೀರಗಲ್ಲು ಬದಿಯಲ್ಲಿ ಕುದುರೆ ಶಿಲ್ಪವಿದೆ.

ಹೆಸರು	: ವೀರಗಲ್ಲು
ಸಿಕ್ಕ ಸ್ಥಳ	: ಆನೆಗೊಂದಿಯ ಎಂಚಲ ಕೋಟೆಯ ನಾಗನಾಥ ದೇವಾಲಯದ ಸಮೀಪ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ
ಕಾಲ	: ಕ್ರಿ.ಶ.೧೩-೧೪ ನೇ ಶತಮಾನ
ಪಂಥ	ಶೈವ
ಶಿಲಾವಸ್ತು	: ಗ್ರಾನೈಟ್ ಶಿಲೆ

ವೀರಗಲ್ಲಿನ ಮೇಲೆ ಎರಡು ಸಾಲುಗಳ ಶಾಸನವಿದೆ. ಶಾಸನವು ಆರ್ಯ ಜಿಲ್ಲ ಕಾಚಪ್ಪ ಎಂಬುವನು ಅಮರನಾದನೆಂದು ಅರ್ಥೈಸುತ್ತದೆ. ವೀರಗಲ್ಲಿನ ಕೆಳಭಾಗದಲ್ಲಿಯುದ್ಧದ ಚಿತ್ರಣವಿದೆ. ಬಿಲ್ಲು ಬಾಣಗಳನ್ನು ಹಿಡಿದು ಮೂರು ಜನ ವೀರರು ಕಾದಾಡುತ್ತಿರುವರು. ಕಾಚಪ್ಪನು ಮಡಿದು ಬಿದ್ದಿದ್ದು, ಉದರದಲ್ಲಿ ಬಾಣವೊಂದು ನೆಟ್ಟಿದೆ. ಎಡಗೈಯಲ್ಲಿ ಬಿಲ್ಲು ಬಲಗೈಯಲ್ಲಿ ಬಾಣವಿದೆ. ತಲೆಯ ಕೂದಲುಗಳನ್ನು ಮುಡಿಕಟ್ಟಲಾಗಿದೆ. ಎರಡನೆ ಹಂತದಲ್ಲಿ ಇಬ್ಬರು ಯಕ್ಷಿಯರು ಜಿಲ್ಲಕಾಚಪ್ಪನ ಕೈತೋಳುಗಳನ್ನು ಹಿಡಿದು ಆಕಾಶದಲ್ಲಿ ಹೋಗುತ್ತಿರುವರು ಯಕ್ಷಿಯರ ಕೈಯಲ್ಲಿ ಕಳಶ ಮತ್ತು ಚಾಮರವಿದೆ. ಮೂರನೇ ಹಂತದಲ್ಲಿ ವೃತ್ತ ಪೀಠವಿರುವ ಶಿವಲಿಂಗದ ಮುಂದೆ ವೀರನು ಕಾಚಪ್ಪ ಮತ್ತು ಆತನ ಸಹಧರ್ಮಿಣಿಯರು ಶಿವಲಿಂಗಕ್ಕೆ ಕೈಮುಗಿದು ಕುಳಿತಿದ್ದಾರೆ. ಇವರ ಹಿಂಭಾಗದಲ್ಲಿ ಛತ್ರವಿದೆ. ಶಿವಲಿಂಗದ ಇನ್ನೊಂದು ಬದಿಯಲ್ಲಿ ವ್ಯಕ್ತಿಯೊಬ್ಬ ಧೂಪ ಮತ್ತು ಘಂಟೆಯನ್ನು ಹಿಡಿದು ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದಾನೆ. ವೀರಗಲ್ಲಿನ ಈ ಚಿತ್ರಣದಿಂದ ಆರ್ಯ ಜಿಲ್ಲ ಕಾಚಪ್ಪ ತನ್ನ ಸಹಧರ್ಮಿಣಿಯೊಂದಿಗೆ ಶಿವನ ಸಾನಿಧ್ಯ ಸೇರಿದ್ದನೆಂಬುದನ್ನು ಸೂಚಿಸುತ್ತದೆ. ಇವರ ಹಿಂಭಾಗದಲ್ಲಿ ಛತ್ರವಿದೆ. ಕಾಚಪ್ಪನು ಗುತ್ತಿಯ ಮಂಡಲಾಧಿಕಾರಿಯಾಗಿದ್ದನೆಂದು ಕುಮಾರ ರಾಮನಾಥನ ಸಾಂಗತ್ಯದಲ್ಲಿದೆ. ಸಹಗಮನ ಪದ್ಧತಿಯೂ ಇವರ ಕಾಲದಲ್ಲಿ ಇತ್ತೆಂದು ಇದರಿಂದ ವ್ಯಕ್ತವಾಗುವುದು.

ಹೆಸರು	: ವೀರಗಲ್ಲು
ಸಿಕ್ಕ ಸ್ಥಳ	: ಹುಲಿಮಾನಪ್ಪನ ಮಠದ ಹತ್ತಿರ ಹೊಸಮಲೆದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಧಾರ್ಮಿಕ	: ಶೈವ
ಉಲ್ಲೇಖ	: ARIE, 1943, No. B75, 44,
	: VPR, 1988-91, P. 240.

ವೀರಗಲ್ಲು ಮೂರು ಹಂತಗಳಲ್ಲಿದೆ. ಕೆಳಭಾಗದಲ್ಲಿ ಯುದ್ಧದ ಚಿತ್ರಣವಿದೆ. ಸೈನಿಕರು ಕುದುರೆ ಮತ್ತು ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿರುವ ದೃಶ್ಯ ಕಲಾತ್ಮಕವಾಗಿ ಮೂಡಿದೆ. ಸೈನಿಕರ ಕೈಯಲ್ಲಿ ಉದ್ದನೆಯ ಈಟಿಗಳಿವೆ. ಎಡಭಾಗದಲ್ಲಿ ಕುದುರೆಯ ಮೇಲೆ ಕುಳಿತ ಸೈನಿಕನ ಮೇಲೆ ಇನ್ನೊಬ್ಬ ಸೈನಿಕನು ಈಟಿಯಿಂದ ತಿವಿಯುತ್ತಿರುವ ದೃಶ್ಯವಿದೆ. ಈಟಿಯಿಂದ ಗಾಯಗೊಂಡ ಸೈನಿಕನು ಕುದುರೆಯ ಮೇಲಿನಿಂದ ಕೆಳಗೆ ಬೀಳುತ್ತಿರುವ ತನ್ನ ದೇಹದಲ್ಲಿ ಸೇರಿಕೊಂಡಿರುವ ಈಟಿಯನ್ನು ವೈರಿ ಪಡೆಯ ಸೈನಿಕನನ್ನು ಕೈಯಲ್ಲಿ ಹಿಡಿದಿದ್ದಾನೆ. ಮಧ್ಯ ಹಂತದ ಚಿತ್ರದಲ್ಲಿ ವೀರನು ವಿಮಾನಾಕಾರದ ಮಂಟಪದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದಾನೆ. ಮಂಟಪದ ಎರಡೂ ಬದಿಯಲ್ಲಿ ಯಕ್ಷಯಕ್ಷಿಯರು ನಿಂತಿರುವರು. ಯಕ್ಷ ಕೈಯಲ್ಲಿ ಚಾಮರಗಳನ್ನು ಹಿಡಿದಿದ್ದಾನೆ. ಈ ಹಂತದ ಚಿತ್ರ ಪಟ್ಟಿಕೆಯ ಮೇಲೆ ಹಾಗೂ ಮೂರನೇ ಹಂತದ ಚಿತ್ರ ಪಟ್ಟಿಕೆಯ ಮಧ್ಯದಲ್ಲಿ

ಖಾಲಿ ಜಾಗವಿದ್ದು, ಇಲ್ಲಿನ ಮೂರನೇ ಪಟ್ಟಿಕೆಯಲ್ಲಿ ವೃತ್ತಪೀಠವಿರುವ ಶಿವಲಿಂಗವಿದೆ. ಶಿವಲಿಂಗದ ಮುಂದೆ ಗುರುಗಳೊಬ್ಬರು ನಿಂತು ಶಿವಲಿಂಗಕ್ಕೆ ಪೂಜೆ ಮಾಡುತ್ತಿರುವರು. ಪಕ್ಕದಲ್ಲಿ ಭಕ್ತನು ಮತ್ತು ಆತನ ಸತಿ ಇಬ್ಬರು ಪದ್ಮಾಸನದಲ್ಲಿ ಕುಳಿತು ಶಿವಲಿಂಗಕ್ಕೆ ನಮಸ್ಕರಿಸುತ್ತಿರುವರು. ಶಿವಲಿಂಗದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರ ಶಿಲ್ಪಗಳಿವೆ.

ಹೆಸರು : ವೀರಗಲ್ಲು

ಸಿಕ್ಕ ಸ್ಥಳ : ಗ್ರಾಮದ ಪಶ್ಚಿಮಕ್ಕೆ ರಸ್ತೆಯ ಬದಿಯಲ್ಲಿ, ರಾಂಪುರ ಕತ್ತಿರಿ ಬಳಿ, ಆನೆಗೊಂದಿ ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ

ಶಿಲಾವಸ್ತು : ಗ್ರಾನೈಟ್ ಶಿಲೆ

ಮೂರು ಹಂತದ ವೀರಗಲ್ಲಿನ ಕೆಳಭಾಗದಲ್ಲಿ ವೀರರ ಶಿಲ್ಪಗಳಿವೆ. ಒಟ್ಟು ನಾಲ್ಕು ವೀರರ ಚಿತ್ರಗಳು ಇಲ್ಲಿ ಇದ್ದು, ಮೂರು ಜನ ವೀರರು ಖಡ್ಗಗಳನ್ನು ಬಲಗೈಯಲ್ಲಿ ಮೇಲೆತ್ತಿ ನಿಂತಿರುವರು. ಎರಡನೇ ಹಂತದಲ್ಲಿ ಇಬ್ಬರು ವೀರರನ್ನು ಯಕ್ಷಯಕ್ಷಿಯರು ಕೈಗಳನ್ನು ಹಿಡಿದು ಸ್ವರ್ಗಲೋಕಕ್ಕೆ ಕರೆದೊಯ್ಯುವ ದೃಶ್ಯವಿದೆ. ಮೂರನೇ ಹಂತದಲ್ಲಿ ವೃತ್ತಪೀಠವಿರುವ ಶಿವಲಿಂಗವಿದ್ದು, ಮೇಲ್ಭಾಗದಲ್ಲಿ ಸೂರ್ಯಚಂದ್ರರ ಶಿಲ್ಪಗಳಿವೆ. ಶಿವಲಿಂಗದ ಎರಡೂ ಬದಿಯಲ್ಲಿ ಸ್ವರ್ಗಸ್ಥರಾದ ವೀರರು ಅಂಜಲಿ ಮುದ್ರದಲ್ಲಿ ಕುಳಿತಿದ್ದಾರೆ. ಎರಡು ಜನ ವೀರರು ಕುಳಿತುರುವರು. ಶಿವಲಿಂಗದ ಬದಿಯಲ್ಲಿ ಆಚಾರ್ಯರೊಬ್ಬರು ಕೈಯಲ್ಲಿ ಧೂಪಾರತಿಯನ್ನು ಹಿಡಿದು ಲಿಂಗಪೂಜೆಯಲ್ಲಿ ನಿರತರಾಗಿದ್ದಾರೆ.

ಹೆಸರು : ವೀರಗಲ್ಲು

ಸಿಕ್ಕ ಸ್ಥಳ : ರಾಮಸ್ವಾಮಿ ದೇವಾಲಯದ ಮುಂದೆ ಹೊಸಮಲೆ ದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ಕಾಲ : ಕ್ರಿ.ಶ. ೧೩-೧೪ ನೇ ಶತಮಾನ

ಶಿಲಾವಸ್ತು : ಬಳಪದ ಶಿಲೆ

ಉಲ್ಲೇಖ : VPR, 1988-91, P. 245

ನಿಂತ ಭಂಗಿಯಲ್ಲಿರುವ ವೀರಶಿಲ್ಪದ ಎಡಗಾಲು ಮುಂದೆ ಇದ್ದು, ಬಲಗಾಲನ್ನು ನೆಲದಿಂದ ಸ್ವಲ್ಪ ಮೇಲೆ ಎತ್ತಿದ್ದು ನಡೆಯುತ್ತಿರುವಂತಿದೆ. ತಲೆಯ ಕೂದಲನ್ನು ಮೇಲೆ ಮುಡಿಕಟ್ಟಿದ್ದಾನೆ. ಕೊರಳಲ್ಲಿ ಪದಕವಿದೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬಿಲ್ಲನ್ನು ಎತ್ತಿ ಹಿಡಿದಿದ್ದು, ಮುಂಗೈಯಲ್ಲಿ ನೀರಿನ ಪಾತ್ರೆಯ ಚಿತ್ರವಿದೆ. ಕಟಿಯಲ್ಲಿ ವೀರಗಾಸೆಯನ್ನು ಧರಿಸಿದ್ದಾನೆ.

ಹೆಸರು	: ವೀರಗಲ್ಲು
ಸಿಕ್ಕ ಸ್ಥಳ	: ಹುಲಿಮಾನಪ್ಪ ಮಠದ ಮುಂದೆ, ಹೊಸಮಲೆದುರ್ಗ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಕಾಲ	: ಕ್ರಿ.ಶ. ೧೩-೧೪ ನೇ ಶತಮಾನ
ಶಿಲಾವಸ್ತು	: ಬಳಪದ ಶಿಲೆ
ಉಲ್ಲೇಖ	: VPR, 1988-91, P. 238

ಹುಲಿಮಾನಪ್ಪನ ಮಠದ ಮುಂದೆ ನಿಲ್ಲಿಸಿದ ಈ ವೀರಗಲ್ಲು ಮೂರು ಪಟ್ಟಿಕೆಯಲ್ಲಿದೆ. ಅತ್ಯಂತ ಕೆಳಭಾಗದಲ್ಲಿ ಯುದ್ಧದ ಚಿತ್ರಣವಿದ್ದು, ಕುದುರೆಯ ಮೇಲೆ ಕುಳಿತ ವೀರನನ್ನು ಇರಿದು, ವೀರನು ಕುದುರೆಯ ಮೇಲಿನಿಂದ ಕೆಳಗೆ ಬೀಳುತ್ತಿರುವ ದೃಶ್ಯವಿದೆ.

ಎರಡನೇ ಹಂತದಲ್ಲಿ ವೀರನು ವಿಮಾನದಲ್ಲಿ ಕುಳಿತಿದ್ದು, ದೇವತೆಗಳು ಕೈಲಾಸಕ್ಕೆ ಕರೆದೊಯ್ಯುವ ಚಿತ್ರಣವಿದೆ. ಮೇಲಿನ ಹಂತದಲ್ಲಿ ಶಿವಲಿಂಗವನ್ನು ವ್ಯಕ್ತಿಯೊಬ್ಬರು ಪೂಜಿಸುತ್ತಿದ್ದು, ಭಕ್ತರಿಬ್ಬರು ಕೆಳಗೆ ಅಂಜಲಿ ಮುದ್ರೆಯಲ್ಲಿ ಕುಳಿತಿರುವರು. ಇಬ್ಬರು ವೀರರು ಮಡಿದ ವೀರ ಸ್ಮಾರಕ ಶಿಲೆಯಾಗಿದೆ. ಮೇಲ್ಭಾಗದ ಸೂರ್ಯ ಮತ್ತು ಚಂದ್ರನ ಶಿಲ್ಪಗಳಿವೆ.

ಕಾಷ್ಠ ಶಿಲ್ಪಕಲೆ

ಶಿಲ್ಪಕಲೆ, ಚಿತ್ರಕಲೆಯಂತೆ ಕಾಷ್ಠ ಕಲೆಯೂ ಒಂದು ಮಾಧ್ಯಮ. ರೂವಾರಿ ತನ್ನ ಕಲೆಯ ನಿರ್ಮಾಣಕ್ಕಾಗಿ ಮರವನ್ನಾಗಲಿ, ಶಿಲೆಯನ್ನಾಗಲಿ, ಬಳಸಿ ಒಂದು ಆಕೃತಿಯ ಮೂರ್ತಿಯನ್ನು ಸಾಂಕೇತಿಕವಾಗಿ ನಿರ್ಮಿಸುತ್ತಾನೆ. ಹೀಗೆ ನಿರ್ಮಿಸುವ ಕಲೆ ಬರೀ ಪ್ರತಿಮೆ ಅಥವಾ ದೇವತೆಯ ವಿಗ್ರಹವನ್ನು ರೂಪಿಸುವ ಕಲೆಗೆ ಸೀಮಿತವಾಗಿಲ್ಲ. ಶಿಲ್ಪಿ ತನ್ನ ಮನಸ್ಸಿನ ಅನಿಸಿಕೆಗಳನ್ನು ಒಂದು ಸ್ಥಿರ ಮಾಧ್ಯಮದ ಮೂಲಕ ತೋರಿಸುತ್ತಾನೆ. ಒಂದಿಲ್ಲೊಂದು ರೀತಿಯಿಂದ ಸೌಂದರ್ಯ ಪ್ರಜ್ಞೆ, ಉಪಯುಕ್ತತೆ ಮತ್ತು ಆಧ್ಯಾತ್ಮಿಕತೆಯ ಸಮನ್ವಯ ಧರ್ಮವು ಕಲೆಯಲ್ಲಿ ಕಾಣುವ ವೈಶಿಷ್ಟ್ಯ (ಶಿವರಾಮ ಕಾರಂತ ಕೆ. ೧೯೭೫ ಭಾರತೀಯ ಶಿಲ್ಪ, ಪು. ೧) ಕಾಷ್ಠ ಶಿಲ್ಪಕಲೆಯನ್ನು ಇಲ್ಲಿ ಪ್ರಧಾನವಾಗಿರಿಸಿಕೊಂಡು, ಕಲಾ ಸಂಪ್ರದಾಯವನ್ನು ಕುಮ್ಮಟ ನಾಯಕರ ಕಾಲಕ್ಕೆ ಸೀಮಿತಮಾಡಿ ಈ ಕಾಲದಲ್ಲಿ ಲಭ್ಯವಾದ ಕಾಷ್ಠಶಿಲ್ಪ ಪರಿಚಯವನ್ನು ಇಲ್ಲಿ ಮಾಡಲಾಗಿದೆ.

ಕುಮಾರ ರಾಮ ಆತನ ಸಹೋದರ ಹಾಗೂ ಅವರ ಸಹಚರರ ಹನ್ನೊಂದು ರುಂಡಗಳನ್ನು ಮರದಿಂದ ನಿರ್ಮಿಸಿ ಬಣ್ಣದಿಂದ ಕಣ್ಣು, ಮೂಗು, ಬಾಯಿ, ಕಿವಿ ಆಕಾರಗಳನ್ನು ಚಿತ್ರಿಸಿರುವರು. ಉದಾ : ಈ ರುಂಡಗಳು ಇಂದರಗಿಯ ಪೂಜಾರಿಯ ಮನೆಯಲ್ಲಿವೆ. ಕುಮ್ಮಟದ ಜಾತ್ರೆ ಪ್ರತಿವರ್ಷ ಮೇ ೨೧ ರಂದು ಜರುಗುತ್ತದೆ. ಕುಮ್ಮಟ ದುರ್ಗಕ್ಕೆ ಅಂದು ರಾಮಸ್ವಾಮಿ ಗುಡಿಯ ಗರ್ಭಗೃಹದಲ್ಲಿರುವ ಹನ್ನೊಂದು ಗುಂಡು ಕಲ್ಲುಗಳನ್ನು ಆಸರೆಯಾಗಿ ಇಟ್ಟು ಪೂಜೆ ಮಾಡುವ ಸಂಪ್ರದಾಯವಿದೆ. ಮರದ ಈ ಶಿಲ್ಪಗಳಿಗೆ ಹಣೆ ಪಟ್ಟಿ ಇದ್ದು, ಹಣೆಯ ಮೇಲೆ ನಾಮವನ್ನು ಬಿಳಿ, ಕೆಂಪು ಬಣ್ಣದಲ್ಲಿ ಬರೆಯಲಾಗಿದೆ. ಮುಖಗಳ

ಆಕಾರಗಳು ಒಂದಕ್ಕೊಂದು ಭಿನ್ನವಾಗಿವೆ. ಮೀಸೆ, ಮೂಗು, ಹಾಗೂ ಕಣ್ಣುಗಳ ಆಕಾರದಲ್ಲಿ ಪ್ರತ್ಯೇಕಿಸಿದ್ದರೂ ಕಲಾದೃಷ್ಟಿಯಿಂದ ಇದು ಮಹತ್ವಪೂರ್ಣ.

ಕುಮಾರ ರಾಮನ ಪಂಥದ ಸಂಪ್ರದಾಯವಾಗಿ ಬಂದಿರುವ ಈ ಮರದ ಶಿಲ್ಪಗಳನ್ನು ಪೂಜೆ ಮಾಡುವುದು. ಅದರಲ್ಲೂ ಹೆಚ್ಚಾಗಿ ಉತ್ಸವ ಜಾತ್ರೆಯ ವೇಳೆಗೆ ಇಂದಿಗೂ ಈ ಸಂಪ್ರದಾಯ ನಡೆದು ಬಂದಿರುವುದು ಒಂದು ವೈಶಿಷ್ಟ್ಯಪೂರ್ಣವಾಗಿದೆ.

ಚಿತ್ರಕಲೆ

